ಶುಕ್ರವಾರ, ಮೇ 20, 2022 | ₹ 6.00

# ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

## ಇಳಿಯದ ನೀರು

ಬೆಂಗಳೂರಿನ ಹೊರಮಾವು ವಡ್ಡರಪಾಳ್ಯದ ಶ್ರೀಸಾಯಿ ಬಡಾವಣೆಗೆ ರಾಜಕಾಲುವೆಯ ನೀರು ನುಗ್ಗಿದ್ದು, ಈ ಪ್ರದೇಶದಲ್ಲಿ ಮಹಿಳೆಯರಿಬ್ಬರು ಗುರುವಾರ ಎಳನೀರು ಗೊನೆಯನ್ನು ಎಳೆದೊಯ್ಯುವಾಗ ನಾಯಿಯೊಂದು ಈಜುತ್ತಾ ಅವರ ಜೊತೆಯಲ್ಲೇ ಸಾಗಿತು –ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್

ಸುದ್ದಿಗಳು | II, 3B

## ಬಾಕ್ಸಿಂಗ್: ನಿಖತ್ ಜರೀನ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ನಿಖತ್ ಜರೀನ್ ಇಸ್ತಾಂಬುಲ್‌ನಲ್ಲಿ ನಡೆದ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫ್ಲೈವೇಟ್ (52ಕೆಜಿ) ವಿಭಾಗದಲ್ಲಿ ಚಿನ್ನ ಜಯಿಸಿದರು. ಈ ಸಾಧನೆ ಮಾಡಿದ ಭಾರತದ ಐದನೇ ಬಾಕ್ಸರ್ ಆಗಿದ್ದಾರೆ.

11

### ಜಿಎಸ್‌ಟಿ ಮಂಡಳಿ: ಸುಪ್ರೀಂ ಕೋರ್ಟ್‌ನಿಂದ ಮಹತ್ವದ ತೀರ್ಪು

# ಶಿಫಾರಸು ಪಾಲನೆ ಕಡ್ಡಾಯವಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ತೆರಿಗೆ ವಿಧಿಸುವ ವಿಚಾರದಲ್ಲಿ ಶಾಸನ ರೂಪಿಸುವ ಸಮಾನ ಅಧಿಕಾರವು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಕ್ಕೆ ಇದೆ. ಹೀಗಾಗಿ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಮಾಡುವ ಶಿಫಾರಸುಗಳು ಅವುಗಳ ಪಾಲಿಗೆ ಕಡ್ಡಾಯವಾಗಿ ಪಾಲಿಸಬೇಕಾದವು ಅಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಸಾರಿದೆ.

‘ಜಿಎಸ್‌ಟಿ ಮಂಡಳಿಯ ಶಿಫಾರಸುಗಳು ಮನವೊಲಿಸುವಂತೆ ಇರಬೇಕು ಎಂಬುದು ಸಂಸತ್ತಿನ ನಿಲುವಾಗಿತ್ತು’ ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠವು ಮಹತ್ವದ ಈ ತೀರ್ಪಿನಲ್ಲಿ ಹೇಳಿದೆ.

‘ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ನಡೆಸುವ ಮಾತುಕತೆಗಳನ್ನು ಆಧರಿಸಿ ಜಿಎಸ್‌ಟಿ ಮಂಡಳಿ ಶಿಫಾರಸು ಮಾಡುತ್ತದೆ. ಅವು ಶಿಫಾರಸಿನ ಸ್ವರೂಪವನ್ನು ಮಾತ್ರ ಹೊಂದಿವೆ. ಆ ಶಿಫಾರಸುಗಳು, ಪಾಲಿಸಲೇಬೇಕಾದ ಆಜ್ಞೆ ಎಂಬಂತೆ ಕಾಣುವುದು ಹಣಕಾಸಿನ ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುತ್ತದೆ. ಜಿಎಸ್‌ಟಿ ವಿಚಾರವಾಗಿ ಶಾಸನ ತರುವ ಸಮಾನ ಅಧಿಕಾರವು ಈ ವ್ಯವಸ್ಥೆಯ ಅಡಿಯಲ್ಲಿ ರಾಜ್ಯಗಳಿಗೂ ಕೇಂದ್ರಕ್ಕೂ ಇದೆ’ ಎಂದು ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿಕ್ರಮ್ ನಾಥ್ ಅವರೂ ಈ ಪೀಠದಲ್ಲಿದ್ದರು.

ಸಂವಿಧಾನ ತಿದ್ದುಪಡಿ ಕಾಯ್ದೆ – 2016ರ ಮೂಲಕ ಸೇರಿಸಲಾದ ಸಂವಿಧಾನದ 246(ಎ) ವಿಧಿಯು, ಜಿಎಸ್‌ಟಿ ವಿಚಾರವಾಗಿ ಕಾನೂನು ರೂಪಿಸುವ ಅಧಿಕಾರವನ್ನು ಸಂಸತ್ತಿಗೂ ರಾಜ್ಯಗಳ ಶಾಸನಸಭೆಗಳಿಗೂ ಒಟ್ಟೊಟ್ಟಿಗೇ ನೀಡಿದೆ ಎಂದು ಕೋರ್ಟ್ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಒಕ್ಕೂಟ ವ್ಯವಸ್ಥೆಯ ಯಾವುದಾದರೂ ಒಂದು ಘಟಕವು ತೀರ್ಮಾನ ಕೈಗೊಳ್ಳುವ ವಿಚಾರದಲ್ಲಿ ಹೆಚ್ಚಿನ ಅಧಿಕಾರ ಹೊಂದಿರಬೇಕು ಎಂದೇನೂ ಇಲ್ಲ ಎಂದು ನ್ಯಾಯಪೀಠವು ಸ್ಪಷ್ಟಪಡಿಸಿದೆ. ‘ಭಾರತದ ಒಕ್ಕೂಟ ವ್ಯವಸ್ಥೆಯು ಸಹಕಾರ ಹಾಗೂ ಅಸಹಕಾರ ಒಕ್ಕೂಟ ವ್ಯವಸ್ಥೆಗಳ ನಡುವಿನ ಮಾತುಕತೆ ಇದ್ದಂತೆ’ ಎಂದು ಬಣ್ಣಿಸಿದೆ.

ಭಾರತವು ಬಹುಪಕ್ಷಗಳ ವ್ಯವಸ್ಥೆಯನ್ನು ಹೊಂದಿದೆ. ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಪಕ್ಷವೊಂದು ಒಂದು ರಾಜ್ಯದಲ್ಲಿ ಅಧಿಕಾರದಲ್ಲಿ ಇರಬಹುದು, ಇಲ್ಲದಿರಬಹುದು. ರಾಜ್ಯಗಳಿಗೆ ಕಡಿಮೆ ಅಧಿಕಾರ ಇದೆ ಎಂದು ಭಾವಿಸುವುದಾದರೂ, ಕೇಂದ್ರದ ಅಪ್ಪಣೆಗಳಿಗೆ ಅವು ಸಂವಿಧಾನದ ವ್ಯಾಪ್ತಿಯಲ್ಲಿ ಬೇರೆ ಬೇರೆ ರಾಜಕೀಯ ಮಾರ್ಗಗಳ ಮೂಲಕ ಪ್ರತಿರೋಧ ಒಡ್ಡಬಹುದು ಎಂದು ಕೋರ್ಟ್ ಹೇಳಿದೆ.

153 ಪುಟಗಳ ಈ ತೀರ್ಪನ್ನು ನ್ಯಾಯಪೀಠದ ಪರವಾಗಿ, ನ್ಯಾಯಮೂರ್ತಿ ಚಂದ್ರಚೂಡ್ ಅವರು ಬರೆದಿದ್ದಾರೆ. ಜಿಎಸ್‌ಟಿ ಮಂಡಳಿಯು ತೀರ್ಮಾನ ಕೈಗೊಳ್ಳುವ ಪ್ರಾಧಿಕಾರ ಆಗಿದ್ದಿದ್ದರೆ, ಅದರ ಶಿಫಾರಸುಗಳು ಶಾಸನಗಳಾಗಬೇಕು ಎಂಬುದಾಗಿದ್ದರೆ, ಅಂತಹ ಅಂಶವು ಸಂವಿಧಾನದ 246(ಎ), 279(ಎ) ವಿಧಿಗಳಲ್ಲಿ ಅಡಕವಾಗಿರುತ್ತಿತ್ತು ಎಂದು ನ್ಯಾಯಮೂರ್ತಿ ಚಂದ್ರಚೂಡ್ ಬರೆದಿದ್ದಾರೆ.

## ತಮಿಳುನಾಡು, ಕೇರಳ ಸ್ವಾಗತ

ಮದುರೈ (ಪಿಟಿಐ): ಜಿಎಸ್‌ಟಿ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ತಮಿಳುನಾಡು ಮತ್ತು ಕೇರಳ ಸರ್ಕಾರಗಳು ಸ್ವಾಗತಿಸಿವೆ. ‘ಸುಪ್ರೀಂ ಕೋರ್ಟ್ ತೀರ್ಪು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ಹಕ್ಕನ್ನು ಎತ್ತಿಹಿಡಿದಿದೆ’ ಎಂದು ತಮಿಳುನಾಡು ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್ ಗುರುವಾರ ಅಭಿಪ್ರಾಯಪಟ್ಟಿದ್ದಾರೆ. ‘ಜಿಎಸ್‌ಟಿ ಮಂಡಳಿಯ ಕೆಲಸ ಕೇವಲ ಶಿಫಾರಸು ಮಾಡುವುದು. ಅದು ತನ್ನ ನಿರ್ಧಾರಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಮೇಲೆ ಹೇರುವಂತಿಲ್ಲ. ಈ ಅಂಶವನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಜಿಎಸ್‌ಟಿ ಮಂಡಳಿಗಿರುವ ಅಧಿಕಾರ ಮತ್ತು ಸರ್ಕಾರಗಳ ತೆರಿಗೆ ಹಕ್ಕುಗಳ ಕುರಿತು ನಮಗೆ ಮೊದಲೇ ತಿಳಿದಿತ್ತು. ಅದನ್ನೇ ಸುಪ್ರೀಂ ಕೋರ್ಟ್ ಪ್ರಮಾಣೀಕರಿಸಿದೆ’ ಎಂದು ಅವರು ಹೇಳಿದ್ದಾರೆ.

ರಾಜ್ಯಗಳು ಮತ್ತು ಜನರ ಒಕ್ಕೂಟ ಹಕ್ಕುಗಳನ್ನು ಈ ತೀರ್ಪು ಎತ್ತಿಹಿಡಿದಿದೆ ಎಂದು ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಸರ್ಕಾರಿ ಪಾಲಿಟೆಕ್ನಿಕ್
ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಪಾಲಿಟೆಕ್ನಿಕ್ (ಡಿಪ್ಲೋಮಾ) ಪ್ರವೇಶಾತಿ 2022–23

ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರಿಗೆ ಸುವರ್ಣಾವಕಾಶ

ಕನ್ನಡ ಅಥವಾ ಇಂಗ್ಲಿಷ್ ಮತ್ತು
ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಪ್ರಥಮ ಬಾರಿಗೆ ಸದಾವಕಾಶ.

- ಉದ್ಯಮಗಳು ಬಯಸುವ
- ಉದ್ಯಮಗಳಿಂದಲೇ ತಯಾರಾದ
- ಉದ್ಯೋಗಾವಕಾಶಕ್ಕೆ ಅಗತ್ಯವಾದ

ವಿಶ್ವಮಟ್ಟದ ಪಠ್ಯಕ್ರಮ

ಉನ್ನತ ಶಿಕ್ಷಣ, ಐಟಿ – ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖಾ ಸಚಿವರಾದ ಡಾ. ಅಶ್ವತ್ಥನಾರಾಯಣ ಅವರು ಸಭೆಯಲ್ಲಿ ಪಾಲ್ಗೊಂಡಿರುವುದು

Singapore, UK, Australia and New Zealand
ಇತ್ಯಾದಿ ರಾಷ್ಟ್ರಗಳ ಪಠ್ಯಕ್ರಮದಿಂದ ಪ್ರೇರೇಪಿತ ವಿಶ್ವಮಟ್ಟದ ಪಠ್ಯಕ್ರಮ

ಪ್ರವೇಶ ಆರಂಭದ ದಿನಾಂಕ 19-5-2022

ಹೆಚ್ಚಿನ ಮಾಹಿತಿಗಾಗಿ ತಕ್ಷಣವೇ ಹತ್ತಿರದ ಸರ್ಕಾರಿ ಪಾಲಿಟೆಕ್ನಿಕ್ ಗೆ ಭೇಟಿ ನೀಡಿ
OR
https://dtetech.karnataka.gov.in/kartechnical/

ನುರಿತ ಹಾಗೂ ಅನುಭವಿ ಉಪನ್ಯಾಸಕರು । ಅತ್ಯುತ್ತಮ ದರ್ಜೆಯ ಪ್ರಯೋಗಾಲಯಗಳು । ಸ್ಮಾರ್ಟ್- ಕ್ಲಾಸ್ ರೂಮ್‌ಗಳು
ಸಕಲ ಸೌಕರ್ಯಗಳ ಹಾಸ್ಟೇಲ್ ವ್ಯವಸ್ಥೆ । Internship ಹಾಗೂ ಪ್ರತಿಷ್ಠಿತ ಕಂಪನಿಗಳಲ್ಲಿ Stipend ಸಹಿತ Apprenticeship ಸೌಲಭ್ಯ

ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

### ಮೂರು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಘೋಷಣೆ • ರಾಜ್ಯದಲ್ಲಿ ಇಬ್ಬರ ಸಾವು

# ಹಲವೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು/ ಮೈಸೂರು:** ರಾಜ್ಯದ ಹಲವೆಡೆ ಗುರುವಾರವೂ ಧಾರಾಕಾರ ಮಳೆ ಮುಂದುವರಿದಿದ್ದು, ವಿವಿಧೆಡೆ ಜನ ಜೀವನ ಅಸ್ತವ್ಯಸ್ತವಾಗಿದೆ. ಕೆಲವೆಡೆ ಕೆರೆ ಏರಿಗಳು ಒಡೆದಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿವೆ. ಕೃಷಿ ಜಮೀನಿನಲ್ಲಿ ನೀರು ನಿಂತು ಬೆಳೆಗಳು ಕೊಳೆಯಲಾರಂಭಿಸಿವೆ. ಮಡಿಕೇರಿ– ಚೆಟ್ಟಳ್ಳಿ ರಸ್ತೆ ಬದಿಯ ನಾಲ್ಕು ಸ್ಥಳದಲ್ಲಿ ಮಣ್ಣು ಕುಸಿದು ಅಪಾಯದ ಮುನ್ಸೂಚನೆ ನೀಡುತ್ತಿದೆ.

ಸಿಡಿಲು ಬಡಿದು ಬೀದರ್ ತಾಲ್ಲೂಕಿನ ಚಿಮಕೋಡ ಗ್ರಾಮದ ರೈತ ಮಹಿಳೆ ವಿದ್ಯಾವತಿ ನರಸಪ್ಪ ಟೊಳ್ಳೆ (52) ಮತ್ತು ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಹೊರಟ್ಟಿ ಗ್ರಾಮದಲ್ಲಿ ರೈತ ಭೀಮಪ್ಪ ಕೊಡ್ಲಿ (62) ಮೃತಪಟ್ಟಿದ್ದಾರೆ. ಹುಣಸಗಿಯಲ್ಲಿ ಎಮ್ಮೆ ಮತ್ತು ಕೊಡೇಕಲ್ಲ ಗ್ರಾಮದಲ್ಲಿ ಕುರಿ ಸಿಡಿಲಿಗೆ ಬಲಿಯಾಗಿವೆ.

ಭಾರಿ ಮಳೆಯ ಕಾರಣ ಮೈಸೂರು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಗುರುವಾರ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ದಾವಣಗೆರೆ ಮತ್ತು ಶಿವಮೊಗ್ಗ ದಲ್ಲಿಯೂ ಶುಕ್ರವಾರ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಶುಕ್ರವಾರ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಗೆ ರಜೆ ಘೋಷಿಸಲಾಗಿದೆ.

ಮಂಡ್ಯ ನಗರದ ಬೀಡಿ ಕಾರ್ಮಿಕರ ಕಾಲೊನಿಯ 80ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿದ್ದವು. ನೀರಿನಲ್ಲಿ ಬಂದ ಹಾವು ಬಾಲಕಿಯೊಬ್ಬಳಿಗೆ ಕಚ್ಚಿದ್ದು, ಆಕೆಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಲೊನಿಗೆ ಮಧ್ಯರಾತ್ರಿ ನೀರು ನುಗ್ಗಿ ಧವಸ, ದಾನ್ಯ, ಬಟ್ಟೆ, ಬರೆ ಕೊಚ್ಚಿ ಹೋದವು. ಸಮೀಪದ ನಾಲೆಯಲ್ಲಿ ಕಸ ಕಟ್ಟಿಕೊಂಡಿದ್ದರಿಂದ ನಾಲೆ ನೀರು ಕೂಡ ನುಗ್ಗಿತ್ತು. ನಗರಸಭೆ ಸಿಬ್ಬಂದಿ ಕಸ ತೆರವುಗೊಳಿಸದೇ ಶುಕ್ರವಾರ ಮಧ್ಯಾಹ್ನದವರೆಗೂ ಜನ ಅತಂತ್ರರಾಗಿದ್ದರು. ಇಡೀ ಬಡಾವಣೆಯಲ್ಲಿ ಕೊಳಚೆ ತಾಂಡವವಾಡುತ್ತಿದೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಮಗಾರಿಗಾಗಿ ತೋಡಿದ್ದ ಗುಂಡಿಗೆ ಲಾರಿಯೊಂದು ಬಿದ್ದು, ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಾಗಮಂಗಲ ತಾಲ್ಲೂಕು ಹಾಲಾಳು ಗ್ರಾಮದ ಕೆರೆ ಏರಿ ಒಡೆದು ಜಮೀನಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

**ಕುರಿ–ಮೇಕೆ ಬಲಿ:** ಹಾಸನ ಜಿಲ್ಲೆಯ ಹಿರೀಸಾವೆ ದೊಡ್ಡ ಕೆರೆ ತುಂಬಿ ಹರಿದಿದ್ದರಿಂದ ಸಂತಸಗೊಂಡ ಸ್ಥಳೀಯರು, ನೀರಿನ ಮಧ್ಯೆಯೇ ಕುರಿ ಮತ್ತು ಮೇಕೆಯನ್ನು ಬಲಿಕೊಟ್ಟು ಸಂಭ್ರಮಾಚರಣೆ ಮಾಡಿದರು. ಚಿಕ್ಕಮಗಳೂರಿನ ಯಗಚಿ ಜಲಾಶಯ ಭರ್ತಿಗೆ ಕೇವಲ ಒಂದೂವರೆ ಅಡಿ ಬಾಕಿ ಇದೆ. ಜಲಾಶಯದ ಗರಿಷ್ಠ ನೀರಿನ ಮಟ್ಟ 3164.900 ಅಡಿಗಳಷ್ಟಿದೆ.

ಕೊಡಗು ಜಿಲ್ಲೆಯಲ್ಲೂ ಭಾರಿ ಮಳೆ ಹಾಗೂ ಗಾಳಿಯಿಂದ ಜನಜೀವನ ಅಸ್ತ-ವ್ಯಸ್ತಗೊಂಡಿದೆ. ಹಾರಂಗಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾ-ಗುತ್ತಿದ್ದು, ಜಲಾಶಯದ ಭರ್ತಿಗೆ 9 ಅಡಿಯಷ್ಟೇ ಉಳಿದಿದೆ. ಕಾವೇರಿ ನದಿಯೂ ಸೇರಿದಂತೆ ಹಳ್ಳ, ಕೊಳ್ಳಗಳಲ್ಲಿ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ಸಮೀಪ ಗಂಧನಹಳ್ಳಿಯ ಮಂಚೇಗೌಡ ನಾಲೆಯ ಏರಿ ಒಡೆದು ಜಮೀನಿಗೆ ನೀರು ನುಗ್ಗಿ ಅಡಿಕೆ, ಬಾಳೆ ಮತ್ತು ತೆಂಗಿನ ತೋಟಗಳಿಗೆ ಹಾನಿಯಾಗಿದೆ

ಮಳೆಯಿಂದಾಗಿ ಮಡಿಕೇರಿ – ಚೆಟ್ಟಳ್ಳಿ ರಸ್ತೆಯ ಬದಿಯಲ್ಲಿ ಮಳೆಗೆ ಮಣ್ಣು ಕುಸಿದಿದೆ

## ತುಂಬಿಹರಿದ ಲಕ್ಷ್ಮಣತೀರ್ಥ

ಹುಣಸೂರು ತಾಲ್ಲೂಕಿನ ಲಕ್ಷ್ಮಣತೀರ್ಥ ನದಿ ತುಂಬಿ ಹರಿದಿದೆ. ಮನುಗನಹಳ್ಳಿ ಕೆರೆ ಕೋಡಿ ಬಿದ್ದು ತಗ್ಗು ಪ್ರದೇಶಗಳಿಗೆ ಹರಿದಿದೆ. ಮಂಚೇಗೌಡ ನಾಲೆ ಏರಿ ಒಡೆದು, ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಗಂಧನಹಳ್ಳಿಯಲ್ಲಿ ಕೃಷಿ ಜಮೀನಿಗೆ ನೀರು ನುಗ್ಗಿ ಅಡಿಕೆ, ಬಾಳೆ, ವೀಳ್ಯದೆಲೆ ಹಾಗೂ ತೆಂಗಿನ ಮರಗಳಿಗೆ ಹಾನಿಯಾಗಿದೆ. ತಿ.ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದ ಪುರಾತನ ದೇಶೇಶ್ವರ ದೇವಾಲಯದ ಕಾಂಪೌಂಡ್ ಕುಸಿದಿದೆ.

### ಕಬಿನಿ ಒಳ ಹರಿವು ಹೆಚ್ಚಳ

ನಾಗರಹೊಳೆಹುಲಿ ಸಂರಕ್ಷಿತ ಪ್ರದೇಶ ಹಾಗೂ ಕೇರಳದ ವಯನಾಡು ಸುತ್ತ ಮುತ್ತ ಭಾರಿ ಮಳೆಯಾಗುತ್ತಿರುವುದರಿಂದ, ಮೈಸೂರು ಜಿಲ್ಲೆಯ ಕಬಿನಿ ಜಲಾಶಯಕ್ಕೆ ನೀರಿನ ಒಳಹರಿವಿನ ಪ್ರಮಾಣ 3,424 ಕ್ಯುಸೆಕ್ ತಲುಪಿದೆ. ಕಳೆದ ವರ್ಷ ಇದೇ ಸಮಯದಲ್ಲಿ 88 ಕ್ಯುಸೆಕ್ ಮಾತ್ರ ಇತ್ತು. ನಾಗರಹೊಳೆ ಅರಣ್ಯದೊಳಗಿನ ಬಹುತೇಕ ಕೆರೆಗಳು ತುಂಬಿವೆ. ಹೆಬ್ಬಳ್ಳ ಜಲಾಶಯಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದುಬರುತ್ತಿದೆ.

# ಕರಾವಳಿ, ಮಲೆನಾಡಿನಲ್ಲಿ ಭಾರಿ ಮಳೆ

**ಮಂಗಳೂರು/ ಶಿವಮೊಗ್ಗ:** ಕರಾವಳಿ, ಮಲೆನಾಡು ಜಿಲ್ಲೆಗಳಲ್ಲೂ ಗುರುವಾರ ಮಳೆ ಮತ್ತಷ್ಟು ಬಿರುಸಾಗಿದೆ. ಮಂಗಳೂರಿನ ಹೊಯ್ಗೆಬಜಾರ್‌ನ ಮರದ ಮಿಲ್ ಬುಧವಾರ ರಾತ್ರಿ ಕುಸಿದಿದೆ. ಮಳೆಯ ನೀರು ಗೋಡೆಗೆ ಬಡಿದು ಬಿರುಕು ಕಾಣಿಸಿಕೊಂಡಿತ್ತು. ರಾತ್ರಿ ಗೋಡೆ ಕುಸಿದಿದೆ.

ಹೆದ್ದಾರಿಯಲ್ಲಿ ಮರ ಬಿದ್ದು ಕಲ್ಲಡ್ಕ-ಕಾಂಞಂಗಾಡ್ ಅಂತರರಾಜ್ಯ ಹೆದ್ದಾರಿಯ ಕೆಲಿಂಜದಲ್ಲಿ ಕೆಲಹೊತ್ತು ವಾಹನ ಸಂಚಾರ ಸ್ಥಗಿತವಾಗಿತ್ತು. ರಾಷ್ಟ್ರೀಯ ಹೆದ್ದಾರಿ 75ರ ಚತುಷ್ಪಥ ಕಾಮಗಾರಿಯ ಅವಾಂತರದಿಂದಾಗಿ ಉಪ್ಪಿನಂಗಡಿ ಪೇಟೆಯಲ್ಲಿ ಕೃತಕ ನೆರೆ ಉಂಟಾಗಿದ್ದು, ತಗ್ಗು ಪ್ರದೇಶ ಜಲಾವೃತಗೊಂಡಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ನಗರದ ಹಲವು ಬಡಾವಣೆಗಳು ಜಲಾವೃತವಾಗಿವೆ. ಮನೆಗಳಿಗೆ ನೀರು ನುಗ್ಗಿದೆ. ನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ.

ಮಳೆ ನೀರು ಹೊರಗೆ ಹೋಗಲು ಅವಕಾಶ ಇಲ್ಲದೆ ಇಲ್ಲಿನ ನ್ಯೂ ಮಂಡ್ಲಿ ಸರ್ಕಾರಿ ಶಾಲೆ ಕ್ರೀಡಾಂಗಣ ಕೆರೆಯಂತಾಗಿದೆ. ಗಾಂಧಿ ನಗರದ ಮುಖ್ಯ ರಸ್ತೆ, ಎ ಬ್ಲಾಕ್, ಬಿ ಬ್ಲಾಕ್ ಸೇರಿ ವಿವಿಧ ಅಡ್ಡ ರಸ್ತೆಗಳು ಜಲಾವೃತವಾಗಿವೆ. 50ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದ್ದು, ಮನೆಯಲ್ಲಿದ್ದ ವಸ್ತುಗಳು ನೀರು ಪಾಲಾಗಿವೆ. ಭತ್ತ ಕೊಯ್ಲಿಗೆ ಬಂದಿದ್ದು, ಮಳೆಗೆ ಕೊಚ್ಚಿಹೋಗುವ ಭೀತಿ ಎದುರಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಸುವರ್ಣಾವತಿ ನದಿ ಮೈದುಂಬಿ ಹರಿಯುತ್ತಿದೆ. ವೇದಾವತಿ ನದಿ ಜೀವಕಳೆ ಪಡೆದಿದ್ದು, ಬ್ಯಾರೇಜ್ ಹಾಗೂ ಚೆಕ್‌ಡ್ಯಾಂಗಳು ಭರ್ತಿಯಾಗಿವೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯ ಬಹುತೇಕ ಜಲಮೂಲಗಳಿಗೆ ನೀರು ಹರಿದುಬಂದಿದೆ. ನಗರದ ಹೊಂಡಗಳಲ್ಲಿ ಕೆಲವು ಭರ್ತಿಯಾಗಿವೆ. ಹಳ್ಳ-ಕೊಳ್ಳಗಳಲ್ಲಿ ಅಪಾರ ಪ್ರಮಾಣದ ನೀರು ಹರಿಯುತ್ತಿದ್ದು, ರೈತರು ಸಂತಸಗೊಂಡಿದ್ದಾರೆ.

ಚಿತ್ರದುರ್ಗ ನಗರದಲ್ಲಿ 9 ಸೆಂ.ಮೀ ಮಳೆಯಾಗಿದೆ. ಗುರುವಾರ ಜಿಲ್ಲೆಯಲ್ಲಿ ದಾಖಲಾದ ಅತಿಹೆಚ್ಚು ಮಳೆ ಇದಾಗಿದೆ. ಪಿಳ್ಳೆಕೆರನಹಳ್ಳಿಯ ಸರ್ಕಾರಿ ಶಾಲೆ ಜಲಾವೃತವಾಗಿದ್ದು, 2 ದಿನ ಶಾಲೆಗೆ ರಜೆ ಘೋಷಣೆ ಮಾಡಲಾಗಿದೆ. 21 ಹೆಕ್ಟೇರ್ ಬೆಳೆ ನಾಶವಾಗಿದ್ದು, 53 ಮನೆಗಳಿಗೆ ಭಾಗಶಃ ಹಾನಿಯಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ

ದಾವಣಗೆರೆ ಜಿಲ್ಲೆಯಲ್ಲಿ ಸರಾಸರಿ 4.8 ಸೆಂ.ಮೀ ಮಳೆಯಾಗಿದೆ. ಅತಿವೃಷ್ಟಿಯಿಂದಾಗಿ ಜಿಲ್ಲೆಯಲ್ಲಿ ಅಂದಾಜು ₹ 1.83 ಕೋಟಿ ನಷ್ಟ ಸಂಭವಿಸಿದೆ. 44 ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, 1,850 ಎಕರೆ ಭತ್ತದ ಬೆಳೆ ನಾಶವಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

### ಹಾವೇರಿಯ 35, ವಿಜಯನಗರದ 23 ಮನೆಗಳಿಗೆ ಹಾನಿ

# ಕೃಷಿ ಚಟುವಟಿಕೆ ಚುರುಕು

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಧಾರವಾಡ– ಹುಬ್ಬಳ್ಳಿ, ಗದಗ, ಹಾವೇರಿ, ವಿಜಯನಗರ, ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ವಿವಿಧೆಡೆ ಬುಧವಾರ ತಡರಾತ್ರಿ ಹಾಗೂ ಗುರುವಾರ ನಿರಂತರವಾಗಿ ಮಳೆಯಾಗಿದೆ.

ಮಳೆಯಿಂದ ವಿಜಯನಗರ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಜಿಲ್ಲೆಯಾದ್ಯಂತ ಬುಧವಾರ ರಾತ್ರಿಯಿಡೀ ಸುರಿದ ಬಿರುಸಿನ ಮಳೆಗೆ 23 ಮನೆಗಳಿಗೆ ಹಾನಿಯಾಗಿದೆ. ಅಂದಾಜು 250 ಎಕರೆ ಭತ್ತ ನಾಶವಾಗಿವೆ. ಅರಸೀಕೆರೆ ಹೋಬಳಿಯ ಸುತ್ತಮುತ್ತಲ ಚೆಕ್ ಡ್ಯಾಂಗಳು ತುಂಬಿದ್ದು ಮಳೆಯಲ್ಲಿಯೇ ಗ್ರಾಮಸ್ಥರು ಮೀನು ಹಿಡಿಯುತ್ತಿದ್ದ ದೃಶ್ಯ ಕಂಡುಬಂತು.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನಲ್ಲಿ 45 ಮನೆಗಳಿಗೆ, ಹಾವೇರಿ ಜಿಲ್ಲೆಯಲ್ಲಿ 35 ಮನೆಗಳಿಗೆ ಹಾನಿಯಾಗಿವೆ.

ವಿಜಯಪುರ ನಗರದಲ್ಲಿ ಗುರುವಾರ ಸುರಿದ ಭಾರಿ ಮಳೆಗೆ ಕೆ.ಸಿ.ಮಾರುಕಟ್ಟೆ ರಸ್ತೆ ಮೇಲೆ ನೀರು ಹೊಳೆಯಂತೆ ಹರಿಯಿತು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

## ಉಡುಪಿ: 'ರೆಡ್ ಅಲರ್ಟ್'

ಉಡುಪಿ ಜಿಲ್ಲೆಯಲ್ಲಿ ಮೇ 20 ರಂದು 215 ಮಿ.ಮೀಗಿಂತ ಹೆಚ್ಚು ಮಳೆ ಸುರಿಯುವ ಸಾಧ್ಯತೆಗಳಿದ್ದು, 'ರೆಡ್ ಅಲರ್ಟ್' ಘೋಷಿಸಲಾಗಿದೆ. ಮೀನುಗಾರರು ಸಮುದ್ರಕ್ಕಿಳಿಯದಂತೆ ಎಚ್ಚರಿಕೆ ನೀಡಲಾಗಿದೆ.

### ಮಳೆ: ಎಲ್ಲಿ, ಎಷ್ಟು

| | |
|---|---|
| **ದಕ್ಷಿಣ ಕನ್ನಡ** | |
| ಅರಂತೋಡು | **13.5** ಸೆಂ.ಮೀ |
| **ಉಡುಪಿ** | |
| ರೇಂಜಾಳ | **8.8** ಸೆಂ.ಮೀ. |
| **ಚಿಕ್ಕಮಗಳೂರು** | |
| ನಾಗಲಾಪುರ | **11.2** ಸೆಂ.ಮೀ. |
| ಎನ್.ಆರ್.ಪುರ | **10.5** ಸೆಂ.ಮೀ. |
| ಅತ್ತಿಗುಂಡಿ | **9.8** ಸೇಂ.ಮೀ. |
| ಬಸರೀಕಟ್ಟೆ | **9.7** ಸೆಂ.ಮೀ |

### ಪ್ರವಾಹ: ಮೃತರ ಸಂಖ್ಯೆ 10ಕ್ಕೆ ಏರಿಕೆ • 1,413 ಗ್ರಾಮಗಳು ಜಲಾವೃತ

# ಅಸ್ಸಾಂ: ಸಂಕಷ್ಟದಲ್ಲಿ 7.18 ಲಕ್ಷ ಜನ

**ಗುವಾಹಟಿ/ಇಟಾನಗರ/ಅಗರ್ತಲಾ (ಪಿಟಿಐ):** ಅಸ್ಸಾಂನಲ್ಲಿ ಪ್ರವಾಹದಿಂದ ಪರಿಸ್ಥಿತಿ ಹದಗೆಟ್ಟಿದ್ದು, ತೊಂದರೆಗೆ ಒಳಗಾದವರ ಸಂಖ್ಯೆ ಗುರುವಾರ 7.18 ಲಕ್ಷಕ್ಕೆ ಏರಿಕೆಯಾಗಿದೆ. ದರ್ರಾಂಗ್ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಈ ಮೂಲಕ ಪ್ರವಾಹಕ್ಕೆ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಪ್ರಸ್ತುತ ರಾಜ್ಯದಲ್ಲಿ 1,413 ಗ್ರಾಮಗಳು ಜಲಾವೃತವಾಗಿವೆ. ನಾಗಾಂವ್ ಜಿಲ್ಲೆ ಅತಿ ಹೆಚ್ಚು ಹಾನಿಗೊಳಗಾಗಿದ್ದು, ಇಲ್ಲಿನ 2.88 ಲಕ್ಷ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರವಾಹದಿಂದ ರಾಜ್ಯದಲ್ಲಿ 46,160 ಹೆಕ್ಟೇರ್ ಬೆಳೆ ಪ್ರದೇಶ ಮುಳುಗಡೆಯಾಗಿದೆ. ಹಲವೆಡೆ ಭೂ ಕುಸಿತ ಸಂಭವಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ರಾಜ್ಯದ 14 ಜಿಲ್ಲೆಗಳಲ್ಲಿ 248 ಪರಿಹಾರ ಶಿಬಿರಗಳನ್ನು ನಡೆಸಲಾಗುತ್ತಿದ್ದು, ಅಲ್ಲಿ 6,911 ಮಕ್ಕಳು ಸೇರಿದಂತೆ 48,304 ಜನರು ಆಶ್ರಯ ಪಡೆದಿದ್ದಾರೆ.

ನೆರೆಯ ಅರುಣಾಚಲ ಪ್ರದೇಶದಲ್ಲೂ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕೆಲವೆಡೆ ಭೂ ಕುಸಿತ ಸಂಭವಿಸಿದೆ. ಕೆಲ ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿಯೂ ಉಂಟಾಗಿದೆ. ಇಟಾನಗರದಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹದಿಂದಾಗಿ ತ್ರಿಪುರಾದಲ್ಲಿ ರೈಲ್ವೆ ಸೇವೆಗಳು ಸ್ಥಗಿತಗೊಂಡಿರುವ ಕಾರಣ, ಅಗತ್ಯ ವಸ್ತುಗಳ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಅಗತ್ಯ ವಸ್ತುಗಳ ತುರ್ತು ಸಾಗಣೆಗೆ ಪರ್ಯಾಯ ಮಾರ್ಗಗಳಾದ ಹಲ್ದಿಯಾ–ಚಿತ್ತಗಾಂಗ್– ಅಖೌರಾ-ಅಗರ್ತಲಾ ಮಾರ್ಗ ಬಳಸಲು ರಾಜ್ಯ ಸರ್ಕಾರ ಯೋಜಿಸಿದೆ.

ಅಸ್ಸಾಂ– ಅಗರ್ತಲಾ ರಾಷ್ಟ್ರೀಯ ಹೆದ್ದಾರಿ ಬುಧವಾರ ವಾಹನ ಸಂಚಾರಕ್ಕೆ ಮುಕ್ತವಾಗಿರುವುದರಿಂದ ಗುವಾಹಟಿ ಮತ್ತು ಸಿಲ್ಚಾರ್ ಕಡೆಯಿಂದ ರಾಜ್ಯಕ್ಕೆ ಪೆಟ್ರೋಲ್ ಮತ್ತು ಡೀಸೆಲ್ ಬರಲಾರಂಭಿಸಿದೆ ಎಂದು ಹಿರಿಯ ಅಧಿ-ಕಾರಿಯೊಬ್ಬರು ತಿಳಿಸಿದ್ದಾರೆ.

ತ್ರಿಪುರಾದ ರಾಜಧಾನಿ ಅಗರ್ತಲಾದಲ್ಲಿ ಗುರುವಾರ ಸುರಿದ ಭಾರಿ ಮಳೆಯಿಂದಾಗಿ ಜಲಾವೃತಗೊಂಡಿರುವ ರಸ್ತೆಯಲ್ಲಿ ಜನರು ಸುರಕ್ಷಿತ ಸ್ಥಳದತ್ತ ತೆರಳಿದರು –ಪಿಟಿಐ ಚಿತ್ರ

## ಕೇರಳದ ಎಲ್ಲ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

**ತಿರುವನಂತರಪುರ:** ಕೇರಳದಲ್ಲಿ ಗುರುವಾರವೂ ತೀವ್ರ ಮಳೆ ಸುರಿಯುತ್ತಿದ್ದು, ಭಾರತೀಯ ಹವಾಮಾನ ಇಲಾಖೆಯು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ 'ಆರೆಂಜ್ ಅಲರ್ಟ್' ಘೋಷಿಸಿದೆ.

ಇಡುಕ್ಕಿ ಜಿಲ್ಲೆಯ ಮುನ್ನಾರ್‌ನಲ್ಲಿ ದಟ್ಟ ಮಂಜು ಮುಸುಕಿದ ವಾತಾವರಣದಲ್ಲಿ ಕಾರೊಂದು ಕಂದಕಕ್ಕೆ ಉರುಳಿ ಬಿದ್ದುದರಿಂದ ಮಗು ಸಹಿತ ಇಬ್ಬರು ಮೃತಪಟ್ಟಿದ್ದಾರೆ. ನತದೃಷ್ಟರು ಆಂಧ್ರ ಪ್ರದೇಶದವರು ಎನ್ನಲಾಗಿದೆ.

ಭಾರಿ ಮಳೆಯಿಂದಾಗಿ ರಾಜ್ಯದಲ್ಲಿನ ಜಲಾಶಯಗಳು ತುಂಬತೊಡಗಿದ್ದು, ಕೊಚ್ಚಿ ನಗರದ ಕೆಲವು ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ.

ಶುಕ್ರವಾರ, ಮೇ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 139 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿನಿಮಾ ಪುರವಣಿ**

50ನೇ ಚಿತ್ರದ ಹೊಸ್ತಿಲಿನಲ್ಲಿರುವ ನಟಿ ಪ್ರಿಯಾಂಕಾ ಉಪೇಂದ್ರ ಅವರ 'ತೀಕ್ಷ್ಣ' ಮಾತುಗಳು



ಸೆನ್ಸೆಕ್ಸ್ 54,208 | ನಿಫ್ಟಿ 16,240 | ಚಿನ್ನ (Std. 10g) ₹52,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹62,300 (ಬೆಂಗಳೂರು) | ₹/$ 77.65

ಆಳ-ಅಗಲ
ಶ್ರೇಷ್ಠ ಭಾರತೀಯ ಚಿಂತನೆಗಳು ಪಾಠಕ್ಕೂ ವಿರೋಧ

ರಾಜಕಾಲುವೆ ಹೂಳೆತ್ತಲು ₹400 ಕೋಟಿ: ಸಿ.ಎಂ 3B

145 ವಿದ್ಯಾರ್ಥಿಗಳಿಗೆ 625 ಅಂಕ • ಶೇ 85.63ರಷ್ಟು ಉತ್ತೀರ್ಣ

# ಎಸ್ಸೆಸ್ಸೆಲ್ಸಿ: ದಾಖಲೆ ಫಲಿತಾಂಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2021-22ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಒಟ್ಟಾರೆ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ದಾಖಲೆ ಬರೆದಿದ್ದಾರೆ. ಈ ಬಾರಿ ಶೇ 85.63 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ರಾಜ್ಯದ ವಿವಿಧ ಶಾಲೆಗಳ 145 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿದ್ದಾರೆ. ಇದೇ ಮೊದಲ ಬಾರಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶೇ100ರಷ್ಟು ಅಂಕ ಗಳಿಸಿದ್ದಾರೆ. ಇದುವರೆಗೆ 625 ಅಂಕಗಳನ್ನು ಪಡೆಯುವವರ ವಿದ್ಯಾರ್ಥಿಗಳ ಸಂಖ್ಯೆ ಹತ್ತು ದಾಟಿದ್ದು ಅಪರೂಪವಾಗಿತ್ತು. 2020ರಲ್ಲಿ ಆರು ವಿದ್ಯಾರ್ಥಿಗಳು 625 ಅಂಕಗಳನ್ನು ಪಡೆದಿದ್ದರು.

ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ಬಾಲಕರ ಉತ್ತೀರ್ಣ ಪ್ರಮಾಣ ಶೇ 81.30ರಷ್ಟು ಮತ್ತು ಬಾಲಕಿಯರ ಉತ್ತೀರ್ಣ ಪ್ರಮಾಣ ಶೇ 90.29ರಷ್ಟಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಸಭಾಂಗಣದಲ್ಲಿ ಗುರುವಾರ ಫಲಿತಾಂಶ ಪ್ರಕಟಿಸಿದರು.

'ಈ ಬಾರಿ ಒಟ್ಟು 8,53,436 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 7,30,881 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ 10 ವರ್ಷಗಳಲ್ಲೇ (2020-21 ಹೊರತು ಪಡಿಸಿ) ಈ ಬಾರಿಯ ಶೇಕಡವಾರು ಫಲಿತಾಂಶ ಅತ್ಯಧಿಕವಾಗಿದೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಈ ಬಾರಿ ಪ್ರಶ್ನೆಪತ್ರಿಕೆಗಳು ವಿದ್ಯಾರ್ಥಿ ಸ್ನೇಹಿಯಾಗಿದ್ದವು. ಜತೆಗೆ, ಪ್ರತಿ ಬಾರಿ ಶೇ 20ರಷ್ಟು ಕಠಿಣ ಪ್ರಶ್ನೆಗಳನ್ನು ನೀಡಲಾಗುತ್ತಿತ್ತು. ಈ ಬಾರಿ ಶೇ 10ರಷ್ಟು ಕಠಿಣ ಪ್ರಶ್ನೆಗಳಿದ್ದವು. ಈ ಅಂಶವು ಸಹ ಉತ್ತಮ ಫಲಿತಾಂಶ ದೊರೆಯಲು ಪೂರಕವಾಗಿದೆ' ಎಂದು ತಿಳಿಸಿದರು.

### ಫಲಿತಾಂಶ ವಿವರ




| ಶಾಲಾವಾರು ಫಲಿತಾಂಶ | | |
|---|---|---|
| ಶಾಲೆಯ ವಿಧ | ಒಟ್ಟು | % |
| ಸರ್ಕಾರಿ | 5717 | 88 |
| ಅನುದಾನಿತ | 3416 | 87.84 |
| ಅನುದಾನರಹಿತ | 6202 | 92.29 |

**ನಗರ ಪ್ರದೇಶ ವಿದ್ಯಾರ್ಥಿಗಳ ಫಲಿತಾಂಶ**

| 2021-22 | 2020-21 | 2019-20 |
|---|---|---|
| 86.64% | 100% | 74.10% |

**ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳ ಫಲಿತಾಂಶ**

| 2021-22 | 2020-21 | 2019-20 |
|---|---|---|
| 91.32% | 100% | 77.81% |

ಪರೀಕ್ಷೆಯಲ್ಲಿ ಹಿನ್ನಡೆ ಅನುಭವಿಸಿದ ವಿದ್ಯಾರ್ಥಿಗಳು ಎದೆಗುಂದಬೇಕಿಲ್ಲ. ಧೈರ್ಯದಿಂದ ಇರಬೇಕು. ಪರೀಕ್ಷೆಗಿಂತ ಜೀವನ ಮುಖ್ಯ
**ಬಿ.ಸಿ. ನಾಗೇಶ್,** ಸಚಿವ

**ಬಾಲಕರ ವಿವರ**
4,41,099 ಹಾಜರಾದವರು
3,58,602 ಉತ್ತೀರ್ಣ
81.30%

**ಬಾಲಕಿಯರ ವಿವರ**
4,12,334 ಹಾಜರಾದವರು
3,72,279 ಉತ್ತೀರ್ಣ
90.29%

### ಜೂನ್ 3ನೇ ವಾರದಲ್ಲಿ ಪಿಯು ಫಲಿತಾಂಶ

**ಬೆಂಗಳೂರು:** ದ್ವಿತೀಯ ಪಿಯುಸಿ ಫಲಿತಾಂಶ ಜೂನ್ 3ನೇ ವಾರದಲ್ಲಿ ಪ್ರಕಟವಾಗಲಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು. ಇದೇ 24ರಿಂದ ಮೌಲ್ಯ ಮಾಪನ ಆರಂಭವಾಗಲಿದೆ. ಜೂನ್ 16ರ ಒಳಗೆ ಮೌಲ್ಯಮಾಪನ ಮುಗಿಯಲಿದೆ. ಮೌಲ್ಯಮಾಪಕರ ಸಂಭಾವನೆ ಹೆಚ್ಚಿಸುವ ಪ್ರಸ್ತಾವವನ್ನು ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ ಎಂದರು.

2020-21ನೇ ಸಾಲಿನಲ್ಲಿ ಕೋವಿಡ್ ಕಾರಣಕ್ಕೆ ಎಲ್ಲರನ್ನೂ ಉತ್ತೀರ್ಣಗೊಳಿಸಲಾಗಿತ್ತು. ಪರೀಕ್ಷೆಗೆ ನೋಂದಾಯಿಸಿದ್ದ ಖಾಸಗಿ ವಿದ್ಯಾರ್ಥಿಯೊಬ್ಬರ ಹೆಸರಿನಲ್ಲಿ ಬೇರೊಬ್ಬರು ಪರೀಕ್ಷೆಗೆ ಹಾಜರಾಗಿದ್ದರಿಂದ, ಆ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸಲಾಗಿತ್ತು. ಹೀಗಾಗಿ, ಶೇ 99.99ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. 2019-20ನೇ ಸಾಲಿನಲ್ಲಿ ಶೇ72.42ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು.

4ನೇ ಪುಟ ನೋಡಿ
ಇನ್ನೊಂದು ಸುದ್ದಿ 6

ಇಬ್ಬರು ಅಭ್ಯರ್ಥಿಗಳ ಮೇಲೆ ಅನುಮಾನ: ಸಿಸಿಬಿ ಪತ್ರ

# ಸಹಾಯಕ ಪ್ರಾಧ್ಯಾಪಕರ ನೇಮಕ 'ಒಎಂಆರ್' ತಿದ್ದಿ ಅಕ್ರಮ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ 'ಒಎಂಆರ್' ತಿದ್ದಿ ಅಕ್ರಮ ಎಸಗಿರುವ ಸಂಶಯ ವ್ಯಕ್ತವಾಗಿದ್ದು, ಈ ಬಗ್ಗೆ ಕೆಲವು ಮಾಹಿತಿ ಕೋರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಸಿಸಿಬಿ ಪೊಲೀಸರು ಪತ್ರ ಬರೆದಿದ್ದಾರೆ.

**ಇಬ್ಬರ ಮೇಲೆ ಅನುಮಾನ:** 'ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಬರೆದಿದ್ದ ಇಬ್ಬರು ಅಭ್ಯರ್ಥಿಗಳ ಒಎಂಆರ್ ಪ್ರತಿಯಲ್ಲಿ ವ್ಯತ್ಯಾಸ ಇರುವ ಮಾಹಿತಿ ಇದೆ. ಆ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ನೀಡುವಂತೆ ಕೆಇಎ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಭ್ಯರ್ಥಿಗಳ ಕಾರ್ಬನ್ ಪ್ರತಿಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಕೆಇಎ ಕಡೆಯಿಂದ ಅಸಲಿ ಪ್ರತಿಗಳು ಸಿಕ್ಕ ಬಳಿಕ ಪರಸ್ಪರ ಹೋಲಿಕೆ ಮಾಡಲಾಗುವುದು. ಮೇಲ್ನೋಟಕ್ಕೆ ವ್ಯತ್ಯಾಸಗಳು ಕಂಡುಬಂದರೆ, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯಲಾಗುವುದು. ನಂತರವೇ ಅಭ್ಯರ್ಥಿಗಳು ಹಾಗೂ ಅವರಿಗೆ ಸಹಕಾರ ನೀಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದೂ ಹೇಳಿದರು.

**ಒಎಂಆರ್ ತಿದ್ದಿರುವ ಶಂಕೆ:** 545 ಪಿಎಸ್ಐ ಹುದ್ದೆಗಳ ನೇಮಕಾತಿಯಲ್ಲಿ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ತಿದ್ದಿ ಅಕ್ರಮ ಎಸಗಿದ್ದ ಸಂಗತಿಯನ್ನು ಸಿಐಡಿ ಅಧಿಕಾರಿಗಳು ಈಗಾಗಲೇ ಬಯಲು ಮಾಡಿದ್ದಾರೆ. ಅದೇ ಮಾದರಿಯಲ್ಲೇ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ ಒಎಂಆರ್ ತಿದ್ದಿರುವ ಬಗ್ಗೆ ಸಿಸಿಬಿ ಪೊಲೀಸರಿಗೆ ಸಂದೇಹ ಉಂಟಾಗಿದೆ.

'ಪರೀಕ್ಷೆ ಕೊಠಡಿಯಲ್ಲಿ ಕೆಲ ಪ್ರಶ್ನೆಗಳಿಗೆ ಮಾತ್ರ ಉತ್ತರ ಬರೆದು, ಇನ್ನುಳಿದ ವೃತ್ತಗಳನ್ನು ಅಭ್ಯರ್ಥಿಗಳು ಖಾಲಿ ಬಿಟ್ಟಿರುವ ಅನುಮಾನವಿದೆ. ಖಾಲಿ ವೃತ್ತಗಳನ್ನು ಭರ್ತಿ ಮಾಡಿ ಅಭ್ಯರ್ಥಿಗಳನ್ನು ಹುದ್ದೆಗೆ ಆಯ್ಕೆ ಮಾಡಲು ಸಂಚು ರೂಪಿಸಿರುವ ಶಂಕೆಯೂ ಇದೆ' ಎಂದೂ ಅಧಿಕಾರಿಯೊಬ್ಬರು ತಿಳಿಸಿದರು.

4ನೇ ಪುಟ ನೋಡಿ

## ಡಿ.ಎಸ್. ನಾಗಭೂಷಣ ನಿಧನ

**ಶಿವಮೊಗ್ಗ:** ಸಾಹಿತಿ ಡಿ.ಎಸ್. ನಾಗಭೂಷಣ ಆರೋಗ್ಯದ ಸಮಸ್ಯೆಯಿಂದ (70) ಗುರುವಾರ ನಿಧನರಾದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ತಿಮ್ಮಸಂದ್ರದ ನಾಗಭೂಷಣ ಅವರು ಗಣಿತ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ 30 ವರ್ಷ ಕಾರ್ಯನಿರ್ವಹಿಸಿದ್ದರು. ಸ್ವಯಂ ನಿವೃತ್ತಿ ಪಡೆದ ನಂತರ ಶಿವಮೊಗ್ಗದ ಕಲ್ಲಹಳ್ಳಿಯಲ್ಲಿ ನೆಲೆಸಿದ್ದರು.

ಸಾಹಿತ್ಯ ವಿಮರ್ಶೆ, ಸಮಾಜವಾದಿ ಚಿಂತನೆ ಅವರ ಆಸಕ್ತಿಯ ಕ್ಷೇತ್ರಗಳು.

5ನೇ ಪುಟ ನೋಡಿ
ನುಡಿ ನಮನ 5

## ರಸಗೊಬ್ಬರ ಕೊರತೆ

### ಇದೆ: ಶೋಭಾ

**ಮೈಸೂರು:** 'ರಷ್ಯಾ ಮತ್ತು ಉಕ್ರೇನ್ ಯುದ್ಧದ ಪರಿಣಾಮದಿಂದ ರಾಜ್ಯದಲ್ಲಿ ರಸಗೊಬ್ಬರದ ಸಮಸ್ಯೆ ಇರುವುದು ನಿಜ. ಅದನ್ನು ಹಂತ ಹಂತವಾಗಿ ಬಗೆಹರಿಸುತ್ತೇವೆ. ಮುಂದಿನ ದಿನಗಳಲ್ಲಿ ಭಾರತದಲ್ಲೇ ರಸಗೊಬ್ಬರದ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮೈಸೂರಿನಲ್ಲಿ ಗುರುವಾರ ಹೇಳಿದರು.

### ಇಲ್ಲ: ಬಿ.ಸಿ. ಪಾಟೀಲ

'ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಇಲ್ಲ. ಕೃತಕ ಅಭಾವ ಸೃಷ್ಟಿಸಿದರೆ ಅಂಥವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಕಾಳಸಂತೆಕೋರರ ಪತ್ತೆಗೆ ವಿಶೇಷ ತಂಡ ರಚಿಸಲಾಗುವುದು' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಮೈಸೂರಿನಲ್ಲಿ ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್ ಬೆಲೆ ಇನ್ನು ₹ 1,006 10

**ಚಿನಕುರಳಿ**

ಪ್ರಕಾಶ್ ಶೆಟ್ಟಿ

## ‘₹1,619 ಕೋಟಿ ಟೆಂಡರ್ ಗೋಲ್‌ಮಾಲ್’

**ಬೆಂಗಳೂರು:** ರಾಯಚೂರು ಜಿಲ್ಲೆ ಲಿಂಗಸೂಗೂರು ಮತ್ತು ದೇವದುರ್ಗಾ ತಾಲ್ಲೂಕುಗಳಲ್ಲಿ ನಾರಾಯಣಪುರ ಬಲದಂಡೆ ವಿತರಣಾ ನಾಲೆ ಮತ್ತು ಉಪಕಾಲುವೆಗಳ ಆಧುನೀಕರಣದ ₹1,619 ಕೋಟಿ ಮೌಲ್ಯದ ಟೆಂಡರ್ ಲಿಂಗಸೂಗೂರು ಮಾಜಿ ಶಾಸಕ ಮಾನಪ್ಪ ವಜ್ಜಲ್ ಅವರ ಸಹೋದರ ಎನ್.ಡಿ.ವಡ್ಡರ್ ಹೆಸರಿಗೆ ಆಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ಬಲದಂಡೆ ನಾಲೆಯ 1 ರಿಂದ 15 ವಿತರಣಾ ನಾಲೆಗಳ ಆಧುನೀಕರಣ ಮಾಡಲು (ಈ,ಆರ್,ಎಂ) ₹828 ಕೋಟಿ ಮತ್ತು 16 ರಿಂದ 18 ಉಪಕಾಲುವೆಗಳ ಅಂದಾಜು ವೆಚ್ಚ ₹791 ಕೋಟಿ ಮೌಲ್ಯದ ಕಾಮಗಾರಿಗಳ ಟೆಂಡರ್ ನೀಡಲಾಗಿದ್ದು, ಕೆಲಸವೇ ಆಗದೇ ₹425 ಕೋಟಿ ಬಿಲ್ ಕೂಡ ಪಾವತಿಯಾಗಿದೆ ಎಂದು ಹೇಳಿದ್ದಾರೆ.

ಈ ಯೋಜನೆಯಲ್ಲಿ ಎಂಜಿನಿಯರ್‌ಗಳು, ಕಂಟ್ರಾಕ್ಟರ್‌ಗಳು ಮತ್ತು ಸರ್ಕಾರ ಸೇರಿ ಗೋಲ್‌ಮಾಲ್ ಮಾಡಿದ್ದಾರೆ. ಹಿಂದೊಮ್ಮೆ ಆಧುನೀಕರಣಗೊಂಡ ಕಾಲುವೆಗಳಿಗೆ ಮತ್ತೆ ಮರು ನಿರ್ಮಾಣ ಮಾಡುವುದಾಗಿ ಹೇಳಿ ದುಡ್ಡು ಹೊಡೆಯಲಾಗಿದೆ. ಮಣ್ಣು ತುಂಬಿಸಿದ್ದೇವೆ, ಕಲ್ಲುಬಂಡೆ ಬ್ಲಾಸ್ಟ್ ಮಾಡಿದ್ದೇವೆ, ಮುರುಮ್ ಹಾಕಿದ್ದೇವೆ ಎಂದೆಲ್ಲ ಸುಳ್ಳು ಲೆಕ್ಕ ನೀಡಿ ಬಿಲ್ ಪಡೆಯಲಾಗಿದೆ ಎಂದು ಅವರು ದೂರಿದ್ದಾರೆ.


**ನೈಋತ್ಯ ರೈಲ್ವೆ**

ಟೆಂಡರ್ ಸೂಚನೆ ಸಂ. CN/01/2022 ದಿನಾಂಕ: 18.05.2022

[illegible]

ಟೆಂಡರ್ ಸಂಖ್ಯೆ 95215631C

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08-06-2022, 14:00 ಗಂಟೆಯವರೆಗೆ

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್

PUB/99/AAV/PRB/SWR/2022-23

S.W.Railways SWRRLY SWRRLY


### ಕಿರಿದಾದ ತಿರುವಿನಲ್ಲಿ ವಾಹನ ಚಲಾಯಿಸುವುದೇ ಸವಾಲು: ಆಯತಪ್ಪಿದರೆ ಕಾಲುವೆಗೆ ಉರುಳುವ ಭೀತಿ

# ಅಪಘಾತಕ್ಕೆ ‘ಆಹ್ವಾನ’ ನೀಡುವ ಬಂಗ್ಲೆ ಕ್ರಾಸ್!

• ಜಿ.ಶಿವಕುಮಾರ

**ಬೆಂಗಳೂರು:** ಕಿರಿದಾದ ತಿರುವು. ಕಡಿದಾದ ರಸ್ತೆ. ಅದರ ಮೇಲೆಯೇ ಹರಿಯುವ ಕಾಲುವೆ ನೀರು. ಜಲಾವೃತವಾಗಿರುವ ಹಾದಿಯಲ್ಲೇ ಉಸಿರು ಬಿಗಿ ಹಿಡಿದು ಸಾಗುವ ವಾಹನ ಸವಾರರು....!

ಇದು ಕೊಮ್ಮಘಟ್ಟ ಗ್ರಾಮದ ಬಂಗ್ಲೆ ಕ್ರಾಸ್‌ನಲ್ಲಿ ಕಂಡುಬರುವ ದೃಶ್ಯ.

ಕೆಂಗೇರಿಯಿಂದ ರಾಮೋಹಳ್ಳಿ, ನೆಲಮಂಗಲ, ಮಾಗಡಿ, ತಾವರೆಕೆರೆ, ಸೂಲಿಕೆರೆ ಸೇರಿ ಹಲವು ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗದಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಕಿರಿದಾಗಿರುವುದರಿಂದ ತಿರುವಿನಲ್ಲಿ ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಪ್ರಯಾಣಿಕರು ಗಂಭೀರವಾಗಿ ಗಾಯಗೊಳ್ಳುವುದು ಸಾಮಾನ್ಯ ಎಂಬಂತಾಗಿದೆ.

ಲಘು ವಾಹನಗಳೇ ಸಾಗಲು ಆಗದಂತಹ ಈ ಹಾದಿಯಲ್ಲಿ ಬಸ್, ಲಾರಿ, ಕ್ಯಾಂಟರ್, ಟ್ರ್ಯಾಕ್ಟರ್‌ಗಳೂ ಸಂಚರಿಸುತ್ತವೆ! ಬಸ್ ಅಥವಾ ಲಾರಿ ಸಾಗುವಾಗ ವಿರುದ್ಧ ದಿಕ್ಕಿನಲ್ಲಿ ಬರುವವರು ರಸ್ತೆಯ ಅಂಚಿನಲ್ಲೇ ವಾಹನ ನಿಲ್ಲಿಸಿಕೊಂಡು ಕಾಯಬೇಕು. ಇದರಿಂದ ದಟ್ಟಣೆ ಸಮಸ್ಯೆಯೂ ಉಂಟಾಗುತ್ತದೆ. ರಸ್ತೆ ಬದಿಯಲ್ಲೇ ಕಾಲುವೆಯಿರುವುದರಿಂದ ತುಂಬಿ ಹರಿಯುತ್ತಿದ್ದು, ನೀರಿನ ರಭಸಕ್ಕೆ ಮಣ್ಣಿನ ಕೊರೆತ ಉಂಟಾಗಿ ಗುಂಡಿಯೊಂದು ಬಿದ್ದಿದೆ.

‘ಕೆಲ ದಿನಗಳ ಹಿಂದೆ ಲಾರಿ ಹಾಗೂ ಕಾರಿನ ನಡುವೆ ಡಿಕ್ಕಿಯಾಗಿ ಕಾಲುವೆಯೊಳಗೆ ಕಾರು ಉರುಳಿ ಬಿದ್ದಿತ್ತು. ಕಾರಿನಲ್ಲಿ ಪುಟ್ಟ ಮಗುವೂ ಇತ್ತು. ಅದೃಷ್ಟವಶಾತ್ ಯಾರಿಗೂ ಏನೂ ತೊಂದರೆಯಾಗಿಲ್ಲ. ಕಾರಿನಲ್ಲಿದ್ದವರನ್ನು ನಾವೇ ರಕ್ಷಣೆ ಮಾಡಿದ್ವು. ಜೆಸಿಬಿ ನೆರವಿನಿಂದ ಕಾರನ್ನು ಮೇಲಕ್ಕೆ ಎತ್ತಲಾಗಿತ್ತು’ ಎಂದು ಹೊಸಕೆರೆಯ ನರಸಿಂಹ ತಿಳಿಸಿದರು.

ಬಿಎಂಟಿಸಿ ಬಸ್ ಸಾಗುವಾಗ ಎದುರಿನಿಂದ ಬರುತ್ತಿದ್ದ ವಾಹನಗಳು ರಸ್ತೆ ಅಂಚಿನಲ್ಲಿ ನಿಂತಿದ್ದವು ಪ್ರಜಾವಾಣಿ ಚಿತ್ರ–ಅನೂಪ್ ರಾಘ.ಟಿ.

**ಜನಸ್ಪಂದನ** ಸಿಟಿಜನ್ಸ್ ಫಾರ್ ಚೇಂಜ್

ನರಸಿಂಹ

‘ತಿಂಗಳಲ್ಲಿ ಇಲ್ಲಿ 10 ರಿಂದ 15 ಅಪಘಾತಗಳು ಸಾಮಾನ್ಯ. ಇದನ್ನು ನೋಡಿ ನೋಡಿ ಸಮರ್ಪ ಸಾಕಾಗಿದೆ. ಸುಮಾರು 20 ವರ್ಷಗಳಿಂದ ಈ ಸಮಸ್ಯೆ ಇದೆ. ದೂರು ನೀಡಿದರೂ ಸಮಸ್ಯೆ ಮಾತ್ರ ಬಗೆಹರಿದಿಲ್ಲ’ ಎಂದು ಮಾರಗೊಂಡನಹಳ್ಳಿಯ ಮಹೇಶ್ ದೂರಿದರು.

‘ಅಪಘಾತಗಳು ನಡೆದಾಗ ಪೊಲೀಸರು ಹಾಗೂ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಹೋಗುತ್ತಾರೆ. ಕೆಲ ದಿನಗಳ ಹಿಂದೆ ನಡೆದ ಅಪಘಾತದಿಂದಾಗಿ ರಸ್ತೆ ಬದಿ ಹಾಕಲಾಗಿದ್ದ ಲೋಹದ ತಡೆಗೋಡೆ ಮುರಿದು ಬಿದ್ದಿದೆ. ಕಾರ್ಖಾನೆ ನೌಕರರು, ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ರೈತರು ಈ ರಸ್ತೆಯಲ್ಲಿ ಓಡಾಡುವುದಕ್ಕೆ ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಕತ್ತಲಾದರೆ ಸಂಚಾರ ಕಷ್ಟ

ಪವನ್

‘ಕತ್ತಲಾದ ಮೇಲೆ ಈ ಮಾರ್ಗದಲ್ಲಿ ಸಾಗುವುದು ತುಂಬಾ ಕಷ್ಟ. ನೀರಿನಿಂದಾಗಿ ರಸ್ತೆಯೇ ಕಾಣುವುದಿಲ್ಲ. ಎಲ್ಲಿ ಗುಂಡಿ ಬಿದ್ದಿದೆ ಎಂಬುದೂ ಗೊತ್ತಾಗುವುದಿಲ್ಲ’ ಎಂದು ಹೊಸಕೆರೆಯ ಪವನ್ ಹೇಳಿದರು.

‘ಈ ರಸ್ತೆಯಲ್ಲಿ ನಿತ್ಯವೂ ಸಂಚರಿಸುತ್ತೇನೆ. ನೀರಿನ ಸೆಳೆತದಿಂದಾಗಿ ಎರಡು ದಿನಗಳ ಹಿಂದೆ ಬೈಕ್‌ನಿಂದ ಆಯತಪ್ಪಿ ಬಿದ್ದಿದ್ದೆ. ಸ್ಥಳೀಯರ ಕಥೆಯೇ ಹೀಗಾದರೆ ಹೊಸದಾಗಿ ಈ ಮಾರ್ಗದಲ್ಲಿ ಸಂಚರಿಸುವವರ ಪಾಡೇನು’ ಎಂದು ಪ್ರಶ್ನಿಸಿದರು. ‘ಅಪಘಾತವಾದರೆ ಈ ಮಾರ್ಗದಲ್ಲಿ ಸಂಚಾರ ನಿರ್ಬಂಧಿಸಲಾಗುತ್ತದೆ. ಪ್ರಯಾಣಿಕರು ಹತ್ತಾರು ಕಿ.ಮೀ ಸುತ್ತಿ ಪ್ರಯಾಣಿಸಬೇಕಾಗುತ್ತದೆ’ ಎಂದೂ ತಿಳಿಸಿದರು.

### ಯಶವಂತಪುರ ಕ್ಷೇತ್ರ: ಜನಸ್ಪಂದನ ನಾಳೆ

ಯಶವಂತಪುರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ ‘ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳ ವತಿಯಿಂದ ಶನಿವಾರ (ಇದೇ 21) ಕೆಂಗೇರಿ ಉಪನಗರದ ಬಂಡೆಮಠ ಮದುವೆ ಹಾಲ್‌ನಲ್ಲಿ ‘ಜನಸ್ಪಂದನ’ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಆಸಕ್ತರು ಬೆಳಿಗ್ಗೆ 10ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿಕೊಂಡವರಿಗೆ ಆದ್ಯತೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

### ನೇರ ಮಾರ್ಗದಿಂದ ಸಮಸ್ಯೆಗೆ ಮುಕ್ತಿ

‘ಕೊಮ್ಮಘಟ್ಟದಿಂದ ಬರುವ ವಾಹನಗಳು ರಾಮಸಂದ್ರ ಬ್ಲಾಕ್ 3ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕೆಂಪೇಗೌಡ ಬಡಾವಣೆಯ ಖಾಲಿ ನಿವೇಶನದ ಮೂಲಕ ನೇರವಾಗಿ ಸಾಗುವ ವ್ಯವಸ್ಥೆ ಮಾಡಬೇಕು. ಹಾಗಾದಾಗ ಮಾತ್ರ ತಿರುವಿನಿಂದ ಆಗುತ್ತಿರುವ ಸಮಸ್ಯೆಗೆ ಶಾಶ್ವತ ಮುಕ್ತಿ ಸಿಗಲಿದೆ’ ಎಂದು ಸ್ಥಳೀಯರು ತಿಳಿಸಿದರು.

‘ಅದು ಸಾಧ್ಯವಾಗದಿದ್ದರೆ ಈಗಿರುವ ರಸ್ತೆಯನ್ನೇ ವಿಸ್ತರಿಸಬೇಕು. ಕಾಲುವೆಯ ನೀರು ರಸ್ತೆ ಮೇಲೆ ಹರಿದು ಹೋಗದಂತೆ ತಡೆಯಲು ಕ್ರಮ ವಹಿಸಬೇಕು’ ಎಂದೂ ಆಗ್ರಹಿಸಿದರು.

### ವ್ಯಂಗ್ಯಚಿತ್ರಕಾರ ಬಿ.ವಿ. ಪಾಂಡುರಂಗರಾವ್‌ಗೆ ಪ್ರಶಸ್ತಿ

**ಬೆಂಗಳೂರು:** ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ನೀಡುವ 2021ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿಗೆ ವ್ಯಂಗ್ಯ ಚಿತ್ರಕಾರ ಬಿ.ವಿ. ಪಾಂಡುರಂಗರಾವ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 5 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಎಂ.ಜಿ ರಸ್ತೆಯಲ್ಲಿರುವ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯಲ್ಲಿ ಇದೇ 28ರ ಬೆಳಿಗ್ಗೆ 11.30ಕ್ಕೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ನಗರದಲ್ಲಿ ಇಂದು

**‘ಕನ್ನಡ ಪ್ರಗತಿಶೀಲ ಕಟ್ಟ ಮತ್ತು ಬಸವರಾಜ ಕಟ್ಟೀಮನಿ’ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ:** ಉದ್ಘಾಟನೆ–ಬರಗೂರು ರಾಮಚಂದ್ರಪ್ಪ, ಆಶಯ ಭಾಷಣ–ಎಸ್.ಎಸ್.ರಾಮಚಂದ್ರ ರಾವ್, ಭಾಗವಹಿಸುವವರು–ಎಸ್. ರಾಮರಾವ್, ಎಸ್.ಎನ್.ನಾಗರಾಜರೆಡ್ಡಿ, ಪಿ.ಸದಾನಂದ ಮಯ್ಯ, ಅಧ್ಯಕ್ಷತೆ–ಮಲ್ಲಿಕಾರ್ಜುನ ಹಿರೇಮಠ, ಆಯೋಜನೆ–ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ ಹಾಗೂ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ–ವಿ.ವಿ.ಪುರಂ ವಿಜ್ಞಾನ ಕೇಂದ್ರದ ಸಭಾಂಗಣ, ನ್ಯಾಷನಲ್ ಕಾಲೇಜು, ಜಯನಗರ–ಬೆಳಿಗ್ಗೆ 10.

**ರಾಜೀವ್ ಗಾಂಧಿಯವರ 31ನೇ ಪುಣ್ಯಸ್ಮರಣೆ ಕಾರ್ಯಕ್ರಮ:** ಉದ್ಘಾಟನೆ–ಡಿ.ಕೆ.ಶಿವಕುಮಾರ್, ಅತಿಥಿಗಳು: ಸಿದ್ದರಾಮಯ್ಯ, ದಿನೇಶ್ ಗುಂಡೂರಾವ್, ಎಂ.ಬಿ.ಪಾಟೀಲ, ಆಯೋಜನೆ–ಭಾರತರತ್ನ ಶ್ರೀ ರಾಜೀವ್ ಗಾಂಧಿ ಜ್ಯೋತಿ ಸಮಿತಿ, ಸ್ಥಳ–ರಾಜೀವ್ ಗಾಂಧಿ ಪ್ರತಿಮೆ ವೃತ್ತ, ಶೇಷಾದ್ರಿಪುರ–ಬೆಳಿಗ್ಗೆ 10.

**7ನೇ ಇಂಡಿಯಾ ಐಡಿಯಾಸ್ ಕಾಂಕ್ಲೇವ್ ಉದ್ಘಾಟನೆ:** ಭಾಗವಹಿಸುವವರು–ಬಸವರಾಜ ಬೊಮ್ಮಾಯಿ, ಅಶ್ವಿನಿ ವೈಷ್ಣವ್, ನಿರ್ಮಲಾನಂದನಾಥ ಸ್ವಾಮೀಜಿ, ಜಾನ್ ಚೇಂಬರ್ಸ್, ಉನೈದ್ ಕಮಲ್ ಅಹ್ಮದ್, ಆಯೋಜನೆ–ಇಂಡಿಯಾ ಫೌಂಡೇಷನ್, ಸ್ಥಳ–ದಿ ತಾಜ್ ವೆಸ್ಟೆಂಡ್, ರೇಸ್‌ಕೋರ್ಸ್ ರಸ್ತೆ –ಸಂಜೆ 5.

**ಅಲಯನ್ಸ್ ಸಾಹಿತ್ಯ ಉತ್ಸವಕ್ಕೆ ಚಾಲನೆ:** ಭಾಗವಹಿಸುವವರು: ಶಶಿ ತರೂರ್, ರಾಜದೀಪ್ ಸರ್ದೇಸಾಯಿ, ವಿವಿಎಸ್ ಲಕ್ಷ್ಮಣ್, [illegible], ಪ್ರತಿಭಾ ನಂದಕುಮಾರ್, ಉಷಾ ಉತ್ತುಪ್, ಆಯೋಜನೆ–ಅಲಯನ್ಸ್ ವಿಶ್ವವಿದ್ಯಾಲಯ, ಸ್ಥಳ–ವಿಶ್ವವಿದ್ಯಾಲಯದ ಆವರಣ, ಆನೇಕಲ್–ಬೆಳಿಗ್ಗೆ 10.30.

**ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಗೆ ಚಾಲನೆ:** ಉದ್ಘಾಟನೆ–ನ್ಯಾಯಮೂರ್ತಿ ಬಿ.ವಿ.ನಾಗರತ್ನ, ಆಯೋಜನೆ–ದಿ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್, ಸಿಎಂಆರ್ ವಿಶ್ವವಿದ್ಯಾಲಯ, ಸ್ಥಳ–ಒಎಂಬಿಆರ್ ಬಡಾವಣೆ ಕ್ಯಾಂಪಸ್ –ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ).

## ರಾಘವೇಂದ್ರ ಚನ್ನಣ್ಣನವರ ವಿರುದ್ಧ ಎಫ್‌ಐಆರ್

**ಬೆಂಗಳೂರು:** ವರದಕ್ಷಿಣೆ ತರುವಂತೆ ಪೀಡಿಸಿ ಪತ್ನಿಗೆ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದ ಆರೋಪದಡಿ ರಾಘವೇಂದ್ರ ಚನ್ನಣ್ಣನವರ ಹಾಗೂ ಇತರರ ವಿರುದ್ಧ ಚಂದ್ರಾಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ನಿವಾಸಿ ರೋಜಾ (26) ಇತ್ತೀಚೆಗೆ ದೂರು ನೀಡಿದ್ದಾರೆ. ಆರೋಪಿಗಳಾದ ರಾಘವೇಂದ್ರ ಚನ್ನಣ್ಣನವರ ಹಾಗೂ ಅವರ ಸಂಬಂಧಿ ಹನುಮಂತ ತಿಮ್ಮಾಪುರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

'ವರದಕ್ಷಿಣೆ ಕಿರುಕುಳ (ಐಪಿಸಿ 498ಎ) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಗದಗ ಜಿಲ್ಲೆಯ ಮುಳಗುಂದ ಠಾಣೆಗೆ ವರ್ಗಾಯಿಸಲಾಗಿದ್ದು, ಅಲ್ಲಿಯ ಪೊಲೀಸರು ಮುಂದಿನ ಕಾನೂನು ಕ್ರಮ ಜರುಗಿಸಲಿದ್ದಾರೆ’ ಎಂದೂ ಹೇಳಿದರು.

**ದೂರಿನ ವಿವರ:** ‘ರವಿ ಚನ್ನಣ್ಣನವರ ಅವರು 2015ರಲ್ಲಿ ಶಿವಮೊಗ್ಗ ಜಿಲ್ಲೆ ಎಸ್ಪಿ ಆಗಿದ್ದರು. ಅದೇ ವೇಳೆ ನನ್ನ ತಂದೆಗೆ ಪರಿಚಯವಾಗಿದ್ದರು. ತಮ್ಮನಿಗೆ ಹುಡುಗಿ ಹುಡುಕುತ್ತಿರುವುದಾಗಿ ಹೇಳಿದ್ದರು. ಅದನ್ನು ತಿಳಿದ ತಂದೆ, ತನ್ನನ್ನ ತೋರಿಸಿದ್ದರು. ಎರಡೂ ಕುಟುಂಬಕ್ಕೆ ಒಪ್ಪಿಗೆ ಆಗಿ, 2016ರ ಆಗಸ್ಟ್ 27ರಂದು ಶಿವಮೊಗ್ಗದಲ್ಲಿ ಮದುವೆಯಾಯಿತು. ವರದಕ್ಷಿಣೆಯನ್ನೂ ನೀಡಲಾಯಿತು’ ಎಂದು ದೂರಿನಲ್ಲಿ ರೋಜಾ ತಿಳಿಸಿದ್ದಾರೆ.

‘ಮದುವೆ ಬಳಿಕ ಗದಗ ಜಿಲ್ಲೆಯ ನೀಲಗುಂದದಲ್ಲಿರುವ ಪತಿ ರಾಘವೇಂದ್ರ ಮನೆಯಲ್ಲಿ ವಾಸವಿದ್ದೆ. ಆದರೆ, ಪತಿ ಬೇರೊಬ್ಬ ಯುವತಿ ಜೊತೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಇಬ್ಬರ ನಡುವೆ ಗಲಾಟೆ ಆಯಿತು. ಅಂದಿನಿಂದ ಪತಿ, ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಲಾರಂಭಿಸಿದರು. ತವರು ಮನೆಗೆ ಹೋಗಿ ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದರು. ಈ ಸಂಗತಿಯನ್ನು ರವಿ ಚನ್ನಣ್ಣನವರಿಗೂ ತಿಳಿಸಿದೆ. ಅವರೂ ಹೊಂದಾಣಿಕೆ ಮಾಡಿಕೊಂಡು ಹೋಗುವಂತೆ ಹೇಳಿದರು. ಇದರ ನಡುವೆಯೇ ಹನುಮಂತ ತಿಮ್ಮಾಪುರ ನನಗೆ ಜೀವ ಬೆದರಿಕೆ ಹಾಕಿದ್ದಾರೆ’ ಎಂದೂ ದೂರಿದ್ದಾರೆ.


**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಅನೆಕ್ಸ್ ಕಟ್ಟಡ – 3, ರೂಮ್ ನಂ. 5, ಎನ್. ಆರ್. ವೃತ್ತ, ಬೆಂಗಳೂರು – 560 002

ಸಂ:ಉಅಸಂ/ಬಿಬಿಎಂಪಿ/ಟೆಂಡರ್/02/2022–23 ದಿನಾಂಕ: 19.05.2022

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವಿವಿಧ ವಲಯಗಳ ವ್ಯಾಪ್ತಿಯಲ್ಲಿ 2022–23ನೇ ಸಾಲಿನಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಯ ಅನುಷ್ಠಾನ ಸಂಬಂಧ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು ವಲಯವಾರು ನಿಗದಿಪಡಿಸಿರುವಂತೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://epoc.karnataka.gov.in ಮೂಲಕ ಟೆಂಡರ್‌ಗಳಲ್ಲಿ ಭಾಗವಹಿಸಬಹುದು.

| ಕ್ರ. ಸಂ. | ವಲಯ | ಟೆಂಡರ್ ಸಂಖ್ಯೆ (ಯೂನಿಟ್) | 2022–23ನೇ ಸಾಲಿನಲ್ಲಿ ಬಿಬಿಎಂಪಿ ಪ್ರದೇಶದಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ | ಬೆಳೆಸ ಬೇಕಾಗಿರುವ ಗಿಡಗಳ ಸಂಖ್ಯೆ | ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) | ಇಎಂಡಿ (ರೂ.ಗಳಲ್ಲಿ) |
|---|---|---|---|---|---|---|
| 1 | ಬೊಮ್ಮನಹಳ್ಳಿ | 1 | ಬೊಮ್ಮನಹಳ್ಳಿ & ಆನೇಕಲ್ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 4,500 | 44,55,000/- | 89,100/- |
| | | 2 | ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 2,500 | 24,75,000/- | 49,500/- |
| 2 | ದಾಸರಹಳ್ಳಿ | 3 | ವಾರ್ಡ್ ಸಂಖ್ಯೆ 12, 13, 14 & 15 (ಸಾಮಾನ್ಯ) | 4,000 | 39,60,000/- | 79,200/- |
| | | 4 | ವಾರ್ಡ್ ಸಂಖ್ಯೆ 70 & 71 (ಸಾಮಾನ್ಯ) | 2000 | 19,80,000/- | 49,500/- |
| 3 | ಪೂರ್ವ | 5 | ಹೆಬ್ಬಾಳ, ಶಿವಾಜಿನಗರ & ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 3,000 | 29,70,000/- | 59,400/- |
| | | 6 | ಶಾಂತಿನಗರ, ಸಿ.ವಿ. ರಾಮನ್ ನಗರ & ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 2500 | 24,75,000/- | 49,500/- |
| 4 | ಮಹದೇವಪುರ | 7 | ಮಹದೇವಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 83, 54, 86 & 149 (ಸಾಮಾನ್ಯ) | 4500 | 44,55,000/- | 89,100/- |
| | | 8 | ಕೆ. ಆರ್. ಪುರಂ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 56, 81, 25, 51 & 26(ಸಾಮಾನ್ಯ) | 2,500 | 24,75,000/- | 49,500/- |
| | | 9 | ಕೆ. ಆರ್. ಪುರಂ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 53, 52, 87 & 55 (ಸಾಮಾನ್ಯ) | 2,000 | 19,80,000/- | 49,500/- |
| 5 | ಆರ್.ಆರ್. ನಗರ | 10 | ಆರ್. ಆರ್. ನಗರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 16, 17, 37, 38 & 42 (ಸಾಮಾನ್ಯ) | 4500 | 44,55,000/- | 89,100/- |
| | | 11 | ಆರ್. ಆರ್. ನಗರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 69, 73, 129 & 160 (ಸಾಮಾನ್ಯ) | 3,000 | 29,70,000/- | 59,400/- |
| | | 12 | ಯಶವಂತಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 40, 72, 159 (ಸಾಮಾನ್ಯ) | 2500 | 24,75,000/- | 49,500/- |
| | | 13 | ಯಶವಂತಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 130, 198 (ಸಾಮಾನ್ಯ) | 2000 | 19,80,000/- | 49,500/- |
| 6 | | 14 | ವಿಜಯನಗರ, ಪದ್ಮನಾಭನಗರ & ಬಸವನಗುಡಿ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 2500 | 24,75,000/- | 49,500/- |
| 7 | | 15 | ಚಾಮರಾಜಪೇಟೆ, ಮಹಾಲಕ್ಷ್ಮಿ ಬಡಾವಣೆ & ಗಾಂದಿನಗರ ವಿಧಾನಸಭಾ ಕ್ಷೇತ್ರ (ಸಾಮಾನ್ಯ) | 2500 | 27,72,000/- | 55,440/- |
| 8 | ಯಲಹಂಕ | 16 | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 7 & 8. (ಸಾಮಾನ್ಯ) | 4500 | 44,55,000/- | 89,100/- |
| | | 17 | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 5 & 6. (ಸಾಮಾನ್ಯ) | 4000 | 39,60,000/- | 79,200/- |
| | | 18 | ಯಲಹಂಕ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 1, 2 3 & 4 (ಸಾಮಾನ್ಯ) | 3000 | 29,70,000/- | 59,400/- |
| 8 | ಬೊಮ್ಮನಹಳ್ಳಿ | 19 | ಬೊಮ್ಮನಹಳ್ಳಿ ವಲಯ (ಸಾಮಾನ್ಯ) | 2,800 | 16,10,000/- | 40,250/- |
| 9 | ದಾಸರಹಳ್ಳಿ | 20 | ದಾಸರಹಳ್ಳಿ ವಲಯ (ಸಾಮಾನ್ಯ) | 3000 | 17,25,000/- | 43,125/- |
| 10 | ಪೂರ್ವ | 21 | ಪೂರ್ವ ವಲಯ (ಸಾಮಾನ್ಯ) | 2500 | 14,37,500/- | 35938/- |
| 11 | ಮಹದೇವಪುರ | 22 | ಮಹದೇವಪುರ ವಲಯ (ಸಾಮಾನ್ಯ) | 2800 | 16,10,000/- | 40,250/- |
| 12 | ಯಲಹಂಕ | 23 | ಯಲಹಂಕ ವಲಯ (ಸಾಮಾನ್ಯ) | 2800 | 16,10,000/- | 40,250/- |
| 13 | ಆರ್.ಆರ್.ನಗರ | 24 | ಆರ್.ಆರ್. ನಗರ ವಲಯ (ಸಾಮಾನ್ಯ) | 2800 | 16,10,000/- | 40,250/- |
| 14 | ಬೊಮ್ಮನಹಳ್ಳಿ | 25 | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ (ಪರಿಶಿಷ್ಟ ಜಾತಿ) | 4500 | 44,55,000/- | 44,550/- |
| | | 26 | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ (ಪರಿಶಿಷ್ಟ ಜಾತಿ) | 2000 | 19,80,000/- | 24,750/- |
| 15 | ದಾಸರಹಳ್ಳಿ | 27 | ವಾರ್ಡ್ ಸಂಖ್ಯೆ 39, 41 (ಪರಿಶಿಷ್ಟ ಪಂಗಡ) | 4000 | 39,60,000/- | 39.600/- |
| 16 | ಮಹದೇವಪುರ | 28 | ಮಹದೇವಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 82, 150, 85, & 84 (ಪರಿಶಿಷ್ಟ ಜಾತಿ) | 4000 | 39,60,000/- | 39.600/- |
| 17 | ದಕ್ಷಿಣ | 29 | ಜಯನಗರ, ಚಿಕ್ಕಪೇಟೆ & ಬಿಟಿಎಂ ಬಡಾವಣೆ ವಿಧಾನಸಭಾ ಕ್ಷೇತ್ರ (ಪರಿಶಿಷ್ಟ ಜಾತಿ) | 3000 | 29,70,000/- | 29,700/- |
| 18 | ಪಶ್ಚಿಮ | 30 | ಗೋವಿಂದರಾಜನಗರ, ಮಲ್ಲೇಶ್ವರಂ & ರಾಜಾಜಿನಗರ ವಿಧಾನಸಭಾ ಕ್ಷೇತ್ರ (ಪರಿಶಿಷ್ಟ ಜಾತಿ) | 2500 | 24,75,000/- | 24,750/- |
| 19 | ಯಲಹಂಕ | 31 | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ 9,10 & 11 (ಪರಿಶಿಷ್ಟ ಪಂಗಡ) | 2000 | 19,80,000/- | 24,750/- |
| 20 | ದಕ್ಷಿಣ | 32 | ದಕ್ಷಿಣ ವಲಯ (ಪರಿಶಿಷ್ಟ ಜಾತಿ) | 2500 | 14,37,500/- | 17,969/- |
| 21 | ಪಶ್ಚಿಮ | 33 | ಪಶ್ಚಿಮ ವಲಯ (ಪರಿಶಿಷ್ಟ ಪಂಗಡ) | 2500 | 14,37,500/- | 17,969/- |

1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ **ದಿನಾಂಕ 21.05.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **23.05.2022ರಂದು ಸಂಜೆ 4.30 ಗಂಟೆಗೆ.** 3) ಟೆಂಡರ್ ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ: **02.06.2022ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **04.06.2022 ರ ಬೆಳಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ)** 4) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **06.06.2022 ರ ಬೆಳಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ)** ವಿವರವಾದ ಟೆಂಡರ್ ಪ್ರಕಟಣೆಯ ಪ್ರತಿಯನ್ನು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ವೆಬ್‌ಸೈಟ್ **www.eproc.karnataka.gov.in** ಇಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



सत्यमेव जयते

**ಎಂ.ಸ್.ಎಂ.ಇ ತಂತ್ರಜ್ಞಾನ ಕೇಂದ್ರ, ಬೆಂಗಳೂರು**

(ಎ.ಸ್.ಎಂ.ಇ ಸಚಿವಾಲಯ, ಭಾರತ ಸರ್ಕಾರ)

**ಪಿಎಂ- ದಕ್ಷ್ ಪ್ರಾಯೋಜಿತ ಅಲ್ಪಾವಧಿ ಮತ್ತು ಅಪ್ಸ್ಕಿಲ್ಲಿಂಗ್ ಪ್ರೋಗ್ರಾಂ**

ಎನ್.ಬಿ.ಸಿ.ಎಫ್.ಡಿ.ಸಿ. ಯಿಂದ OBC / EBC / DNT ಅಭ್ಯರ್ಥಿಗಳಿಗೆ

| ಕ್ರಮ ಸಂಖ್ಯೆ | ಕೋರ್ಸ್ | ಸೀಟುಗಳು ಲಭ್ಯ | ಕೋರ್ಸ್ ಅವಧಿ | ಅರ್ಹತೆ | ತರಬೇತಿಯ ವಿಧಾನ |
|---|---|---|---|---|---|
| 1 | ಆಟೋಕ್ಯಾಡ್ | 30 | 80 hrs | 1) ಅಭ್ಯರ್ಥಿಯು OBC/ EBC/ DNT ವರ್ಗದಿಂದ ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 45 ವರ್ಷ ವಯಸ್ಸಿನವರಾಗಿರಬೇಕು. 2) ಕನಿಷ್ಠ ವಿದ್ಯಾರ್ಹತೆ / ಐ.ಟಿ.ಐ/ ಡಿಪ್ಲೊಮಾ/ಪದವಿ. 3) ಅಭ್ಯರ್ಥಿಗಳು ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರಬೇಕು, OBC ಗರಿಷ್ಠ ₹3 ಲಕ್ಷದವರೆಗೆ ಮತ್ತು EBC ಗರಿಷ್ಠ ₹1 ಲಕ್ಷದವರೆಗೆ. 4) ಅಭ್ಯರ್ಥಿಯು ಸಂಬಂಧಿತ ಕ್ಷೇತ್ರದಲ್ಲಿ ಅಭ್ಯಾಸ/ ಕೆಲಸ ಮಾಡುವ ವೃತ್ತಿಪರರಾಗಿರಬೇಕು. 5) ಗ್ರಾಫಿಕ್ಸ್ ಮತ್ತು ವೆಬ್ ಡಿಸೈನ್ ಕೋರ್ಸ್‌ಗೆ ವಿದ್ಯಾರ್ಥಿಗಳು ಸಹ ಅರ್ಹರು. | ಆಫ್‌ಲೈನ್ (ನೋಂದಾಯಿಸಲು ಸ್ಕ್ಯಾನ್ ಮಾಡಿ) |
| 2 | ಕ್ಯಾಟಿಯಾ | 40 | | | |
| 3 | ಯೂನಿಗ್ರಾಫಿಕ್ಸ್ | 40 | | | |
| 4 | ಕ್ರಿಯೋ | 30 | | | |
| 5 | ಸಾಲಿಡ್ ವರ್ಕ್ಸ್ | 30 | | | |
| 6 | PLC ಪ್ರೋಗ್ರಾಮಿಂಗ್ | 30 | | | |
| 7 | ಗ್ರಾಫಿಕ್ ಮತ್ತು ವೆಬ್ ಡಿಸೈನರ್ | 50 | 390 hrs | | |

ತರಬೇತಿಯನ್ನು ಪೂರ್ಣಗೊಳಿಸಿದ ನಂತರ ವೃತ್ತಿಪರರಿಗೆ ರೂ. 3000/- ಮತ್ತು ವಿದ್ಯಾರ್ಥಿಗಳಿಗೆ ರೂ. 1000/- ಸ್ಟೈಫಂಡ್ ಅನ್ನು ಪ್ರತಿ ತಿಂಗಳು ಪಾವತಿಸಲಾಗುತ್ತದೆ.

**ಸೂಚನೆ:** ನೋಂದಣಿ ಲಿಂಕ್ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (www.msmetcblr.org).

**ಅಗತ್ಯ ದಾಖಲೆಗಳು:** ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರ ಮತ್ತು 10th/1th/ ಐ.ಟಿ.ಐ/ ಡಿಪ್ಲೊಮಾ/ ಪದವಿ(ಎಂಜಿನಿಯರಿಂಗ್) ಅಂಕಪಟ್ಟಿ OBC ಮತ್ತು EBC ಗಾಗಿ ಆದಾಯ ಪ್ರಮಾಣಪತ್ರ.

Free!!

**ಸಂಪರ್ಕಕ್ಕಾಗಿ** : 9686564246 / 9353275370 / 080-23401156

**ಅರ್ಜಿಯ ಕೊನೆಯ ದಿನಾಂಕ** : 30th MAY 2022

**Training Venue** : MSME Technology Centre Bengaluru C/O MSME Development Institute, West of Chord Road, RajajiNagar Industrial Estate Bangalore, Karnataka 560010

**Email: msmetcbengaluru@gmail.com** **Website: msmetcblr.org**



**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

**ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ**

ಸಂ.: ಕಾಪಾಅ/ಗ್ರಾ.ಕು.ನೀ& ನೈ.ವಿ/ಚಿ.ಪುರ/ ಡಿ.ಪಿ.ಆರ್/ಟೆಂಡರ್/2022–23 ದಿನಾಂಕ: 18.05.2022

**ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 08/2022–23, ದಿನಾಂಕ: 18.05.2022**

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ Empanelment of Engineering Consultancy Firm for Preparation of Detailed Project Report for In-Village Infrastructue System in Chickballapur District ಸೂಕ್ತ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಪಡೆಯುಬಹುದಾಗಿರುತ್ತದೆ. ನಿಗದಿಪಡಿಸಿರುವ ಕರಾರು ನಿಯುಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ, ಕಛೇರಿಯ ವೇಳೆಯಲ್ಲಿ (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿವೆ: (1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **19.05.2022ರ ರ ಸಂಜೆ 4.00 ಗಂಟೆಯ ನಂತರ. (2)** ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **26.05.2022 ಸಂಜೆ 4.30 ಗಂಟೆಯವರೆಗೆ. (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27.05.2022 ಸಂಜೆ 5.00 ಗಂಟೆಗೆ. (4)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.05.2022 ಬೆಳಿಗ್ಗೆ 11.00 ಗಂಟೆಗೆ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 90/ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


## ‘ಟೆಕ್ಕಿಗೆ ₹10 ಲಕ್ಷ ಪರಿಹಾರ’

**ಬೆಂಗಳೂರು:** ‘ಕಂಪನಿ ಮತ್ತು ನೌಕರನ ಮಧ್ಯದ ಬಾಂಧವ್ಯ ಹದಗೆಟ್ಟಾಗ ನೌಕರನನ್ನು ಕೆಲಸದಿಂದ ತೆಗೆದುಹಾಕುವ ಕಂಪನಿಯ ನಿರ್ಧಾರ ಸೂಕ್ತವಾಗಿಯೇ ಇರುತ್ತದೆ’ ಎಂದಿರುವ ಹೈಕೋರ್ಟ್, ಉದ್ಯೋಗಿ ಟೆಕ್ಕಿಗೆ ₹ 10 ಲಕ್ಷ ಪರಿಹಾರ ನೀಡಿ ಕೆಲಸದಿಂದ ಬಿಡುಗಡೆಗೊಳಿಸುವಂತೆ ಅರ್ಜಿದಾರ ಕಂಪನಿಗೆ ಆದೇಶಿಸಿದೆ.

ಈ ಸಂಬಂಧ ‘ವಿಎಂ ವೇರ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ’ ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರನಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅನುಸರಿಸಿದ ಮಾನದಂಡವನ್ನು ಟೆಕ್ಕಿಗೂ ಅನ್ವಯಿಸಿದೆ. ‘ಈ ಆದೇಶ ತಲುಪಿದ 30 ದಿನಗಳಲ್ಲಿ ಟೆಕ್ಕಿಗೆ ₹ 10 ಲಕ್ಷ ಪರಿಹಾರ ನೀಡಿ ಕೆಲಸದಿಂದ ಬಿಡುಗಡೆಗೊಳಿಸಿ. ಸಕಾಲದಲ್ಲಿ ಪಾವತಿಸದಿದ್ದರೆ ವಾರ್ಷಿಕ 10ರ ಬಡ್ಡಿ ನೀಡಿ’ ಎಂದು ನಿರ್ದೇಶಿಸಿದೆ.

**ಪ್ರಕರಣವೇನು?:** ಅಮೆರಿಕದ ಕ್ಯಾಲಿಫೋರ್ನಿಯಾ ಮೂಲದ ವಿ.ಎಂ ಸಾಫ್ಟ್‌ವೇರ್ ಕಂಪನಿ ಬೆಂಗಳೂರಿನಲ್ಲಿ ಶಾಖೆ ಹೊಂದಿದೆ. ಈ ಕಂಪನಿಯಲ್ಲಿ ಅಶೀಷ್ ಕುಮಾರ್ ನಾಥ್ ಎಂಬ ಟೆಕ್ಕಿ ಗುಣಮಟ್ಟ ಎಂಜಿನಿಯರಿಂಗ್ ಅಭಿವೃದ್ಧಿ ವಿಭಾಗದಲ್ಲಿ ಹಿರಿಯ ಸಾಫ್ಟ್‌ವೇರ್ ಎಂಜಿನಿಯರ್ ಆಗಿ 2015ರ ಏಪ್ರಿಲ್ 2ರಂದು ನೇಮಕಗೊಂಡಿದ್ದರು. ವಾರ್ಷಿಕ ₹ 24 ಲಕ್ಷಕ್ಕೂ ಹೆಚ್ಚಿನ ಸಂಬಳ ನಿಗದಿಪಡಿಸಲಾಗಿತ್ತು.

ಆರು ತಿಂಗಳ ಪ್ರೊಬೆಷನರಿ ಅವಧಿ ಮುಗಿದ ನಂತರ ಅಶೀಷ್ ಅವರನ್ನು ಕಾಯಂಗೊಳಿಸಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಅವರ ಕೆಲಸದ ಸಾಮರ್ಥ್ಯ ತೃಪ್ತಿದಾಯಕವಾಗಿಲ್ಲ ಎಂಬ ಕಾರಣಕ್ಕಾಗಿ ಸಾಮರ್ಥ್ಯ ಅಭಿವೃದ್ಧಿ ಶಿಬಿರಕ್ಕೆ ತೆರಳಿ ತರಬೇತಿ ಪಡೆಯುವಂತೆ ಕಂಪನಿ ಸೂಚಿಸಿತ್ತು.

‘ನನ್ನನ್ನು ಕೆಲಸದಿಂದ ತೆಗೆದು ಹಾಕುವ ಸಲುವಾಗಿಯೇ ತರಬೇತಿ ಶಿಬಿರಕ್ಕೆ ತೆರಳಲು ಸೂಚಿಸಲಾಗಿದೆ’ ಎಂದು ತಗಾದೆ ತೆಗೆದಿದ್ದ ಅಶೀಷ್ ತರಬೇತಿಯನ್ನು ನಿರಾಕರಿಸಿದ್ದರು. ಇದನ್ನು ಶಿಸ್ತು ಉಲ್ಲಂಘನೆ ಎಂದು ಪರಿಗಣಿಸಿದ ಕಂಪನಿ 2015ರ ಡಿಸೆಂಬರ್ 28ರಂದು ಕೆಲಸದಿಂದ ತೆಗೆದುಹಾಕಿತ್ತು. ಇದನ್ನು ಪ್ರಶ್ನಿಸಿ ಅಶೀಷ್ ಕಾರ್ಮಿಕ ನ್ಯಾಯಾಲಯದ ಮೊರೆ ಹೋಗಿದ್ದರು.

2021ರ ಫೆಬ್ರುವರಿ 26ರಂದು ಆದೇಶ ನೀಡಿದ್ದ ಬೆಂಗಳೂರಿನ ಮೂರನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯ, ‘ಅಶೀಷ್ ಅವರನ್ನು ಪುನಃ ಕೆಲಸಕ್ಕೆ ಸೇರ್ಪಡೆ ಮಾಡಿಕೊಂಡು ಪೂರ್ಣ ವೇತನ ಮತ್ತು ಹಿಂಬಾಕಿ ನೀಡಬೇಕು’ ಎಂದು ಆದೇಶಿಸಿತ್ತು. ‘ಕಾರ್ಮಿಕ ನ್ಯಾಯಾಲಯದ ಆದೇಶ ರದ್ದುಗೊಳಿಸಬೇಕು‘ ಎಂದು ಕೋರಿದ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಪೀಠ, ಆದೇಶ ನೀಡಿದೆ.


THE BIGGEST FAMILY ENTERTAINER OF THE YEAR

BOOK YOUR TICKETS NOW

PVR CINEMAS {Phoenix Market City, 9:40, 10:25 a.m., 12:45, 1:15, 3:20, 3:50, 6:55, 10:00 p.m. | Forum Mall, 9:15, 9:40 a.m., 12:45, 3:10, 3:50, 6:55, 9:40, 10:00 p.m. | Orion Mall, 9:15, 9:40 a.m., 12:45, 3:10, 3:50, 6:55, 9:40, 10:00 p.m. | Orion Uptown Mall, 9:40 a.m., 12:45, 3:50, 6:55, 10:00 p.m. | MSR Regalia Mall, 9:40 a.m., 12:45, 3:50, 6:55, 10:00 p.m. | Spirit Mall, 9:00 a.m., 12:05, 6:35, 9:40 p.m. | Arena Mall, 9:40, 10:35 a.m., 12:45, 3:50, 6:55, 10:00 p.m. | VR Mall, 9:10, 9:40 a.m., 12:15, 12:45, 3:20, 3:50, 6:25, 6:55, 9:30, 10:00 p.m. | Vaishnavi Saphire Mall, 8:55 a.m., 12:25, 3:30, 6:35, 9:40 p.m. | Vega City Mall, 9:10, 9:40 a.m., 12:15, 12:45, 3:20, 3:50, 6:25, 6:55, 9:30, 10:00 p.m. | The Cinema @ GT Mall, Magadi Road, 10:15 a.m., 3:50, 6:55, 10:00 p.m. | The Aura, Whitefield, 12:30, 6:55, 10:00 p.m.} | INOX {Garuda Mall, 9:50, 10:35 a.m., 12:50, 3:50, 6:55, 9:15, 10:00 p.m. | Swagath Mall, 10:10 a.m., 4:05, 10:00 p.m. | Central Mall, JP Nagar, 9:25 a.m., 12:30, 6:25, 9:30 p.m. | Lido, 9:10 a.m., 12:15, 3:20, 6:25, 9:30 p.m. | Forum Value Mall, 9:40, 10:50 a.m., 12:45, 3:50, 6:55, 10:00 p.m. | Mantri Mall, 9:40 a.m., 12:35, 3:40, 6:45, 9:00, 9:50 p.m. | Brookefield Mall, 9:45 a.m., 12:50, 6:45, 9:50 p.m. | SBR Horizon, Seegehalli, 9:30 a.m., 12:35, 3:40, 6:45, 8:50, 9:50 p.m. | Garuda, Yelahanka, 9:50 a.m., 12:55, 6:45, 9:50 p.m. | Galleria Mall, RMZ Yelahanka, 9:20 a.m., 12:25, 3:30, 6:35, 9:40 p.m.} | CINEPOLIS {Royal Meenakshi Mall | ETA Mall, Binny Mill | East Orion Mall | Shantiniketan | SJR Spectrum Mall | Sigma Mall} | GOPALAN {Innovation Mall, 1:15, 5:15, 9:30 p.m. | Arcade Mall, 10:00 p.m. | Signature Mall, 2:15, 7:15 p.m. | Grand Mall, 10:30 a.m., 6:00, 10:00 p.m. | Legacy Mall, 10:15 a.m., 2:15, 6:30, 9:45 p.m.} | INNOVATIVE MULTIPLEX {Marathahalli, 9:50 a.m., 12:45, 3:45, 6:45, 9:40 p.m.} | KINO CINEMAS {Seegehalli Road, 1:20, 9:30 p.m.} | MUKTA A2 CINEMAS {Uttarahalli, 2:30, 10:00 p.m.} | SWAGATH SHANKARNAG, 12:00, 5:15, 10:00 p.m. | VINAYAKA THEATRE {DJ Halli, 2 Shows} | LAKSHMI THEATRE {Tavarekere, 4:00, 10:00 p.m.} | CAUVERY THEATRE {Sankey Road, 4 Shows} | ANAND THEATRE {Tanny Road, 3:30, 7:00 p.m.} | ABHINAY THEATRE {K G Road, 3 Shows} | SANTOSH THEATRE {RPC Layout, 4 Shows} | BALAJI THEATRE {Chikkakallasandra, 2 Shows| ANJAN THEATRE {Magadi Road, 10:15 a.m., 7:15 p.m.} | VAIBHAV THEATRE {Sanjay Nagar, 4:30, 9:30 p.m.} | HMT AUDITORIUM, 1:45, 7:15 p.m. | URVASHI THEATER {Lalbagh Road, 6:00, 9:30 p.m.} | RENUKA PRASANNA THEATRE {J. P. Nagar, 1:30, 8:45 p.m.} | CINEPOLIS {City Centre Mall, Mangalore} | PVR CINEMAS {Fiza Mall, Mangalore, 9:40 a.m., 12:45, 3:50, 6:55, 10:00 p.m. | Forum Mall, Mysore, 9:40 a.m., 12:45, 3:50, 6:55, 10:00 p.m. | Garuda Mall, Mysore, 9:00 a.m., 12:05, 6:35, 9:40 p.m.} | INOX {Central, Manipal, 10:00 a.m., 1:00, 4:00, 7:00, 10:00 p.m. | Satyam Mall, Mysore, 9:45 a.m., 12:45, 6:35, 9:40 p.m. | SS Mall, Tumkur, 10:10 a.m., 1:10, 2:10, 3:30, 6:35, 9:40 p.m.} | BHARATH CINEMAS {Mangalore, 10:30 a.m., 1:15, 10:00 p.m. | Manipal, 10:30 a.m., 1:15, 4:30, 7:00, 10:00 p.m. | Shivamoga, 10:45 a.m., 7:15, 10:00 p.m. | Kundapura, 10:30 a.m., 1:15, 7:00, 10:00 p.m.} | CINE GALAXY NOVA CINEMAZ {Mangalore, 4 Shows} | SP CINEMAS {Mangalore, 4 Shows} | DRC CINEMAS {Mysore, 3 Shows} | SRI BALAJI DELUXE {Myosre, 4 Shows} | MOVIETIME {Davangere, 10:00 a.m., 3:00, 10:30 p.m.} | TRINETRA THEATRE {Davangere, 4 Shows} | MANJUNATHA {Shivamoga, 4 Shows} | RR CINEMAS {Bellary, 4 Shows} | NATARAJ THEATRE {Bellary, 2 Shows} | JAYALAKSHMI THEATRE {Mandya, 2 Shows} | SRI LEKHA THEATARE {Chikkamagalur, 5:45, 8:45 p.m.}.

FOR ANY CHANGES OR CANCELLATION IN SHOW TIMINGS, PLEASE CONTACT THE THEATRE

farnazfever


## ‘ಮೇಲ್ಮನೆ: ಅತಿ ಹಿಂದುಳಿದವರಿಗೆ ಅವಕಾಶ ಕೊಡಿ’

**ಬೆಂಗಳೂರು:** ‘ವಿಧಾನ ಪರಿಷತ್ ಅಸ್ತಿತ್ವಕ್ಕೆ ಬಂದಾಗಿನಿಂದ 70 ವರ್ಷಗಳಲ್ಲಿ ದೊರೆತ 802 ಅವಕಾಶಗಳ ಪೈಕಿ ಪ್ರಬಲ ಸಮುದಾಯದವರೇ ಪರಿಷತ್ ಸದಸ್ಯತ್ವದ ಸಿಂಹಪಾಲು ಪಡೆದಿದ್ದಾರೆ’ ಎಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸ್ವಾತಂತ್ರ ಬಂದು ಏಳೂವರೆ ದಶಕವಾಗಿದೆ. ಈ ಅವಧಿಯಲ್ಲಿ ಅತಿ ಹಿಂದುಳಿದ ವರ್ಗಗಳ ಸುಮಾರು 197 ಸಮುದಾಯಗಳು ರಾಜಕೀಯ ಅವಕಾಶಗಳಿಂದ ವಂಚಿತವಾಗಿವೆ. ಮುಂಬರುವ ರಾಜ್ಯ ವಿಧಾನ ಪರಿಷತ್ ಚುನಾವಣೆಯಲ್ಲಿ ಅತಿ ಹಿಂದುಳಿದ ವರ್ಗಗಳ ಪ್ರತಿನಿಧಿಗಳಿಗೆ ರಾಜಕೀಯ ಪಕ್ಷಗಳು ಅವಕಾಶ ಕಲ್ಪಿಸಿಕೊಡಬೇಕು’ ಎಂದು ಆಗ್ರಹಿಸಿದರು.

‘ಪ್ರಸ್ತುತ ವಿಧಾನಪರಿಷತ್ತಿನ 74 ಸದಸ್ಯರಲ್ಲಿ ಒಕ್ಕಲಿಗರು 21, ಲಿಂಗಾಯತರು 20, ಪರಿಶಿಷ್ಟ ಜಾತಿ ಹಾಗೂ ಕುರುಬರು ತಲಾ 5, ಪರಿಶಿಷ್ಟ ಪಂಗಡ, ಮುಸ್ಲಿಂ, ಬೆಸ್ತ ಹಾಗೂ ಈಡಿಗ ಸಮುದಾಯದವರು ತಲಾ 3, ಕೊಡವ, ಬಂಟ ಹಾಗೂ ಬ್ರಾಹ್ಮಣರು ತಲಾ 2, ತಿಗಳ, ವೈಶ್ಯ, ರೆಡ್ಡಿ, ವಿಶ್ವಕರ್ಮ ಮತ್ತು ಜೈನ ಸಮುದಾಯದವರು ತಲಾ ಒಬ್ಬರು ಇದ್ದಾರೆ. ಇವರಲ್ಲಿ ಮುಂಬರುವ ಜೂನ್ ತಿಂಗಳಲ್ಲಿ 7 ಮಂದಿ ನಿವೃತ್ತರಾಗುತ್ತಿದ್ದಾರೆ. ಆ ಸ್ಥಾನಗಳಿಗೆ ಅತಿ ಹಿಂದುಳಿದ ವರ್ಗಗಳ ಪ್ರತಿನಿಧಿಗಳಿಗೆ ಅವಕಾಶ ನೀಡಬೇಕು’ ಎಂದು ಒತ್ತಾಯಿಸಿದರು.

## ಅಮೃತ ನಗರೋತ್ಥಾನ ಕ್ರಿಯಾಯೋಜನೆ; ಆದ್ಯತೆ ಮೇರೆಗೆ ಅನುಮೋದನೆ – ಸ್ಪಷ್ಟನೆ

# ‘ಸರ್ಕಾರದ ಹಂತದಲ್ಲಿ ವಿಳಂಬವಾಗಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಮೃತ ನಗರೋತ್ಥಾನ ಯೋಜನೆಯ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವಲ್ಲಿ ಸರ್ಕಾರದ ಹಂತದಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ. ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಈಗಾಗಲೇ ನಿಗದಿಯಾಗಿರುವ ಅನುದಾನಕ್ಕೆ ಸಂಬಂಧಿಸಿದ ಕ್ರಿಯಾಯೋಜನೆಗಳನ್ನು ಆದ್ಯತೆ ಮೇರೆಗೆ ಅನುಮೋದಿಸಲಾಗುತ್ತಿದೆ ಎಂದು ನಗರಾಭಿವೃದ್ಧಿ ಇಲಾಖೆ ಸ್ಪಷ್ಟನೆ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯ ಎಲ್ಲ 28 ವಿಧಾನಸಭಾ ಕ್ಷೇತ್ರಗಳಿಗೆ ಈ ಯೋಜನೆ ಅಡಿ ಅನುದಾನ ಹಂಚಿಕೆ ಮಾಡಿ ಸಂಬಂಧಪಟ್ಟ ಕ್ರಿಯಾ ಯೋಜನೆ ಗಳನ್ನು 15 ದಿನಗಳ ಒಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ 2022ರ ಫೆ.25ರಂದು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಈ ಬಗ್ಗೆ ಬಿಬಿಎಂಪಿಯಿಂದ ಸಲ್ಲಿಕೆಯಾಗುತ್ತಿರುವ ವಿಧಾನಸಭಾ ಕ್ಷೇತ್ರವಾರು ಕ್ರಿಯಾಯೋಜನೆ ಳನ್ನು ಪರಿಶೀಲಿಸಿ ಮುಖ್ಯಮಂತ್ರಿ ಅವರ ಅನುಮೋದನೆ ಪಡೆದು ಕ್ರಿಯಾ ಯೋಜನೆಯ ಆದೇಶ ಹೊರಡಿಸಲಾ ಗುತ್ತಿದೆ. ಮುಖ್ಯಮಂತ್ರಿ ಸಚಿವಾಲಯದ ಯಾವುದೇ ಅಧಿಕಾರಿಯ ಹಸ್ತಕ್ಷೇಪವೂ ಈ ಪ್ರಕ್ರಿಯೆಯಲ್ಲಿ ಆಗಿರುವುದಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಹೇಳಿದೆ.

ಬಿಬಿಎಂಪಿಯಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಎಲ್ಲ ವಿಧಾನಸಭಾ ಕ್ಷೇತ್ರಗಳ ಕ್ರಿಯಾಯೋಜನೆಗಳೂ ಅನುಮೋದನೆಗೊಂಡಿದ್ದು, ಆದೇಶ ಹೊರಡಿಸಲಾಗಿದೆ. ಈ ಯೋಜನೆಯ ಸಕಾಲಿಕ ಅನುಷ್ಠಾನಕ್ಕೆ ಶ್ರಮವಹಿಸಲಾಗುತ್ತಿದೆ ಎಂದೂ ಇಲಾಖೆ ಸ್ಪಷ್ಟಪಡಿಸಿದೆ.

**ವಿಳಂಬವಿಲ್ಲ:** ಮುಖ್ಯಮಂತ್ರಿ ಸಚಿವಾಲಯ ‘ನಗರದ 10 ಕ್ಷೇತ್ರಗಳಿಗೆ ಸಂಬಂಧಿಸಿದ ಕ್ರಿಯಾಯೋಜನೆಯ ಕಡತಗಳು ಮುಖ್ಯಮಂತ್ರಿ ಸಚಿವಾಲಯಕ್ಕೆ ಸಲ್ಲಿಕೆಯಾಗಿದ್ದರೂ ಕಾರ್ಯಾದೇಶ ಜಾರಿ ಆಗಿಲ್ಲ ಎಂಬುದು ವಾಸ್ತವಾಂಶಕ್ಕೆ ದೂರವಾದುದು. ಸಲ್ಲಿಕೆಯಾಗಿರುವ ಕಡತಗಳಿಗೆ ಮುಖ್ಯಮಂತ್ರಿಯವರು ಅನುಮೋದನೆ ನೀಡಿದ್ದು, ವಿಳಂಬ ಇಲ್ಲದೇ ವಿಲೇವಾರಿ ಮಾಡಿದ್ದಾರೆ’ ಎಂದು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಅವರು ಸ್ಪಷ್ಟನೆ ನೀಡಿದ್ದಾರೆ.

‘ಮುಖ್ಯಮಂತ್ರಿ ಸಚಿವಾಲಯದಲ್ಲಿ ಅನುದಾನ ಮಂಜೂರಾತಿ ವಿಳಂಬವಾಗಲು ವಿಶೇಷ ಕರ್ತವ್ಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಯ ಹಸ್ತಕ್ಷೇಪ ಕಾರಣ ಎಂಬ ಆರೋಪವೂ ಸತ್ಯಕ್ಕೆ ದೂರವಾದುದು’ ಎಂದು ಅವರು ತಿಳಿಸಿದ್ದಾರೆ.

‘ಪ್ರಜಾವಾಣಿ’ಯು ಗುರುವಾರದ ಸಂಚಿಕೆಯಲ್ಲಿ ಈ ಯೋಜನೆ ಅನುಷ್ಠಾನದ ಕುರಿತು ‘15 ಕ್ಷೇತ್ರಗಳಿಗೆ ಇನ್ನೂ ಕಾರ್ಯಾದೇಶ ನೀಡಿಲ್ಲ’ ಎಂಬ ಶೀರ್ಷಿಕೆಯಡಿ ವಿಶೇಷ ವರದಿಯನ್ನು ಪ್ರಕಟಿಸಿತ್ತು. 2021ರ ಆ.15ರಂದೇ ಮುಖ್ಯಮಂತ್ರಿಯವರು ಯೋಜನೆಯನ್ನು ಘೋಷಿಸಿದ್ದರೂ ಕೆಲವು ಕ್ಷೇತ್ರಗಳಲ್ಲಿ ಇನ್ನೂ ಕ್ರಿಯಾ ಯೋಜನೆ ಅಂತಿಮಗೊಂಡಿಲ್ಲ ಎಂಬ ಬಗ್ಗೆ ಗಮನ ಸೆಳೆದಿತ್ತು. ಕ್ರಿಯಾಯೋಜನೆಗಳನ್ನು ಯಾವ ಹಂತದಲ್ಲಿವೆ ಎಂಬ ಬಗ್ಗೆ ವಿಧಾನಸಭಾ ಕ್ಷೇತ್ರವಾರು ಪಟ್ಟಿಯನ್ನೂ ಪ್ರಕಟಿಸಿತ್ತು.

### ತುರ್ತು ಅನುಮೋದನೆ ನೀಡಿದರೆ ಅನುಕೂಲ

ನನ್ನ ಕ್ಷೇತ್ರದ ಕ್ರಿಯಾಯೋಜನೆಗೆ ಬುಧವಾರ ಸಂಜೆವರೆಗೂ ಅನು ಮೋದನೆ ಸಿಕ್ಕಿರಲಿಲ್ಲ. ಈ ಬಗ್ಗೆ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯ ಅಧಿಕಾರಿ ರಂಗರಾಜ್ ಅವರಲ್ಲಿ ವಿಚಾರಿಸಿದಾಗ ಕಡತಕ್ಕೆ ಮುಖ್ಯಮಂತ್ರಿಯವರ ಸಹಿ ಬಾಕಿ ಇದೆ ಎಂದರು. ಗುರುವಾರ ಸಂಜೆ ಈ ಬಗ್ಗೆ ವಿಚಾರಿಸಿದಾಗ ಕಡತ ನಗರಾಭಿವೃದ್ಧಿ ಇಲಾಖೆಗೆ ಹೋಗಿದೆ ಎಂದು ಉತ್ತರಿಸಿದ್ದಾರೆ. ಆದೇಶ ಪ್ರತಿ ನನಗೆ ಸಿಕ್ಕಿಲ್ಲ. ಕ್ರಿಯಾಯೋಜನೆಗೆ ಕೂಡಲೇ ಅನುಮೋದನೆ ನೀಡಿದರೆ ಕ್ಷೇತ್ರದ ಸಮಸ್ಯೆ ಬಗೆಹರಿಸಲು ಅನುಕೂಲವಾಗುತ್ತದೆ.

**ಅಖಂಡ ಶ್ರೀನಿವಾಸಮೂರ್ತಿ** ಪುಲಿಕೇಶಿನಗರ ಕ್ಷೇತ್ರದ ಶಾಸಕ

### ಕಾಮಗಾರಿ ವಿಳಂಬ ಆಗಲಿದೆ

ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅಮೃತ ನಗರೋತ್ಥಾನ ಯೋಜನೆಯ ಕಾಮಗಾರಿಗಳ ಕ್ರಿಯಾಯೋಜನೆಗೆ ಇಲ್ಲಿವರೆಗೂ ಅನುಮೋದನೆ ಸಿಕ್ಕಿಲ್ಲ. ಇದರಿಂದಾಗಿ ಕಾಮಗಾರಿಯೂ ವಿಳಂಬವಾಗಲಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳಲು ಕೆಲವು ತಿಂಗಳು ಬೇಕಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಯವರು ಗಮನ ಹರಿಸಬೇಕು.

**ರಿಜ್ವಾನ್ ಅರ್ಷದ್**
ಶಿವಾಜಿನಗರ ಕ್ಷೇತ್ರದ ಶಾಸಕ

## ಯಂತ್ರಗಳ ದೇಣಿಗೆ

ಇನ್‌ಫ್ಲೋ ಟೆಕ್ನಾಲಜಿಸ್ ಪ್ರೈ.ಲಿ. ಸಹಯೋಗದಲ್ಲಿ ರೋಟರಿ ಬೆಂಗಳೂರು ಪಾಮ್‌ವಿಲೆ ಸಂಸ್ಥೆಯು ಎರಡು ಎಕೋ ಕಾರ್ಡಿಯೋಗ್ರಫಿ ಕಲರ್ ಡಾಪ್ಲರ್ ಸಿಸ್ಟಮ್ ಯಂತ್ರಗಳನ್ನು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ದಾನವಾಗಿ ನೀಡಿದೆ. ರೋಟರಿ ಸಂಸ್ಥೆಯ ಸುಮಿತ್ರೊ ಘೋಷ್, ಫಜಲ್ ಮಹಮೂದ್, ಶ್ರೀನಿವಾಸ ಮೂರ್ತಿ, ಒ.ಪಿ. ಖನ್ನಾ, ಸಪ್ನಾ ಪಹಡೆ, ತಿರುಪತಿ ರಾವ್ ಹಾಗೂ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಇದ್ದಾರೆ.

# ರೈಲುಗಳಲ್ಲಿ ಕಳ್ಳತನ ಮಹಿಳೆಯರಿಬ್ಬರ ಬಂಧನ

**ಬೆಂಗಳೂರು:** ಪ್ರಯಾಣಿಕರ ಸೋಗಿನಲ್ಲಿ ರೈಲಿನಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಂಟೋನ್ಮೆಂಟ್ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

‘ಮತ್ತಿಕೆರೆಯ ರೂಪಾ (33) ಹಾಗೂ ಲಾವಣ್ಯ (28) ಬಂಧಿತರು. ಇಬ್ಬರಿಂದಲೂ ₹ 10 ಲಕ್ಷ ಮೌಲ್ಯದ 200 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆ.ಆರ್.ಪುರ ನಿವಾಸಿ ಅಲೆಕ್ಸ್ 2021ರ ಡಿಸೆಂಬರ್‌ನಲ್ಲಿ ತಿರುಪತಿಗೆ ರೈಲಿನಲ್ಲಿ ಹೊರಟಿದ್ದರು. ನಗದು, ಚಿನ್ನಾಭರಣವಿದ್ದ ಅವರ ಬ್ಯಾಗ್ ಕಳ್ಳತನ ಆಗಿತ್ತು, ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ’ ಎಂದೂ ತಿಳಿಸಿದರು.

'ಇತ್ತೀಚೆಗೆ ತಮಿಳುನಾಡು ಗಡಿಯಲ್ಲಿ ಮಹಿಳೆಯರಿಬ್ಬರು ಚಿನ್ನಾಭರಣ-

ವಿಟ್ಟುಕೊಂಡು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದರು. ಅವರನ್ನು ತಡೆದಿದ್ದ ಪೊಲೀಸರು, ವಿಚಾರಣೆ ನಡೆಸಿದಾಗ ರೈಲಿನಲ್ಲಿ ಕಳ್ಳತನ ನಡೆಸಿದ್ದ ಬಗ್ಗೆ ಬಾಯ್ಬಿಟ್ಟಿದ್ದರು’ ಎಂದೂ ಹೇಳಿದರು.

‘ಹಸುಗೂಸು ಎತ್ತಿಕೊಂಡು ರೈಲಿಗೆ ಹತ್ತುತ್ತಿದ್ದ ಆರೋಪಿಗಳು, ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಬ್ಯಾಗ್ ಕಳ್ಳತನ ಮಾಡುತ್ತಿದ್ದರು. ಆಂಧ್ರಪ್ರದೇಶ, ತಮಿಳುನಾಡು ,ಕರ್ನಾಟಕದ ಹಲವು ಕಡೆಗಳಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದರು.

## ಆ್ಯಸಿಡ್ ದಾಳಿ: ಕಠಿಣ ಶಿಕ್ಷೆಗೆ ಮನವಿ

**ಬೆಂಗಳೂರು:** ಮಹಿಳೆಯರ ಮೇಲೆ ಆ್ಯಸಿಡ್ ದಾಳಿ ಮಾಡುವವರಿಗೆ ಇನ್ನಷ್ಟು ಕಠಿಣ ಶಿಕ್ಷೆ ನೀಡಲು ಕಾನೂನಿಗೆ ತಿದ್ದುಪಡಿ ತರಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ಗೀತಾ ವಿವೇಕಾನಂದ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಆ್ಯಸಿಡ್ ದಾಳಿ ಮಾಡಿದವರ ವಿರುದ್ಧ ಜಾಮೀನುರಹಿತ ವಾರೆಂಟ್ ಹೊರಡಿಸಿ ಕೂಡಲೇ ಬಂಧಿಸಬೇಕು. ಅಪರಾಧಿಗೆ ಕನಿಷ್ಠ 10 ವರ್ಷ ಕಠಿಣ ಶಿಕ್ಷೆ ವಿಧಿಸಬೇಕು. ಆ್ಯಸಿಡ್ ದಾಳಿ ಸಂಬಂಧ ವಿಚಾರಣೆಗೆ ತ್ವರಿತ ನ್ಯಾಯ ನೀಡುವ ತ್ವರಿತ ವಿಚಾರಣಾ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಆ್ಯಸಿಡ್ ಸಂತ್ರಸ್ತರಿಗೆ ನೆರವಾಗಲು ಆಸರೆ ನೀಡುವ ಉದ್ದೇಶದಿಂದ ಮಾಸಾಶನವನ್ನು ₹3 ಸಾವಿರದಿಂದ ₹10 ಸಾವಿರಕ್ಕೆ ಹೆಚ್ಚಿಸಲಾಗಿದೆ. ಪ್ರತಿಯೊಬ್ಬ ಆ್ಯಸಿಡ್ ಸಂತ್ರಸ್ತ ಮಹಿಳೆಗೆ ಸರ್ಕಾರವು ಉಚಿತ ನಿವೇಶನ ನೀಡಿ ಮನೆ ನಿರ್ಮಿಸಿ ಕೊಡಲು ಮುಂದಾಗಿರುವುದು ಮಹತ್ವದ ನಿರ್ಧಾರ ಎಂದು ಹೇಳಿದ್ದಾರೆ.

ಆ್ಯಸಿಡ್ ಸಂತ್ರಸ್ತರಿಗೆ ಧೈರ್ಯ ತುಂಬುವ ದೃಷ್ಟಿಕೋನದಿಂದ ಮತ್ತು ಸ್ವಯಂ ಉದ್ಯೋಗಕ್ಕಾಗಿ ₹5 ಲಕ್ಷ ರೂಪಾಯಿ ಆರ್ಥಿಕ ನೆರವು ಕೊಡುವುದಾಗಿಯೂ ಸರ್ಕಾರ ಪ್ರಕಟಿಸಿದೆ. ಇದರಿಂದ ಸಂತ್ರಸ್ತರ ಆರ್ಥಿಕ ಚೇತರಿಕೆ ಸಾಧ್ಯವಿದೆ ಮತ್ತು ಅವರ ಆತ್ಮಸ್ಥೈರ್ಯವೂ ಹೆಚ್ಚಾಗಲಿದೆ ಎಂದಿದ್ದಾರೆ.

# ಅಬಕಾರಿ ಇನ್‌ಸ್ಪೆಕ್ಟರ್ ಎಸಿಬಿ ಬಲೆಗೆ

**ಬೆಂಗಳೂರು:** ಬಾರ್ ಮತ್ತು ರೆಸ್ಟೋರೆಂಟ್‌ಗೆ ಸಿಎಲ್–7 ಸನ್ನದು ನೀಡಲು ಲಂಚ ಪಡೆದ ಆರೋಪಿ ಕೆಂಗೇರಿ ವಲಯದ ಅಬಕಾರಿ ಇನ್‌ಸ್ಪೆಕ್ಟರ್ ಮಂಜುನಾಥ್ ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಬಲೆಗೆ ಬಿದ್ದಿದ್ದಾರೆ.

ನಗರದ ವಿವಿಧ ಕಡೆ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ಲಾಡ್ಜ್‌ಗಳನ್ನು ನಡೆಸುತ್ತಿದ್ದ ಸುಂಕದಕಟ್ಟೆ ನಿವಾಸಿಯೊಬ್ಬರು ಸಿಎಲ್–7 ಸನ್ನದು ಮಂಜೂರು ಮಾಡುವಂತೆ ಕೋರಿ ಕೆಂಗೇರಿಯ ಅಬಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಅಬಕಾರಿ ಆಯುಕ್ತರು ಈ ಅರ್ಜಿಗೆ ಸಂಬಂಧಿಸಿದ ಸ್ಥಳ ಪರಿಶೀಲಿಸಿ ನಿಯಮಾನುಸಾರ ಸನ್ನದು ನೀಡುವಂತೆ ಮಂಜುನಾಥ್ ಅವರಿಗೆ ಸೂಚಿಸಿದ್ದರು.

ಸನ್ನದು ನೀಡಲು ಮಂಜುನಾಥ್ ಅವರು ₹ 15 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ ₹ 11 ಲಕ್ಷ ಪಡೆದಿದ್ದರು. ಇನ್ನುಳಿದ ₹ 4 ಲಕ್ಷ ಮೊತ್ತವನ್ನು ಮಂಜುನಾಥ್ ಅವರು ಅರ್ಜಿದಾರರಿಂದ ಸ್ವೀಕರಿಸುವಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು ಮತ್ತು ಸಿಬ್ಬಂದಿ ಅವರನ್ನು ಬಂಧಿಸಿದರು ಎಂದು ಎಸಿಬಿ ಪ್ರಕಟಣೆ ತಿಳಿಸಿದೆ.

‘ತನಿಖೆ ವೇಳೆ ಆರೋಪಿಯ ಬಳಿ ₹ 1.02 ಲಕ್ಷ ನಗದು ಪತ್ತೆಯಾಗಿದೆ. ಆರೋಪಿಯಿಂದ ಲಂಚದ ಹಣ ಹಾಗೂ ಹೆಚ್ಚುವರಿಯಾಗಿ ಸಿಕ್ಕ ಹಣವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಎಸಿಬಿ ಮಾಹಿತಿ ನೀಡಿದೆ.

# ಕಳ್ಳತನ: ಶಾಮಿಯಾನ ಕೆಲಸಗಾರರಿಬ್ಬರ ಬಂಧನ

**ಬೆಂಗಳೂರು:** ದ್ವಿಚಕ್ರ ವಾಹನ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೈಲಸಂದ್ರದ ಚೇತನ್ (19) ಹಾಗೂ ತ್ಯಾಗರಾಜನಗರದ ಗೌರವ್ (19) ಬಂಧಿತರು. ಇವರಿಂದ ₹ 2.50 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ ಹಾಗೂ 6 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶಾಮಿಯಾನ ಅಳವಡಿಸುವ ಕೆಲಸ ಮಾಡುತ್ತಿದ್ದ ಆರೋಪಿಗಳು, ಐಷಾರಾಮಿ ಜೀವನ ನಡೆಸಲು ಬಯಸುತ್ತಿದ್ದರು. ಆದರೆ, ಸಂಬಳ ಸಾಲುತ್ತಿರಲಿಲ್ಲ. ಹೀಗಾಗಿ, ಕಳ್ಳತನ ಮಾಡಲು ಮುಂದಾಗಿದ್ದರು.’

‘ಸಾರ್ವಜನಿಕ ಪ್ರದೇಶ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಹಿಂಬಾಲಿಸಿ ಮೊಬೈಲ್ ಕಿತ್ತೊಯ್ಯುತ್ತಿದ್ದರು’ ಎಂದೂ ತಿಳಿಸಿದರು.

‘ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ, ಮೇ 16ರಂದು ರಾತ್ರಿ ಕಳ್ಳತನ ಆಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ವಿಚಾರಣೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು.

ಆರೋಪಿ ಚೇತನ್, ಈ ಹಿಂದೆಯೂ ಕಳ್ಳತನ ಪ್ರಕರಣದಲ್ಲಿ ಬಂಧಿತನಾಗಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರ ಬಂದಿದ್ದ’ ಎಂದೂ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನ ಹಾಗೂ ಮೊಬೈಲ್‌ಗಳು

## ನಾಗರಾಜಪ್ಪ ಮನೆ ಮೇಲೆ ಎಸಿಬಿ ದಾಳಿ

**ಬೆಂಗಳೂರು:** ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಬಿ.ಎಂ. ನಾಗರಾಜಪ್ಪ ಮನೆ ಮೇಲೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಗುರುವಾರ ದಾಳಿ ನಡೆಸಿದ್ದು ಭಾರಿ ಪ್ರಮಾಣದ ಆಸ್ತಿಯನ್ನು ಪತ್ತೆ ಮಾಡಿದೆ.

ವಿಜಯನಗರದ ಅವರ ನಿವಾಸ, ಸಹೋದರನ ಮನೆ, ಮಾಗಡಿ ರಸ್ತೆ ಸನ್‌ಫ್ಲವರ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿರುವ ಅವರ ಪರಿಚಿತರ ಮನೆ, ಹೊಸಕೋಟೆ ತಾಲ್ಲೂಕು ಬೆನ್ನಿಗಾನಹಳ್ಳಿಯಲ್ಲಿನ ವಾಸದ ಮನೆ, ಚನ್ನಪಟ್ಟಣ ತಾಲ್ಲೂಕಿನ ಹಾರೋಕೊಪ್ಪೆಯ ವಾಸದ ಮನೆಗಳ ಮೇಲೆ ಏಕಕಾಲದಲ್ಲಿ ಅಧಿಕಾರಿಗಳು ದಾಳಿ ನಡೆಸಿದರು.

ಸನ್‌ಫ್ಲವರ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಒಂದು ಫ್ಲ್ಯಾಟ್, ವಿಜಯನಗರ ಎಂ.ಸಿ.ಲೇಔಟ್‌ನಲ್ಲಿ ಮನೆ, ಒಂದು ಕಾರು, ದ್ವಿಚಕ್ರ ವಾಹನ, ₹26 ಸಾವಿರ ಬೆಲೆಯ ಗೃಹೋಪಯೋಗಿ ವಸ್ತುಗಳನ್ನು ಹೊಂದಿರುವುದು ಹಾಗೂ ಬೇನಾಮಿ ಹೆಸರಿನಲ್ಲಿ ₹29.40 ಲಕ್ಷ ಠೇವಣಿ ಇಟ್ಟಿರುವುದು ಪತ್ತೆಯಾಗಿದೆ.

## ಜೂನ್ 25,26ರಂದು ರಾಷ್ಟ್ರಮಟ್ಟದ ದುಂಡುಮೇಜಿನ ಸಭೆ

**ಮೈಸೂರು:** ‘ಇಂದಿನ ರಾಷ್ಟ್ರೀಯ ಬಿಕ್ಕಟ್ಟು: ನಾಗರಿಕ ಸಮಾಜದ ಪಾತ್ರ’ ಕುರಿತು ಜನಸಂಗ್ರಾಮ ಪರಿಷತ್ ಸಹಯೋಗದಲ್ಲಿ ಬೆಂಗಳೂರಿನ ಗಾಂಧಿಭವನದಲ್ಲಿ ಜೂನ್ 25, 26ರಂದು ರಾಷ್ಟ್ರಮಟ್ಟದ ‘ದುಂಡು ಮೇಜಿನ ಸಭೆ’ ಆಯೋಜಿಸಲಾಗುವುದು’ ಎಂದು ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ತಿಳಿಸಿದರು.

Rajajinagar Parents' Education Society ®
Rajajinagar Parents Association PU College AN0078
70th Cross, 5th Block, Rajajinagar, Bangalore -560 010
Awarded ‘A’ Grade by DPUE, Govt. of Karnataka
ADMISSIONS OPEN FOR 2022-23
Academic Association with BASE — Be Ahead with Sustained Excellence — Coaching for CET, NEET at an affordable fees.
PUC
SCIENCE : PCMB, PCMCs
ARTS : HESP
COMMERCE : HEBA, GEBA, SEBA, CEBA
For Admission contact: Principal
Ph: 23503211 / 23503212, Fax: 080 - 23208656

SESHADRIPURAM INSTITUTIONS
ADMISSIONS OPEN for 1st PUC : 2022-23

SESHADRIPURAM PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. V. Manjunath, Principal Tel: 22955358. website: spucmain.ac.in
COMMERCE: SEBA / MEBA / CEBA / MSBA | SCIENCE: PCMB / PCME / PCMCs

SESHADRIPURAM COMPOSITE PRE-UNIVERSITY COLLEGE
40, Girls' School Street, Seshadripuram, Bengaluru-560 020.
Prof G. K. Manjunath, Principal Tel: 22955365. website: scpucbangalore.com
COMMERCE: MSBA / MEBA / SEBA / CEBA | SCIENCE: PCMB / PCME / PCMCs

SESHADRIPURAM PRE-UNIVERSITY COLLEGE
Yelahanka New Town, Bengaluru-560 064.
Prof. T. Doddegowda, Principal Tel: 22955372. website: www.scpuc.ac.in
COMMERCE: SEBA / MEBA / CEBA / MSBA | SCIENCE: PCMB / PCME / PCMCs

SESHADRIPURAM PRE-UNIVERSITY COLLEGE
18, 2nd Main, Kengeri Satellite Town, Bengaluru-560 060
Dr. Manjunath R. Principal Tel: 22955377. website: www.spuc.ac.in
COMMERCE: SEBA / MEBA / CEBA | SCIENCE: PCMB / PCME / PCMCs

SESHADRIPURAM INDEPENDENT PRE-UNIVERSITY COLLEGE
65, 10th Cross, Magadi Road, Bengaluru-560 023.
Prof. Sumathi C. Principal Tel: 22955368. website: www.sipuc.ac.in
COMMERCE: CEBA / MEBA / MSBA / SEBA

SESHADRIPURAM EVENING PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. Mahalakshmi, Principal Tel: 22955359. website: www.sepuc.ac.in
COMMERCE: HEBA / CEBA

N. R. Pandith Aradhya, President
Dr. Wooday P. Krishna, Honorary General Secretary



# ಉನ್ನತ ಶಿಕ್ಷಣ ಸಂಸ್ಥೆ: ನಿಮ್ಹಾನ್ಸ್‌ಗೆ ದ್ವಿತೀಯ ಸ್ಥಾನ

ಬೆಂಗಳೂರು: ದೇಶದ ಉನ್ನತ ಶಿಕ್ಷಣ ಸಂಸ್ಥೆಗಳ ಬಗ್ಗೆ ಎಜುಕೇಶನ್ ವರ್ಲ್ಡ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರ ವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ದ್ವಿತೀಯ ಸ್ಥಾನ ದೊರೆತಿದೆ. ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಮೊದಲ ಸ್ಥಾನದಲ್ಲಿದೆ.

‘ವಿಶ್ವವಿದ್ಯಾಲಯದಲ್ಲಿನ ಅಧ್ಯಾಪಕರ ಸಾಮರ್ಥ್ಯ, ಪಠ್ಯಕ್ರಮ, ಸೌಕರ್ಯ, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆ ಸೇರಿದಂತೆ ವಿವಿಧ ಅಂಶಗಳನ್ನು ಮೌಲ್ಯಮಾಪನ ನಡೆಸಿ, ಶ್ರೇಯಾಂಕ ನೀಡಲಾಗಿದೆ.’ ಎಂದು ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಣಿಜ್ಯ ಸಮ್ಮೇಳನಕ್ಕೆ ರವೀಂದ್ರ ಕಲಾಕ್ಷೇತ್ರ ಬಳಕೆ: ರಂಗಕರ್ಮಿಗಳ ಆಕ್ಷೇಪ

ಬೆಂಗಳೂರು: ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉತ್ತೇಜನಕ್ಕೆ ನಿರ್ಮಿಸಿದ ರವೀಂದ್ರ ಕಲಾಕ್ಷೇತ್ರವನ್ನು ಅನ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂದು ರಂಗಕರ್ಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ 21ರಂದು ಕರ್ನಾಟಕ ಸ್ಟೇಟ್ ಚಾರ್ಟೆಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ವತಿಯಿಂದ ಸಮ್ಮೇಳನ ‘ಅಪರಿಮಿತ’ವನ್ನು ಆಯೋಜಿಸಲಾಗಿದೆ. ವಾಣಿಜ್ಯ ಜಾಹೀರಾತುಗಳಿಗೂ ಈ ಸಮ್ಮೇಳನ ಬಳಸಲಾಗುತ್ತಿದೆ. ಕಾರಿನ ಕಂಪನಿಯೊಂದಕ್ಕೆ ಪ್ರಚಾರ ನೀಡಲು ಕಾರನ್ನೇ ತಂದು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲೇ ನಿಲ್ಲಿಸಲಾಗಿದೆ ಎಂದು ರಂಗಕರ್ಮಿಗಳು ದೂರಿದ್ದಾರೆ. ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಪ್ರತಿಕ್ರಿಯಿಸಿ, ‘ಭಾಷೆ, ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಾಗಿ 1964ರಲ್ಲಿ ರವೀಂದ್ರ ಕಲಾಕ್ಷೇತ್ರವನ್ನು ನಿರ್ಮಿಸಲಾಗಿದೆ’ ಎಂದರು.

# EDUCATION CORNER ಕ್ಲಾಸಿಫೈಡ್ಸ್

## Soundarya School

Havanoor Extension, Nagasandra Post, Bangalore-560 073.
Ph: 080 - 2839 1789 | 96860 32618;
www.soundaryaschool.com

Hearty Congratulations to Our Top Scorers

Best Wishes from
Soundarya School | Soundarya PU College
Soundarya Institute of Management & Science | Soundarya Central School
Soundarya College of Law | Soundarya Arts & Commerce Evening College

## SHAKUNTALA DEVI COLLEGE

32/P3, 17th Main, 11th Cross, Sector IV, HSR Layout, Bangalore-560 102.
E-Mail: shakuntaladevicollege2011@gmail.com
Website: www.shakuntaladevicollege.co.in

ADMISSIONS OPEN

Pre-University Courses
(Recognized by the Board of Pre-University Education)
Science • PCMB • PCMCs
Commerce • CEBA • HEBA
Languages Offered:
• English • Kannada
• Hindi • Sanskrit

Degree Courses
(Affiliated to Bangalore University)
• B.Com and B.Com (Hons)
• PGD-HRM

For details contact
98447 90333 / 98447 90555

## ADARSH GROUP OF INSTITUTIONS

A JAIN INSTITUTION
5th Main, Chamarajpet, Bengaluru - 18 | www.agieducation.org

ADMISSIONS OPEN 2022

PUC COMMERCE: MSBA SEBA CsSBA HEBA CsEBA
PUC SCIENCE: PCMB PCMCs PCME
+91 74067 40022

DEGREE COURSES: BBA BCOM BCA
PG COURSES: MBA (DUAL Specialization) MCOM
EVENING COLLEGE: PUC BCOM
+91 74067 40011

Apply online @ www.agieducation.org

Facilities: Experienced Faculty Team | Well Stocked Library | Wi-Fi Campus | State of Art Computer Lab | Seminar Halls | Auditoriums | Gymnasium | Indoor and Outdoor Games | Cafeteria | Surveillance Camera

Scholarship for meritorious students

Phone : +91 80 26677100 | Email : admission@agieducation.org

## ಇಂಪ್ಯಾಕ್ಟ್ ಪಾಲಿಟೆಕ್ನಿಕ್ (ಸರ್ಕಾರಿ ಅನುದಾನಿತ)

ಕೊಡಿಗೆಹಳ್ಳಿ, ಸಹಕಾರನಗರ, ಬೆಂಗಳೂರು-560092

2022-23ನೇ ಸಾಲಿನ ಸರ್ಕಾರಿ ಕೋಟಾದಲ್ಲಿ ಡಿಪ್ಲೋಮಾ ಪ್ರವೇಶಗಳು ಪ್ರಾರಂಭ "ಮೊದಲು ಬಂದವರಿಗೆ ಮೊದಲ ಆದ್ಯತೆ" ಮೂಲಕ ದಾಖಲಾತಿ

ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗಾಗಿ 1ನೇ ಸೆಮಿಸ್ಟರ್‌ಗೆ ದಾಖಲಾತಿ ಆರಂಭವಾಗಿದೆ

ಕೋರ್ಸುಗಳು:
ಆರ್ಕಿಟೆಕ್ಚರ್, ಆಟೋಮೊಬೈಲ್, ಮೆಕ್ಯಾನಿಕಲ್, ಸಿವಿಲ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್, ಮತ್ತು ಕಂಪ್ಯೂಟರ್ ಸೈನ್ಸ್

ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಯಲ್ಲಿ ಕನಿಷ್ಠ ಶೇ. 35% ಅಂಕ ಪಡೆದಿರಬೇಕು.
ಐಟಿಐ/ಪಿಯುಸಿ ವಿಜ್ಞಾನದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ನೇರವಾಗಿ 3ನೇ ಸೆಮಿಸ್ಟರ್‌ನಲ್ಲಿ ಪ್ರವೇಶ ಲಭ್ಯವಿರುತ್ತದೆ.
ಅರ್ಜಿಗಳು ಕಾಲೇಜಿನ ಕಚೇರಿಯಲ್ಲಿ ದೊರೆಯುವುದು
Website: impactptbangalore.ac.in;
Email: impactpolytechnic@gmail.com
IMP-22303

ದಾಖಲಾತಿ ಮತ್ತು ಹೆಚ್ಚಿನ ಮಾಹಿತಿಗಾಗಿ ಇಲ್ಲಿಗೆ ಸಂಪರ್ಕಿಸಿ:
080-23334101, 94487 48297, 94487 96091

## RAMAN POLYTECHNIC

# 12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile

RAMAN P.U. COLLEGE
Science ♦ Commerce | CONTACT: 6360127984

RAMAN I.T.I. COLLEGE
♦ Fitter ♦ Electronic Mechanic ♦ Electrician

CALIFORNIA PUBLIC SCHOOL
ICSE & State Syllabus. Nursery to X std
RMN-22301

## Hearty Congratulations

MOHAN RAJ R.S. (S/o. Ravi Shankar B A)

MOHAN RAJ R.S. who has secured 92.48% (578/625) Total Marks in SSLC Examination

THE GREEN GARDEN SCHOOL
Valepur-Ajjagondanahalli Road, Bangalore Rural.

With Best Wishes from: Family & Friends

## R.E.S. POLYTECHNIC

Recognised by Govt. of Karnataka & Approved by AICTE
Inst. Code: 450 Estd: 1986

ADMISSIONS STARTED FOR
10th PASS - 3 Yrs Diploma
PUC / ITI PASS - 2 Yrs Diploma

FREE In-plant training to all students
New NEP syllabus with industry interaction to all

CS | IS | EC | EE | Civil | Mech | Auto | CP | FT

# 5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-22302

## NARGUND INDEPENDENT PU COLLEGE

ADMISSIONS OPEN 2022 - 2023 Intake

For PUC (Science & Commerce)

Limited Seats Only, Hurry Up!!

Call Now: 8310522965

2nd main, Dattatreyanagar, BSK 3rd stage, Bangalore-85

8026421335 | 7019425622

---

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### General

**CAREER @** KSG IAS Bengaluru COUNSELLOR - 3, MARKETING MANAGER - 1, GRAPHIC DESIGNER-2, TELE CALLER -2 (Female) Call : 79960 66663 Send your CV to: career@ksgindia.com

### Teachers/ Professors

**KENNETH GEORGE** SCHOOL Req Teachers for All Subjects, PE/ Lib/Life skills R.T.Nagar & Kempapura 7760226869 kennethgeorgeschool@gmail.com

**VISHWABHARATHI PUBLIC** HIGH SCHOOL No.142,1st A Main Road, Shakthi Garden, Moodalpalya, Nagarbhavi 1st Stage Bangalore - 560072 REQUIRED TEACHERS for Maths, Science, Social & Kannada for Primary and high School Contact immediately: 7406535818 / 9739395399 / 080 - 23117744

**SINDHI GROUP OF EDUCATIONAL INSTITUTIONS**
SPONSORS: SINDHI SEVA SAMITI
(AFFILIATED TO CBSE, NEW DELHI)
REQUIRES TRAINED TEACHERS
PGT – ENTREPRENEURSHIP, BUSINESS STUDIES
Apply to the Principal in person between 8.00 am to 12.00 noon or through Email
SINDHI HIGH SCHOOL
#33/2A & 2B, Kempapura, Hebbal, Bengaluru - 560 024
Email : principal.hebbal@sindhihighschool.edu.in

## REAL ESTATE SELLING

### Sites

#### Devanahalli

**PRESTIGE GOLFSHIRE** Marina, Plot of 13345 Sft for sale on Nandi Hills Road, For details, call: 7022549452.

#### Hosur Road

**APPROX ONE** Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

#### Nelamangala

**MATHA VILLA** Plot, Arishinakunte, Nelamangala Town Limit, DC Converted Sites For Sale 30x50, 30X45, Rs 2650/-Sft. Call Owner-9980741687

### Flat

#### CV Raman Nagar

**PRESTIGE RAPPERSWIL,** Super luxury 3 bedroom + maids room in CV Raman Nagar, off Indiranagar available for sale, Starting Price Rs. 2.67 Cr, for details, call: 7259665390

### House

#### BTM Layout

**FOR SALE:** 600 Sqft BDA Site with G+4 Flrs Building in BTM 2nd Stage, Full Teak and Marble. For details Call: 9591111604.

## RENTAL PROPERTIES

### Accommodation Available

#### Commercial

**PRIME COMMERCIAL** Space total 16000sft near Vijayanagar Metro Station available for Rent. Ground + 3. Suitable for Banks, Supermarkets etc. Ph: 9845869155

**VACANT SPACE** Available for ATM, measuring 120sq.ft. on Cottonpet Main Road. CONTACT 9845010809/ 9886331558.

## EDUCATIONAL

### Admission

**JOIN BEFORE** 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

## PUBLIC NOTICE

**PUBLIC NOTICE**

It is brought to the public notice that our client is in process of entering into an Agreement of Sale to purchase the Schedule Property mentioned below from its owner Smt. R.USHA, Aged about: 47 Years W/o. Sri. N. Narendra Kumar, Residing at: No 6, 1st 'D' Cross, Manuvana, Vijayanaga, Bangalore-560040.

Any person's objecting for the proposed purchase in any manner whatsoever or having any right in the Schedule Properties may lodge their objection's and /or claims with the under signed along with the supporting documentary evidence within Seven days from the date of publication, and objections and /or claims received thereafter will not be entertained and binding on my client and my client will proceed to complete the Sale process of the Schedule Prop erties deeming that there is are no claim/s or objections to the same.

**SCHEDULE PROPERTY**

All that piece and parcel of the residential Site Bearing No: 364 in Sy No.67 Situated at Sathnur Village, Jala Hobli, Bangalore North Taluk Bangalore. Measuring East to West 30'ft and North to South 40'ft, totally admeasuring 1200 sqft. And bounded as follows:

EAST : Sit No: 363, WEST : Site No: 365, NORTH : By Road, SOUTH : Private Property

For Jury Legal Solutions
Xavier P.G, Advocate
Mob: 8553620175, 8073769391, 9606771112

## OTHERS

### Furniture & Furnishings

**OWNER LEAVING:** LEATHER SOFA FRIDGE DWAN TEAPOY GAS STOVE TEAK DINING COT. CALL: 9845414482/ 8861643112

## SOCIAL SERVICES

### Old Age Home

**NIGHTINGALES MEDICAL** Trust is intending to assist a few Old Age Homes in Karnataka to improve their capacity to maintain minimum standards of care. This support could be in the form of infrastructure upgradation, tele medicine support, improvement of governance and resource mobilization. Those interested, Please Contact: 9243100560 or Email : contact@nightingaleselderca re.com

## PERSONAL

### Lost

**I, RENE** ROY TARZAN A, have lost my Transfer Certificate ID No. 824443, Second year PUC, Year 2016, while shifting the house. If found please contact: 9742098940.

### Change of Name

**14848656K HAV/CLK** NEHARE PRAVIN FATTUJI 2ATC Father Name records FATTUJI Instead of FATTUJI SHAMRAOJI NEHARE Notary KV Mani, Bangalore

**I, NAVYA,** D/o. K R Madhava Rao, aged about 26 years, resident of No.1042, 80Ft Dr. Rajkumar Road Rajajinagar Bangalore-560010 have changed my name to NAVYA RAO K M, Vide Affidavit dated 19-05-2022 sworn before Advocate & Notary Shivashanakarappa Bengaluru.

**I, MOHAMMED** Farook, S/o Abdul Khader B, aged around 39 years residing at No. 57, 8th B Main Road, New Gurappana Palya, Bangalore- 560029 have changed my name to Mohammed Farooq vide affidavit dated 18.05.2022 sworn before notary Aravind Patil G.G Bangalore

**I, JAYARAJ** S/o. Edward John Karkada R/a #18, Jeeva Bugge, 13th Cross, G.K.Layout, Hosa Road, Electronics City, Bengaluru-560100. Have Changed My Name to JAYARAJ KARKADA vide Affidavit Dated: 17.03.2022 Before Notary K.V. Mani, Bengaluru.

**JC674995F NB/SUB** CHAVAN SATISH SANDIPAN ASC Centre & College, Mother Name records KAMAL SANDIPAN Instead of KAMAL SANDIPAN CHAVAN Notary KV Mani, Bangalore

**I, RANJINI** Pushpa Rayappa, have Changed my Name to Ranjini Pushpa Dsouza Vide affidavit dated 28/04/2022 before Notary S. Vijayakumar, Bangalore -560011

**JC-672647F– SUB/SKT–** DEVENDAR SINGH YADAV at 2 ATC Bangalore changed my minor daughter's name from SHAKSHI YADAV to SAKSHI YADAV notary K.V.Mani Bangalore.

**I NISCHAL** Gowda K.S. S/o Shankarlinge Gowda H.B. Residing at #9, 27th Cross, 35th Main, D Group, 60ft Road, Srigandadakaval, Bangalore have changed my name from NICHIAL GOWDA to NISCHAL GOWDA K.S. vide affidavit dated 18-05-2022 sworn before notary Devaraja E. Bangalore.

**HARISH R,** 14861886W, Civ/ Washerman, 248, 24th Main, 23rd Cross HSR Layout 2nd Sector, Parangipalya, Bangalore, changed Daughter's name from MISS SANVI SRI to SANVI SRI H, 19/05/2022 Notary K.V. Mani Bangalore

**14848656K HAV/CLK** NEHARE PRAVIN FATTUJI 2ATC Mother Name records SUSHILA Instead of SUSHILABAI FATTUJI NEHARE Notary KV Mani, Bangalore

**JC-672647F– SUB/SKT–** DEVENDAR SINGH YADAV at 2 ATC Bangalore changed my minor daughter's name from SUSMITA YADAV to SUSHMITA YADAV notary K.V.Mani Bangalore.

**M ESWARI** W/O JC671790F SUB/MT MITTANA VENKATARAO R/a KAMALAIPUTTUGA RAJAPURAM SRIKAKULAM AP, my name M ESWARI to MITTANA ESWARI Notary KV Mani, Bangalore

**I JAGADISH.H** S/o Honnegowda R/a Dodda Somanahalli Magadi Ramanagara Karnataka 562131 declare that my minor Son Correct name is DHANUSH.J as in Aadhar Card, but his name in School TC is wrongly mentioned as DHANUSH.S vide affidavit dated 18-05-2022 sworn before Notary P.C.Ramaiah, Bangalore.

**WE, SARVOTTAM.** A. Kulkarni and Uma .S. Kulkarni Residing at Flat SF-3(203), KVR Lotus Apartment, Hulimavu, Bannerghatta Road, Bangalore- 560076. have changed our minor Son's name from SHREEVATSA to SHREEVATSA. S. KULKARNI vide affidavit dated 18.05.2022 before notary Jain Swarnamala, Bangalore.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH DECCAN HERALD
ಪ್ರಜಾವಾಣಿ

Classifieds EDUCATION SPECIAL

SPECIAL RATES FOR
Admission Notice,
Education Success
Congratulation Ads

For More Details Contact:
Santhosh Kumar : 9880856233
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

# WEEKEND CORNER ಕ್ಲಾಸಿಫೈಡ್ಸ್

## Kalakruthi

Confluence of Arts, Crafts & Textiles

karigar haat edition i

@ Karnataka Chitrakala Parishat
Kumara Krupa Road-Bangalore-1

Free Entry & Parking

MAY 20-29
11 AM TO 7.30 PM

9480337734 / 8553836868

## Kalyaann Sir

Changing perceptions and transforming lives !

1 Hour Zoom Classes - 7pm to 8pm

Friday, 20 May - 7 Metaphysical Declarations
Monday, 23 May - Coming Out Of Survival
Wednesday, 25 May - 7 Angel Super Foods

Private personal sessions for :
- Angel Therapy
- Love Your Body
- Past Life Regression
- Life Coaching
- Heal Your Life
- Energy Healing

To know more, call 9320010301 or log on www.kalyaannsir.com

## Special Offer

BOOK NOW WEEKDAYS
₹ 999/- Adults
₹ 899/- Kids

BOOK NOW WEEKENDS
₹ 1199/- Adults
₹ 999/- Kids

FUN WORLD & RESORTS INDIA PVT LTD

OPENS AT - 10:30 AM | CLOSES AT - 7:00 PM
Palace Grounds Jayamahal Main Road Opposite TV Tower J.C.Nagar Bengaluru
Contact us: 8431110000
Visit Us www.funworldblr.com

ಶ್ರೀಸಾಯಿ ಬಡಾವಣೆ ಮನೆಗಳು ಜಲಾವೃತ ● ಅನ್ಯರ ಮನೆಯಲ್ಲಿ ಆಶ್ರಯ ● ನಿವಾಸಿಗಳ ಕರುಣಾಜನಕ ಸ್ಥಿತಿ

# 3 ದಿನ ಉರುಳಿದರೂ ಇಳಿದಿಲ್ಲ ನೀರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಡಾವಣೆಯಲ್ಲೇ ಉಳಿದ ರಾಜಕಾಲುವೆ ನೀರು, ಮನೆಯಲ್ಲಿರುವ ವಸ್ತುಗಳ ಏನಾಗಿವೆ ಎಂಬುದನ್ನೂ ನೋಡಲಾಗದ ಸ್ಥಿತಿ, ನೆರ ಮನೆಯಲ್ಲೇ ಮುಂದುವರಿದ ವಾಸ...

ಇದು ಮೂರು ದಿನಗಳು ಉರುಳಿದ ಬಳಿಕವೂ ನೀರಿನ ಮಟ್ಟ ತಗ್ಗದ ಕಾರಣ ಅಕ್ಷರಶಃ ನೀರೊಳಗೆ ಬಂಧಿಗಳಾಗಿರುವ ಹೊರಮಾವು ವಡ್ಡರಪಾಳ್ಯದ ಶ್ರೀಸಾಯಿ ಬಡಾವಣೆ ನಿವಾಸಿಗಳ ಕರುಣಾಜನಕ ಸ್ಥಿತಿ ಇದು. ಸೋಮವಾರ ರಾತ್ರಿ ಧೋ... ಎಂದು ಸತತ ನಾಲ್ಕು ಗಂಟೆ ಸುರಿದ ಮಳೆಯಿಂದ ರಾಜಕಾಲುವೆ ನೀರು ಮನೆಯೊಳಗೆ ನುಗ್ಗಿ ಬಂದಿತ್ತು. ಅಂದು ಆಳೆತ್ತರಕ್ಕೆ ನಿಂತಿದ್ದ ನೀರು ಬಡಾವಣೆ ಮತ್ತು ಮನೆಗಳನ್ನು ಬಿಟ್ಟು ಹೋಗುತ್ತಿಲ್ಲ.

ಗುರುವಾರ ಸಂಜೆ ವೇಳೆಗೆ ಮಂಡಿಯುದ್ದದ ನೀರು ಉಳಿದಿದ್ದು, ಮತ್ತೆ ಜೋರು ಮಳೆ ಬಂದರೆ ನೀರು ಹೆಚ್ಚಾಗುವ ಆತಂಕದಲ್ಲಿ ನಿವಾಸಿಗಳಿದ್ದಾರೆ.

'ನೀರು ನುಗ್ಗಿದ ಕೂಡಲೇ ಮನೆಯಿಂದ ಹೊರ ಬಂದ ನಾವು ಮತ್ತೆ ಮನೆಯೊಳಗೆ ಹೋಗಲು ಸಾಧ್ಯವಾಗಿಲ್ಲ. ಮನೆಯಲ್ಲಿನ ವಸ್ತುಗಳು ಏನಾಗಿರಬಹುದು ಎಂಬುದನ್ನು ಊಹಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದೇವೆ. ದಿನಸಿ ಪದಾರ್ಥದ ಚೀಲಗಳು, ಎಲೆಕ್ಟ್ರಾನಿಕ್ ವಸ್ತುಗಳು, ಗೃಹೋಪಯೋಗಿ ವಸ್ತುಗಳು ಮರಳಿ ಸಿಗುವ ಸಾಧ್ಯತೆ ಇಲ್ಲ. ಮಳೆ ನೀರು ಇಳಿದು ಹೋಗುವ ಮುನ್ನ ಹಲವು ವರ್ಷಗಳ ಪರಿಶ್ರಮದಿಂದ ಕಟ್ಟಿಕೊಂಡಿದ್ದ ನಮ್ಮ ಬದುಕನ್ನೇ ಕಸಿದುಕೊಂಡು ಹೋಗುತ್ತಿದೆ' ಎಂದು ಬಡಾವಣೆ ನಿವಾಸಿಗಳು ಕಣ್ಣೀರು ಹಾಕಿದರು.

'ಮೂರು ದಿನಗಳಿಂದ ನಿದ್ರೆ ಮಾಡಿಲ್ಲ. ಮಕ್ಕಳು, ವಯೋವೃದ್ಧರೊಂದಿಗೆ ನೆರೆಯವರ ಮನೆಯಲ್ಲಿ ಜೀವ ಉಳಿಸಿಕೊಂಡಿದ್ದೇವೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳದೆ ಪ್ರತಿಬಾರಿ ನಮ್ಮನ್ನು ಕಷ್ಟಕ್ಕೆ ತಳ್ಳಲಾಗುತ್ತಿದೆ' ಎಂದು ಜಾನ್ ಕಷ್ಟ ಹೇಳಿಕೊಂಡರು.

ಜಲಾವೃತವಾಗಿರುವ ಶ್ರೀಸಾಯಿ ಬಡಾವಣೆ



ಪ್ರಜಾವಾಣಿ ಗ್ರಾಫಿಕ್ಸ್

## ಪ್ರತಿಬಾರಿ ಸಮಸ್ಯೆ ಏಕೆ?

ಆಕಾಶದಲ್ಲಿ ಮೋಡ ಕಟ್ಟಿದರೆ ಈ ಬಡಾವಣೆ ಜನರ ನಿದ್ರೆಗೆಡುತ್ತದೆ. ಜೋರು ಮಳೆ ಬಂದಾಗಲೆಲ್ಲಾ ಮನೆ ಬಾಗಿಲಿಗೆ ಬರುವ ರಾಜಕಾಲುವೆ ನೀರು, ನಿವಾಸಿಗಳ ನೆಮ್ಮದಿಯನ್ನೇ ಹಾಳು ಮಾಡಿದೆ.

ಹೆಬ್ಬಾಳ, ನಾಗವಾರ, ಯಲಹಂಕ, ಅಲ್ಲಾಳಸಂದ್ರ, ಜಕ್ಕೂರು, ರಾಚೇನಹಳ್ಳಿ ಕೆರೆಗಳನ್ನು ದಾಟಿ, ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಹಾದು, ಎಲಿಮೆಂಟ್ಸ್ ಮಾಲ್ ಪಕ್ಕದಲ್ಲಿ ಹಾದುಹೋಗುವ ರಾಜಕಾಲುವೆ ಮುಂದೆ ಸಾಗಿದಂತೆ ಕೆ.ಜಿ. ಹಳ್ಳಿ ಕಡೆಯಿಂದ ಬರುವ ಮತ್ತೊಂದು ರಾಜಕಾಲುವೆಯನ್ನು ಸೇರಿಕೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಹೆಣ್ಣೂರು– ಬಾಗಲೂರು ರಸ್ತೆ ತನಕ ರಾಜಕಾಲುವೆ ವಿಸ್ತಾರವಾಗಿ ಹರಿಯುತ್ತಿದೆ.

ಈ ರಸ್ತೆ ದಾಟಿದ ನಂತರವೂ ಲಿಂಗರಾಜಪುರದ ಕಡೆಯಿಂದ ಬರುವ ಮತ್ತೊಂದು ರಾಜಕಾಲುವೆಯೂ ಇದರೊಳಗೆ ವಿಲೀನಗೊಳ್ಳುತ್ತದೆ. ಅಲ್ಲಿಂದ 100 ಮೀಟರ್ ದೂರದಲ್ಲೇ ರೈಲ್ವೆ ಮಾರ್ಗ ಎದುರಾಗುತ್ತದೆ. ರೈಲ್ವೆ ಮಾರ್ಗವನ್ನು ರಾಜಕಾಲುವೆ ದಾಟಲು ಸಣ್ಣ ಸಣ್ಣ ಕಿಂಡಿಯಾಕಾರದ ಎರಡು ಸೇತುವೆಗಳಿವೆ.

ಹೆಣ್ಣೂರು–ಬಾಗಲೂರು ರಸ್ತೆಯ ಎರಡೂ ಬದಿಯಲ್ಲಿ ದೊಡ್ಡ ಹೊಳೆಯಂತೆ ಕಾಣುವ ರಾಜಕಾಲುವೆ ರೈಲ್ವೆ ಮಾರ್ಗದಿಂದ ಮುಂದಕ್ಕೆ ಸಣ್ಣದಾಗಿ ಹರಿಯುತ್ತದೆ. ಬೇಸಿಗೆಯಲ್ಲಿ ಸಣ್ಣದಾಗಿ ನೀರು ಹರಿಯುವಾಗ ಇದು ಸಮಸ್ಯೆಯಾಗಿ ಕಾಣಿಸುವುದಿಲ್ಲ. ಜೋರು ಮಳೆ ಬಂದಾಗ ನೀರು ಮುಂದೆ ಸಾಗಲು ಸಾಧ್ಯವಾಗದೆ ವಡ್ಡರಪಾಳ್ಯ, ಕಾವೇರಿನಗರದ ಶ್ರೀಸಾಯಿ ಬಡಾವಣೆ, ಗೆದ್ದಲಹಳ್ಳಿಯ ಎಸ್‌ಟಿಪಿ ಪಕ್ಕದ ಟ್ರಿನಿಟಿ ಫಾರ್ಚೂನ್ ಬಡಾವಣೆಗಳಿಗೆ ಆವರಿಸಿಕೊಳ್ಳುತ್ತದೆ.

## 'ರೈಲ್ವೆ ಇಲಾಖೆ ನಿರ್ಲಕ್ಷ್ಯ'

ರೈಲ್ವೆ ಹಳಿ ಕೆಳಗೆ ರಾಜಕಾಲುವೆ ನೀರು ಸರಾಗವಾಗಿ ಹರಿದು ಹೋಗುವಂತೆ ದೊಡ್ಡ ಸೇತುವೆ ನಿರ್ಮಿಸುವ ಅಗತ್ಯವಿದೆ. ₹18 ಕೋಟಿ ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ರೈಲ್ವೆ ಇಲಾಖೆ ಜತೆ ಬಿಬಿಎಂಪಿ ಪತ್ರ ವ್ಯವಹಾರ ನಡೆಸುತ್ತಲೇ ಇದೆ. ಆದರೆ, ಸಮಸ್ಯೆ ಮಾತ್ರ ಹಾಗೇಯೇ ಉಳಿದುಕೊಂಡಿದೆ.

'45 ಮೀಟರ್ ಅಗಲದ ರಾಜಕಾಲುವೆ ನೀರು ಹರಿದು ಹೋಗಲು 15 ಅಡಿಯಷ್ಟು ಅಗಲದ ಎರಡು ಕಿಂಡಿಗಳಂತಹ ಸೇತುವೆಗಳಿವೆ. ರೈಲ್ವೆ ಇಲಾಖೆಯ ನಿರ್ಲಕ್ಷ್ಯದಿಂದ ವರ್ಷವಿಡೀ ಜನ ಸಮಸ್ಯೆ ಅನುಭವಿಸುವಂತಾಗಿದೆ' ಎಂದು ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ.

**ರೈಲ್ವೆ ಇಲಾಖೆ ಅಧಿಕಾರಿಗಳನ್ನೇ ಸ್ಥಳಕ್ಕೆ ಕರೆದುಕೊಂಡು ಹೋಗಿ ಸಮಸ್ಯೆ ಮನವರಿಕೆ ಮಾಡಿಸಿದ್ದೆ. ಭೂಸ್ವಾಧೀನ ಪ್ರಕ್ರಿಯೆ ವಿಳಂಬ ಆಗುತ್ತಿರುವುದರಿಂದ ಸಮಸ್ಯೆ ಉಳಿದುಕೊಂಡಿದೆ**

**ಡಿ.ವಿ.ಸದಾನಂದಗೌಡ,** ಸಂಸದ

ರೈಲು ಮಾರ್ಗದ ಕೆಳಗಿರುವ ಕಿಂಡಿಗಳು

**ಮಳೆ ಬಂದಾಗ ಪರಿಹಾರ ನೀಡುವ ಭರವಸೆ ನೀಡಿ ಹೋಗುತ್ತಾರೆ. ಈ ಹಿಂದೆ ನೀಡಿದ್ದ ಭರವಸೆ ಇಂದಿಗೂ ಈಡೇರಿಲ್ಲ. ಬಿಡಿಗಾಸು ಪರಿಹಾರವೂ ನಮ್ಮ ಕೈಸೇರಿಲ್ಲ**

**ಜಾನ್,**
ಶ್ರೀಸಾಯಿ ಬಡಾವಣೆ ನಿವಾಸಿ

# 'ಮಳೆ ಅವಾಂತರ: ಬ್ರ್ಯಾಂಡ್ ಬೆಂಗಳೂರಿಗೆ ಕೆಟ್ಟ ಹೆಸರು'

**ಬೆಂಗಳೂರು:** ನಗರದಲ್ಲಿ ಮಳೆಯ ಅನಾಹುತಗಳು ಉದ್ಯಮ ವಲಯದಲ್ಲಿ ಆತಂಕ ಹುಟ್ಟಿಸಿದೆ. ಇದರಿಂದ 'ಬ್ರ್ಯಾಂಡ್ ಬೆಂಗಳೂರು' ಹೆಸರಿಗೆ ಕೆಟ್ಟ ಹೆಸರು ಬರಲಿದೆ. ಭವಿಷ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಬಂಡವಾಳ ಹೂಡಿಕೆದಾರರಿಗೆ ತಪ್ಪು ಸಂದೇಶ ರವಾನೆಯಾಗಲಿದೆ ಎಂದು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಹೇಳಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಸಲಹೆಗಳನ್ನೂ ನೀಡಿದ್ದಾರೆ.

'ಕೆಲವು ದಿನಗಳಿಂದ ಬೆಂಗಳೂರಿನಲ್ಲಿ ನಿರಂತರ ಮುಂಗಾರು ಪೂರ್ವ ಮಳೆಯಾಗುತ್ತಿದ್ದು, ಇದರಿಂದ ಹಲವು ಅವಾಂತರಗಳು ಘಟಿಸಿ ಜನಜೀವನಕ್ಕೆ ತೊಂದರೆಯಾಗಿದೆ. ಇದರ ಪರಿಣಾಮ ಕೈಗಾರಿಕಾ ವಸಹಾತುಗಳು ಬೇರೆ ರಾಜ್ಯಗಳ ಪಾಲಾಗಿ ನಮ್ಮ ರಾಜ್ಯದ ಅಭಿವೃದ್ಧಿಗೆ ತೊಡಕಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ನಾನು ಮುಖ್ಯಮಂತ್ರಿಯಾಗಿದ್ದಾಗ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಆದ್ಯತೆ ನೀಡಿ ಹೇರಳ ಅವಕಾಶಗಳನ್ನು ನೀಡಿದ್ದರಿಂದ ಅಮೆರಿಕದ ಕ್ಯಾಲಿಫೋರ್ನಿಯಾ ನಗರದ ಸಿಲಿಕಾನ್ ವ್ಯಾಲಿಗೆ ಪರ್ಯಾಯವಾಗಿ ಬೆಂಗಳೂರು ಬೆಳೆಯಿತು. ನಗರದ ವಿಸ್ತೀರ್ಣವೂ 4 ಪಟ್ಟು ಹೆಚ್ಚಾಯಿತು' ಎಂದು ಅವರು ತಿಳಿಸಿದ್ದಾರೆ.

## ಎಸ್.ಎಂ.ಕೃಷ್ಣ ಅವರ ಸಲಹೆಗಳು

- ಮಳೆ ಹಾನಿ ತಪ್ಪಿಸಲು ಶೀಘ್ರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕಾಲ ಕಾಲಕ್ಕೆ ಒಳಚರಂಡಿ, ರಾಜಕಾಲುವೆಗಳ ದುರಸ್ತಿ ಮಾಡಬೇಕು.
- ಬೆಂಗಳೂರು ಅಜೆಂಡಾ ಕಾರ್ಯಪಡೆ ಪುನರ್‌ರಚನೆ ಮಾಡಬೇಕು. ವಿವಿಧ ಕ್ಷೇತ್ರಗಳ ತಜ್ಞರನ್ನು ಸೇರಿಸಿ ಅವರ ಸಲಹೆಗಳನ್ನು ಪಡೆದು ದೂರಗಾಮಿ ನೆಲೆಯಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ನೀಲ ನಕ್ಷೆ ತಯಾರಿಸಬೇಕು.
- ಬೆಂಗಳೂರಿಗೆ ಪರ್ಯಾಯವಾಗಿ ಮೈಸೂರು, ತುಮಕೂರು ಮತ್ತು ಹುಬ್ಬಳ್ಳಿಯಂತಹ ನಗರಗಳನ್ನು ಗುರುತಿಸಿ ನೂತನ ಕೈಗಾರಿಕಾ ವಸಹಾತುಗಳ ಸ್ಥಾಪನೆಗೆ ಅವಕಾಶ ಅಲ್ಲಿ ಕಲ್ಪಿಸಿ ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡಬೇಕು.

## 'ದೇವೇಗೌಡರ ಬ್ರ್ಯಾಂಡ್ ಬೆಂಗಳೂರು ಹೈಜಾಕ್'

'ಬ್ರ್ಯಾಂಡ್ ಬೆಂಗಳೂರು ದೇವೇಗೌಡರ ಕಾಲದಲ್ಲಿ ಮಾಡಿದ್ದು. ಅದನ್ನು ಇವರು (ಕೃಷ್ಣ) ಹೈಜಾಕ್ ಮಾಡಿದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಎಸ್.ಎಂ.ಕೃಷ್ಣ ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿ, 'ಸೂಟು ಬೂಟು ಹಾಕಿಕೊಂಡರೆ ಬ್ರ್ಯಾಂಡ್ ಬೆಂಗಳೂರು ಆಗಲ್ಲ. ಕೆಲಸ ಮಾಡಿದಾಗ ಆಗುತ್ತದೆ. ಕೆರೆ ಕಟ್ಟೆ ಉಳಿಸಲು ಲಕ್ಷಣ್ ರಾವ್ ನೇತೃತ್ವದ ಸಮಿತಿಯನ್ನು ದೇವೇಗೌಡರು ರಚಿಸಿದರು. ಸಮಿತಿ ವರದಿ ಕಸದ ಬುಟ್ಟಿ ಸೇರಿತು. ಕೆರೆ ಮುಚ್ಚಿ ಮನೆ ಕಟ್ಟಿದರು. ಕೆರೆಗೆ ಹೋಗುವ ನೀರು ಮನೆಗಳಿಗೆ ನುಗ್ಗುತ್ತಿದೆ' ಎಂದರು.

## 'ಸಲಹೆ ಸ್ವೀಕರಿಸುತ್ತೇವೆ'

'ಎಸ್.ಎಂ.ಕೃಷ್ಣ ಅವರ ಸಲಹೆಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುತ್ತೇವೆ. ಅವರಿದ್ದ ಕಾಲದಲ್ಲಿ ಬೆಂಗಳೂರು ಸಾಕಷ್ಟು ಅಭಿವೃದ್ಧಿಯಾಗಿದ್ದು, ಈಗ ವೇಗವಾಗಿ ಬೆಳೆಯುತ್ತಿದೆ. 110 ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿದ್ದರಿಂದ ಹೊಸ ಸವಾಲುಗಳು ಎದುರಾಗುತ್ತಿವೆ. ಅವುಗಳನ್ನು ನಿಭಾಯಿಸಲು ಯೋಜನೆ ರೂಪಿಸಿದ್ದೇವೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

# ಮುಂದಿನ ವಾರ ಕೇರಳಕ್ಕೆ ನೈರುತ್ಯ ಮುಂಗಾರು ಪ್ರವೇಶ

**ನವದೆಹಲಿ:** 'ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅವಧಿಗೂ ಮುನ್ನವೇ ನೈರುತ್ಯ ಮುಂಗಾರು ಈಗಾಗಲೇ ಪ್ರವೇಶಿಸಿದ್ದು, ಮುಂದಿನ ವಾರದ ಮಧ್ಯಭಾಗದಲ್ಲಿ ಕೇರಳಕ್ಕೆ ಪ್ರವೇಶಿಸುವ ಸಾಧ್ಯತೆ ಇದೆ' ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಗುರುವಾರ ಮುನ್ಸೂಚನೆ ನೀಡಿದೆ.

'ಕೇರಳದತ್ತ ನೈರುತ್ಯ ಮುಂಗಾರು ಪ್ರವೇಶಿಸಲು ಪರಿಸ್ಥಿತಿಯು ಅನುಕೂಲಕರವಾಗಿದೆ' ಎಂದು ಇಲಾಖೆ ಹೇಳಿದೆ.

# ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ತರಾಟೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿದ ಬಳಿಕ ಬಿಬಿಎಂಪಿ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕ್ರಮಗಳನ್ನು ಜಾರಿಗೊಳಿಸಿಲ್ಲ ಏಕೆ' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ವರ್ಷಪೂರ್ತಿ ಏನು ಕೆಲಸ ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದ ಅವರು, 'ಮಳೆಗಾಲ ಬರುತ್ತದೆ, ಸಮಸ್ಯೆ ಆಗುತ್ತದೆ ಎನ್ನುವುದು ಗೊತ್ತಿಲ್ಲವೆ? ವರ್ಷಪೂರ್ತಿ ಮಲಗಿರೋದು, ಮಳೆ ಬಂದಾಗ ಎಚ್ಚೆತ್ತುಕೊಳ್ಳುವುದು... ಇದೇ ಆಯ್ತು ನಿಮ್ಮ ಹಣೆಬರಹ' ಎಂದು ಕಿಡಿಕಾರಿದರು.

'ನೀವು ಕರ್ತವ್ಯ ಮರೆತಿದ್ದೀರಿ. ಮಳೆಗಾಲಕ್ಕೂ ಮುನ್ನ ಚರಂಡಿಗಳ ಹೂಳೆತ್ತಿಸಬೇಕು. ಮಳೆ ನೀರು ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ಇವೆಲ್ಲಾ ನಿಮ್ಮ ಕೆಲಸ ಅಲ್ಲವೇ? ಈ ಕೆಲಸ ಬಿಟ್ಟು ಬೇರೆ ಏನು ಕೆಲಸ ಮಾಡುತ್ತೀರಿ' ಎಂದು ಖಾರವಾಗಿ ಪ್ರಶ್ನಿಸಿದರು.

'ಸಮಸ್ಯೆ ಇರುವ ಜಾಗಕ್ಕೇ ಹೋಗಿ ಕೆಲಸ ಮಾಡಲು ತಾಂತ್ರಿಕ ವಿಭಾಗವನ್ನು ಬಲಪಡಿಸಬೇಕು. ದಿನದ 24 ಗಂಟೆಯೂ ಯುದ್ಧೋಪಾದಿಯಲ್ಲಿ ಕೆಲಸ ನಡೆಯಬೇಕು. ಅದಕ್ಕೆ ಬೇಕಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಿ' ಎಂದು ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದರು.

'ವಲಯ ಆಯುಕ್ತರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಅಧಿಕಾರ ವಿಕೇಂದ್ರೀಕರಣ ಮಾಡಿ ವಲಯ ಆಯುಕ್ತರೇ ಬಿಲ್ ಪಾವತಿಸಲು ಅನುಮತಿ ನೀಡಿ. ಸರಿಯಾಗಿ ಕೆಲಸ ಮಾಡದ ಎಂಜಿನಿಯರ್‌ಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ' ಎಂದು ತಾಕೀತು ಮಾಡಿದರು.

## '₹800 ಕೋಟಿ ಏನಾಯಿತು'

'ಹೊರಮಾವು ಪ್ರದೇಶದ ಸಮಸ್ಯೆಯನ್ನು ಫೆಬ್ರುವರಿ ಒಳಗೆ ಸರಿಪಡಿಸುತ್ತೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಹಾಗಾದರೆ ಕೆ.ಆರ್.ಪುರ ಕ್ಷೇತ್ರಕ್ಕೆ ಕೊಟ್ಟ ₹800 ಕೋಟಿ ಏನಾಯಿತು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಕೋಟ್ಯಂತರ ರೂಪಾಯಿ ಅನುದಾನ ತೆಗೆದುಕೊಂಡು ಹೋಗಿ ಏನು ಕೆಲಸ ಮಾಡಿದ್ದಾರೆ. ನಗರ ಪ್ರದಕ್ಷಿಣೆ ಹಾಕಿ ಫೋಟೊಗೆ ಸೀಮಿತ ಆಗಬಾರದು' ಎಂದರು.

# ಮಳೆಹಾನಿ: ಸಂತ್ರಸ್ತ ಅಹವಾಲು ಆಲಿಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಮಳೆಹಾನಿ ಪ್ರದೇಶಗಳ ವೀಕ್ಷಣೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ನಗರ ಸಂಚಾರ ನಡೆಸಿದರು. ಮಳೆಯಿಂದ ಸಂಕಷ್ಟ ಎದುರಿಸಿದವರಿಂದ ಅಹವಾಲು ಆಲಿಸಿದರು.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾ ಬಳಿಯಿಂದ ಬಿಎಂಟಿಸಿ ವಿಶೇಷ ಬಸ್‌ನಲ್ಲಿ ಹೊರಟ ಮುಖ್ಯಮಂತ್ರಿ, ಮೊದಲಿಗೆ ಕುರುಬರಹಳ್ಳಿ ಬಳಿಯ ಜೆ.ಸಿ.ನಗರಕ್ಕೆ ಭೇಟಿ ನೀಡಿದರು. ಮನೆಗಳಿಗೆ ನೀರು ನುಗ್ಗಿ ತೊಂದರೆಗೆ ಸಿಲುಕಿದ್ದ ಕುಟುಂಬಗಳ ಸದಸ್ಯರನ್ನು ಮಾತನಾಡಿಸಿದರು. ರಾಜಕಾಲುವೆ ನೀರು ನುಗ್ಗಿ ಮನೆಯಲ್ಲಿನ ದವಸ-ಧಾನ್ಯಗಳು ನೀರು ಪಾಲಾಗಿರುವುದನ್ನು ನಿವಾಸಿಗಳು ಮುಖ್ಯಮಂತ್ರಿ ಅವರ ಗಮನಕ್ಕೆ ತಂದರು. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಮನವಿ ಮಾಡಿದರು.

'ಮಳೆ ನೀರು ನುಗ್ಗಿದೆ ಎಂಬ ವಿಷಯ ತಿಳಿದ ಕೂಡಲೇ ರಾತ್ರಿಯೇ ಸ್ಥಳಕ್ಕೆ ಧಾವಿಸಿದ ಸಚಿವ ಕೆ.ಗೋಪಾಲಯ್ಯ ನೆರವಿಗೆ ನಿಂತರು' ಎಂದು ಮುಖ್ಯಮಂತ್ರಿ ಬಳಿ ಕೆಲ ಮಹಿಳೆಯರು ಹೇಳಿಕೊಂಡರು.

'ಮನೆಯೊಳಗೆ ರಾಜಕಾಲುವೆ ನೀರು ಆಳೆತ್ತರದಷ್ಟು ನುಗ್ಗಿತ್ತು. ಮನೆಯಲ್ಲಿದ್ದ 5 ಚೀಲ ಅಕ್ಕಿಯನ್ನು ನಿನ್ನೆ ಬಿಸಾಡಿದೆವು. ಐದಾರು ತಿಂಗಳು ಬರುತ್ತಿದ್ದ ಅಕ್ಕಿ ಒಂದೇ ದಿನ ನೀರು ಪಾಲಾಯಿತು. ರಾಜಕಾರಣಿಗಳು ಒಂದು ದಿನ ಬಂದು ನಮಗೆ ಸಾಂತ್ವನ ಹೇಳಬಹುದು. ವರ್ಷವಿಡೀ ಕಷ್ಟಪಡಬೇಕಾದವರು ನಾವು. ಮತ್ತೆ ಮಳೆ ಬಂದರೆ ನೀರಿನಲ್ಲಿ ಮುಳುಗುವವರು ನಾವೇ, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದೆ ನಮಗೆ ಸಾಂತ್ವಾನ ಹೇಳಿ ಏನೂ ಪ್ರಯೋಜನ ಇಲ್ಲ' ಎಂದು ಸಂತ್ರಸ್ತ ನಿವಾಸಿಗಳು ಮಾಧ್ಯಮಗಳ ಬಳಿ ನೋವು ತೋಡಿಕೊಂಡರು.

ಕಮಲಾನಗರದಲ್ಲಿ ಸಂತ್ರಸ್ತರ ಸಮಸ್ಯೆ ಆಲಿಸಿದ ಮುಖ್ಯಮಂತ್ರಿ, ನೇರವಾಗಿ ನಾಗವಾರ ಕಡೆಗೆ ಪ್ರಯಾಣ ಬೆಳಸಿದರು. ಬಸ್‌ನಲ್ಲೇ ನಾಗವಾರ ಮೆಟ್ರೊ ನಿಲ್ದಾಣ ವೀಕ್ಷಿಸಿದ ಮುಖ್ಯಮಂತ್ರಿ, ಅರೇಬಿಕ್ ಕಾಲೇಜು ಬಳಿ ನಡೆಯುತ್ತಿರುವ ಗೊಟ್ಟಿಗೆರೆ– ನಾಗವಾರ ಮೆಟ್ರೊ ಮಾರ್ಗದ ಕಾಮಗಾರಿಯನ್ನು ವೀಕ್ಷಿಸಿದರು. ಮಳೆ ನೀರು ತುಂಬಿಕೊಂಡು ಕಾಮಗಾರಿಗೆ ಅಡಚಣೆ ಆಗಿರುವುದನ್ನು ಪರಿಶೀಲಿಸಿದರು.

ಅಲ್ಲಿಂದ ಎಚ್‌ಬಿಆರ್ ಬಡಾವಣೆಯ ಐದನೇ ಬ್ಲಾಕ್‌ನಲ್ಲಿ ರಾಜಕಾಲುವೆ ನೀರು ಮನೆಗಳಿಗೆ ನುಗ್ಗಿರುವ ಪ್ರದೇಶಕ್ಕೂ ಭೇಟಿ ನೀಡಿ ಜನರ ಸಮಸ್ಯೆ ಆಲಿಸಿದರು. ಅಲ್ಲಿಂದ ಹೆಬ್ಬಾಳದಲ್ಲಿನ ತ್ಯಾಜ್ಯನೀರು ಸಂಸ್ಕರಣಾ ಘಟಕಕ್ಕೆ (ಎಸ್‌ಟಿಪಿ) ಭೇಟಿ ನೀಡಿ, ಅದರ ನಿರ್ವಹಣಾ ಸಾಮರ್ಥ್ಯದ ಬಗ್ಗೆ ಮಾಹಿತಿ ಪಡೆದುಕೊಂಡರು.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಕಂದಾಯ ಸಚಿವ ಆರ್.ಅಶೋಕ, ವಸತಿ ಸಚಿವ ವಿ.ಸೋಮಣ್ಣ, ಅಬಕಾರಿ ಸಚಿವ ಕೆ.ಗೋಪಾಲಯ್ಯ, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಕಾಂಗ್ರೆಸ್ ಶಾಸಕ ಕೆ.ಜೆ.ಜಾರ್ಜ್ ಹಾಗೂ ಬೈರತಿ ಸುರೇಶ್ ಜತೆಯಲ್ಲಿದ್ದರು.

ಜೆ.ಸಿ.ನಗರದಲ್ಲಿ ಕೈಮುಗಿದು ಸಮಸ್ಯೆ ಹೇಳಿಕೊಂಡ ನಿವಾಸಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಾಂತ್ವನ ಹೇಳಿದರು. ಸಂಸದ ಪಿ.ಸಿ.ಮೋಹನ್, ಸಚಿವರಾದ ವಿ.ಸೋಮಣ್ಣ, ಕೆ.ಗೋಪಾಲಯ್ಯ, ಆರ್.ಅಶೋಕ ಇದ್ದರು

–ಪ್ರಜಾವಾಣಿ ಚಿತ್ರಗಳು

## ರಾಜಕಾಲುವೆ ಹೂಳೆತ್ತಲು ₹400 ಕೋಟಿ

'ರಾಜಕಾಲುವೆ ಹೂಳು ತೆಗೆಯುವುದು ಸೇರಿ ತುರ್ತು ಪರಿಹಾರ ಕಾಮಗಾರಿ ಕೈಗೊಳ್ಳಲು ₹400 ಕೋಟಿಗೆ ಅನುಮೋದನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರ ವೀಕ್ಷಣೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯಲು ಇರುವ ಅಡ್ಡಿಗಳನ್ನು ಸರಿಪಡಿಸಲು, ಹೂಳೆತ್ತಲು, ಶಿಥಿಲಗೊಂಡಿರುವ ಹಳೇ ತಡೆಗೋಡೆ ಸರಿಪಡಿಸಲು ತಕ್ಷಣವೇ ಹಣ ಬಿಡುಗಡೆ ಮಾಡಲಾಗುವುದು. ರಾಜಕಾಲುವೆಗೆ ನೀರು ಹರಿದು ಬರುವ ದ್ವಿತೀಯ ಮತ್ತು ತೃತೀಯ ಹಂತದ ಕಾಲುವೆಗಳ ಹೂಳೆತ್ತಲು ಮತ್ತು ದುರಸ್ತಿ ಕೈಗೊಳ್ಳಲು ಬಿಬಿಎಂಪಿ ಅನುದಾನ ಬಳಕೆ ಮಾಡಿಕೊಳ್ಳಲು ಸೂಚನೆ ನೀಡಿದ್ದೇನೆ' ಎಂದರು.

'ಮೇ ತಿಂಗಳಲ್ಲಿ 15 ದಿನ ಬೀಳಬೇಕಾದ ಮಳೆ ನಾಲ್ಕೇ ಗಂಟೆಗಳಲ್ಲಿ ಸುರಿದಿದ್ದರಿಂದ ಸಮಸ್ಯೆಯಾಗಿದೆ. ಸಮಸ್ಯೆ ಇರುವ ಕಡೆಯಷ್ಟೇ ರಾಜಕಾಲುವೆ ದುರಸ್ತಿಗೊಳಿಸಿದರೆ ಮುಂದಿನ ಮಳೆಗೆ ಇನ್ನೊಂದು ಕಡೆ ಸಮಸ್ಯೆ ಉದ್ಭವಿಸುತ್ತದೆ. ಮಳೆನೀರು ಹರಿಸುವ ಪ್ರತಿಯೊಂದು ಕಣಿವೆಯ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಅಭಿವೃದ್ಧಿಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ' ಎಂದರು.

'ಡಿಪಿಆರ್ ಸಿದ್ಧವಾದ ಕೂಡಲೇ ₹1,600 ಕೋಟಿ ಅನುದಾನ ಒದಗಿಸಿ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲಾಗುವುದು. ವೃಷಭಾವತಿ ರಾಜಕಾಲುವೆಯಲ್ಲಿ 10ಕ್ಕೂ ಹೆಚ್ಚು ಹಳೆ ಸೇತುವೆಗಳಿದ್ದು, ಅವುಗಳ ಮರುನಿರ್ಮಾಣಕ್ಕೂ ಯೋಜನೆ ರೂಪಿಸಲು ಸೂಚನೆ ನೀಡಿದ್ದೇನೆ' ಎಂದು ವಿವರಿಸಿದರು.

ಹೆಬ್ಬಾಳದಲ್ಲಿ ನಿತ್ಯ 10 ಕೋಟಿ ಲೀಟರ್ ನೀರು ಶುದ್ಧೀಕರಿಸುವ ಸಾಮರ್ಥ್ಯದ ಎಸ್‌ಟಿಪಿ ಇದ್ದು, ಅಲ್ಲಿ ಹೆಚ್ಚುವರಿಯಾಗಿ ನಿತ್ಯ 6 ಕೋಟಿ ಲೀಟರ್ ನೀರನ್ನು ಶುದ್ಧೀಕರಿಸುವ ಸಾಮರ್ಥ್ಯದ ಮತ್ತೊಂದು ಘಟಕದ ಕಾಮಗಾರಿಯನ್ನು ಜಲಮಂಡಳಿಯಿಂದ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

## ವಡ್ಡರಪಾಳ್ಯಕ್ಕೆ ಭೇಟಿ ನೀಡದ ಸಿ.ಎಂ

ಮಳೆಯಿಂದ ಅತೀ ಹೆಚ್ಚು ಸಮಸ್ಯೆ ಅನುಭವಿಸುತ್ತಿರುವ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊರಮಾವು ವಡ್ಡರಪಾಳ್ಯ ಸೇರಿ ಹಲವು ಬಡಾವಣೆಗಳಿಗೆ ಮುಖ್ಯಮಂತ್ರಿ ಭೇಟಿ ನೀಡಲಿಲ್ಲ.

ವಡ್ಡರಪಾಳ್ಯದಲ್ಲಿ ವಸತಿ ಪ್ರದೇಶಕ್ಕೆ ನುಗ್ಗಿದ್ದ ಮಳೆ ನೀರು ಗುರುವಾರವೂ ಕಡಿಮೆಯಾಗದೆ ಜನ ಸಮಸ್ಯೆ ಎದುರಿಸಿದರು. ಎಚ್‌ಬಿಆರ್ ಬಡಾವಣೆವರೆಗೆ ಹೋದ ಮುಖ್ಯಮಂತ್ರಿ ಸ್ವಲ್ಪ ಮುಂದಕ್ಕೆ ಸಾಗಿದ್ದರೆ ವಡ್ಡರಪಾಳ್ಯದ ಸಮಸ್ಯೆ ಕಣ್ತುಂಬಿಕೊಳ್ಳಬಹುದಿತ್ತು. ಆದರೆ, ಅಲ್ಲಿಗೆ ಭೇಟಿ ನೀಡಲಿಲ್ಲ. ಬುಧವಾರ ವಡ್ಡರಪಾಳ್ಯಕ್ಕೆ ಭೇಟಿ ನೀಡಿದ್ದ ಸಚಿವ ಬೈರತಿ ಬಸವರಾಜ್ ಅವರನ್ನು ನಿವಾಸಿಗಳು ತರಾಟೆಗೆ ತೆಗೆದುಕೊಂಡಿದ್ದರು.

ದಾಸರಹಳ್ಳಿ ವ್ಯಾಪ್ತಿಯ ರುಕ್ಮಿಣಿನಗರ, ಗುಂಡಪ್ಪ ಲೇಔಟ್, ಬೆಲ್ಮಾರ್ ಲೇಔಟ್‌ನಲ್ಲೂ ಮನೆಗಳಿಗೆ ನೀರು ನುಗ್ಗಿತ್ತು. ಅಲ್ಲಿಗೂ ಸಿ.ಎಂ ಭೇಟಿ ನೀಡಲಿಲ್ಲ.

## ಚಿತ್ರಾವಳಿ

ಜಯನಗರದ ಅಶೋಕ ಸ್ತಂಭದ ಬಳಿಯ ಪರಿಕ್ರಮ ಸ್ಕೂಲ್ ಆಫ್ ಲರ್ನಿಂಗ್‌ನಲ್ಲಿ ಅಳವಡಿಸಿರುವ 5 ಕಿಲೊವಾಟ್ ಸಾಮರ್ಥ್ಯದ ಸೋಲಾರ್ ಇನ್ವರ್ಟರ್ ಸಿಸ್ಟಂ ಅನ್ನು ವೆಲ್ಸ್ ಫಾರ್ಗೋದ ಮುಖ್ಯಸ್ಥ ರಿಚರ್ಡ್ ಹೆಂಡರ್ಸನ್ ಅವರು ಗುರುವಾರ ಉದ್ಘಾಟಿಸಿದರು.ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ಸಂಸ್ಥಾಪಕ ಶುಕ್ಲಾ ಬೋಸ್, ಸೆಲ್ಕೊ ಫೌಂಡೇಷನ್ ಸಹ ನಿರ್ದೇಶಕ ರೋಷನ್, ವ್ಯವಸ್ಥಾಪಕಿ ಸುರಭಿ ಹಾಗೂ ಸೆಲ್ಕೊ ಸೋಲಾರ್ ಲೈಟ್ ಲಿಮಿಟೆಡ್‌ನ ಅಶ್ವಿನ್ ಇದ್ದರು.

ಪುಲಕೇಶಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ ಮಂಡಳಿ ಕೈಗೊಂಡಿರುವ ದುರಸ್ತಿ ಕಾಮಗಾರಿಯಿಂದ ಆಗಿರುವ ನೀರು ಪೂರೈಕೆ ಸಮಸ್ಯೆ ಸರಿಪಡಿಸುವ ಸಂಬಂಧ ಜಲ ಮಂಡಳಿ ಎಂಜಿನಿಯರ್‌ಗಳ ಜತೆ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಗುರುವಾರ ಸಭೆ ನಡೆಸಿದರು. ಸಹಾಯಕ ಮುಖ್ಯ ಎಂಜಿನಿಯರ್ ಕೆ.ಎನ್.ರಾಜು, ಸೂಪರಿಂಟೆಂಡೆಂಟ್ ಎಂಜಿನಿಯರ್ ಜೈಶಂಕರ್, ಕಾರ್ಯಪಾಲಕ ಎಂಜಿನಿಯರ್ ರಮೇಶ್, ದಲಾಯತ್ ಇದ್ದರು

# 'ರಾಜಕಾಲುವೆ: ₹1,500 ಕೋಟಿ ಬಿಡುಗಡೆ ಆಗಿಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಗರದ ರಾಜಕಾಲುವೆಗಳನ್ನು ಅಭಿವೃದ್ಧಿ ಪಡಿಸಲು ₹ 1500 ಕೋಟಿ ವಿನಿಯೋಗಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಳೆದ ನವೆಂಬರ್‌ನಲ್ಲಿ ಹೇಳಿದ್ದರು. ಈವರೆಗೆ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಮಳೆಯಿಂದ ಹಾನಿಗೊಳಗಾದ ವಿವಿಧ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಬಿಎಂಪಿಯ 8 ವಲಯಗಳೂ ಸೇರಿದಂತೆ ಸುಮಾರು 700 ಕಡೆ ರಾಜಕಾಲುವೆಗಳಲ್ಲಿ ಮಳೆ ನೀರು ಹರಿವಿಗೆ ಸಮಸ್ಯೆ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ನಿಭಾಯಿಸಲು ವೈಜ್ಞಾನಿಕವಾದ ತಿಳಿವಳಿಕೆ ಇರಬೇಕಾಗುತ್ತದೆ. ಈ ಸರ್ಕಾರಕ್ಕೆ ಅಂತಹ ತಿಳಿವಳಿಕೆಯೇ ಇಲ್ಲ' ಎಂದರು.

'ಸರ್ಕಾರದ ಬೇಜವಾಬ್ದಾರಿಯಿಂದಾಗಿ ಈಗ ಸಮಸ್ಯೆ ಉದ್ಭವಿಸಿದೆ. ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಜನರು ಭಾರಿ ಪ್ರಮಾಣದಲ್ಲಿ ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ. ಅವರಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಸಮಗ್ರ, ವೈಜ್ಞಾನಿಕ ದೃಷ್ಟಿಕೋನವನ್ನಿಟ್ಟುಕೊಂಡು ಚರಂಡಿ ಮತ್ತು ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು' ಎಂದು ಹೇಳಿದರು.

'ಬೆಂಗಳೂರಿನ ರಸ್ತೆ, ಚರಂಡಿಗಳನ್ನು ಅಭಿವೃದ್ಧಿ ಮಾಡುತ್ತಿರುವುದಾಗಿ ಸರ್ಕಾರ ಹೇಳುತ್ತಿದೆ. ರಾಜಕಾಲುವೆಗಳ ಹೂಳು ತೆಗೆಯಲು ಎರಡು ವರ್ಷಗಳಿಂದ ವರ್ಷಕ್ಕೆ ತಲಾ ₹80 ಕೋಟಿಗಳನ್ನು ಖರ್ಚು ಮಾಡಿದೆ. ಅದನ್ನು ನುಂಗುವುದಕ್ಕೆ ಬಳಸಲಾಗುತ್ತಿದೆಯೆ ಹೊರತು ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಹೂಳು ತೆಗೆಯುವ ಗುತ್ತಿಗೆದಾರ ಅದನ್ನು ತೆಗೆದು ಎಲ್ಲಿಗೆ ಸಾಗಿಸಿದ್ದಾನೆ? ಎಲ್ಲಿ ಹಾಕಿದ್ದಾನೆ ಎಂಬ ಲೆಕ್ಕವನ್ನು ಕೊಡಬೇಕಲ್ಲವೇ? ಕೇವಲ ದಾಖಲೆಗಳಲ್ಲಿ ಮಾತ್ರ ಹೂಳು ತೆಗೆಯಲಾಗಿದೆಯೆಂದು ತೋರಿಸಿ ಹಣ ನುಂಗಿ ಹಾಕಲಾಗಿದೆ. ಇದು ಶೇ 40ರಷ್ಟು ಪರ್ಸೆಂಟ್ ವ್ಯವಹಾರವಲ್ಲ; ಶೇ 100 ಪರ್ಸೆಂಟ್ ವ್ಯವಹಾರ' ಎಂದರು.

'ಬಿಜೆಪಿ ಅಧಿಕಾರಕ್ಕೆ ಬಂದರೆ ಬೆಂಗಳೂರನ್ನು ಸಿಂಗಪುರ ಮಾಡುತ್ತೇವೆ. ಸ್ಮಾರ್ಟ್ ಸಿಟಿಯನ್ನಾಗಿ ರೂಪಿಸುತ್ತೇವೆ ಎನ್ನುತ್ತಿದ್ದರು. ಈಗ ಏನು ಮಾಡಿದ್ದಾರೆ? ಯಡಿಯೂರಪ್ಪ ಅವರು ಎರಡು ವರ್ಷದಲ್ಲಿ ಬೆಂಗಳೂರಿನ ಚಿತ್ರಣವನ್ನೇ ಬದಲಾಯಿಸುತ್ತೇನೆ ಎಂದಿದ್ದರು. ಬದಲಾಗಿದೆಯೇ' ಎಂದು ಪ್ರಶ್ನಿಸಿದರು.

## 'ಅವಾಂತರದ ಬಳಿಕ ಪ್ರದಕ್ಷಿಣೆ ಹಾಕಿ ಏನುಪಯೋಗ?'

'ಮಳೆ ಬಂದು ಅವಾಂತರವಾದ ನಂತರ ಬಿಜೆಪಿಯವರು ಛತ್ರಿ ಹಿಡಿದುಕೊಂಡು ನಗರ ಪ್ರದಕ್ಷಿಣೆ ಹಾಕಿದರೆ ಏನುಪಯೋಗ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಬಡಾವಣೆಗಳಲ್ಲಿ ಚೆನ್ನಾಗಿರುವ ರಸ್ತೆಯನ್ನು ಕಿತ್ತು ಮತ್ತೆ ಬೇರೆ ರಸ್ತೆ ನಿರ್ಮಿಸುತ್ತಿದ್ದಾರೆ. ಆದರೆ ಗುಂಡಿ ಬಿದ್ದಿರುವ ರಸ್ತೆಯನ್ನು ಸರಿಪಡಿಸುತ್ತಿಲ್ಲ. ಬಿಜೆಪಿ ಸರ್ಕಾರ ಅಭಿವೃದ್ಧಿ ಕಡೆ ಗಮನಹರಿಸದೇ, ಸಮಾಜದ ಧ್ರುವೀಕರಣ, ಕೋಮುವಾದದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿದೆ' ಎಂದು ಟೀಕಿಸಿದರು.

'ಸರ್ವ ಸ್ಪರ್ಶಿ ಹಾಗೂ ಸರ್ವ ವ್ಯಾಪಿ ಬಜೆಟ್ ಮಂಡಿಸಿದ್ದೇವೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಘೋಷಿಸಿದ ಕಾರ್ಯಕ್ರಮಗಳನ್ನೇ ಸರಿಯಾಗಿ ಜಾರಿಗೊಳಿಸಲು ಸಾಧ್ಯವಾಗದೇ ಇರುವುದಕ್ಕೆ ಹೊಣೆ ಯಾರು' ಎಂದು ಪ್ರಶ್ನಿಸಿದರು.

'ನಗರದ ಘನತೆ ಉಳಿಸಲು ಶಾಸಕರ ಸಭೆ ನಡೆಸಿ' ಎಂದು ಒತ್ತಾಯಿಸಿ ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿಗೆ ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿ, 'ಶಾಸಕರ ಸಭೆ ಮಾಡಿದರೆ ಕಾಂಗ್ರೆಸ್ ಶಾಸಕರೂ ಭಾಗವಹಿಸುತ್ತಾರೆ. ಅಲ್ಲಿ ಧ್ವನಿ ಎತ್ತಿದಾಗ ಸರ್ಕಾರಕ್ಕೆ ಅಪಮಾನವಾಗುತ್ತದೆ ಎಂಬ ಕಾರಣದಿಂದ ಸಭೆ ನಡೆಸಲು ಹಿಂಜರಿಯುತ್ತಿದ್ದಾರೆ' ಎಂದರು.

ಮಳೆಹಾನಿಗೆ ಒಳಗಾದ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ್ದ ಸಿದ್ದರಾಮಯ್ಯ, ಸಂತ್ರಸ್ತರ ಅಹವಾಲು ಆಲಿಸಿದರು. ಶಾಸಕ ದಿನೇಶ್ ಗುಂಡೂರಾವ್ ಇದ್ದರು

# 'ಮುನ್ಸೂಚನೆ ಇದ್ದರೂ ನಿರ್ಲಕ್ಷ್ಯ'

**ಬೆಂಗಳೂರು:** ಭಾರಿ ಮಳೆಯ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದರೂ ಗಮನ ಹರಿಸದೇ ನಿರ್ಲಕ್ಷ್ಯ ತೋರಿದ ಕಾರಣ ಅನಾಹುತವಾಗಿ ಈಗ ಸಾರ್ವಜನಿಕರು ತೊಂದರೆಗೆ ಸಿಲುಕಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಳು ಜನ ಸಚಿವರನ್ನು ಹೊಂದಿರುವ ಮಹಾನಗರ ಇದು. ಆದರೆ ಮಳೆಗೆ ಸಂಬಂಧಿಸಿದಂತೆ ಶಾಸಕರು ಮತ್ತು ಅಧಿಕಾರಿಗಳ ಸಭೆ ಏಕೆ ಕರೆದಿಲ್ಲ? ಸಭೆ ನಡೆಸುವ ಕನಿಷ್ಠ ಸೌಜನ್ಯವೂ ಇವರಿಗಿಲ್ಲ ಎಂದು ಕಿಡಿಕಾರಿದರು.

'ನಗರದ ಉಸ್ತುವಾರಿ ಸಚಿವರೂ ಮುಖ್ಯಮಂತ್ರಿಗಳೇ ಆಗಿದ್ದಾರೆ. ಬೆಂಗಳೂರು ಉಸ್ತುವಾರಿಗಾಗಿ ಇಬ್ಬರು ಸಚಿವರು ಪರಸ್ಪರ ಪೈಪೋಟಿಗಿಳಿದಿದ್ದೂ ನೋಡಿದ್ದೇವೆ. ಅಲ್ಲದೆ, ನಗರದಲ್ಲಿರುವ ಏಳು ಸಚಿವರು ಏನು ಮಾಡುತ್ತಿದ್ದಾರೆ. ಅವರು ಕ್ಷೇತ್ರಗಳಿಗೆ ತೆಗೆದುಕೊಂಡು ಹೋದ ಕೋಟ್ಯಂತರ ರೂಪಾಯಿ ಅನುದಾನ ಎಲ್ಲಿ ಹೋಯಿತು' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಮುಖ್ಯಮಂತ್ರಿಯವರು ನಗರದಲ್ಲಿ ಒಂದಿಷ್ಟು ಕಾಟಾಚಾರಕ್ಕೆ ಸಂಚಾರ ಮಾಡುತ್ತಿದ್ದಾರೆ. ಅವರಿಗೆ ಮಳೆ ಅನಾಹುತ ಬಗೆಹರಿಸುವ ಮನಸ್ಸಿಲ್ಲ. ಬಜೆಟ್ ಅನುಷ್ಠಾನ ಮಾಡಲು ಸಭೆ ಮಾಡಿದ್ದಾರಾ? ಚುನಾವಣೆ ಹತ್ತಿರದಲ್ಲೇ ಇರುವುದರಿಂದ ಪಕ್ಷಕ್ಕೆ ದೇಣಿಗೆ ಸಂಗ್ರಹಿಸಲು, ಕಮಿಷನ್ ಹೊಡೆಯಲು ಈ ಸಭೆಗಳನ್ನು ಮಾಡುತ್ತಿದ್ದಾರೆ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

# ಮಳೆಹಾನಿ: ಶಾಶ್ವತ ಪರಿಹಾರಕ್ಕೆ ಆಗ್ರಹ

**ಬೆಂಗಳೂರು:** ಭಾರಿ ಮಳೆಗೆ ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಆಸ್ತಿಗಳು ಹಾನಿಗೊಳಗಾಗಿದ್ದು, ತುರ್ತು ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸ್ಥಳೀಯ ಕ್ಷೇತ್ರಗಳ ಶಾಸಕ ದಿನೇಶ್ ಗೂಳಿಗೌಡ ಆಗ್ರಹಿಸಿದ್ದಾರೆ.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಗೋಪಾಲಯ್ಯ ಅವರಿಗೆ ಪತ್ರ ಬರೆದಿರುವ ಅವರು, ಬೇಸಿಗೆ ಮಳೆಗೆ ಮಂಡ್ಯ ಜಿಲ್ಲೆ ತತ್ತರಿಸಿ ಹೋಗಿದೆ. ಜಿಲ್ಲೆಯ ಏಳೂ ತಾಲೂಕುಗಳು ಸಹ ಮಳೆಯಿಂದಾಗಿ ತೀವ್ರ ಹಾನಿಗೊಳಪಟ್ಟಿವೆ. ಜನ-ಜಾನುವಾರುಗಳಿಗೆ ತೀವ್ರ ತೊಂದರೆಯಾಗಿದೆ. ಸರ್ಕಾರ ಹಾಗೂ ನಾಗರಿಕರ ಆಸ್ತಿಗಳಿಗೆ ಹಾನಿಯಾಗಿದೆ. ಮುಂಗಾರು ಪೂರ್ವದ ಮಳೆಗೇ ಈ ರೀತಿ ಅವಾಂತರಗಳು ಸಂಭವಿಸಿದರೆ, ಮುಂಗಾರು ಆರಂಭವಾದ ಮೇಲೆ ನಾಗರಿಕರ ಗತಿ ಏನು..? ಎಂಬ ಪ್ರಶ್ನೆ ಕಾಡುತ್ತಿದೆ ಎಂದು ಹೇಳಿದ್ದಾರೆ.

ಶಿಥಿಲಾವಸ್ಥೆ ತಲುಪಿರುವ ಶಾಲಾ ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ. ಶಿಥಿಲಾವಸ್ಥೆ ತಲುಪಿದ ಶಾಲೆಗಳನ್ನು ಗುರುತಿಸಿ ಅವುಗಳನ್ನು ದುರಸ್ತಿಗೆ ಮುಂದಾಗಬೇಕಿದೆ ಎಂದು ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಸೆಲೆಬ್ರಿಟಿ LIVE

ಅರವಿಂದ್ ಭಟ್
ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಮತ್ತು ಕೋಚ್ ಬೆಂಗಳೂರು

ಸ್ಮ್ಯಾಷ್ ಇಟ್

ಬೆಳಿಗ್ಗೆ 11 ರಿಂದ 12

# ಸಲಾಂ ಆರತಿ 'ಸಂಧ್ಯಾ ಆರತಿ' ಆಗಲಿ: ಡಿ.ಸಿ ಕೋರಿಕೆ

**ಮಂಡ್ಯ:** 'ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಪ್ರತಿ ದಿನ ಸಂಜೆ 7 ಗಂಟೆಗೆ ನಡೆಯುವ ದೀವಟಿಗೆ ಸಲಾಂ (ಸಲಾಂ ಆರತಿ) ಆಚರಣೆಯನ್ನು 'ಸಂಧ್ಯಾ ಆರತಿ' ಎಂದು ಹೆಸರು ಬದಲಾಯಿಸಿ ಆದೇಶ ಹೊರಡಿಸಬೇಕು' ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರನ್ನು ಕೋರಿದ್ದಾರೆ.

ಈ ಕುರಿತು ಅವರು ಪತ್ರ ಬರೆದಿದ್ದು, 'ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರು ಹಾಗೂ ಇತರರು ಸಲಾಂ ಆರತಿ ಹೆಸರು ಬದಲಾವಣೆ ಮಾಡುವಂತೆ ಮನವಿ ಮಾಡಿದ್ದರು. ಪ್ರತಿದಿನ ಸಂಜೆ ಮೂಲದೇವರಿಗೆ ಪೂಜೆ ಸಲ್ಲಿಸಿ ನಂತರ ದೇವಾಲಯದ ಒಳ ಪ್ರಾಂಗಣದಲ್ಲಿ ಎರಡು ದೀವಟಿಗೆಗಳಿಂದ ಗೌರವ ವಂದನೆ ಸಲ್ಲಿಸಲಾಗುತ್ತದೆ. ಬಹಳ ಹಿಂದಿನಿಂದಲೂ ನಡೆಯುತ್ತಿರುವ ಇದನ್ನು ದೀವಟಿಗೆ ಸಲಾಂ ಎಂದು ಕರೆಯಲಾಗುತ್ತದೆ. ಈ ಕುರಿತು ದೇವಾಲಯದ ಕೈಪಿಡಿಯಲ್ಲೂ ಮಾಹಿತಿ ಇದೆ' ಎಂದು ಹೇಳಿದ್ದಾರೆ.

'ಆರತಿ ಸಂಜೆಯ ವೇಳೆ ನಡೆಯುವ ಕಾರಣ 'ಸಲಾಂ' ಶಬ್ದದ ಬದಲು 'ಸಂಧ್ಯಾ' ಪದ ಸೇರಿಸಿ ಸಂಧ್ಯಾ ಆರತಿ ಎಂದು ಪುನರ್ ನಾಮಕರಣ ಮಾಡಬಹುದು. ಈ ಕುರಿತು ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಪರಿಚಾರಕರು, ಸ್ಥಾನೀಕರು, ಪಾರುಪತ್ತೆದಾರರು, ಯಾಗಶಾಲೆ ಸಿಬ್ಬಂದಿ ತೀರ್ಮಾನ ಕೈಗೊಂಡಿದ್ದಾರೆ. ಅದರಂತೆ ದೀವಟಿಗೆ ಸಲಾಂ ಬದಲಿಗೆ ಸಂಧ್ಯಾ ಆರತಿ ಎಂದು ಹೆಸರು ಬದಲಾವಣೆ ಮಾಡಿ ಆದೇಶ ನೀಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

## ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ: ತನಿಖೆ ಚುರುಕು

# ಸೂಪರಿಂಟೆಂಡೆಂಟ್ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಡಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಕಚೇರಿ ಸೂಪರಿಂಟೆಂಡೆಂಟ್ ಮಂಜುನಾಥ್ ಅವರನ್ನು ಸಿಐಡಿ ಪೊಲೀಸರು ಇತ್ತೀಚೆಗೆ ಬಂಧಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ಮೇ 23ರವರೆಗೆ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯ ವಿಭಾಗವೊಂದರಲ್ಲಿ ಮಂಜುನಾಥ್ ಕೆಲಸ ಮಾಡುತ್ತಿದ್ದ. ಪೊಲೀಸ್ ನೇಮಕಾತಿ ವಿಭಾಗದ ನೌಕರರ ಜೊತೆ ಒಡನಾಟವಿಟ್ಟುಕೊಂಡು ಅಕ್ರಮದಲ್ಲಿ ಭಾಗಿಯಾಗಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪಿಎಸ್‌ಐ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗಿದ್ದ 22 ಅಭ್ಯರ್ಥಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಕೆಲ ಅಭ್ಯರ್ಥಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಪೊಲೀಸ್ ನೇಮಕಾತಿ ವಿಭಾಗದ ನೌಕರರು ಅಕ್ರಮದಲ್ಲಿ ಶಾಮೀಲಾಗಿರುವ ಮಾಹಿತಿ ಸಿಕ್ಕಿತ್ತು' ಎಂದೂ ತಿಳಿಸಿವೆ.

'ನೇಮಕಾತಿ ವಿಭಾಗದಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದ ಡಿವೈಎಸ್ಪಿ ಶಾಂತಕುಮಾರ್, ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹರ್ಷ, ಹೆಡ್ ಕಾನ್‌ಸ್ಟೆಬಲ್‌ಗಳಾದ ಶ್ರೀನಿವಾಸ್, ಶ್ರೀಧರ್ ಹಾಗೂ ಮೀಸಲು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಆರ್‌ಎಸ್‌ಐ) ಲೋಕೇಶಪ್ಪ ಅವರನ್ನು ಬಂಧಿಸಲಾಗಿತ್ತು.

ಇವರು ನೀಡಿದ್ದ ಮಾಹಿತಿ ಆಧರಿಸಿ, ಡಿಜಿ–ಐಜಿಪಿ ಕಚೇರಿ ನೌಕರ ಮಂಜುನಾಥ್ ಅವರನ್ನೂ ಬಂಧಿಸಲಾಗಿದೆ' ಎಂದೂ ಸಿಐಡಿ ಮೂಲಗಳು ಹೇಳಿವೆ.

**ಐವರೂ ಕಸ್ಟಡಿಗೆ:** 'ಹರ್ಷ, ಶ್ರೀನಿವಾಸ್, ಶ್ರೀಧರ್, ಲೋಕೇಶಪ್ಪ ಹಾಗೂ ಮಂಜುನಾಥ್ ಅವರನ್ನು ನಗರದ ಒಂದನೇ ಎಸಿಎಂಎಂ ನ್ಯಾಯಾಲಯದ ಎದುರು ಗುರುವಾರ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಐವರನ್ನೂ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

**ಅಭ್ಯರ್ಥಿಗಳಿಗಾಗಿ ಶೋಧ:** 'ಅಕ್ರಮ ಎಸಗಿ ಆಯ್ಕೆಯಾಗಿದ್ದಾರೆ' ಎನ್ನಲಾದ ಅಭ್ಯರ್ಥಿಗಳಾದ ರಚನಾ ಹನುಮಂತ, ಎಸ್. ಜಾಗೃತ್, ಜಿ. ಶಿವರಾಜ್ ಸೇರಿದಂತೆ ಹಲವು ಅಭ್ಯರ್ಥಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗಾಗಿ ಸಿಐಡಿ ವಿಶೇಷ ತಂಡ ಶೋಧ ನಡೆಸುತ್ತಿದೆ.

'ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಲ್ಲಿ ಆರೋಪಿಗಳು ತಲೆಮರೆಸಿಕೊಂಡಿರುವ ಮಾಹಿತಿ ಇದೆ. ಎಲ್ಲ ಕಡೆಯೂ ವಿಶೇಷ ತಂಡ ಸಂಚರಿಸುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

### ಪಿಎಸ್‌ಐ ನೇಮಕ : ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

**ಬೆಂಗಳೂರು:** 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಇಬ್ಬರು ಅಭ್ಯರ್ಥಿಗಳು ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಪಿಎಸ್‌ಐ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನಾಲ್ಕನೇ ರ‍್ಯಾಂಕ್ ಪಡೆದಿರುವ ಎಸ್.ಜಾಗೃತ್ ಹಾಗೂ ಮಹಿಳಾ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಪಡೆದಿರುವ ರಚನಾ ಹನುಮಂತ ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಜೆ.ಎಂ. ಖಾಜಿ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಎಸ್. ಶ್ಯಾಮ್ ಸುಂದರ್ ವಾದ ಆಲಿಸಿದ ನ್ಯಾಯಪೀಠ, ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಎರಡನೇ ಪ್ರತಿವಾದಿಯಾದ ಪ್ರಕರಣದ ದೂರುದಾರ ಸಿಐಡಿ ಪೊಲೀಸ್ ಅಧಿಕಾರಿ ಟಿ.ನರಸಿಂಹ ಮೂರ್ತಿ ಅವರಿಗೂ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

ಇದೇ ವೇಳೆ ನ್ಯಾಯಪೀಠ, 'ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನೂ ನಿರ್ದಿಷ್ಟ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಪಡಿಸುವಂತೆ ನ್ಯಾಯಾಲಯದಿಂದ ಆದೇಶ ಪಡೆದುಕೊಳ್ಳಿ' ಎಂದು ಸರ್ಕಾರದ ಪರ ವಕೀಲರಿಗೆ ಮೌಖಿಕ ಸಲಹೆ ನೀಡಿತು.

'ನಿಯಮಗಳ ಪ್ರಕಾರ ದೂರು ಸಲ್ಲಿಸಿದ ಅಧಿಕಾರಿಯೇ ತನಿಖೆ ನಡೆಸುವಂತಿಲ್ಲ' ಎಂದು ಆಕ್ಷೇಪಿಸಿರುವ ಅರ್ಜಿದಾರರು, 'ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿದ್ದಾರೆ.

### 'ಚಿಕ್ಕಮಗಳೂರು ಎಸ್ಪಿ ಕಚೇರಿಗೆ ವರ್ಗ'

'ಪಿಎಸ್‌ಐ ಅಕ್ರಮ ಬಗ್ಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ಮಂಜುನಾಥ್‌ನನ್ನು ಚಿಕ್ಕಮಗಳೂರು ಎಸ್ಪಿ ಕಚೇರಿಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಆತ ಡಿಜಿ–ಐಜಿಪಿ ಕಚೇರಿ ಕೆಲಸದಿಂದ ಬಿಡುಗಡೆ ಪಡೆದಿರಲಿಲ್ಲ. ಇದರ ನಡುವೆಯೇ ಆತನನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

## ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

**ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ**

**ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್** ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
*Canara Bank, Cantonment Branch*
*A/c no.* - **0404101200385**
*IFSC code* - **CNRB0000404**
*MICR Code* - **560015009**

**ಸೂಚನೆ**
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

**ವಿಳಾಸ**
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

## ವಿದ್ಯಾರ್ಥಿಗಳ ಅನಿಸಿಕೆ

### 'ಪತ್ರಿಕೆಯ ಪ್ರೋತ್ಸಾಹ ಓದಿಗೆ ಪ್ರೇರಣೆ'

'ಪ್ರಜಾವಾಣಿ' ನೀಡಿದ ಸ್ಕಾಲರ್‌ಷಿಪ್ ಹಣವನ್ನು ನನ್ನ ವಿದ್ಯಾಭ್ಯಾಸಕ್ಕೆ ಬಳಸಿಕೊಳ್ಳುತ್ತಿದ್ದೇನೆ. ಇದೇ ಹಣದಲ್ಲಿ ಪುಸ್ತಕ ಖರೀದಿಸಿದೆ. ನನ್ನ ಓದಿಗೆ ಸಂಬಂಧಿಸಿದ ಯಾವುದೇ ಅಗತ್ಯಗಳಿಗೆ ನಾನು ಪಾಲಕರ ಬಳಿ ಕೇಳುವ ಬದಲಾಗಿ, ಪತ್ರಿಕೆ ನೀಡಿರುವ ಸ್ಕಾಲರ್‌ಷಿಪ್ ಹಣವನ್ನೇ ಬಳಕೆ ಮಾಡುತ್ತಿದ್ದೇನೆ. ಆರ್ಥಿಕ ಮುಗ್ಗಟ್ಟಿನಲ್ಲಿರುವ ಕುಟುಂಬದ ಮಕ್ಕಳಿಗೆ ಈ ರೀತಿಯ ಪ್ರೋತ್ಸಾಹ ಓದಲು ಇನ್ನಷ್ಟು ಪ್ರೇರೇಪಿಸುತ್ತದೆ.

**ಧನ್ಯಶ್ರೀ**, ಮಂಗಳೂರು

### 'ಪಠ್ಯಪುಸ್ತಕ ಖರೀದಿಗೆ ಅನುಕೂಲ'

ದ್ವಿತೀಯ ಪಿಯುಸಿ ಪಠ್ಯಪುಸ್ತಕ ಖರೀದಿಗೆ ಸ್ಕಾಲರ್‌ಷಿಪ್ ಹಣ ಅನುಕೂಲವಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳು ಇಂತಹ ಸ್ಕಾಲರ್‌ಷಿಪ್ ಪಡೆದರೆ, ಪುಸ್ತಕ ಖರೀದಿ, ಕಾಲೇಜಿನ ಶುಲ್ಕ ಭರಿಸಲು ಸಹಾಯವಾಗುತ್ತದೆ. ಜನರ ನಡುವೆ ಸುದ್ದಿ ಪ್ರಸರಣ ಮಾಡುವ 'ಪ್ರಜಾವಾಣಿ'ಯಂತಹ ಪತ್ರಿಕೆ ಸ್ಕಾಲರ್‌ಷಿಪ್ ನೀಡುವ ಉತ್ತಮ ಯೋಜನೆ ಹಾಕಿಕೊಂಡಿರುವುದು ಸ್ತುತ್ಯರ್ಹ.

**ಯಜ್ಞೇಶ್**, ಮಂಗಳೂರು

# 'ಸಾಯಿ ಶಂಕರ'ದಿಂದ ಟಿ.ಸಿ ಪಡೆದ ಮೂರು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ಬಜರಂಗದಳದ 'ಶೌರ್ಯ ಪ್ರಶಿಕ್ಷಣ ವರ್ಗ' ನಡೆದ ಪೊನ್ನಂಪೇಟೆಯ ಸಾಯಿ ಶಂಕರ ವಿದ್ಯಾಸಂಸ್ಥೆಯಿಂದ 3 ವಿದ್ಯಾರ್ಥಿಗಳು ವರ್ಗಾವಣೆ ಪತ್ರ ಪಡೆದು ಬೇರೆ ಶಾಲೆಗೆ ಪ್ರವೇಶ ಪಡೆದಿದ್ದಾರೆ.

'ಎಲ್ಲ ಧರ್ಮದವರಿಗೂ ಉತ್ತಮ ಶಿಕ್ಷಣ ನೀಡುತ್ತಿದ್ದೇವೆ. ದುರ್ಬೈನಿಂದ ಕೆಲವರು ಪೋಷಕರಿಗೆ ಕರೆ ಮಾಡಿ, ಬೇರೆ ಶಾಲೆಗೆ ಸೇರಿಸುವಂತೆ ಒತ್ತಡ ಹೇರುತ್ತಿದ್ದಾರೆ. ಸಂಸ್ಥೆಯ ಆವರಣದಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆದಿಲ್ಲ' ಎಂದು ವಿದ್ಯಾಸಂಸ್ಥೆಯ ಅಧ್ಯಕ್ಷ ಝರು ಗಣಪತಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಝುರು ಗಣಪತಿ

'ಶಾಲಾ ಆವರಣದಲ್ಲಿ ಭಯೋತ್ಪಾದನೆ ಚಟುವಟಿಕೆ ನಡೆದಂತೆ ಬಿಂಬಿಸಲಾಗಿದೆ. ಬಂದೂಕು ತರಬೇತಿ ಶಾಲೆ ಪಕ್ಕದ ಭತ್ತದ ಗದ್ದೆಯಲ್ಲಿ ನಡೆದಿತ್ತು. ಆದರೆ ರಾಜಕೀಯ ಲಾಭಕ್ಕೆ ವಿದ್ಯಾಸಂಸ್ಥೆಯನ್ನು ಬಲಿಪಶು ಮಾಡಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ತ್ರಿಶೂಲವನ್ನು ಕೊನೆಯ ದಿನ ಬಜರಂಗದಳದ ಮುಖಂಡರೇ ವಿತರಿಸಿದ್ದರು. ಅದಕ್ಕೂ ಸಂಸ್ಥೆಗೂ ಸಂಬಂಧವಿಲ್ಲ. ಉಚಿತವಾಗಿ ಸ್ಥಳಾವಕಾಶ ನೀಡಲಾಗಿತ್ತು. ತನಿಖೆಗೆ ಆಗ್ರಹಿಸುತ್ತಿರುವವರೇ ಸ್ಥಳಕ್ಕೆ ಬರಲಿ. ಶಾಲೆ ಪಕ್ಕದ ಆವರಣವನ್ನೂ ತೋರಿಸುತ್ತೇನೆ' ಎಂದರು.

## ಪಾರ್ಕ್‌ಗಳನ್ನು ಸ್ಥಾಪನೆ • ಇಂಧನ ಸಚಿವ ಸುನಿಲ್ ಕುಮಾರ್

# 10 ಗಿಗಾವಾಟ್ ಹಸಿರು ವಿದ್ಯುತ್ ಉತ್ಪಾದನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಂದಿನ ಐದು ವರ್ಷಗಳ ಅವಧಿಯಲ್ಲಿ 10 ಗಿಗಾ ವಾಟ್‌ಗಳಷ್ಟು ಹಸಿರು ವಿದ್ಯುತ್ (ಸೌರ, ಜಲ ಮತ್ತು ಪವನ ಮೂಲಗಳಿಂದ) ಉತ್ಪಾದನೆಯ ಗುರಿ ಹೊಂದಲಾಗಿದ್ದು, ಇದಕ್ಕಾಗಿ ರಾಜ್ಯದ ಎಂಟು ಕಡೆಗಳಲ್ಲಿ ಹೈಬ್ರಿಡ್ ಪಾರ್ಕ್‌ಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಹಸಿರು ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಹತ್ತು ಗಿಗಾ ವ್ಯಾಟ್ ಉತ್ಪಾದನೆ ಗುರಿ ಸಾಧಿಸುವುದಕ್ಕೆ ಪೂರಕವಾಗಿ 10 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಹೈಬ್ರಿಡ್ ಪಾರ್ಕ್ ಸ್ಥಾಪನೆ ಮಾಡಲಾಗುವುದು. ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆಯ ಜತೆಗೆ ಸ್ಟೋರೇಜ್ ಸೌಲಭ್ಯವನ್ನು ಈ ಪಾರ್ಕ್ ಹೊಂದಿರುತ್ತದೆ. ಪಾವಗಡ ಸೋಲಾರ್ ಪಾರ್ಕ್‌ನಲ್ಲಿ ಸದ್ಯಕ್ಕೆ ಪ್ರಾಯೋಗಿಕವಾಗಿ 50 ಮೆಗಾವ್ಯಾಟ್ ಸ್ಟೋರೇಜ್ ಕೇಂದ್ರ ಆರಂಭಿಸಲಿದ್ದೇವೆ ಎಂದರು.

ಭವಿಷ್ಯದಲ್ಲಿ ಸೋಲಾರ್ ಪಾರ್ಕ್ ಮಾಡಲು ಮುಂದೆ ಬರುವ ಖಾಸಗಿಯವರಿಗೆ ಸ್ಟೋರೇಜ್ ವ್ಯವಸ್ಥೆ ಕಡ್ಡಾಯಗೊಳಿಸುತ್ತೇವೆ. ತುಮಕೂರು, ದಾವಣಗೆರೆ, ಚಿತ್ರದುರ್ಗ, ಗದಗ, ಬಾಗಲಕೋಟೆ, ಹಾವೇರಿ, ವಿಜಯಪುರದಲ್ಲಿ ಹೈಬ್ರಿಡ್ ಪಾರ್ಕ್ ಸ್ಥಾಪನೆ ಮಾಡಲಾಗುತ್ತದೆ. ಇದಕ್ಕಾಗಿ ಇಲಾಖೆ ವತಿಯಿಂದ ಸರ್ವೆಯನ್ನೂ ಮಾಡಲಾಗಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಕಲ್ಲಿದ್ದಲು ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಇದೆ. ಮಾರ್ಚ್ ತಿಂಗಳಲ್ಲಿ ಅತಿ ಹೆಚ್ಚು 14,800 ಮೆಗಾವ್ಯಾಟ್ ವಿದ್ಯುತ್‌ಗೆ ಬೇಡಿಕೆ ಇತ್ತು. ಅದನ್ನು ಸಮಸ್ಯೆಯಾಗದ ರೀತಿಯಲ್ಲಿ ನಿರ್ವಹಣೆ ಮಾಡಲಾಗಿದೆ. ಆರು ವರ್ಷದ ಬಳಿಕ ಎಲ್ಲಾ ಶಾಖೋತ್ಪನ್ನ ಸ್ಥಾವರಗಳು ಕಾರ್ಯಾರಂಭ ಮಾಡಿವೆ. ಕಲ್ಲಿದ್ದಲಿನ ಸಮಸ್ಯೆ ಆಗದಂತೆ ಕೇಂದ್ರ ಸರ್ಕಾರದ ಜತೆ ಸಂಪರ್ಕ ಇಟ್ಟುಕೊಂಡಿದ್ದೇವೆ. ಮಳೆ ಆಗಿರುವುದರಿಂದ ನೀರಾವರಿ ಪಂಪ್‌ಸೆಟ್‌ಗಳ ಮೇಲಿನ ಒತ್ತಡವೂ ಕಡಿಮೆ ಆಗಿದೆ ಎಂದು ಹೇಳಿದರು.

### ಸೌರ ಘಟಕ ಹಂಚಿಕೆ: ಶೀಘ್ರವೇ ದಾಖಲೆ ಬಿಡುಗಡೆ

'ಈ ಹಿಂದೆ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಏಕಪಕ್ಷೀಯವಾಗಿ ಹಂಚಿಕೆ ಮಾಡಿದವರು ಯಾರು ಎಂಬುದರ ದಾಖಲೆಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು' ಎಂದು ಸಚಿವ ಸುನಿಲ್ ಕುಮಾರ್ ಹೇಳಿದ್ದಾರೆ. ಕೆಲವೇ ವ್ಯಕ್ತಿಗಳಿಗೆ ಸಹಾಯ ಮಾಡಲು ಈ ಕೆಲಸ ಮಾಡಲಾಗಿದೆ. ಈ ಬಗ್ಗೆ ಸದ್ಯಕ್ಕೆ ತನಿಖೆ ನಡೆಯುತ್ತಿಲ್ಲ. ಆದರೆ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

# ಆಳ್ವಾಸ್‌ನ ಐವರಿಗೆ 625 ಅಂಕ

**ಮೂಡುಬಿದಿರೆ:** 'ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮೂಡುಬಿದಿರೆ ಆಳ್ವಾಸ್ ಪ್ರೌಢಶಾಲೆಯ ಐವರು ವಿದ್ಯಾರ್ಥಿಗಳು 625 ಅಂಕ ದಾಖಲಿಸಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿಯೇ ಉತ್ತಮ ಫಲಿತಾಂಶ ದಾಖಲಿಸಿದ ಶಾಲೆ ಎಂಬ ಹೆಗ್ಗಳಿಕೆಗೆ ಈ ಶಾಲೆ ಭಾಜನವಾಗಿದೆ' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಂದಿರಾ

ಕಲ್ಮೇಶ್ವರ್

ಸುದೇಶ್

ಶ್ರೇಯಾ

ಈರಯ್ಯ

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಇಂದಿರಾ ಅರುಣ್, ಕಲ್ಮೇಶ್ವರ್ ಪುಂಡಲೀಕ್ ನಾಯ್ಕ್, ಸುದೇಶ್ ದತ್ತಾತ್ರೇಯ, ಶ್ರೇಯಾ ಆರ್. ಶೆಟ್ಟಿ, ಈರಯ್ಯ ಶ್ರೀಶೈಲ 625 ಅಂಕ ದಾಖಲಿಸಿದ್ದಾರೆ. ಈ ವಿದ್ಯಾರ್ಥಿಗಳು ಆಳ್ವಾಸ್‌ನ ದತ್ತು ಸ್ವೀಕಾರ ಯೋಜನೆ ವಿದ್ಯಾರ್ಥಿಗಳಾಗಿದ್ದಾರೆ. ಕನ್ನಡ ಮಾಧ್ಯಮ ಶಾಲೆ ಒಂದೇ ಸಂಸ್ಥೆಯಿಂದ 5 ಮಂದಿ ವಿದ್ಯಾರ್ಥಿಗಳು ಈ ಸಾಧನೆ ಮಾಡಿರುವುದು ರಾಜ್ಯದಲ್ಲೆ ಪ್ರಥಮ ಎಂದು ತಿಳಿಸಿದರು.

ಸಂಸ್ಥೆಯ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಿಂದ 379 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ 100ರ ಸಾಧನೆ ಮಾಡಿದ್ದಾರೆ. 41 ವಿದ್ಯಾರ್ಥಿ 620ಕ್ಕಿಂತ ಅಧಿಕ ಅಂಕ ಪಡೆದಿದ್ದು, 141 ವಿದ್ಯಾರ್ಥಿಗಳು 600ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ ಎಂದು ತಿಳಿಸಿದರು.

## ಸ್ಮಾರಕಗಳ ನಡುವೆ ಸುತ್ತಾಟ

ಬುಧವಾರ ರಾತ್ರಿ ಸುರಿದ ಬಿರುಸಿನ ಮಳೆಗೆ ಹಂಪಿ ಕೃಷ್ಣ ದೇವಸ್ಥಾನದ ಆವರಣದಲ್ಲಿ ಅಪಾರ ನೀರು ಸಂಗ್ರಹಗೊಂಡಿದ್ದು, ಪ್ರವಾಸಿಗರು ಗುರುವಾರ ಅದರಲ್ಲೇ ಓಡಾಡಿ ಸ್ಮಾರಕಗಳನ್ನು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರ/ ರಾಚಯ್ಯ ಎಸ್. ಸ್ಥಾವರಿಮಠ

# ಸಹಾಯಕ ಪ್ರಾಧ್ಯಾಪಕರ ನೇಮಕ: 'ಒಎಂಆರ್' ತಿದ್ದಿ ಅಕ್ರಮ?

ಒಂದನೇ ಪುಟದಿಂದ

'ಬಂಧಿತ ಆರೋಪಿಗಳಾದ ನಾಗರಾಜ್ ಹಾಗೂ ಸೌಮ್ಯಾ, ಪ್ರಶ್ನೆಗಳ ಸೋರಿಕೆ ಬಗ್ಗೆ ಮಾತ್ರ ಮಾಹಿತಿ ನೀಡುತ್ತಿದ್ದಾರೆ. ಆದರೆ, ಬೇರೆ ಪ್ರಕಾರದಲ್ಲೂ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಹೀಗಾಗಿ, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿದಿದೆ' ಎಂದೂ ಹೇಳಿದರು.

ಮಾರ್ಚ್ 14ರಂದು ನಡೆದಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನ ಸೋರಿಕೆಯಾದ ಬಗ್ಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಅಭ್ಯರ್ಥಿಯೂ ಆಗಿದ್ದ ಅತಿಥಿ ಉಪನ್ಯಾಸಕಿ ಆರ್. ಸೌಮ್ಯಾ ಹಾಗೂ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಅವರನ್ನು ಬಂಧಿಸಿದ್ದರು.

ಪ್ರಶ್ನೆಗಳ ಸೋರಿಕೆ ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ತನಿಖೆಯಿಂದ ಲಭ್ಯವಾಗಿತ್ತು. ಹೆಚ್ಚಿನ ತನಿಖೆ ಅಗತ್ಯವಿರುವುದರಿಂದ ಪ್ರಕರಣವನ್ನು ಇತ್ತೀಚೆಗೆ ಸಿಸಿಬಿಗೆ ವರ್ಗಾಯಿಸಲಾಗಿದೆ.

## 'ಪರಿಷ್ಕರಣೆ ಪ್ರಹಸನ ನಿಲ್ಲಿಸಿ'

**ಬೆಂಗಳೂರು:** ಪಠ್ಯ ಪುಸ್ತಕಗಳ ಪರಿಷ್ಕರಣಾ ಕ್ರಮ ಮತ್ತು ವಿಷಯಗಳ ಆಯ್ಕೆಯಲ್ಲಿ ಗೊಂದಲವಿರುವುದರಿಂದ ಈಗಿನ ಪರಿಷ್ಕರಣೆ ಕೈಬಿಟ್ಟು, ಈ ಹಿಂದೆ ರಚನೆ ಆಗಿದ್ದ ಪಠ್ಯಪುಸ್ತಕಗಳನ್ನೇ ಯಥಾವತ್ತಾಗಿ ಮುಂದುವರಿಸಬೇಕು ಎಂದು ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ವಿ.ಪಿ. ನಿರಂಜನಾರಾಧ್ಯ ಒತ್ತಾಯಿಸಿದ್ದಾರೆ.



ನಿರಂಜನಾರಾಧ್ಯ

'ಅಗತ್ಯವಿದ್ದಲ್ಲಿ ಎಲ್ಲ ಮೂಲ ವಾರಸುದಾರರ ಜತೆ ವ್ಯಾಪಕ ಚರ್ಚೆ ನಡೆಸುವ ಮೂಲಕ ಮುಂದಿನ ಶೈಕ್ಷಣಿಕ ವರ್ಷಕ್ಕೆ (2023–24) ಪಠ್ಯಪುಸ್ತಕ ಪರಿಷ್ಕರಣೆಯನ್ನು ಮುಂದೂಡಬೇಕು. ಪಠ್ಯ ಪುಸ್ತಕದ ಪರಿಷ್ಕರಣಾ ಪ್ರಹಸನವನ್ನು ಇಲ್ಲಿಗೆ ನಿಲ್ಲಿಸಿ ಮಕ್ಕಳಿಗೆ ಆದಷ್ಟು ಶೀಘ್ರವಾಗಿ ಪಠ್ಯಪುಸ್ತಕಗಳನ್ನು ಒದಗಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಪರಿಷ್ಕರಣೆ ಕುರಿತಾಗಿ ಪಾಠ ಸೇರಿಸುವ, ಪಾಠ ತೆಗೆಯುವ ಆಟವನ್ನು ಆತಂಕದಿಂದ ಗಮನಿಸುತ್ತಿದ್ದೇವೆ. ಇದು ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಮಕ್ಕಳ ಪಾಲಕರನ್ನು ಎಲ್ಲಿಯೂ ಗಣನೆಗೆ ತೆಗೆದುಕೊಳ್ಳದೆ, ಕೇವಲ ರಾಜಕೀಯ ಸ್ವಾರ್ಥಕ್ಕಾಗಿ ಮಕ್ಕಳ ಭವಿಷ್ಯವನ್ನು ಬಲಿಕೊಡಲು ಹೊರಟಿರುವುದು ಖಂಡನೀಯ. ಮಕ್ಕಳ ಶಿಕ್ಷಣ ಸಂವಿಧಾನದ ಮೌಲ್ಯಗಳಿಗೆ ಅನುಗುಣವಾಗಿರಬೇಕು ಎಂದು ಹೇಳಿದ್ದಾರೆ.

ಮಕ್ಕಳು ಸ್ವಾತಂತ್ರ್ಯ ಚಳವಳಿಯ ನೈಜ ಇತಿಹಾಸವನ್ನು ಅರಿಯಬೇಕು. ಎಂದು ಹೇಳಿದ್ದಾರೆ.

# ಎಸ್ಸೆಸ್ಸೆಲ್ಸಿ: ದಾಖಲೆ ಫಲಿತಾಂಶ

ಒಂದನೇ ಪುಟದಿಂದ

'ಈ ಬಾರಿಯೂ ಜಿಲ್ಲಾವಾರು ರ‍್ಯಾಂಕಿಂಗ್ ನೀಡುವ ಪದ್ಧತಿಯನ್ನು ಕೈಬಿಡಲಾಗಿದೆ. ಜಿಲ್ಲೆಗಳ ನಡುವೆ ಸ್ಪರ್ಧೆ ಬೇಡ ಎನ್ನುವ ಉದ್ದೇಶದಿಂದ ಈ ಪದ್ಧತಿ ಕೈಬಿಡಲಾಗಿದೆ. ಗುಣಾತ್ಮಕ ಫಲಿತಾಂಶ ವಿಶ್ಲೇಷಣೆ ಆಧರಿಸಿ ಎ,ಬಿ, ಸಿ ಎಂದು ವಿಂಗಡಿಸಲಾಗಿದೆ. ಬೆಂಗಳೂರು ದಕ್ಷಿಣ ಮತ್ತು ಯಾದಗಿರಿ ಶೈಕ್ಷಣಿಕ ಜಿಲ್ಲೆಗಳು ಮಾತ್ರ ಬಿ ಗ್ರೇಡ್‌ನಲ್ಲಿವೆ. ಉಳಿದ ಎಲ್ಲ 32 ಶೈಕ್ಷಣಿಕ ಜಿಲ್ಲೆಗಳು ಎ ಗ್ರೇಡ್‌ನಲ್ಲಿವೆ. ಶೇ 75ರಿಂದ 100ರಷ್ಟು ಫಲಿತಾಂಶ ಪಡೆದ ಜಿಲ್ಲೆಗಳನ್ನು ಎ ಗ್ರೇಡ್‌ಗೆ ಹಾಗೂ ಶೇ 60ರಿಂದ ಶೇ 75ರಷ್ಟು ಫಲಿತಾಂಶ ಪಡೆದ ಜಿಲ್ಲೆಗಳನ್ನು ಬಿ ಗ್ರೇಡ್‌ಗೆ ಸೇರಿಸಲಾಗಿದೆ' ಎಂದು ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

'ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಪೈಕಿ 3,920 ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ100ರಷ್ಟು ಬಂದಿದೆ. 20 ಶಾಲೆಗಳಲ್ಲಿ ಶೂನ್ಯ ಫಲಿತಾಂಶ ಬಂದಿದೆ' ಎಂದು ಸಚಿವರು ಮಾಹಿತಿ ನೀಡಿದರು.

'ಶೂನ್ಯ ಫಲಿತಾಂಶ ಬಂದಿರುವ ಶಾಲೆಗಳು ಹಾಗೂ ಉತ್ತೀರ್ಣ ಪ್ರಮಾಣ ಕಡಿಮೆ ಇರುವ ಶಾಲೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಪರಿಹಾರೋಪಾಯಗಳನ್ನು ರೂಪಿಸಲಾಗುವುದು' ಎಂದರು.

'ಒಟ್ಟು 41,061 ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ ಕೃಪಾಂಕ ನೀಡಲಾಗಿದೆ. 35,931 ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ, 3940 ಮಂದಿಗೆ ಎರಡು ವಿಷಯಕ್ಕೆ ಹಾಗೂ ಉಳಿದವರಿಗೆ ಮೂರು ವಿಷಯಕ್ಕೆ ಕೃಪಾಂಕ ನೀಡಲಾಗಿದೆ' ಎಂದರು.

**ಫಲಿತಾಂಶ ಸೋರಿಕೆ:** ಸಚಿವರು ಫಲಿತಾಂಶ ಪ್ರಕಟವಾಗುವ ಮುನ್ನವೇ ಕೆಲ ವೆಬ್‌ಸೈಟ್‌ಗಳಲ್ಲಿ ಫಲಿತಾಂಶ ಪ್ರಕಟವಾಗಿದೆ ಎನ್ನುವ ದೂರುಗಳ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, 'ಫಲಿತಾಂಶ ಸೋರಿಕೆಯಾಗಲು ಸಾಧ್ಯವಿಲ್ಲ. ಒಂದು ವೇಳೆ ಫಲಿತಾಂಶ ಸೋರಿಕೆಯಾಗಿದ್ದರೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು' ಎಂದರು.

**ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳ ಉತ್ತಮ ಸಾಧನೆ:** ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಶೇ 80.61ರಷ್ಟು ಫಲಿತಾಂಶ ದೊರೆತಿದೆ.

ಒಟ್ಟು 4667 ವಿದ್ಯಾರ್ಥಿಗಳಲ್ಲಿ 3762 ಮಂದಿ ಉತ್ತೀರ್ಣರಾಗಿದ್ದಾರೆ.

### ಜೂನ್ 27ರಿಂದ ಪೂರಕ ಪರೀಕ್ಷೆ

ಜೂನ್ 27ರಿಂದ ಪೂರಕ ಪರೀಕ್ಷೆ ನಡೆಯಲಿದ್ದು, ಜುಲೈ 4ರಂದು ಮುಕ್ತಾಯವಾಗಲಿದೆ. ಪೂರಕ ಪರೀಕ್ಷೆಗೆ ಅನುತ್ತೀರ್ಣ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಲು ಮೇ 20ರಿಂದ 30ರವರೆಗೆ ಅವಕಾಶ ಕಲ್ಪಿಸಲಾಗಿದೆ.

'ಇಲಾಖೆಯ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಳ್ಳಬಹುದು. ವೇಳಾಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ' ಎಂದು ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

### ವಿದ್ಯಾರ್ಥಿಗಳಿಗೆ ಸೂಚನೆಗಳು

- ಮೌಲ್ಯಮಾಪನದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 20ರಿಂದ 30ರವರೆಗೆ ಅವಕಾಶ
- ಉತ್ತರ ಪತ್ರಿಕೆಗಳ ಮರು ಎಣಿಕೆ ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಮೇ 24ರಿಂದ ಜೂನ್ 6ರವರೆಗೆ ಅವಕಾಶ
- ಮರು ಎಣಿಕೆ, ಸ್ಕ್ಯಾನ್‌ಪ್ರತಿ ಹಾಗೂ ಮರುಮೌಲ್ಯಮಾಪನಕ್ಕೆ ಭೌತಿಕವಾಗಿ ಅರ್ಜಿ ಸಲ್ಲಿಸುವಂತಿಲ್ಲ.
- ಸಹಾಯವಾಣಿ: 080-23310075, 080-23310076, 080-23562267, 080-23561271

**ಮಾಧ್ಯಮವಾರು ಉತ್ತೀರ್ಣರಾದ ವಿದ್ಯಾರ್ಥಿಗಳ ಫಲಿತಾಂಶ**

| | | |
|---|---|---|
| ಕನ್ನಡ | 4,03,361 | 87.65% |
| ಇಂಗ್ಲಿಷ್ | 2,92,526 | 92.88% |
| ಉರ್ದು | 16,259 | 76.09% |
| ಮರಾಠಿ | 8,881 | 86.24% |
| ತೆಲುಗು | 160 | 80.40% |
| ತಮಿಳು | 39 | 50% |
| ಹಿಂದಿ | 105 | 79.55% |

**ಅತಿ ಹೆಚ್ಚು ಅಂಕ ಪಡೆದವರ ವಿವರ (ಶಾಲಾ ವಿದ್ಯಾರ್ಥಿಗಳು ಮಾತ್ರ)**

| | | |
|---|---|---|
| 145 625/625 | 472 625/623 | 706 625/621 |
| 309 625/624 | 615 625/622 | 773 625/620 |

**ವಿಷಯವಾರು ಗರಿಷ್ಠ ಅಂಕ ಪಡೆದವರು**

| | |
|---|---|
| ಪ್ರಥಮ ಭಾಷೆ | 19,125 |
| ದ್ವಿತೀಯ ಭಾಷೆ | 13,458 |
| ತೃತೀಯ ಭಾಷೆ | 43,126 |
| ಗಣಿತ | 13,683 |
| ವಿಜ್ಞಾನ | 6592 |

## ಬೊಮ್ಮಾಯಿ ನಾಳೆ ದಾವೋಸ್‌ಗೆ

**ಬೆಂಗಳೂರು:** ಭಾರತ ಬಹುದೊಡ್ಡ ಆರ್ಥಿಕ ಶಕ್ತಿ. ಈ ಅಂಶವನ್ನು ವಿಶ್ವಕ್ಕೆ ಪ್ರತಿಬಿಂಬಿಸಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ.

ದಾವೋಸ್‌ನಲ್ಲಿ ಇದೇ 23ರಿಂದ ನಡೆಯಲಿರುವ ವಿಶ್ವ ಆರ್ಥಿಕ ಶೃಂಗಸಭೆಗೆ ಸಂಬಂಧಿಸಿದಂತೆ ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ದಾವೋಸ್ ಶೃಂಗಸಭೆಯಲ್ಲಿ ಬೊಮ್ಮಾಯಿ ಭಾಗವಹಿಸಲಿದ್ದು, ಇದೇ 21ರ ರಾತ್ರಿ ಅವರು ಪ್ರಯಾಣ ಬೆಳಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಭಾರತಕ್ಕೆ ಹೂಡಿಕೆಯನ್ನು ಆಕರ್ಷಿಸುವುದಲ್ಲದೆ, ದೇಶದ ಪರಿಸರ ಮತ್ತು ವಾತಾವರಣವನ್ನು ಪ್ರತಿಬಿಂಬಿಸಬೇಕಿದೆ. ಭಾರತ ಮತ್ತು ಕರ್ನಾಟಕ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ನಮ್ಮ ಶಕ್ತಿ. ಪರಿಸರ ಮತ್ತು ಆರ್ಥಿಕತೆ ಜೊತೆಯಾಗಿಯೇ ಹೋಗುತ್ತವೆ. ಆದ್ದರಿಂದ ಈ ಅಂಶಗಳು ದಾವೋಸ್‌ನಲ್ಲಿ ಎತ್ತಿ ಹಿಡಿಯಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಸಭೆಯಲ್ಲಿ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಮುಂತಾದವರು ಇದ್ದರು.

# 'ನಾರಾಯಣಗುರು: ವಿಷಯ ಕೈಬಿಟ್ಟಿಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ್ ಅವರ ಭಾಷಣವನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿದರೆ ಕಾಂಗ್ರೆಸ್ ಮತ್ತು ಅದನ್ನು ವಿರೋಧಿಸುವವರಿಗೆ ಭಯ ಏಕೆ' ಎಂದು ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೆಡಗೇವಾರ್ ಅವರ ಭಾಷಣ ಸೇರಿಸಿದ್ದರಲ್ಲಿ ತಪ್ಪೇನಿದೆ? ಅವರ ಪ್ರೇರಣೆಯಿಂದಲೇ ಕೋಟ್ಯಂತರ ಜನ ರಾಷ್ಟ್ರ ನಿರ್ಮಾಣ ಮತ್ತು ದೇಶಪ್ರೇಮದ ಕಾರ್ಯದಲ್ಲಿ ತೊಡಗಿದ್ದಾರೆ. ಅವರ ಪ್ರೇರಣೆಯಿಂದಲೇ ನಾವೆಲ್ಲ ಕೆಲಸ ಮಾಡುತ್ತಿದ್ದೇವೆ. ಅದು ನಮ್ಮ ಬದ್ಧತೆ' ಎಂದು ಹೇಳಿದರು.

'ನಮ್ಮ ವಿದ್ಯಾರ್ಥಿಗಳಿಗೆ ಭಾರತೀಯರ ಶೌರ್ಯದ ಪಾಠ ಬೇಕೇ ಹೊರತು ಮೊಘಲರ ಇತಿಹಾಸವಲ್ಲ. ರಾಮಾಯಣ, ಮಹಾಭಾರತವನ್ನು ವಿರೋಧಿಸುವವರು ಕಾಂಗ್ರೆಸ್ಸಿಗರಿಗೆ ಬಹಳ ಬೇಗ ಹತ್ತಿರದವರಾಗುತ್ತಾರೆ. ಇನ್ನು ಈ ದೇಶದಲ್ಲಿ ರಾಮಾಯಣ ಹಾಗೂ ಮಹಾಭಾರತದ ಪರಂಪರೆ ವಿರೋಧಿಸುವವರ ಆಟ ನಡೆಯುವುದಿಲ್ಲ' ಎಂದು ಹೇಳಿದರು.

'ಪಠ್ಯದಿಂದ ನಾರಾಯಣ ಗುರುಗಳ ವಿಷಯವನ್ನು ಕೈಬಿಟ್ಟಿಲ್ಲ. ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದಾರೆ. ಈ ಬಗ್ಗೆ ನಾನೇ ಸ್ವತಃ ಶಿಕ್ಷಣ ಸಚಿವರು, ಸಂಬಂಧಪಟ್ಟ ಅಧಿಕಾರಿಗಳ ಜತೆ ಮಾತನಾಡಿದ್ದೇನೆ. ನಾರಾಯಣ ಗುರು, ಭಗತ್‌ಸಿಂಗ್ ಪಠ್ಯ ತೆಗೆದು ಹಾಕಿಲ್ಲ' ಎಂದರು. 'ಚಕ್ರವರ್ತಿ ಸೂಲಿಬೆಲೆಯವರ 'ತಾಯಿ ಭಾರತಿಗೆ ವಂದಿಸುವೆ' ಎಂಬ ಪಾಠವನ್ನು ಅಳವಡಿಸಲಾಗಿದೆ. ಇದನ್ನು ವಿರೋಧಿಸುವ ಕಾಂಗ್ರೆಸಿಗರು ಯಾರನ್ನು ವಂದಿಸುತ್ತಾರೆ' ಎಂದು ಸುನಿಲ್ ಪ್ರಶ್ನಿಸಿದರು.

### 'ಅರ್ಥ ತಿಳಿಯದೇ ಮಾತನಾಡುವವರು ರಾಷ್ಟ್ರ ವಿರೋಧಿಗಳು'

**ಮೈಸೂರು:** 'ಹತ್ತನೇ ತರಗತಿ ಪಠ್ಯಪುಸ್ತಕದಲ್ಲಿ ಅಳವಡಿಸಲಾದ ವಿಷಯದ ಆಳ ಮತ್ತು ಅರ್ಥ ತಿಳಿಯದೇ ಮಾತನಾಡುವವರು ರಾಷ್ಟ್ರ ವಿರೋಧಿಗಳು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಟೀಕಿಸಿದರು. 'ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ್ ಅವರ ಕುರಿತ ಪಾಠವನ್ನೇನೂ ಸೇರಿಸಿಲ್ಲ. ಆದರ್ಶ ವ್ಯಕ್ತಿಗಳು ಯಾರು ಎಂದು ಅವರು ಬರೆದ ಭಾಷಣವನ್ನು ಸೇರಿಸಲಾಗಿದೆ. ಯಾರು ಬರೆದಿದ್ದಾರೆ ಎಂಬುದು ಮುಖ್ಯವಲ್ಲ. ಅದರಲ್ಲಿರುವ ವಿಷಯ ಎಷ್ಟು ಮಹತ್ವದ್ದು ಎಂಬುದು ಮುಖ್ಯ' ಎಂದು ಪ್ರತಿಪಾದಿಸಿದರು.

### ಚರಿತ್ರೆ ಅಳಿಸಲು ಆಗಲ್ಲ: ಡಿಕೆಶಿ

**ಮಂಗಳೂರು:** 'ನಾರಾಯಣ ಗುರು, ಭಗತ್‌ಸಿಂಗ್ ಅವರ ಪಠ್ಯವನ್ನು ತೆಗೆಯುವ ಮೂಲಕ ಅವರ ಚರಿತ್ರೆಯನ್ನು ಮಸುಕಾಗಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದ್ದು, ಈ ಪಠ್ಯಗಳನ್ನು ಪುಸ್ತಕದಲ್ಲಿ ಪುನಃ ಸೇರಿಸುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ನಾರಾಯಣ ಗುರು ಪಠ್ಯಕ್ಕೆ ಕತ್ತರಿ' ಎಂದು 'ಪ್ರಜಾವಾಣಿ'ಯಲ್ಲಿ ಬಂದಿದೆ. ನಾರಾಯಣ ಗುರುಗಳು ರಾಜಕೀಯ ಮುಖಂಡರೇ? ಅವರ ಪಠ್ಯವನ್ನು ಕೈಬಿಡುವ ಅಗತ್ಯ ಏನಿತ್ತು' ಎಂದು ಪ್ರಶ್ನಿಸಿದ ಅವರು, 'ಅದೇ ಸಮುದಾಯದವರಾದ ವಿ. ಸುನಿಲ್‌ಕುಮಾರ್, ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಸ್ವಾಭಿಮಾನ ಇದ್ದರೆ, ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು. ಆದರೆ ಅವರಿಗೆ ಸಮಾಜ, ಸ್ವಾಭಿಮಾನಕ್ಕಿಂತ ಅಧಿಕಾರ ಮುಖ್ಯ' ಎಂದು ಟೀಕಿಸಿದರು.

ಶೋಷಿತ ವರ್ಗದವರು ನಮ್ಮ ಸಮಾನರಾಗಿ ಬೆಳೆಯುತ್ತಾರೆ ಎಂಬ ಅಸಹನೆಯಿಂದ ಬಿಜೆಪಿಯವರು ನಾರಾಯಣ ಗುರುಗಳ ಪಠ್ಯವನ್ನು ಪಠ್ಯಪುಸ್ತಕದಿಂದ ಕೈಬಿಟ್ಟಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

# ಕನ್ನಡದ ನೈತಿಕ ಪ್ರಜ್ಞೆ ಹಸನಾಗಿಸಿದ ನಾಗಭೂಷಣ

• ರಾಜೇಂದ್ರ ಚೆನ್ನಿ



ಜನನ: 01-02-1952
ಮರಣ: 19-05-2022

ನುಡಿ ನಮನ

ಶಿವಮೊಗ್ಗ: ಅನೇಕ ದಶಕಗಳಿಂದ ವಿಮರ್ಶೆ, ವಿಶ್ಲೇಷಣೆ, ವಾದ-ಪ್ರತಿವಾದ ಹಾಗೂ ಜಗಳಗಳ ಮೂಲಕ ಕನ್ನಡದ ನೈತಿಕ ಪ್ರಜ್ಞೆಯನ್ನು ಹಸನಾಗಿಡಲು ದಣಿವಿಲ್ಲದೆ ದುಡಿದ ಡಿ.ಎಸ್. ನಾಗಭೂಷಣರು ಇನ್ನಿಲ್ಲ.

ಶಾಶ್ವತವಾದ ವಿರೋಧ ಪಕ್ಷದಂತೆ ಅತಾರ್ಕಿಕತೆ, ಅಪ್ರಾಮಾಣಿಕತೆ ಹಾಗೂ ಅಜ್ಞಾನಗಳಿಂದ ಹದಗೆಡುತ್ತಿದ್ದ ಸಮುದಾಯದ ಸಂವೇದನೆಯನ್ನು ಎಚ್ಚರಿಸುವ ಧೀಮಂತ ಚಿಂತಕರಾಗಿದ್ದರು. ಅವರು ಲೋಹಿಯಾ ವಾದವನ್ನು ಪರ್ಯಾಯ ರಾಜಕೀಯ ಹಾಗೂ ನೈತಿಕ ಸಂಹಿತೆಯನ್ನಾಗಿ ರೂಪಿಸಿಕೊಂಡು ಲೋಹಿಯಾ ಮಾದರಿಯ ವ್ಯಕ್ತಿತ್ವವನ್ನು ತಮ್ಮದಾಗಿಸಿಕೊಂಡಿದ್ದರು. 1980 ರಿಂದಾಚೆಗಿನ ಜನಪರ ಚಳವಳಿಗಳ ಬುನಾದಿಯಾಗಿದ್ದ ಜಾತಿ ವಿರೋಧಿ ಸಮಾಜವಾದಿ ಆಶಯಗಳನ್ನು ನಂಬಿದ್ದರು. ಜಾಗತೀಕರಣದ ಹಿಂದಿನ ಬಂಡವಾಳಶಾಹಿಯ ರಾಕ್ಷಸ ಸ್ವರೂಪದ ಹಪಾಹಪಿಗಳನ್ನು ಖಂಡಿಸುತ್ತಾ, ಪರ್ಯಾಯ ಜೀವನಶೈಲಿಯನ್ನು ಅಳವಡಿಸಿಕೊಳ್ಳದೆ ವೈಚಾರಿಕ ವಿರೋಧದಿಂದ ಪರಿಹಾರವಲ್ಲವೆಂದು ವಾದಿಸಿದರು. ಇತ್ತೀಚಿನ ವರ್ಷಗಳಲ್ಲಿ ಸಾವಯವ ಕೃಷಿ, ಸರಳ ಜೀವನ, ಕೊಳ್ಳುಬಾಕ ಮನೋಭಾವದಿಂದ ಬಿಡುಗಡೆ ಇಂದಿಗೆ ಬೇಕಾದ ಮೌಲ್ಯಗಳೆಂದು ಪ್ರತಿಪಾದಿಸುತ್ತಿದ್ದರು. ಸಮಾಜವಾದದಲ್ಲಿ ಅವರಿಗಿದ್ದ ಅಪ್ಪಟ ವಿಶ್ವಾಸವು ಬೆರಗು ಹುಟ್ಟಿಸುವಂತಿತ್ತು. 'ಹೊಸ ಮನುಷ್ಯ' ಪತ್ರಿಕೆಯ ಅವರ ಸಂಪಾದಕೀಯ ಬರಹಗಳು ಒಂದು ಕಡೆಗೆ ನಮ್ಮ ಈ ಕಾಲದ ಸಮಗ್ರ ವಿಮರ್ಶೆ ಹಾಗೂ ಇನ್ನೊಂದೆಡೆ ಪರ್ಯಾಯ ಸಮಾಜದ ಹುಡುಕಾಟದ ಎಳೆಗಳನ್ನು ಜೋಡಿಸುತ್ತಾ ಒಂದು ಸಂವೇದನಾಶೀಲ ಓದುಗ ಸಮುದಾಯವನ್ನು ಕಟ್ಟಿದವು. 'ಹೊಸ ಮನುಷ್ಯ' ಪತ್ರಿಕೆಯ ಕೊನೆಯ ಸಂಚಿಕೆಯನ್ನು ಅಚ್ಚುಕಟ್ಟಾಗಿ ತಂದು ವಿದಾಯ ಹೇಳಿದ ನಾಗಭೂಷಣರಿಗೆ 'ಗಾಂಧಿಕಥನ'ಕ್ಕೆ ಕನ್ನಡ ಸಮುದಾಯ ನೀಡಿದ ಅದ್ಭುತ ಪ್ರತಿಕ್ರಿಯೆ ಸಾರ್ಥಕತೆಯನ್ನು ತಂದಿತ್ತು.

ಅದು ಕನ್ನಡದ ಸರ್ವಕಾಲಿಕ ಕ್ಲಾಸಿಕ್ ಕೃತಿ. ಅರ್ಥಪೂರ್ಣವಲ್ಲದ ಯಾವ ಕೆಲಸವನ್ನೂ ಅವರು ಒಪ್ಪುತ್ತಿರಲಿಲ್ಲ. 'ಲೋಹಿಯಾ'ದ ಮೂಲಕ ಕುಪ್ಪಳಿಯಲ್ಲಿ ಹಾಗೂ ಇತರ ಸ್ಥಳಗಳಲ್ಲಿ ಅವರೇ ನಿಂತು ನಡೆಸುತ್ತಿದ್ದ ಶಿಬಿರಗಳಲ್ಲಿ ಎಚ್ಚರದಿಂದ ಆಯ್ದ ವಿಷಯಗಳನ್ನು ಕುರಿತು ಗಂಭೀರ ಚರ್ಚೆ ನಡೆಸುತ್ತಿದ್ದರು. ಪ್ರಾಯಶಃ ಹರಿತವಾದ ಟೀಕೆಗಳ ಹೊರತಾಗಿಯೂ ಸಮುದಾಯದ ವಿವೇಕದಲ್ಲಿ ಅವರಿಗೆ ನಂಬಿಕೆಯಿತ್ತು. ವಾದ-ಪ್ರತಿವಾದ-ಸಂವಾದಗಳ ಮೂಲಕ ಪ್ರಜಾಪ್ರಭುತ್ವದ ಉಳಿವಿಗೆ ಆವಶ್ಯಕವಾದ ಒಂದು ಸಾರ್ವಜನಿಕ ವಲಯವನ್ನು (Public sphere) ಕಟ್ಟುವುದರ ಭಾಗವಾಗಿ ಅವರ ಬರಹ ಹಾಗೂ ಶಿಬಿರಗಳು ಇದ್ದವು.

ಕನ್ನಡವೇ ಅವರಿಗೆ ಆದ್ಯತೆಯಾಗಿತ್ತು. ಕನ್ನಡ ಮಾಧ್ಯಮ ಶಿಕ್ಷಣಕ್ಕಾಗಿ ಒತ್ತಾಯಿಸಿ ತಮಗೆ ಬಂದ ರಾಜ್ಯೋತ್ಸವ ಪ್ರಶಸ್ತಿ ತಿರಸ್ಕರಿಸಿದ್ದರು. ಇಂಗ್ಲಿಷ್ ಮತ್ತು ಆಧುನಿಕತೆಯ ಕಡೆಗೆ ಒಲವಿದ್ದವರು ಎಂದು ನಮ್ಮ ಜೊತೆ ಜಗಳವಾಡುತ್ತಿದ್ದರು. ಅವರು ಪರಿಭಾವಿಸಿದ ಕನ್ನಡವು ಬರಿ ಭಾಷೆಯಾಗಿರಲಿಲ್ಲ; ಒಂದು ಸ್ವಯಂಪೂರ್ಣ ನಾಗರಿಕತೆ, ಸಂಸ್ಕೃತಿಯಾಗಿತ್ತು.

ಅವರು ಸಾಹಿತ್ಯದ ಅತ್ಯಂತ ಸೂಕ್ಷ್ಮಗ್ರಾಹಿ ಓದುಗರಾಗಿದ್ದರು. ಇತ್ತೀಚೆಗೆ ಅವರು ಬರೆದ ಜಯಂತ ಕಾಯ್ಕಿಣಿ ಕತೆಗಳ ವಿಮರ್ಶೆ, ವೈದೇಹಿ ಬರಹದ ವಿಮರ್ಶೆ ಶ್ರೇಷ್ಠ ವಿಮರ್ಶೆಯ ಮಾದರಿಗಳು. ಕಾವ್ಯವಂತೂ ಅವರಿಗೆ ಬಹುದೊಡ್ಡ ಪ್ಯಾಷನ್ ಆಗಿತ್ತು. ವಿಮರ್ಶೆ ಹಾಗೂ ಪ್ರತಿರೋಧಗಳು ದೇಶದ್ರೋಹವೆಂದು ಪರಿಗಣಿತವಾದ ಈ ಕಾಲದಲ್ಲಿ ನಾಗಭೂಷಣರು ಸಮಜಾಯಿಷಿಯೇ ಇಲ್ಲದೆ ಸಮಗ್ರ ಸಾಂಸ್ಕೃತಿಕ ಪ್ರತಿರೋಧದ ಉಜ್ವಲ ಸಂಕೇತವಾಗಿ ಕಾಣುತ್ತಾರೆ.

## ಡಿ.ಎಸ್. ನಾಗಭೂಷಣ ನಿಧನ

ಒಂದನೇ ಪುಟದಿಂದ

ಗಮನ, ಅನೇಕ, ಈ ಭೂಮಿಯಿಂದ ಈ ಆಕಾಶದವರೆಗೆ, ಕುವೆಂಪು ಸಾಹಿತ್ಯದರ್ಶನ, ಲೋಹಿಯಾ ಸಮಾಜವಾದದ ದರ್ಶನ, ಬೇರು ಬಿಳಿಲು, ಇದು ಭಾರತ ಇದು ಭಾರತ, ಇಲ್ಲಿ ಯಾವುದೂ ಅಮುಖ್ಯವಲ್ಲ, ಕನ್ನಡ-ಕರ್ನಾಟಕದ ಕಥಾಸಂಕಲನಗಳು ಅವರ ಪ್ರಮುಖ ಕೃತಿಗಳು. ಅವರ 'ಗಾಂಧಿ ಕಥನ' ಕೃತಿ ಈಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪುರಸ್ಕೃತವಾಗಿತ್ತು. ಕೆ.ರಾಮದಾಸ್, ಕಡಿದಾಳು ಶಾಮಣ್ಣ ಸೇರಿದಂತೆ ಹಲವರ ಅಭಿನಂದನಾ ಗ್ರಂಥ ಹೊರತಂದಿದ್ದಾರೆ. ರಸಿಕ ರುದ್ರ ತಪಸ್ವಿ ಲೋಹಿಯಾ, ಸಮಾಜವಾದದ ಸಾಲುದೀಪಗಳು ಸೇರಿದಂತೆ ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ.

ಅವರ ಸಂಪಾದಕತ್ವದಲ್ಲಿ ಸಮಾಜವಾದಿ ಮಾಸಿಕ 'ಹೊಸ ಮನುಷ್ಯ' ಪ್ರಕಟಗೊಳ್ಳುತ್ತಿತ್ತು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸಮಾಜವಾದಿ ಚಿಂತನೆಯ ಹಲವು ಕಾರ್ಯಾಗಾರಗಳನ್ನು ಆಯೋಜಿಸಿದ್ದರು. ಅವರಿಗೆ ಪತ್ನಿ, ಕವಯಿತ್ರಿ ಸವಿತಾ ನಾಗಭೂಷಣ ಇದ್ದಾರೆ. ಮೃತರ ಅಂತ್ಯಸಂಸ್ಕಾರ ಶಿವಮೊಗ್ಗದ ರೋಟರಿ ಚಿತಾಗಾರದಲ್ಲಿ ನೆರವೇರಿತು.

## ಬಹುಭಾಷಾ ನಟ ಚಲಪತಿ ಚೌದ್ರಿ ನಿಧನ

ರಾಯಚೂರು: ಬಹುಭಾಷಾ ನಟ ಕ್ಯಾಪ್ಟನ್ ಚಲಪತಿ ಚೌದ್ರಿ (67) ವಯೋಸಹಜ ಅನಾರೋಗ್ಯದಿಂದ ಬುಧವಾರ ತಡರಾತ್ರಿ ನಿಧನರಾದರು.

ನಗರದ ಕೆ.ಎಂ. ಕಾಲೊನಿಯಲ್ಲಿ ವಾಸವಿದ್ದ ಚಲಪತಿ ಅವರನ್ನು ಅನಾರೋಗ್ಯದ ಕಾರಣ ಇಲ್ಲಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಕನ್ನಡ, ಹಿಂದಿ, ತೆಲುಗು ಸೇರಿದಂತೆ ವಿವಿಧ ಭಾಷೆಗಳ ಚಲನಚಿತ್ರಗಳಲ್ಲಿ ಹಾಗೂ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ನಗರದ ಬಿಆರ್‌ಬಿ ವೃತ್ತದ ಪಕ್ಕದ ರುದ್ರಭೂಮಿಯಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

## 'ಸಾವರ್ಕರ್ ಬಿಂಬಿಸಲು ಒತ್ತಡ'

ಗೌರಿಬಿದನೂರು: ತಾಲ್ಲೂಕಿನ ವಿದುರಾಶ್ವತ್ಥದ ವೀರಸೌಧದ ಚಿತ್ರಪಟ ಗ್ಯಾಲರಿಯಲ್ಲಿರುವ ಚಿತ್ರಗಳು ಈಗ ಆರ್‌ಎಸ್‌ಎಸ್ ಮತ್ತು ವಿದುರಾಶ್ವತ್ಥದ ಸ್ವಾತಂತ್ರ್ಯ ಸ್ಮಾರಕ ಸಮಿತಿಯ ನಡುವೆ ಜಟಾಪಟಿಗೆ ಕಾರಣವಾಗಿದೆ.

ಆರ್‌ಎಸ್‌ಎಸ್, ಬಜರಂಗದಳ ಮತ್ತು ವಿಎಚ್‌ಪಿ ಮುಖಂಡರು ಪದೇ ಪದೇ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ, 'ವಿದುರಾಶ್ವತ್ಥಕ್ಕೆ ರಕ್ಷಣೆ ಕೊಡಿ' ಎಂದು ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಸ್ವಾತಂತ್ರ್ಯ ಸ್ಮಾರಕ ಸಮಿತಿಯ ಗಂಗಾಧರಮೂರ್ತಿ ಹಾಗೂ ಸದಸ್ಯರು ಮನವಿ ನೀಡಿದ್ದಾರೆ.

ಇಲ್ಲಿನ ವೀರಸೌಧದದಲ್ಲಿ ಚಿತ್ರಪಟ ಗ್ಯಾಲರಿ ಇದೆ. ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಮೆಲುಕು ಹಾಕುವ ಚಿತ್ರಗಳು ಗ್ಯಾಲರಿಯಲ್ಲಿವೆ. 'ಬಲಪಂಥೀಯ ರಾಜಕಾರಣ; ಹಿಂದೂ ಕೋಮುವಾದ; ಹಿಂದೂ ಮಹಾಸಭಾ; ಆರ್‌ಎಸ್‌ಎಸ್' ಎನ್ನುವ ಚಿತ್ರವಿದೆ. ಗಾಂಧಿ ಹತ್ಯೆ ಮತ್ತು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿನ ಚಿತ್ರಗಳನ್ನು ಗ್ಯಾಲರಿಯಲ್ಲಿ ಕಾಣಬಹುದು. ಗಾಂಧಿ ಹತ್ಯೆಗೆ ಸಂಬಂಧಿಸಿದಂತೆ ಇವರು ಚಿತ್ರಗಳಲ್ಲಿ ಸಾರ್ವಕರ್ ಅವರ ಚಿತ್ರವೂ ಇದೆ.

ಹಿಂದೂಕೋಮುವಾದಕ್ಕೆಸಂಬಂಧಿಸಿದ ಇರುವ ಚಿತ್ರದಿಂದ ಆರ್‌ಎಸ್‌ಎಸ್ ಹೆಸರು ತೆಗೆಯಬೇಕು ಮತ್ತು ಸ್ವಾತಂತ್ರ್ಯ ಹೋರಾಟ ಸಂಬಂಧ ಸಾವರ್ಕರ್ ಚಿತ್ರಗಳನ್ನು ಗ್ಯಾಲರಿಯಲ್ಲಿ ಅಳವಡಿಬೇಕು ಎಂದು ಆರ್‌ಎಸ್‌ಎಸ್ ಆಗ್ರಹಿಸುತ್ತಿದೆ.

20 ದಿನಗಳಲ್ಲಿ ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕಾರ್ಯಕರ್ತರು ನಾಲ್ಕು ಬಾರಿ ಗ್ಯಾಲರಿಗೆ ಭೇಟಿ ನೀಡಿ ಈ ಒತ್ತಡ ಹೇರಿದ್ದಾರೆ.

## ಆಕ್ಷೇಪಾರ್ಹ ಪೋಸ್ಟ್; ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಉತ್ತರಪ್ರದೇಶದ ವಾರಾಣಸಿಯ ಜ್ಞಾನವಾಪಿ ಮಸೀದಿಯಲ್ಲಿ ಶಿವಲಿಂಗ ಪತ್ತೆ ಆಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಮಾಡಿರುವ ಆರೋಪದ ಮೇಲೆ ಆರೀಫ್ ಬೇಗ್ ಎಂಬುವವರನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯನ್ನು ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಕಳಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೀಫ್ ಬೇಗ್ ಎಂಬ ವ್ಯಕ್ತಿ ಆಕ್ಷೇಪಾರ್ಹ ಸಂದೇಶವನ್ನು ಫೇಸ್‌ಬುಕ್ ಪುಟದಲ್ಲಿ ಹರಿಬಿಟ್ಟಿದ್ದಾರೆ' ಎಂದು ಆಕ್ರೋಶಗೊಂಡಿದ್ದ ಹಿಂದೂ ಯುವಕರು ಬುಧವಾರ ತಡರಾತ್ರಿವರೆಗೂ ಸದಲಗಾ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿ, ಆರೋಪಿಯನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದ್ದರು. ಈ ಕುರಿತು ಸದಲಗಾ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ದೂರು ದಾಖಲಿಸಿದ್ದರು.


ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್‌ಪ್ರಕಟಣೆ ಸಂಖ್ಯೆ: 03/2022-23 ದಿನಾಂಕ :17.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಒಳಪಡುವ ಈ ಕೆಳಗೆ ವಿವರಿಸಿರುವ ಕಾಮಗಾರಿಗೆ ಇ-ಪ್ರೋಕ್ ಮೂಲಕ ಅರ್ಹ ಗುತ್ತಿಗೆದಾದರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW- 4ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಅಂದಾಜು ಮೊತ್ತ ರೂ.500.00 ಲಕ್ಷಗಳು ಆಗಿರುತ್ತವೆ.

1. ಕ್ರಮ ಸಂಖ್ಯೆ 1ರ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:27.06.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರ್‌ನ್ನು ದಿನಾಂಕ:28.06.2022 ರಂದು ಸಂಜೆ4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ – ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು



ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಇ-ಪ್ರೊಕ್ಯೂರ್‌ಮೆಂಟ್ ಮೂಲಕ

45 Days Pre-Qualification Tender Notification

No. R/KVAFSU/eproc.78/G&S/2021-22 Dt.: 31.03.2022

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇವರು **ಲಸಿಕೆ ಉತ್ಪಾದನಾ ಪ್ರಯೋಗಾಲಯಗಳು 4 ಮತ್ತು 5ರಲ್ಲಿ ಪರಿಷ್ಕೃತ ರೇಖಾಚಿತ್ರಗಳಂತೆ ಮಾರ್ಪಾಡು ಮಾಡಲು** ಇ-ಆಡಳಿತ ಇಲಾಖೆಯ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಟೆಂಡರನ್ನು ಏಕ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಮೇಲಿನ ಟೆಂಡರಿಗಿಟ್ಟ **ಅಂದಾಜು ಮೊತ್ತ ರೂ. 730.00 ಲಕ್ಷಗಳು.** ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ: **01.07.2022ರ ಸಂಜೆ 5:00 ಗಂಟೆವರೆಗೆ.** ಹೆಚ್ಚಿನ ವಿವರಗಳಿಗೆ ಅಧಿಕೃತ ವೆಬ್‌ಸೈಟ್: **https://eproc.karnataka.gov.in** ಮುಖಾಂತರ ದಿನಾಂಕ: **17.05.2022** ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಕಛೇರಿಯ ವೇಳೆಯಲ್ಲಿ ವಿವರಗಳನ್ನು ಪಡೆಯಬಹುದು.

ಸಹಿ/-
ಇಂಜಿನಿಯರ್ ರಾಮಪ್ಪ. ಎಚ್. ಕೊರವರ, ಆಸ್ತಿ ಅಧಿಕಾರಿ(ಪ್ರಭಾರಿ), KVAFSU, ಬೀದರ-585226. ದೂ.: 9483969344

ವಾಸಾಸಂಇ/ವಾಪ್ರ/ಎಲ್‌ಸಿ/572/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಛೇರಿ,
ಮೌಲಾನಾ ಆಜಾದ್ ಭವನ, ಹೊಸಪೇಟೆ ರಸ್ತೆ ಕೊಪ್ಪಳ ಜಿಲ್ಲೆ ಕೊಪ್ಪಳ.
ದೂ.ಸಂ:-08539-225070. E-mail-domwkoppal@gmail.com

ಸಂ/ಜಿಅಅಕಇಕೊ/ಆ.ಟೆ/ವಿನಿ-01/ಸಿಆರ್-/2022-23 ದಿನಾಂಕ : 17.05.2022

-:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ::-

ವಿಷಯ: 2022-23 ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ವಸತಿ ಕಾಲೇಜು & ವಸತಿ ನಿಲಯಗಳಿಗೆ ಆಹಾರ ಮತ್ತು ಇತರೆ ಸಾಮಗ್ರಿಗಳ ಸರಬರಾಜು ಮಾಡಲು ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

2022-23 ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ವಸತಿ ಕಾಲೇಜು & ವಸತಿ ನಿಲಯಗಳಿಗೆ ಆಹಾರ ಹಾಗೂ ಇತರೆ ಸಾಮಗ್ರಿಗಳ ಖರೀದಿಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರ ಅಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ ಅಲ್ಪಾವಧಿ ಇ-ಟೆಂಡರ್ ಕರೆಯಲಾಗಿದೆ.

| | | ಕೊಪ್ಪಳ & ಕುಷ್ಟಗಿ ತಾಲೂಕು | ಗಂಗಾವತಿ ತಾಲೂಕು | ಯಲಬುರ್ಗಾ ತಾಲೂಕು |
|---|---|---|---|---|
| 1 | ಟೆಂಡರ್ ಪ್ರಕಟಣೆ ದಿನಾಂಕ | 18.05.2022 | | |
| 2 | ಟೆಂಡರ್‌ಗಿಟ್ಟ ಮೊತ್ತ | 284.61 ಲಕ್ಷ | 198.74ಲಕ್ಷ | 192.63ಲಕ್ಷ |
| 3 | ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ | 17.06.2022 @ 5-30 PM | | |
| 4 | ಪ್ರಿ-ಬಿಡ್ ಮೀಟಿಂಗ್ | 31.05.2022, ಬೆ:11.00 ಗಂಟೆಗೆ | | |
| 5 | Technical Bid ನ್ನು ತೆರೆಯುವ ವೇಳೆ ಮತ್ತು ದಿನಾಂಕ | 20.06.2022 ಬೆಳಿಗ್ಗೆ 11.00 ಗಂಟೆಗೆ | | |
| 6 | ಆಹಾರ ಸಾಮಗ್ರಿಗಳ ಮಾದರಿಗಳನ್ನು ಸಲ್ಲಿಸುವ ದಿನಾಂಕ (ತಾಂತ್ರಿಕ ಬಿಡ್‌ನಲ್ಲಿ ಉತ್ತೀರ್ಣರಾದವರು ಮಾತ್ರ ಸಲ್ಲಿಸುವುದು) | ತಾಂತ್ರಿಕ ಬಿಡ್‌ನಲ್ಲಿ ಉತ್ತೀರ್ಣರಾದವರಿಗೆ ಮಾದರಿ ಸ್ಯಾಂಪಲ್‌ಗಳನ್ನು ಸಲ್ಲಿಸಲು ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು. | | |
| 7 | ಆರ್ಥಿಕ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ | 30.06.2022, ಬೆ:11-00 ಗಂಟೆಗೆ | | |
| 8 | ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ | 4.26 ಲಕ್ಷ | 2.98 ಲಕ್ಷ | 2.88 ಲಕ್ಷ |
| 9 | ಸಾಲ್ವೆನ್ಸಿ ಸರ್ಟಿಫಿಕೇಟ್ | 85.83 ಲಕ್ಷ | 59.62 ಲಕ್ಷ | 57.78 ಲಕ್ಷ |
| 10 | ಟೆಂಡರ್ ತೆರೆಯುವ ಸ್ಥಳ | ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ. ಮೌಲಾನಾ ಆಜಾದ್ ಭವನ ಹೊಸಪೇಟ್ ರಸ್ತೆ ಕೊಪ್ಪಳ. Ph : 08539-225070. e-mail: domwkoppl@gmail.com | | |

ಟೆಂಡರ್ ತಪಶೀಲುಗಳಿಗಾಗಿ NEFT(Online) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು www.eproc.karnataka.gov.in ನಲ್ಲಿ ನೋಡಬಹುದು.

ಸಹಿ/- ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ.

ವಾ.ಸಾ.ಇ./ಕೊಪ್ಪಳ/92/2022-23/ದೇಶಪಾಂಡೆ ಪಬ್ಲಿಸಿಟಿ



NOTICE INVITING APPLICATIONS FOR ALLOTMENT OF VARIOUS REGIMENTAL SHOPS AT TRAINING BATTALION-I, MADRAS ENGINEER GROUP & CENTRE, BANGALORE

1) Commanding Officer, Training Battalion-I, Madras Engineer Group & Centre, Bangalore -42 invites applications for allotment of various Regimental shops on rental basis at this Battalion. Shops would be allotted to the highest bidder based on **undermentioned priority in descending order** of applications :-
 (a) War widows/widows of defence personnel killed while on duty.
 (b) Disabled Soldiers (Battle casualty).
 (c) Ex-Servicemen.
 (d) Spouse / widow of ex-servicemen.
 (e) Civilians
2) Details of shops are as under :-

| Ser. No. | Building No. | Category of Shop | Area in square feet |
|---|---|---|---|
| (a) | P-260/1 | (General Store) | 400 |
| (b) | P-260/2 | (Tailor Shop) | 400 |
| (c) | P-260/3 | (Tailor Shop) | 168 |
| (d) | P-260/4 | (General Store) | 315 |
| (e) | P-260/6 | (General Store) | 190 |
| (f) | P-260/5 | (General Store) | 315 |
| (g) | P-260/7 | (Mobile Sales, Service and Recharge) | 400 |
| (h) | P-260/8 | (Photo Studio) | 400 |
| (j) | P-260/9 | (STD/ Xerox/ Lamination) | 90 |
| (k) | P-108/ | (Cafeterial/ Restaurant/ Eatery Shop) | 10320 |

3) The license fees and rebate will be intimated during collection of application form.
4) Application forms will be available at 'Quarter Master Branch of this Battalion. The same may be obtained by drawing DD on all working days :-
 (a) **Issue of Application form to be collected by applicants. : 20 May 2022 to 28 May 2022 (0900h to 1300h)**
 (b) **Last Date of receipt of application : 11 June 2022 (upto 1100h)**
 (c) **DO in favour of : REGT FUND ACCOUNT TB-I payable at SBI MEG & Centre, Bangalore**
 (d) **DD Amount: 500/- (refundable to those, who will not be allotted shop & will be adjusted towards security deposit of those who will be allotted shop).**
5) Allotment of shop for the period of 3 years, not exceeding 5 years.
6) Application Form are available at (a) Reception of East Gate, TB-I (b) SPG gate, (c) QM Branch, TB-I.



ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು – 560070.

ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/07/2022-23 ದಿನಾಂಕ: 17.05.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ನೋಟೀಸ್

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 03.06.2022ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು,
ಪ.ರಾ.ಇ.ವಿಭಾಗ, ಬೆಂ.ನ, ಬೆಂಗಳೂರು

DIPR/CP/576/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ
ಫೋನ್: 08182-254832 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಟೆಂಡರ್ ಪ್ರಕಟಣೆ ಸಂಖ್ಯೆ :
1)No.EE/UTPDN/SMG/KNNL/PB-3/T.N.NO.03/2022-23 Dated: 17.05.2022.
2)No.EE/UTPDN/SMG/KNNL/PB-3/T.N.NO.04/2022-23 Dated: 17.05.2022.
3)No.EE/UTPDN/SMG/KNNL/PB-3/T.N.NO.05/2022-23 Dated: 17.05.2022.
4)No.EE/UTPDN/SMG/KNNL/PB-3/T.N.NO.06/2022-23 Dated: 17.05.2022.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 2700 ಅಡಿಯಲ್ಲಿ ಬರುವ ಆರ್ & ಎಂ ಉಬ್ರಾಣಿ-ಅಮೃತಾಪುರ ಏತ ನೀರಾವರಿ ಮತ್ತು **UTP R & Dams Colony Buildings IB etc** ಬರುವ ಒಟ್ಟು 03 ಕಾಮಗಾರಿಗಳಿಗೆ ಮತ್ತು 4701 ಅಡಿಯಲ್ಲಿ ಬರುವ ತುಂಗಾ ಮೇಲ್ದಂಡೆ ಯೋಜನೆ ಬರುವ 01 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ **ಮೊತ್ತ ರೂ. 171.94, 7.93, 55.07 ಮತ್ತು 49.96 ಲಕ್ಷಗಳು**. (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ **ದಿನಾಂಕ: 21.05.2022, at 5.30 P.M.** (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ: 17.05.2022** ರಿಂದ **24.05.2022** ಸಾಯಂಕಾಲ 5.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)

ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ **https://eproc.karnataka.gov.in/** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ವಾ.ಸಾ.ಸಂ.ಇ./ಶಿ/ಸಂ.108-05 ಝೇಂಕಾರ್/2022-23

ಸಹಿ/- ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ., ತುಂ.ಮೇ.ಯೋ. ವಿಭಾಗ, ಶಿವಮೊಗ್ಗ



DIRECTORATE OF MUNICIPAL ADMINISTRATION
9th Floor, Vishweshwaraiah Tower, Dr. B.R. Ambedkar Veedhi
Bengaluru-560 001, Ph: 080-22866302/22867172

No. 20934/DMA/10/FNCE/2017-18 Date: 16.05.2022

NOTICE

Director, Directorate of Municipal Administration, Bengaluru invites application for the effective implementation of central sponsored **AMRUT** (Atal Mission for Rejuvenation and Urban Transformation) Scheme for the below mentioned post from the eligible candidates on contractual basis.

| Designation | No.of Post | Qualification | Remuneration |
|---|---|---|---|
| Municipal Finance Expert (AMRUT) | 1 | MBA in Finance with any Degree, 3 year experience in Government Sector field is must, Knowledge of Government / Public Sector Accounting System such as PFMS and other online Accounting Applications with Mandate Tally ERP, Fund Based Double Entry Accounting System (FBDEAS) well versed with MS Excel, MS Power point, Data Compilations and Field related travel is must for Implementation of Govt Accounting Applications. | Rs. 40,000/- (Consolidated) |

**Other Terms:** Knowledge of Govt Sector Accounting System and well versed in MS office Package / Tally ERP / Fund Based Double Entry Accounting System (FBDEAS) / Other Govt / Public Sector Accounting Applications, writing and Speaking proficiency in English and Kannada language. Eligible candidates may send their resume mentioning post applied in the prescribed Application (**www.municipaladmn.gov.in**) with self certified Complete Personal information with Contact details, educational qualification Documents, Computer literacy and Tally ERP Certificates and relevant work experience certificates by hand or post to; **Joint Director (Finance), Directorate of Municipal Administration, 2nd Floor, Podium Block, V.V. Tower, Dr. B.R. Ambedkar Veedhi, Bengaluru - 560001.** For more details browse **www.municipaladmn.gov.in** The candidates should send their Application on or before **27.05.2022 by 5.00 PM.**

**Note:** All the above-mentioned requisite documents of scanned copies must be sent to the **finance.dmablr@gmail.com**

**Director, DMA reserves the right to reject any or all the applications without assigning any reason.**

Sd/- Director
Directorate of Municipal Administration

DIPR/CP/578/Yakshi/2022-23



THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2022-23 NOTICE FOR PRIVATE SALE OF GOLD 18/05/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 15-06-2022 as shown below:

**Br. Arsikere: Near LIC office, B H Road, Arsikere, Hassan- 573103, Ph NO.- 08174230125 :-** 20306400013352,20306400011596,20306400014657,20306400015639,20306400013634,20306400013253,20306400011927,20306400011950,20306400015886,20306400015696,20306400015621,20306400015522,20306400015290,20306400015282,20306400015258,20306400015241,20306400015266,20306400015274,20306400015340,20306400014418,20306400014905,20306400013709,20306400014541,20306400015431,20306400014681,20306400014673,20306400014020,20306400015308,20306400015324,20306400014335,20306400012792,20306400015332,20306400013329,20306400014236,20306400015043,20306400015688,20306400015225,20306400011125,20306400011414,20306400012024. **Br: Bangalore/St Marks Road :No.9,Halcyon Complex,St.Marks Road,Bangalore-560 001 Ph No.08022074697:-** 11046400006623,11046100110808,11046100110592,11046400006904,11046100109453,11046100110790,11046100110618,11046100110261,11046400006821,11046400006623,11046100109909,11046100110279,11046400005427,11046100110626,11046100110725,11046100110253,11046400006599,11046100110956,11046100109057,11046400006938,11046100109453,11046100110188,11046100107895,11046400006813,11046100110766,11046100110600,11046100110196,11046100110550.

**Br. Bangalore/Gandhi Nagar: P B No. 9981, No. 24, 2Nd Cross, Gandhi Nagar, Bangalore, Bangalore Urban, Karnataka, 560 009, Ph No. 080-22385208:-** 11896100128857,11896100131000,11896400019046,11896400019053,11896400015986,11896400019384,11896400019343,11896400019350,11896100131422,11896100131414,11896400019590,11896400019608,11896400016190,11896400019673,11896400019665,11896400019640,11896400019715,11896100130416,11896100130390,11896100130408,11896100130432,11896100130648,11896200035853,11896400020671,11896100130424,11896400021042,11896400019772,11896400021018,11896100132321,11896400021000,11896400021026,11896400020531,11896400020994,11896400020689,11896400021034,11896400015978.

**Br. Bangalore/Rajaji Nagar: No. 60/60, Raj Chambers, Dr. Rajkumar Road, 2nd Block, Rajaji Nagar, Bangalore, Bangalore Urban, Karnataka, 560 010, Ph No. 080-23522007 :-** [illegible]

**Br. BGR/RTNagar: No. 20, 1st Main Road, 'B' Bus Station, Ganga Nagar, R T Nagar P O - 560 032, Ph: 080-23434258 :-** [illegible]

**Br. BGR/Indiranagar: 315/1, 100 Feet Road, Opp Post Office, Indiranagar, Bangalore - 560 038, Ph no: 080-25212341 :-** [illegible]

**Br. Bangalore/Banaswadi: No. 13, Banaswadi Main Road, Bangalore - 560 043, Phone: 080-25420700 :-** [illegible]

**Br. Bangalore/Krishnarajapuram: Vsr Complex, Old Madras Road, Krishnarajapuram, Bangalore Urban- 560 036 Ph No: 080-25619070 :-** [illegible]

**Br. BGR/Jalahalli: 17/1, SAWITHRI, S M ROAD, JALAHALLI WEST, 560 015, PH: 080-28372201:-** [illegible] 15826100536979,15825600001252,15826100540013,15826100553735,15826100522516,15826100572115,15826100537753,15826400072592.

**Br. Bangalore/Vignana Nagar: No 124, S R Plaza, Vignana Nagara, Main Road, Bangalore, Bangalore Urban- 560 037 Ph No. 080-25348901 :-** 16296100184049,16296400028730,16296400028748,16296400028755,16296400029456,16296400029639,16296400034274,16296400022097,16296400030629,16296400030660,16296400030678,16296400030694,16296400030744,16296400034787,16296400034795,16296400030777,16296400030934,16296400030819,16296400030975,16296400031106,16296400031122,16296400031320,16296400031395,16296400031627,16296400035552,16296400023020,16296400023061,16296400035768,16296400034985,16296100185228,16296100185509.

**Br. Bangalore/ Vijaya Nagar: Ground Floor of TRS Arcade, #3, 1st main road, Income Tax Layout, opposite to AM Hospital, Chandra, Vijayanagar, Bangalore Urban- 560 040. Ph No. 080-23159121 :-** 16436100316403,16436100324753,16436100316908,16436100324860,16436100317450,16436100319266,16436100319555,16436100319886,16436100320702,16436100320983,16436100310513,16436100322724,16436100329885,16436100323284,16436400054001,16436100323730,16436400045199,16436400045215,16436400045207,16436400046148,16436400046916,16436400044937,16436400043269,16436400041651,16436400054621,16436400047468,16436400054712,16436400050462,16436400048151,16436400047013,16436100325081,16436100325156,16436100325388,16436100325719,16436400044929,16436400044473,16436400050819,16436400055073,16436100326014,16436400055180,16436400046213,16436400046205,16436100333721,16436100326485,16436100307238,16436100327145,16436100327053,16436400049613,16436400044259,16436100327327,16436100335965,16436200124905,16436400058416,16436400039887,16436400050801,16436400051213,16436400040000,16436400051239,16436400050793,16436400058853,16436400054191,16436400038509,16436400055107,16436400049902,16436400050751,16436400058515,16436400058879,16436100331584,16436400042204,16436400055263,16436400044333,16436400047559.

**Br. Bangalore/Sadashivanagar: No.88, Keerthi, 2nd Main, Palace Guttahalli P O, Bangalore – 560 003, Ph: 080-23565050 :-** 21986400027921,21986400029836,21986400028457,21986400028424,21986400027913,21986400028705,21986400028606,21986400028416,21986100035877,21986400028135,21986400028549,21986100032866,21986400028077,21986400028127,21986100033757,21986100032643,21986400028358,21986400028465,21986100031041,21986100034110,21986400028341,21986400028440,21986100032734,21986400019076,21986100039143,21986800000874,21986400026576.

Bangalore 18-05-2022 Vice President & Zonal Head

### ಎಸ್ಸೆಸ್ಸೆಲ್ಸಿ: ಶೇ 79.44ರಷ್ಟು ಫಲಿತಾಂಶ: ವಿದ್ಯಾರ್ಥಿನಿಯರೇ ಮೇಲುಗೈ

# ಬೆಂಗಳೂರು ದಕ್ಷಿಣಕ್ಕೆ 'ಬಿ' ಗ್ರೇಡ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2021–22ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಗೆ ಶೇ 79.44ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಆದರೆ, ಗುಣಾತ್ಮಕ ಫಲಿತಾಂಶ ವಿಶ್ಲೇಷಣಾ ಆಧಾರಿತ ಜಿಲ್ಲಾ ಶ್ರೇಣಿಯಲ್ಲಿ 'ಬಿ' ಗ್ರೇಡ್ ಪಡೆದಿದೆ.

ದಕ್ಷಿಣ ಜಿಲ್ಲೆಯಿಂದ 54,709 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 43,462 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. 27,083 ಬಾಲಕರು ಪರೀಕ್ಷೆಗೆ ಹಾಜರಾಗಿದ್ದು, 20,165 ಮಂದಿ ಬಾಲಕರು ತೇರ್ಗಡೆಯಾಗಿದ್ದಾರೆ. ಈ ಮೂಲಕ ಶೇ.74.46ರಷ್ಟು ಫಲಿತಾಂಶ ಬಂದಿದೆ.

27,626 ಬಾಲಕಿಯರು ಪರೀಕ್ಷೆ ಹಾಜರಾಗಿದ್ದು, ಈ ಪೈಕಿ 23,298 ಮಂದಿ ಬಾಲಕಿಯರು ತೇರ್ಗಡೆಯಾಗಿ ಶೇ 84.33ರಷ್ಟು ಫಲಿತಾಂಶದ ಸಾಧನೆ ಮಾಡುವ ಮೂಲಕ ಮೇಲುಗೈ ಸಾಧಿಸಿದ್ದಾರೆ.

'ಸರ್ಕಾರಿ ಶಾಲೆಗಳು ಶೇ 61.5ರಷ್ಟು ಫಲಿತಾಂಶ ಪಡೆದಿವೆ. ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಉತ್ತಮ ಸಾಧನೆ ತೋರಿವೆ. 86 ಶಾಲೆಗಳಲ್ಲಿ ಕಡಿಮೆ ಫಲಿತಾಂಶ ದೊರೆತಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆ ಇರಲಿಲ್ಲ. ಖಾಲಿ ಹುದ್ದೆಗಳೂ ಇಲ್ಲ. ಆದರೂ, ಬಿ ಗ್ರೇಡ್‌ಗೆ ಸೇರಿರುವುದು ಯಕ್ಷ ಪ್ರಶ್ನೆಯಾಗಿದೆ' ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬೈಲಾಂಜಿನಪ್ಪ ತಿಳಿಸಿದರು.

'ಬೊಮ್ಮನಹಳ್ಳಿ, ತಾವರಕೆರೆ, ಕಾಮಾಕ್ಷಿಪಾಳ್ಯ ಮುಂತಾದ ಪ್ರದೇಶಗಳಲ್ಲಿ ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜಿಲ್ಲೆಯಲ್ಲಿ ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿರುವುದೂ ಶೈಕ್ಷಣಿಕ ಪ್ರಗತಿ ಮೇಲೆ ಪರಿಣಾಮ ಬೀರಿರಬಹುದು. ಶಾಲೆಗಳಲ್ಲಿ ಶೇ30ರಿಂದ 35ರಷ್ಟು ವಿದ್ಯಾರ್ಥಿಗಳು ಗೈರುಹಾಜರಾಗುವುದೂ ಕಂಡು ಬಂದಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಸುಧಾರಿಸಲು ಕ್ರಮಕೈಗೊಳ್ಳಲಿದ್ದೇವೆ' ಎಂದು ತಿಳಿಸಿದರು.

'ಈ ಫಲಿತಾಂಶ ನಮಗೆ ಎಚ್ಚರಿಕೆಯ ಗಂಟೆ. ಒಟ್ಟಾರೆ ಫಲಿತಾಂಶದ ಬಗ್ಗೆ ಮುಖ್ಯಶಿಕ್ಷಕರಿಂದ ವರದಿ ಪಡೆಯಲಾಗುವುದು. ಮುಂದಿನ ವರ್ಷದ ಪರೀಕ್ಷೆಗೆ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದ್ದು, ಶಿಕ್ಷಕರಿಗೆ ತರಬೇತಿ ನೀಡಲಾಗುವುದು. ಜತೆಗೆ ಉತ್ತಮ ಶಿಕ್ಷಕರಿಗೆ ಪ್ರೋತ್ಸಾಹ ನೀಡಲಾಗುವುದು' ಎಂದು ಬೈಲಾಂಜಿನಪ್ಪ ಅವರು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯು ಎ ಗ್ರೇಡ್ ಸ್ಥಾನ ಪಡೆದಿದೆ.

**ಬೆಂಗಳೂರು ದಕ್ಷಿಣ ಮತ್ತು ಉತ್ತರ ಶೈಕ್ಷಣಿಕ ಜಿಲ್ಲೆ**
**625ಕ್ಕೆ 625 ಅಂಕಗಳಿಸಿರುವ ವಿದ್ಯಾರ್ಥಿಗಳ ವಿವರ**

| | |
|---|---|
| ಎ.ಎಸ್. ಆದಿತ್ಯ | ಎಸ್‌ವಿಪಿ ಪ್ರೌಢಶಾಲೆ ಸರ್ಜಾಪುರ, ಆನೇಕಲ್ |
| ಬಿ.ಅಭಿಜ್ಞಾ | ಕಾರ್ಡಿಯಲ್ ಪ್ರೌಢಶಾಲೆ ಮಾರೇನಹಳ್ಳಿ, ವಿಜಯನಗರ |
| ಅನಘಾ ಎಂ. ಮೂರ್ತಿ | ಪೂರ್ಣ ಪ್ರಜ್ಞಾ ಎಜ್ಯುಕೇಷನ್ ಸೆಂಟರ್, ಸದಾಶಿವನಗರ |
| ಅನೀಶಾ ಎನ್. ಭರದ್ವಾಜ್ | ಶ್ರೀ ವಿದ್ಯಾಮಂದಿರ ಪ್ರೌಢಶಾಲೆ, ಮಲ್ಲೇಶ್ವರ |
| ಕೆ. ಅವನಿ | ಹೋಲಿ ಚೈಲ್ಡ್ ಇಂಗ್ಲಿಷ್ ಹೈಸ್ಕೂಲ್. ಅಶೋಕ ನಗರ, ಬನಶಂಕರಿ. |
| ಬಿ. ಜಯಶ್ರೀ | ವಿದ್ಯಾಮಂದಿರ ಪ್ರೌಢಶಾಲೆ, ಮಲ್ಲೇಶ್ವರ. |
| ಎಸ್. ಚಂದು | ವಿದ್ಯಾನಿಕೇತನ ಪ್ರೌಢಶಾಲೆ ಸುಂಕದಕಟ್ಟೆ |
| ಗಾನಾ ಸಿ. ಶೇಖರ್ | ಎಸ್.ವಿ. ಪಬ್ಲಿಕ್ ಸ್ಕೂಲ್. ಕೊಟ್ಟಿಗೆಪಾಳ್ಯ. |
| ಎಂ. ಹರ್ಷಿತಾ | ಕಾರ್ಡಿಯಲ್ ಪ್ರೌಢಶಾಲೆ. ಮಾರೇನಹಳ್ಳಿ. ವಿಜಯನಗರ ಪಶ್ಚಿಮ |
| ಹೇಮಂತ್ ಎಸ್. ಗೌಡ | ಸೌಂದರ್ಯ ಪ್ರೌಢಶಾಲೆ. ಹಾವನೂರು ಬಡಾವಣೆ. ನಾಗಸಂದ್ರ |
| ಎಚ್.ಎನ್. ಲಾವಣ್ಯ | ಬ್ಲಾಸಮ್ಸ್ ಪ್ರೌಢಶಾಲೆ ಬಾಗಲಕುಂಟೆ ನಾಗಸಂದ್ರ. |
| ಬಿ. ಮಂಜುನಾಥ್ | ಲಿಟ್ಲ್ ಲಿಲ್ಲಿಸ್ ಇಂಗ್ಲಿಷ್ ಪ್ರೌಢಶಾಲೆ, ಮಹಾಲಕ್ಷ್ಮಿ ಬಡಾವಣೆ. |
| ಎಸ್. ಮೊಹಮ್ಮದ್ ಆಷಿಕ್ | ಗುಡ್‌ವಿಲ್ ಪ್ರೌಢಶಾಲೆ. ಹೆಗ್ಗನಹಳ್ಳಿ. |
| ಎನ್.ಡಿ. ಮೊನಿಷ್ ಗೌಡ | ಕಾರ್ಡಿಯಲ್ ಪ್ರೌಢಶಾಲೆ. ಮಾರೇನಹಳ್ಳಿ. ವಿಜಯನಗರ ಪಶ್ಚಿಮ. |
| ಆರ್. ನಿತ್ಯ | ಪ್ರಸಿದ್ಧಿ ಪ್ರೌಢಶಾಲೆ. ವಸಂತನಗರ |
| ಪಿ. ಪ್ರಕೃತಿ | ಯಶ್ ಪಬ್ಲಿಕ್ ಪ್ರೌಢಶಾಲೆ. ಮಾಗಡಿ ಮುಖ್ಯ ರಸ್ತೆ. |
| ಪ್ರಣತಿ ಮೂರ್ತಿ | ಪೂರ್ಣ ಪ್ರಜ್ಞಾ ಎಜ್ಯುಕೇಷನ್ ಸೆಂಟರ್, ಸದಾಶಿವನಗರ. |
| ಪ್ರೀತಂ ರವಳಪ್ಪಾ ಪುನಾಸುದಾಕರ್ | ಪೂರ್ಣ ಪ್ರಜ್ಞಾ ಎಜ್ಯುಕೇಷನ್ ಸೆಂಟರ್. ಸದಾಶಿವನಗರ. |
| ಪ್ರೇರಣಾ ಎಂ. ಸಾಳುಂಕೆ | ಸೌಂದರ್ಯ ಪ್ರೌಢಶಾಲೆ, ಹಾವನೂರು ಬಡಾವಣೆ, ನಾಗಸಂದ್ರ. |
| ರುತು ಅಮೂಲ್ ತಲಾಠಿ | ಕ್ಯಾಮ್ಲಿನ್ ಪ್ರೌಢಶಾಲೆ. ಬೆಂಗಳೂರು ದಕ್ಷಿಣ |
| ಸಾಕ್ಷಿ ಪಾಟೀಲ್ | ಪೂರ್ಣ ಪ್ರಜ್ಞಾ ಎಜ್ಯುಕೇಷನ್ ಸೆಂಟರ್. ಸದಾಶಿವನಗರ. |
| ಸಂಜನಾ ಪ್ರವೀಣ | ವಿವಿಎಸ್ ಸರ್ದಾರ್ ಪಟೇಲ್ ಇಂಗ್ಲಿಷ್ ಪ್ರೌಢಶಾಲೆ ರಾಜಾಜಿನಗರ |
| ಜಿ.ಆರ್. ಶ್ರಾವಣಿ | ಜಿಂದಾಲ್ ಪ್ರೌಢಶಾಲೆ. ತುಮಕೂರು ರಸ್ತೆ. ಬೆಂಗಳೂರು ಉತ್ತರ. |
| ಆರ್. ಶ್ರೇಯಾ | ರಾಜರಾಜೇಶ್ವರಿ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ. ಯಶವಂತಪುರ. |
| ವಾಸವಿ ಎಸ್. ಪುರಾಣಿಕ್ | ಹೋಲಿ ಚೈಲ್ಡ್. ಇಂಗ್ಲಿಷ್ ಶಾಲೆ. ಅಶೋಕ್ ನಗರ. ಬನಶಂಕರಿ. |
| ವಿಷ್ಣುಪ್ರಿಯಾ ಆರ್ | ಬ್ಲಾಸಮ್ಸ್ ಪ್ರೌಢಶಾಲೆ. ಬಾಗಲಕುಂಟೆ. ನಾಗಸಂದ್ರ. |

### 'ದಿನಪತ್ರಿಕೆ ಹಾಕುತ್ತಲೇ ಓದು'

ಮೊನಿಷ್‌ಗೌಡ

ಬೆಳಿಗ್ಗೆ ದಿನಪತ್ರಿಕೆ ಹಾಕುತ್ತಾ ಅಧ್ಯಯನದಲ್ಲಿ ತೊಡಗಿದ್ದ ವಿಜಯನಗರದ ಕಾರ್ಡಿಯಲ್ ಹೈಸ್ಕೂಲ್‌ನ ಪ್ರೌಢಶಾಲೆಯ ಮೊನಿಷ್‌ಗೌಡ ಎನ್.ಡಿ. ಅವರು 625 ಅಂಕಗಳನ್ನು ಪಡೆದಿದ್ದಾರೆ.

'ಮಗ ಪ್ರತಿ ದಿನ ಬೆಳಿಗ್ಗೆ 4 ಗಂಟೆಗೆ ಎದ್ದು ದಿನಪತ್ರಿಕೆ ಹಾಕುತ್ತಾನೆ. ಈ ಕಾರ್ಯದ ನಂತರ ಓದು ಮತ್ತು ಶಾಲೆ. ಎಂದಿಗೂ ಒತ್ತಡಕ್ಕೊಳಗಾಗಿ ಓದಿಲ್ಲ. ಇಷ್ಟಪಟ್ಟು ಅಧ್ಯಯನ ಮಾಡಿದ್ದಾನೆ. ಟ್ಯೂಷನ್‌ಗೂ ಹೋಗಿಲ್ಲ. ಸ್ವಯಂ ಪ್ರಯತ್ನ ಮತ್ತು ಶಿಕ್ಷಕರ ಮಾರ್ಗದರ್ಶನದಿಂದ ಉತ್ತಮ ಅಂಕಗಳನ್ನು ಗಳಿಸಿದ್ದಾನೆ' ಎಂದು ಮೊನಿಷ್‌ಗೌಡ ಅವರ ತಂದೆ ದೇವರಾಜ್ ಅವರು ತಿಳಿಸಿದರು.

**625 ಅಂಕ ಪಡೆದ ವಿದ್ಯಾರ್ಥಿಗಳು**

ಎಸ್. ಚಂದು
ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಸುಂಕದಕಟ್ಟೆ

ಹೇಮಂತ್ ಎಸ್. ಗೌಡ
ಸೌಂದರ್ಯ ಶಾಲೆ, ಹಾವನೂರು ಬಡಾವಣೆ

ಎಚ್.ಎನ್. ಲಾವಣ್ಯ
ಬ್ಲಾಸಮ್ಸ್ ಪ್ರೌಢಶಾಲೆ, ಬಾಗಲಕುಂಟೆ

ಪ್ರೇರಣಾ ಎಂ ಸಾಳುಂಕೆ
ಸೌಂದರ್ಯ ಶಾಲೆ, ಹಾವನೂರು ಬಡಾವಣೆ

ಆರ್. ವಿಷ್ಣುಪ್ರಿಯಾ
ಬ್ಲಾಸಮ್ಸ್ ಪ್ರೌಢಶಾಲೆ, ಬಾಗಲಕುಂಟೆ

**ಬೆಂಗಳೂರು ದಕ್ಷಿಣ ಜಿಲ್ಲೆ ಫಲಿತಾಂಶ**

| ವಲಯ | ಶೇಕಡವಾರು |
|---|---|
| ಆನೇಕಲ್ | 81.76 |
| ಬೆಂಗಳೂರು ದಕ್ಷಿಣ–1 | 79.45 |
| ಬೆಂಗಳೂರು ದಕ್ಷಿಣ–2 | 82.15 |
| ಬೆಂಗಳೂರು ದಕ್ಷಿಣ–3 | 76.89 |
| ಬೆಂಗಳೂರು ದಕ್ಷಿಣ–4 | 79.37 |

### 'ಟ್ಯೂಷನ್‌ಗೆ ಹೋಗದೆಯೇ 625'

ಬಿ. ಅಭಿಜ್ಞಾ

'ಪಾಠವನ್ನು ಸರಿಯಾಗಿ ಕೇಳುತ್ತಿದ್ದೆ. ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಜತೆಗೆ, ಶಿಕ್ಷಕರು ಸಹ ಉತ್ತಮ ಮಾರ್ಗದರ್ಶನ ಮಾಡಿದರು' ಎಂದು 625 ಅಂಕಗಳಿಸಿರುವ ವಿಜಯನಗರದ ಕಾರ್ಡಿಯಲ್ ಪ್ರೌಢಶಾಲೆಯ ಬಿ. ಅಭಿಜ್ಞಾ ತಿಳಿಸಿದರು. 'ನಮ್ಮ ತಂದೆ ಬಸವರಾಜು ಮತ್ತು ತಾಯಿ ಶೈಲಾ ನನಗೆ ಎಲ್ಲ ರೀತಿಯಲ್ಲಿ ಬೆಂಬಲ ಮತ್ತು ನೆರವು ನೀಡಿದರು' ಎಂದು ಅಭಿಜ್ಞಾ ಪ್ರತಿಕ್ರಿಯಿಸಿದರು.

### 'ತಾಯಿ, ಶಿಕ್ಷಕರೇ ಶ್ರೀರಕ್ಷೆ'

ಎಸ್. ಧನಲಕ್ಷ್ಮಿ

ತಾಯಿಯ ಆಸರೆ, ಶಿಕ್ಷಕರ ಪ್ರೋತ್ಸಾಹದೊಂದಿಗೆ ಎಸ್ಸೆಸ್ಸೆಲ್ಸಿಯಲ್ಲಿ 624 ಅಂಕಗಳಿಸಿರುವ ಎಸ್. ಧನಲಕ್ಷ್ಮಿಗೆ ವೈದ್ಯೆಯಾಗುವ ಗುರಿ.

ತಂದೆಯನ್ನು ಕಳೆದುಕೊಂಡಿರುವ ಎಸ್. ಧನಲಕ್ಷ್ಮಿ ಅವರಿಗೆ ತಾಯಿಯೇ ಸಂಪೂರ್ಣ ಬೆಂಬಲ ನೀಡಿದ್ದಾರೆ. ಟೈಲರಿಂಗ್ ಮಾಡುತ್ತ ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಧನಲಕ್ಷ್ಮಿ ಅವರ ತಾಯಿಯೇ ಓದಿಸುತ್ತಿದ್ದಾರೆ.

'ತಾಯಿ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ನಮ್ಮ ಶಿಕ್ಷಣಕ್ಕೆ ನೆರವಾದರು. ಶಾಲೆಯಲ್ಲಿ ಶಿಕ್ಷಕರು ಉತ್ತಮ ಮಾರ್ಗದರ್ಶನ ಮತ್ತು ಬೆಂಬಲ ನೀಡಿದರು. ಸಾಧನೆ ಮಾಡಬೇಕು ಎನ್ನುವ ಛಲ ನಮ್ಮಲ್ಲಿಯೂ ಇತ್ತು. ಇಂಗ್ಲಿಷ್ ಹೊರತುಪಡಿಸಿ ಉಳಿದ ಎಲ್ಲ ವಿಷಯಗಳಿಗೆ ಶೇ 100ರಷ್ಟು ಅಂಕ ದೊರೆತಿವೆ. ಇಂಗ್ಲಿಷ್‌ನಲ್ಲಿ 99 ಅಂಕಗಳು ದೊರೆತಿವೆ' ಎಂದು ಸುಂಕದಕಟ್ಟೆಯ ಅರುಣೋದಯ ಹೈಸ್ಕೂಲ್‌ನ ಧನಲಕ್ಷ್ಮಿ ತಿಳಿಸಿದರು.

## 'ಪಿಎಸ್‌ಐ ಮರು ಪರೀಕ್ಷೆ ಅನಿವಾರ್ಯ'

ರಾಮನಗರ: 'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಬಹುವಿಧದ ಅಕ್ರಮಗಳು ನಡೆದಿರುವ ಕಾರಣ ಮರು ಪರೀಕ್ಷೆ ಅನಿವಾರ್ಯವಾಗಿದೆ. ನ್ಯಾಯಯುತವಾಗಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳ ವಿಚಾರದಲ್ಲಿ ನಾವು ಅಸಹಾಯಕರಾಗಿದ್ದೇವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಇಲ್ಲಿನ ಎಸ್.ಪಿ. ಕಚೇರಿಯಲ್ಲಿ ಗುರುವಾರ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಪತ್ರಕರ್ತರ ಜೊತೆ ಅವರು ಮಾತನಾಡಿದರು.

ಪರೀಕ್ಷಾರ್ಥಿಗಳು ಪ್ರಧಾನಿಗೆ ರಕ್ತದಲ್ಲಿ ಪತ್ರ ಬರೆದಿರುವ ಕುರಿತು ಪ್ರತಿಕ್ರಿಯಿಸಿ 'ಕೇವಲ ಒಂದು ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ನಡೆದಿದ್ದರೆ ಆ ಕೇಂದ್ರಕ್ಕೆ ಸಂಬಂಧಿಸಿ ಮಾತ್ರ ಕ್ರಮ ಕೈಗೊಳ್ಳಬಹುದಿತ್ತು. ಆದರೆ ಇಲಾಖೆಯ ಕೇಂದ್ರ ಕಚೇರಿಯಲ್ಲಿದ್ದ ಒಎಂಆರ್ ಪ್ರತಿಗಳನ್ನೇ ತಿದ್ದಲಾಗಿದೆ. ಬ್ಲೂಟೂತ್ ಬಳಸಿ ಅಕ್ರಮ ಎಸಗಲಾಗಿದೆ. ಹೀಗಾಗಿ ಮರು ಪರೀಕ್ಷೆ ಅನಿವಾರ್ಯ' ಎಂದರು.

'ಈ ಹಿಂದೆ ಹಲವು ಪರೀಕ್ಷಾ ಅಕ್ರಮಗಳು ನಡೆದಿದ್ದರೂ ಸರ್ಕಾರಗಳು ಕ್ರಮ ಕೈಗೊಂಡಿರಲಿಲ್ಲ. ಆದರೆ ಈ ಬಾರಿ ಇದಕ್ಕೆ ತಾರ್ಕಿಕ ಅಂತ್ಯ ಕಾಣಿಸಲಿದ್ದೇವೆ. ಕೆಲವರು ಕಷ್ಟಪಟ್ಟು ಓದಿದವರ ಬಾಯಿಗೆ ಮಣ್ಣು ಹಾಕಿದ್ದಾರೆ. ಅಂತಹವರನ್ನು ಸುಮ್ಮನೆ ಬಿಡುವುದಿಲ್ಲ. ಡಿವೈಎಸ್ಪಿ ದರ್ಜೆಯ ಅಧಿಕಾರಿಗಳ ಸಹಿತ ಅಕ್ರಮಕ್ಕೆ ಸಹಕರಿಸಿದ ಎಲ್ಲರನ್ನೂ ಈಗಾಗಲೇ ಬಂಧಿಸಿದ್ದೇವೆ. ಮುಕ್ತ ತನಿಖೆ ನಡೆಸಲು ಸಿಐಡಿಗೆ ಅವಕಾಶ ನೀಡಿದ್ದೇವೆ' ಎಂದರು.

'ಐಸಿಸ್‌ಗೆ ಸೇರ್ಪಡೆ ಸಲುವಾಗಿ ಬೆಂಗಳೂರಿನಲ್ಲಿ ಅನ್ಯ ಧರ್ಮದ 28 ಮಂದಿ ಇಸ್ಲಾಂಗೆ ಮತಾಂತರಗೊಂಡಿರುವ ಘಟನೆಯನ್ನು ಗಮನಿಸಿದ್ದೇನೆ. ಈ ಬಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆಯೂ ಚರ್ಚಿಸಿದ್ದೇನೆ. ಎನ್‌ಐಎ ಸಹ ಗಮನ ಹರಿಸಿದೆ. ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದರು.

## ಸುರೀಂದರ್ ಕೋಲಿಗೆ ಗಲ್ಲುಶಿಕ್ಷೆ

ಗಾಜಿಯಾಬಾದ್: ನಿಥಾರಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸುರೀಂದರ್ ಕೋಲಿಗೆ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ ಹತ್ಯೆ ಎಸಗಿದ ಪ್ರಕರಣದಲ್ಲಿ ಸಿಬಿಐನ ವಿಶೇಷ ನ್ಯಾಯಾಲಯವು ಗಲ್ಲುಶಿಕ್ಷೆ ವಿಧಿಸಿದೆ.

ಕೋಲಿ ಕೆಲಸ ಮಾಡುತ್ತಿದ್ದ ಮನೆಯ ಮಾಲೀಕ, ಉದ್ಯಮಿ ಮೋನಿಂದರ್ ಸಿಂಗ್ ಪಂಧೇರ್‌ಗೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಾಕೇಶ್ ತ್ರಿಪಾಠಿ ಏಳು ವರ್ಷಗಳ ಜೈಲುಶಿಕ್ಷೆ ವಿಧಿಸಿದ್ದಾರೆ.

2009ರಲ್ಲಿ ಪಂಧೇರ್‌ನ ಬಂಗಲೆಯಲ್ಲಿ ಸುರೀಂದರ್ ಕೋಲಿ ಸುಮಾರು 19 ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿ, ಅವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದ. ಕೋಲಿಗೆ ಗಲ್ಲುಶಿಕ್ಷೆಯ ಜತೆಗೆ ₹ 62 ಸಾವಿರ ಹಾಗೂ ಮೋನಿಂದರ್‌ಗೆ ಜೈಲುಶಿಕ್ಷೆಯ ಜತೆಗೆ ₹ 4 ಸಾವಿರ ದಂಡ ವಿಧಿಸಲಾಗಿದೆ.

ಸುರೀಂದರ್‌ನನ್ನು ಅತ್ಯಾಚಾರ, ಹತ್ಯೆ, ಸಂಚು ರೂಪಿಸುವಿಕೆ ಮತ್ತು ಅಪರಾಧಗಳ ಪುರಾವೆಗಳನ್ನು ನಾಶಪಡಿಸಿದ ಅಪರಾಧಿ ಎಂದು ಪರಿಗಣಿಸಲಾಗಿದೆ. ಮೋನಿಂದರ್ ಸಿಂಗ್ ಮೇಲೆ ಮಾನವ ಕಳ್ಳಸಾಗಣೆಯ ಆರೋಪವಿದೆ.

ಸಿಬಿಐನ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ದರ್ಶನ್ ಲಾಲ್ ಅವರು 83 ಸಾಕ್ಷಿಗಳನ್ನು ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸಮಾವೇಶದಲ್ಲಿ ಮಾತನಾಡಿದರು.

## ಎನ್‌ಇಪಿಗೆ ಹೆಚ್ಚಿನ ಸಂಪನ್ಮೂಲ ಅಗತ್ಯ: ಸಿ.ಎನ್. ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಅಳವಡಿಸಲು ಹೆಚ್ಚಿನ ಸಂಪನ್ಮೂಲದ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಲಂಡನ್‌ನ 'ಪಾರ್ಕ್ ಪ್ಲಾಜಾ ಲಂಡನ್ ರಿವರ್ ಬ್ಯಾಂಕ್' ಹೋಟೆಲ್‌ನಲ್ಲಿ ನಡೆದ ಕಾಮನ್‌ವೆಲ್ತ್ ಶೈಕ್ಷಣಿಕ ಸಮಾವೇಶದಲ್ಲಿ ಮಾತನಾಡಿದ ಅವರು, ಈಗಿರುವ ಸಂಪನ್ಮೂಲದಲ್ಲಿ ಏನನ್ನೂ ಮಾಡಲಾಗುವುದಿಲ್ಲ ಎಂಬ ಭಾವನೆ ಸರಿಯಲ್ಲ. ಈಗಿರುವ ಸಂಪನ್ಮೂಲವನ್ನೇ ಪುನರ್ ಸಂಯೋಜನೆ ಮಾಡುವ ಮೂಲಕ ಹಾಗೂ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ಎನ್‌ಇಪಿ ಆಶಯಕ್ಕೆ ತಕ್ಕಂತೆ ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯವಿದೆ ಎಂದು ಪ್ರತಿಪಾದಿಸಿದರು.

ಈ ಸಮಾವೇಶದಲ್ಲಿ ಯುಕೆ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಸೇರಿ ವಿವಿಧ ಕಾಮನ್‌ವೆಲ್ತ್ ದೇಶಗಳ 200ಕ್ಕೂ ಹೆಚ್ಚು ಶಿಕ್ಷಣ ತಜ್ಞರು, ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಹದೇಶ್ವರ ಬೆಟ್ಟ: ಉಚಿತ ಸಾಮೂಹಿಕ ವಿವಾಹ

ಚಾಮರಾಜನಗರ: ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಜೂನ್ 20ರಂದು ಉಚಿತ ಸಾಮೂಹಿಕ ವಿವಾಹವನ್ನು ಹಮ್ಮಿಕೊಳ್ಳಲಿದೆ.

ವರನ ವಯಸ್ಸು 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ವಯಸ್ಸಿನ ದೃಢೀಕರಣ ಪತ್ರ ಸಲ್ಲಿಸಬೇಕು. ವರ ಮತ್ತು ವಧುವಿನ ಭಾವಚಿತ್ರ, ತಹಶೀಲ್ದಾರ್ ಅವರಿಂದ ಪಡೆದ ಜಾತಿ ದೃಢೀಕರಣ ಪತ್ರ ಸಲ್ಲಿಸಬೇಕು. ಮದುವೆಯಾಗಿಲ್ಲ ಎಂಬ ಬಗ್ಗೆ ಗ್ರಾಮ ಪಂಚಾಯಿತಿ ಕಚೇರಿಯಿಂದ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಂದ ರುಜುವಾತು ಪತ್ರ ಪಡೆದು ಸಲ್ಲಿಸಬೇಕು. ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಮದುವೆ ನೋಂದಣಿ ಪ್ರಮಾಣಪತ್ರ ಪಡೆದು ಪ್ರಾಧಿಕಾರದ ಕಚೇರಿಗೆ ಸಲ್ಲಿಸಬೇಕು.

ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ-ರವಿಕೆ ಹಾಗೂ ವರನಿಗೆ ಪಂಚೆ, ಶರ್ಟ್ ಹಾಗೂ ಟವೆಲ್ ಉಚಿತವಾಗಿ ನೀಡಲಾಗುತ್ತದೆ. ವಧು–ವರರ ಕಡೆಯವರು ತಲಾ 10 ಜನಕ್ಕೆ ಮೀರದಂತೆ ಭಾಗವಹಿಸಬಹುದು. ಅವರಿಗೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಲಾಗುವುದು. ಜೂನ್ 20ರ ಬೆಳಿಗ್ಗೆ 9.15ರಿಂದ 9.50ರೊಳಗೆ ಸಾಮೂಹಿಕ ವಿವಾಹ ನಡೆಯಲಿದೆ.

ಪ್ರಾಧಿಕಾರದ ಕಾರ್ಯದರ್ಶಿಯಿಂದ ಅರ್ಜಿ ನಮೂನೆ ಪಡೆದು ಹೆಸರು ಮತ್ತು ವಿಳಾಸ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜೂನ್ 10ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು.

ಮಾಹಿತಿಗಾಗಿ 9480065393, 9113215342, 08225-272128 ಸಂಪರ್ಕಿಸುವಂತೆ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ತಿಳಿಸಿದ್ದಾರೆ.




# ‘ತೀಕ್ಷ್ಣ’ ಶ್ರೀಮತಿ ಪ್ರಿಯಾಂಕಾ...

**ಕಲಾ ಕುಟುಂಬದಿಂದಲೇ ಬಂದು ಬಂಗಾಳಿ ಚಿತ್ರಗಳಲ್ಲಿ ಹೆಸರು ಮಾಡಿ, ಈಗ ಚಂದನವನದಲ್ಲೇ ನೆಲೆಯಾಗಿರುವವರು ನಟಿ ಪ್ರಿಯಾಂಕಾ ಉಪೇಂದ್ರ. ಅವರ ಚಿತ್ರಗಳು 50ರ ಗಡಿ ತಲುಪಿವೆ. ಇದೇ ವೇಳೆ ‘ಡಿಟೆಕ್ಟಿವ್ ತೀಕ್ಷ್ಣ’ ಆಗಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಗ್ಲಾಮರ್‌ನಿಂದ ಆ್ಯಕ್ಷನ್ ಕ್ವೀನ್ ಆದವರೆಗಿನ ಹೆಜ್ಜೆಗಳ ಮೆಲುಕು ಇಲ್ಲಿದೆ.**

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಶರತ್ ಹೆಗ್ಡೆ

● **50 ಚಿತ್ರಗಳವರೆಗೆ ಬಂದ ಬದುಕಿನ ಪಯಣವನ್ನೊಮ್ಮೆ ಅವಲೋಕಿಸಬಹುದೇ?**
ಹೌದು, ಹಿಂದಿರುಗಿ ನೋಡಿದಾಗ ಐವತ್ತು ಚಿತ್ರಗಳವರೆಗೆ ಬಂದಿದ್ದೇನೆಯೇ ಎಂದು ಅಚ್ಚರಿ ಮತ್ತು ಸಂತೋಷ ಒಟ್ಟಿಗೇ ಆಗುತ್ತಿದೆ. ಈ ವಿಷಯದಲ್ಲಿ ನಾನು ತುಂಬಾ ಆಶೀರ್ವಾದ ಪಡೆದವಳು. ದೊಡ್ಡ ನಿರ್ದೇಶಕರು, ಒಳ್ಳೆಯ ನಾಯಕ ನಟರ ಜೊತೆ ಕೆಲಸ ಮಾಡಿದ್ದೇನೆ. ಇಲ್ಲಿ ನಟನೆಯಷ್ಟೇ ಅಲ್ಲ, ಜೀವನದ ಪಾಠಗಳನ್ನು ಕಲಿತಿದ್ದೇನೆ. ಬಸು ಚಟರ್ಜಿ ಅವರ ನಿರ್ದೇಶನದೊಂದಿಗೆ ನನ್ನ ಸಿನಿಪಯಣ ಆರಂಭವಾಯಿತು. ಬಂಗಾಳಿಯ ‘ಯೊದ್ಧ’ (1997) ನನ್ನ ಮೊದಲ ಚಿತ್ರ. ‘ಹೋಥಾತ್ ಬ್ರಿಷ್ಟಿ’ ನಾನು ಪೂರ್ಣ ಪ್ರಮಾಣದ ನಾಯಕಿಯಾಗಿ ಅಭಿನಯಿಸಿದ ಚಿತ್ರ. ಮುಂದೆ ಸರಣಿ ಚಿತ್ರಗಳು ಬಂದವು. ಬಳಿಕ ಮುಂಬೈ ಸೇರಿದೆ ಅಲ್ಲಿಂದ ಹೈದರಾಬಾದ್‌ಗೆ ಬಂದೆ. ಅಲ್ಲಿಂದ ನನ್ನ ದಕ್ಷಿಣ ಭಾರತದ ಚಿತ್ರ ಪ್ರಯಾಣ ಆರಂಭವಾಯಿತು.

● **ಬಂಗಾಳದಿಂದ ಬಂದು ಇಲ್ಲಿ ನೆಲೆಯಾಗುತ್ತೀರಿ ಎಂದು ಅನಿಸಿತ್ತಾ?**
ಖಂಡಿತಾ ಊಹಿಸಿರಲಿಲ್ಲ. ತೆಲುಗಿನಲ್ಲಿ ನನ್ನ ಮೊದಲ ಚಿತ್ರ ‘ಸೂರಿ’ ಮಾಡಿದಾಗ ಭಯ ಇತ್ತು. ಏಕೆಂದರೆ ಭಾಷಾ ಸಮಸ್ಯೆ ಇತ್ತು. ‘ರಾ’ ಸಿನಿಮಾ ಮಾಡಿದಾಗಲೂ ಇದೇ ಸಮಸ್ಯೆ ಇತ್ತು. ‘ಸೂರಿ’ ಚಿತ್ರದ ಸಂದರ್ಭದಲ್ಲೇ ಉಪೇಂದ್ರ ಅವರು ‘ರಾ’ ಸಿನಿಮಾಕ್ಕೆ ಪಾತ್ರಗಳ ಆಯ್ಕೆ ಮಾಡುತ್ತಿದ್ದರು. ತೆಲುಗಿನ ಹಿರಿಯ ನಿರ್ದೇಶಕರೊಬ್ಬರು ಉಪೇಂದ್ರ ಅವರ ಬಗ್ಗೆ ಸಾಕಷ್ಟು ಹೇಳಿದ್ದರು. ತೀವ್ರ ಆತಂಕದ ನಡುವೆಯೇ ಬಂದಿದ್ದೆ. ಬಹಳ ಪರಿಶ್ರಮ ಇತ್ತು.

● **ಪ್ರಿಯಾಂಕಾ ಜೊತೆ ಉಪೇಂದ್ರ ಸೇರಿಕೊಂಡದ್ದು ಯಾವಾಗ?**
ಎಚ್‌2ಒ ಚಿತ್ರದ ಸಂದರ್ಭ ನಾವು ಹೆಚ್ಚು ನಿಕಟವಾದೆವು. ಹಾಗೆಂದು ಹೆಚ್ಚು ಕಾಲ ಕಳೆಯಲು ಆಗುತ್ತಿರಲಿಲ್ಲ. ಮೊಬೈಲ್ ಎಲ್ಲರ ಬಳಿಯೂ ಇರಲಿಲ್ಲ ನೋಡಿ. ಈ ನಡುವೆ ಉಪೇಂದ್ರ ಅವರು ‘ಹಾಲಿವುಡ್’ ಚಿತ್ರೀಕರಣಕ್ಕಾಗಿ ಆಸ್ಟ್ರೇಲಿಯಾಕ್ಕೆ ಹೋಗಿದ್ದರು. ನಾನೂ ಬಂಗಾಳಿ ಚಿತ್ರಗಳಲ್ಲಿ ಬ್ಯುಸಿ ಆಗಿದ್ದೆ. ಆಸ್ಟ್ರೇಲಿಯಾದಿಂದ ವಾಪಸಾದ ಮೇಲೆ ಒಂದು ದಿನ ಉಪೇಂದ್ರ ನನ್ನನ್ನು ಮದುವೆಯಾಗುತ್ತೀರಾ ಎಂದು ಕೇಳಿಯೇಬಿಟ್ಟರು. ನಮ್ಮಿಬ್ಬರಿಗೂ ಬೇರೆ ಯಾರೂ ಈ ದೃಷ್ಟಿಯಲ್ಲಿ ಹಿಡಿಸಿರಲಿಲ್ಲ. ಹಾಗಾಗಿ ಇಬ್ಬರೂ ಮದುವೆಗೆ ಪರಸ್ಪರ ಒಪ್ಪಿದೆವು. ಹೌದು, ನಮ್ಮಿಬ್ಬರ ಸಂಸ್ಕೃತಿಗೆ ಬಹಳ ವ್ಯತ್ಯಾಸವಿದೆ. ಹಾಗಾಗಿ ಸ್ವಲ್ಪ ಆತಂಕ ಇತ್ತು. ಈಗ ಎಲ್ಲವೂ ಹೊಂದಾಣಿಕೆ ಆಗಿದೆ.

● **ಕನ್ನಡ ಎಲ್ಲಿ ಕಲಿತಿರಿ?**
ವೃತ್ತಿಯ ಮೂಲಕವೇ ಕಲಿತಿದ್ದೇನೆ. ಬರೆಯಲು, ಓದಲು ಕಲಿಯಬೇಕು. ಬಂಗಾಳಿ ಚಿತ್ರಗಳಿಗೆ ನಾನೇ ಧ್ವನಿ ಕೊಡುತ್ತೇನೆ. ಕನ್ನಡ ಚಿತ್ರಗಳಿಗೆ ಬೇರೆಯವರು ಧ್ವನಿ ಕೊಡುತ್ತಿದ್ದಾರೆ. ಆದರೆ, ಜಾಹೀರಾತು, ಟಿವಿ ಷೋಗಳು, ಬ್ರಾಂಡ್ ರಾಯಭಾರಿಯ ಕಾರ್ಯಕ್ರಮಗಳಿಗೆ ನಾನೇ ಧ್ವನಿ ಕೊಡುತ್ತೇನೆ. ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ.

● **ನಿಮ್ಮ ವೃತ್ತಿಗೆ ಉಪೇಂದ್ರ ಅವರ ಬೆಂಬಲ ಹೇಗಿದೆ?**
ತುಂಬಾ ಇದೆ. ನಾವು ಇಲ್ಲಿ ಕೂಡು ಕುಟುಂಬದಲ್ಲಿದ್ದೇವೆ. ಮದುವೆಯಾದ ಮೇಲೂ 9 ಬಂಗಾಳಿ ಚಿತ್ರಗಳಲ್ಲಿ ನಟಿಸಿದ್ದೇನೆ. ಮಕ್ಕಳು ಸಣ್ಣವರಿದ್ದಾಗ ಅವರಿಗೆ ಸಮಯ ಕೊಡಬೇಕು ಎಂಬ ನಿಬಂಧನೆ ನಮ್ಮಿಬ್ಬರಲ್ಲೂ ಇತ್ತು. ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಸ್ವಲ್ಪ ಓಡಾಟ ಕಷ್ಟವಾಗುತ್ತಿತ್ತು. ಹಾಗಾಗಿ, ಇಲ್ಲಿಯೇ ಪ್ರಯತ್ನ ಮಾಡೋಣ ಎಂದು ಶುರು ಮಾಡಿದೆ. ಆಗ ಉಪೇಂದ್ರ ಜೊತೆ ‘ಶ್ರೀಮತಿ’ ಮಾಡಿದೆ. ಆ ಬಳಿಕ ‘ಕ್ರೇಜಿಸ್ಟಾರ್’, ‘ಪ್ರಿಯಾಂಕಾ’, ‘ಮಮ್ಮಿ’ ಹೀಗೆ ಚಿತ್ರಗಳು ಯಶಸ್ವಿಯಾಗುತ್ತಾ ಹೋದವು. ಒಂದು ಚಿತ್ರಕ್ಕೂ ಇನ್ನೊಂದಕ್ಕೂ ಸಾಕಷ್ಟು ಅಂತರ ತೆಗೆದುಕೊಂಡು ಮನೆ, ಕುಟುಂಬ ಮತ್ತು ವೃತ್ತಿಯನ್ನು ನಿಭಾಯಿಸುತ್ತೇನೆ.

● **ಚಿತ್ರ ನಿರ್ಮಾಣದ ಕನಸು ಇದೆಯೇ?**
ಹೌದು ಕೋವಿಡ್ ಪೂರ್ವದಲ್ಲಿ ಪ್ರಿಯಾಂಕಾ ಉಪೇಂದ್ರ ಪ್ರೊಡಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಿದೆವು. ಕೋವಿಡ್‌ನಿಂದಾಗಿ ಆ ಯೋಜನೆ ಸ್ವಲ್ಪ ನಿಧಾನವಾಯಿತು. ಮುಂದೆ ನೋಡೋಣ.

● **ಗ್ಲಾಮರ್‌ನಿಂದ ಆ್ಯಕ್ಷನ್ ಕ್ವೀನ್‌ವರೆಗಿನ ಪರಿವರ್ತನೆಯ ಹಾದಿ ಬಗ್ಗೆ?**
‘ಉಗ್ರಾವತಾರ’ದ ಬಳಿಕ ಆ್ಯಕ್ಷನ್ ದೃಶ್ಯಗಳು ಚೆನ್ನಾಗಿ ಬಂದಿವೆ ಎಂಬ ಕಾರಣಕ್ಕೆ ಅಂಥ ಪಾತ್ರಗಳು ಹುಡುಕಿಕೊಂಡು ಬಂದವು. ಹಾಗೆಂದು ನಾನು ಅಷ್ಟಕ್ಕೇ ಸೀಮಿತಳಲ್ಲ. ಟೀಚರ್, ಗೃಹಿಣಿ, ತಾಯಿ, ನರ್ಸ್... ಇಂಥ ಸಾಫ್ಟ್ ಪಾತ್ರಗಳನ್ನೂ ಮಾಡಿದ್ದೇನೆ. ಮಹಿಳಾ ಪ್ರಧಾನ ಪಾತ್ರಗಳ ಪೈಕಿ ಅದು ನನಗೆ ಸೂಕ್ತವೇ ಎಂದು ನೋಡಿ ಆಯ್ಕೆ ಮಾಡಿಕೊಳ್ಳುತ್ತೇನೆ. ಮಹಿಳೆ ಸಾಹಸ ಪಾತ್ರಧಾರಿಯಾಗಿ ಕಾಣಿಸಿಕೊಂಡದ್ದು ಕಡಿಮೆ. ಈಗ ಕಮರ್ಷಿಯಲಿ ನೋಡಿದಾಗ ಹಾರರ್ ಮತ್ತು ಆ್ಯಕ್ಷನ್ ಚಿತ್ರಗಳಿಗೆ ಹೆಚ್ಚು ಬೇಡಿಕೆ ಇರುತ್ತದೆ. ಕೆಲವು ಆ್ಯಕ್ಷನ್ ದೃಶ್ಯಗಳನ್ನು ಮಾಡುವುದು ಕಷ್ಟ. ಆದರೂ ಪ್ರಯತ್ನ ಸಾಗಿದೆ.

● **ಯಾರು ‘ಡಿಟೆಕ್ಟಿವ್ ತೀಕ್ಷ್ಣ’?**
ಡಿಟೆಕ್ಟಿವ್ ತೀಕ್ಷ್ಣ ತುಂಬಾ ಚುರುಕು ಮತ್ತು ಬುದ್ಧಿವಂತ ಖಾಸಗಿ ಪತ್ತೆದಾರಿ. ಇಲ್ಲಿ ಇಂಟರ್‌ನ್ಯಾಷನಲ್ ಅಪೀಲ್ ಇರುವಂತಹ ಲುಕ್ ಕೊಟ್ಟಿದ್ದಾರೆ. ಹೊಸ ಪ್ರಕಾರದ ಪಾತ್ರ ಇದು. ರಘು ಅವರು ಇದಕ್ಕಾಗಿ ಸುಮಾರು 9 ತಿಂಗಳು ವಿವರವಾದ ಕೆಲಸ ಮಾಡಿದ್ದಾರೆ. ವಾಸ್ತವಕ್ಕೆ ಹತ್ತಿರವಾಗಿರುವಂತೆ ಚಿತ್ರ ಇದೆ. ಹೆಣ್ಣುಮಕ್ಕಳಿಗೆ ಸಕಾರಾತ್ಮಕ ಸಂದೇಶ ಇದೆ.

● **ಮಕ್ಕಳನ್ನು ಚಿತ್ರರಂಗಕ್ಕೆ ಕರೆತರುತ್ತೀರಾ?**
ಮಕ್ಕಳು ಪ್ಯಾಷನೇಟ್ ಆಗಿ ಚಿತ್ರರಂಗಕ್ಕೆ ಬರಬೇಕು. ಇದರಲ್ಲಿ ಪ್ಲಸ್–ಮೈನಸ್ ಎರಡೂ ಇವೆ. ನಟ ನಟಿಯರ ಮಕ್ಕಳು ಎಂದರೆ ತುಂಬಾ ಹೋಲಿಕೆ ಮಾಡುತ್ತಾರೆ. ಅದೆಲ್ಲದಕ್ಕೂ ಅವರು ಸಿದ್ಧರಾಗಿರಬೇಕು. ಮಕ್ಕಳಿಗೆ ಇದನ್ನೆಲ್ಲಾ ಹೇಳುತ್ತಿರುತ್ತೇನೆ. ಅವರಿನ್ನೂ ಚಿಕ್ಕವರು ಮುಂದೆ ನೋಡೋಣ. ❖

# ಮನಸ್ಸು, ನಗು ‘ಮನಸ್ಮಿತ’

ಚರಣ್ ಗೌಡ, ಸಂಜನಾದಾಸ್

**ಹೊಸಬರೇ** ಸೇರಿಕೊಂಡು ನಿರ್ಮಿಸಿರುವ ಚಿತ್ರ ‘ಮನಸ್ಮಿತ’. ಅಪ್ಪಣ್ಣ ಸಂತೋಷ್ ಅವರು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ತಾಯಿ ಸೀತಮ್ಮ ವಿ.ಟಿ. ಹೆಸರಿನಲ್ಲಿ ಜಮುನ ಪ್ರೊಡಕ್ಷನ್ಸ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗಿದೆ. ದೀಪಿಕಾ ವಿ.ಎ. ಸಹ ನಿರ್ಮಾಪಕರು.

‘ಸಂಗೀತಮಯ ರೊಮ್ಯಾಂಟಿಕ್ ಥ್ರಿಲ್ಲರ್ ವಿಭಾಗದಲ್ಲಿ ಸಂಗೀತದ ನಾನಾ ಮಜಲುಗಳು ಹಾಗೂ ಪ್ರೇಮ ಕಥೆಯನ್ನು ತೋರಿಸಲಾಗಿದೆ. ಹುಡುಗಿಯ ಪ್ರೀತಿಯನ್ನು ಪಡೆಯಲು ಹುಡುಗ ತನ್ನನ್ನು ಹೇಗೆ ಸಮರ್ಪಿಸಿಕೊಳ್ಳುತ್ತಾನೆ. ಕುಟುಂಬದಲ್ಲಿ ಆದ ನೋವು ಹೋಗಲಾಡಿಸಲು ಯಾವ ರೀತಿ ಹೋರಾಡುತ್ತಾನೆ ಎಂಬುದನ್ನು ತೋರಿಸಲಾಗಿದೆ’ ಎಂದಿದೆ ಚಿತ್ರತಂಡ.

ಮಡಿಕೇರಿಯ ಚರಣ್‌ಗೌಡ ನಾಯಕ. ಬೆಂಗಳೂರಿನ ಸಂಜನಾದಾಸ್ ನಾಯಕಿ. ಗಾಯಕನಾಗಿ ಬಾಲಿವುಡ್‌ನ ಅತುಲ್ ಕುಲಕರ್ಣಿ, ನೃತ್ಯಗಾರ್ತಿಯಾಗಿ ಪಲ್ಲವಿ ಪುರೋಹಿತ್ ನಟಿಸಿದ್ದಾರೆ.

ಮನಮಂದಿರದಿ ಮತ್ತು ಶಂಭೋ ಶಂಕರ - ಹಾಡಿನ ಸಾಹಿತ್ಯ ಬರೆದು, ನಾಲ್ಕು ಹಾಡುಗಳಿಗೆ ಶಾಸ್ತ್ರೀಯ ಸಂಗೀತ ಸಂಯೋಜಿಸಿರುವವರು ಹರಿಕಾವ್ಯ. ಈ ಪೈಕಿ ಮನಮಂದಿರದಿ, ಶಂಭೋ ಶಂಕರ ಹಾಡಿಗೆ ಶಂಕರ್ ಮಹದೇವನ್ ಧ್ವನಿಯಾಗಿದ್ದಾರೆ. ಮುದ್ದಾದ ಬಾನುಲಿ ವರದಿ ಸಾಹಿತ್ಯವನ್ನು ಕೆ .ಕಲ್ಯಾಣ್ ಬರೆದಿದ್ದಾರೆ. ನೀಲ ಮೇಘ ಶ್ಯಾಮ ಕಂಡ... ಹಾಡನ್ನು ಮಂಜು ಎಂ. ದೊಡ್ಡಮನಿ ಬರೆದಿದ್ದಾರೆ. ಛಾಯಾಗ್ರಹಣ ಕೆ.ಎಸ್.ಚಂದ್ರಶೇಖರ್, ಸಂಕಲನ ಮಧುತುಂಬಕೆರೆ, ನೃತ್ಯ ಕಲೈ, ಸಾಹಸ ಕೌರವ ವೆಂಕಟೇಶ್ ಚಿತ್ರಕ್ಕಿದೆ. ಬೆಂಗಳೂರು, ಮರಳವಾಡಿ, ಕೊಡಗಿನ ತಾಣಗಳಲ್ಲಿ ಚಿತ್ರೀಕರಣ ನಡೆದಿದೆ. ❖

# ಸರಣಿ ಚಿತ್ರಗಳ ಮೆರವಣಿಗೆ



‘ಸಾರಾ ವಜ್ರ’ ರೆಹಮಾನ್ ಹಾಸನ್, ಅನುಪ್ರಭಾಕರ್, ರಮೇಶ್ ಭಟ್

## ಇಂದು ತೆರೆಗೆ

**ಸಾರಾ ವಜ್ರ:** ಸಾಹಿತಿ ಸಾರಾ ಅಬೂಬಕ್ಕರ್ ಅವರ ಕಾದಂಬರಿ ‘ವಜ್ರಗಳು’ ಆಧಾರಿತ ‘ಸಾರಾ ವಜ್ರ’ ಸಿನಿಮಾ ಮೇ 20ರಂದು ತೆರೆಕಂಡಿದೆ. ಆರ್ನಾ ಸಾಧ್ಯ (ಶ್ವೇತಾ) ಚಿತ್ರದ ನಿರ್ದೇಶಕಿ.

ಅನು ಪ್ರಭಾಕರ್, ಪತ್ರಕರ್ತ ರೆಹಮಾನ್ ಹಾಸನ್, ರಮೇಶ್ ಭಟ್, ಸುಧಾ ಬೆಳವಾಡಿ, ರಾಮಸ್ವಾಮಿ, ಪ್ರದೀಪ್ ಪೂಜಾರಿ, ವಿಭಾಸ್, ಸಾಯಿತೋಷಿತ್, ಅಂಕಿತಾ, ಆಯುಷ್ ಜಿ. ಶೆಟ್ಟಿ ತಾರಾಬಳಗದಲ್ಲಿದ್ದಾರೆ. ಪತ್ರಕರ್ತ ಬಿ.ಎಂ. ಹನೀಫ್ ಅವರ ಸಾಹಿತ್ಯದ ಐದು ಹಾಡುಗಳಿಗೆ ವಿ.ಮನೋಹರ್ ಸಂಗೀತ ಸಂಯೋಜಿಸಿದ್ದಾರೆ.

**ಪ್ರಾರಂಭ:** ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ಮನುರಂಜನ್ ರವಿಚಂದ್ರನ್ – ಕೀರ್ತಿ ಕಲ್ಕೇರಿ ಅಭಿನಯದ ‘ಪ್ರಾರಂಭ’ ಚಿತ್ರ ಇಂದು ತೆರೆಕಂಡಿದೆ. ಮನು ಕಲ್ಯಾಡಿ ನಿರ್ದೇಶಕರು. ಸುರೇಶ್ ಬಾಬು ಛಾಯಾಗ್ರಹಣವಿದೆ. ಜಗದೀಶ್ ಕಲ್ಯಾಡಿ ಈ ಚಿತ್ರದ ನಿರ್ಮಾಪಕರು.

**ಗರುಡ:** ಸಿದ್ಧಾರ್ಥ್ ಮಹೇಶ್, ಶ್ರೀನಗರ ಕಿಟ್ಟಿ, ಐಂದ್ರಿತಾ ರೇ, ಆಶಿಕಾ ರಂಗನಾಥ್ ಅಭಿನಯದ ‘ಗರುಡ’ ಇಂದು ತೆರೆ ಕಂಡಿದೆ.

ಕುಟುಂಬ ಹಾಗೂ ದೇಶಕ್ಕೆ ಮಾರಕ ಶಕ್ತಿಗಳ ವಿರುದ್ಧ ನಾಯಕನ ಹೋರಾಟ ಚಿತ್ರದ ಕಥೆ. ಧನಕುಮಾರ್ ಕೆ. ನಿರ್ದೇಶಕರು, ರಾಜ ರೆಡ್ಡಿ ನಿರ್ಮಾಪಕ.

**ಟ್ವೆಂಟಿವನ್ ಅವರ್ಸ್:** ಡಾಲಿ ಧನಂಜಯ, ರಾಹುಲ್ ಮಹದೇವ್, ಅಪೂರ್ವಾ ಭಾರಾದ್ವಾಜ್, ದುರ್ಗಾ ಕೃಷ್ಣ ಅಭಿನಯದ ಚಿತ್ರ ಟ್ವೆಂಟಿವನ್ ಅವರ್ಸ್. ಜೈಶಂಕರ್ ಪಂಡಿತ್ ನಿರ್ದೇಶಕರು. ❖

ಇಂದಿನಿಂದ ಅಮೋಘ ಪ್ರಾರಂಭ

ಬೆಂಗಳೂರು: PVR FORUM MALL, PVR ORION MALL, PVR VAISHNAVI, PVR REGALIA, PVR VEGA CITY, PVR MARKET CITY, PVR VR MALL, PVR SPIRIT MALL, PVR ARENA MALL, PVR GT WORLD, PVR AURA MALL, PVR ORION HOSKOTE
INOX GARUDA MALL, INOX LIDO ULSOOR, INOX MANTRI MALL, INOX SWAGATH MALL, INOX CENTRAL MALL, INOX NEIGHBOURHOOD, INOX BROOKFIELD, INOX GARUDA YELAHANKA, INOX RMZ MALL, INOX SBR HORIZON, INOX S MALL TUMKUR, Cinépolis MEENAKSHI MALL, Cinépolis ETA MALL
Cinépolis ORION EAST, Cinépolis SJR AREKERE, Cinépolis SHANTINIKETAN, Cinépolis CUNNIGHAM RD., GOPALAN CINEMAS INNOVATION, GOPALAN CINEMAS ARCH MALL, GOPALAN CINEMAS LEGACY MALL, GOPALAN CINEMAS GRAND MALL, KINO CINEMAS, ROCKLINE mall & cinemas, INNOVATIVE MULTIPLEX
ಸುಂಕದಕಟ್ಟೆ: ಮೋಹನ್
ಹರಿನಗರ: ವಿನಾಯಕ
ಗರುಡಾಚಾರ್‌ಪಾಳ್ಯ: ವಿ ಸಿನಿಮಾಸ್
ವರ್ತೂರ್: ವಿನಾಯಕ
ಚನ್ನಪಟ್ಟಣ: ಶಿವಾನಂದ
ಶಿರಾ: ರಂಗನಾಥ
ಮೈಸೂರು: DRC CINEMAS, INOX MALL OF MYSORE, PVR FORUM MALL, PVR GARUDA MALL, VISION CINEMAS
ಮಂಡ್ಯ: ನಂದ
ಮದ್ದೂರು: ಮಹಾವೀರ್
ಸಕಲೇಶಪುರ: ತೇಜಸ್ವಿನಿ
ಬನ್ನೂರು: ಇಂದಿರಾ
ಚನ್ನರಾಯಪಟ್ಟಣ: ಬಾಲಾಜಿ
ಪಾಂಡವಪುರ: ಕೋಕಿಲ
ಹಾಸನ: ಪಿಕ್ಚರ್ ಪ್ಯಾಲಸ್
ದಾವಣಗೆರೆ: MOVIE TIME CINEMAS
ಕೆ ಆರ್ ನಗರ: ಎಸ್‌.ಸಿ.ವಿ.ಡಿ.ಎಸ್
ಹುಬ್ಬಳ್ಳಿ: ಸುಜಾತಾ, PVR LAXMI MALL, Cinépolis URBAN OASIS
ಹೊಸರಿತ್ತಿ: ಕೃಷ್ಣ
ಸವದತ್ತಿ: ರೇಣುಕಾ
ಸವಣೂರು: ಸಿದ್ಧಲಿಂಗೇಶ್ವರ
ಬಿಜಾಪುರ: ಜಯಶ್ರೀ
ರಾಮದುರ್ಗ: ಶ್ರೀನಿವಾಸ
ರೋಣ: ರೇಣುಕಾ
ರಾಣೇಬೆನ್ನೂರು: ಸಂಗಂ
ಬೆಳಗಾವಿ: ಸಂತೋಷ್
ಇಂಡಿ: ಶ್ರೀನಿವಾಸ
ಬೀದರ್: ಸಪ್ನಾ ಮಹಲ್
ಗುಲ್ಬರ್ಗ: ಸಂಗಂ, MIRAJ CINEMAS, SHETTY'S MULTIPLEX
ಕೊಪ್ಪಳ: ಶಾರದಾ
ಹನುಮಸಾಗರ: ರಾಜ್‌ಕಮಲ್
ಶಿವಮೊಗ್ಗ: Bharath Cinemas CITY CENTRE
ಮಂಗಳೂರು: PVR FORUM FIZA, Cinépolis CITY CENTER, Bharath Cinemas BHARATH MALL
ಮಣಿಪಾಲ: INOX CENTRAL CINEMAS, Bharath Cinemas CANARA MALL
ಕುಂದಾಪುರ: Bharath Cinemas COASTAL CROWN
ಸುರತ್ಕಲ್: ಸಿನಿ ಗ್ಯಾಲಕ್ಸಿ
ಹಾಗು ರಾಜ್ಯಾದ್ಯಂತ

RELEASE LILAC ENTERTAINMENTS PH: 9916162366

ಕೆ.ಜಿ.ರಸ್ತೆ ಅನುಪಮ | ಲಾಲ್‌ಬಾಗ್ ರಸ್ತೆ URVASHI 4K DIGITAL 3D CINEMA | ಮಾಗಡಿ ರಸ್ತೆ ವೀರೇಶ್ | ರಾಜಾಜಿನಗರ ನವರಂಗ್




ಸಂಜಯನಗರ ವೈಭವ್
ಕಮಲಾನಗರ ವೀರಭದ್ರೇಶ್ವರ
ಜೆ.ಪಿ.ನಗರ ಸಿದ್ದೇಶ್ವರ
ಜೆ.ಪಿ.ನಗರ ರೇಣುಕಪ್ರಸನ್ನ
ಆವಲಹಳ್ಳಿ ವೆಂಕಟೇಶ್ವರ
ಅಗರ ತಿರುಮಲ
ತಾವರೆಕೆರೆ ಬಾಲಾಜಿ
ಕೆಂಗೇರಿ ರಾಬಿನ್
ಜಾಲಹಳ್ಳಿ ಎಚ್.ಎಂ.ಟಿ
ಮಲ್ಲೇಶ್ವರಂ ಸವಿತಾ
ಗೊಟ್ಟಿಗೆರೆ ಲಕ್ಷ್ಮಿ
ಯಶವಂತಪುರ ಉಲ್ಲಾಸ್
ರಾಜಗೋಪಾಲನಗರ ಮಾರುತಿ
ಉತ್ತರಹಳ್ಳಿ MUKTA A2 CINEMAS
ಗೊಲ್ಲರಹಟ್ಟಿ ವೆಂಕಟೇಶ್ವರ
ಚಿಕ್ಕಬಾಣಾವರ ಅಶೋಕ
ಮಲ್ಲತ್ತಹಳ್ಳಿ ವಿ.ಆರ್.ಸಿನಿಮ
ಕೊಡಿಗೇಹಳ್ಳಿ ರಾಜ್‌ಮುರಳಿ
ಉಲ್ಲಾಳ ವಜ್ರೇಶ್ವರಿ
ಗರುಡಾಚಾರ್‌ಪಾಳ್ಯ ವಿ.ಸಿನಿಮಾಸ್
ಗೌಡನಪಾಳ್ಯ ಶ್ರೀನಿವಾಸ
ಕೆ.ಆರ್.ಪುರಂ ಕೃಷ್ಣ
ಸರ್ಜಾಪುರ ರವಿ
ಚಿಕ್ಕಲಸಂದ್ರ ಬಾಲಾಜಿ
ನಾಗವಾರ ವೃದ್ಧಿ
ಮತ್ತಿಕೆರೆ ಸ್ವಾಗತ್ ಮುರಳಿ
ಯಲಹಂಕ ಗಣೇಶ್
ಜಿಗಣಿ ನಂದೀಶ್ವರ
ಹೊಸಕೋಟೆ ಅಲಂಕಾರ್
ಹಾರೋಹಳ್ಳಿ ವಿನಾಯಕ
ಕಾಡುಗೋಡಿ ಶ್ರೀನಿವಾಸ
PVR ORION | AURA FORUM | GT VAISHNAVI REGALIA MARKETCITY VR | UPTOWN VEGACITY SPIRIT | ARENA
INOX MANTRI CENTRAL SWAGATH GARUDA | RMZ YELAHANKA FORUM SBR HORIZON
Cinépolis ETA | SJR MEENAKSHI FUN | ORION EAST SHANTINIKETAN
GOPALAN CINEMAS ARCH | GRAND INNOVATION LEGACY SIGNATURE
ROCKLINE JALAHALLI
KINO CINEMAS SEEGEHALLI
INNOVATIVE MARATHHALLI
ತುಮಕೂರು ಕೃಷ್ಣ, INOX
ಕೋಲಾರ ಭವಾನಿ
ರಾಮನಗರ ಶಾನ್
ದೊಡ್ಡಬಳ್ಳಾಪುರ ಸೌಂದರ್ಯಮಹಲ್
ಶಿರಾ ಭಾಗ್ಯಲಕ್ಷ್ಮಿ
ಚನ್ನಪಟ್ಟಣ ಶ್ರೀಲಕ್ಷ್ಮಿ
ಚಿಕ್ಕಬಳ್ಳಾಪುರ ಬಾಲಾಜಿ
ನೆಲಮಂಗಲ ರೂಪ
ಕನಕಪುರ ವಾಣಿ
ಮಾಗಡಿ ಬಾಲಾಜಿ
ಮಾಲೂರು ಬೆನಕ
ವಿಜಯಪುರ ಸಂಗಮೇಶ್ವರ
ಕುಣಿಗಲ್ ಆಕಾಶ್
ಮಧುಗಿರಿ ಶಾಂತಲಾ
ತುರುವೇಕೆರೆ ಕೃಷ್ಣ
ಮೈಸೂರು ಗಾಯತ್ರಿ, DRC CINEMAS, PVR FORUM GARUDA, INOX, VISION CINEMAS, ಮಹದೇಶ್ವರ
ಮಂಡ್ಯ ಮಹಾವೀರ
ಹಾಸನ ಶ್ರೀಗುರು
ಚಾಮರಾಜನಗರ ಸಿಂಹ ಮೂವೀ
ಚನ್ನರಾಯಪಟ್ಟಣ ಧನಲಕ್ಷ್ಮಿ
ಮಳವಳ್ಳಿ ಮಹಾಲಕ್ಷ್ಮಿ
ಮದ್ದೂರು ಸಂಜಯ
ಕೊಳ್ಳೇಗಾಲ ಶಾಂತಿ
ಟಿ.ನರಸೀಪುರ ವಿಜಯ ಭಗವಾನ್
ಬನ್ನೂರು ಸೋಮೇಶ್ವರ
ಹೊಳೆನರಸೀಪುರ ಎಸ್.ಎಲ್.ಎನ್
ನಂಜನಗೂಡು ಭಾರ್ಗವಿ
ಕೆ.ಆರ್.ನಗರ ವೆಂಕಟೇಶ್ವರ
ಕೆ.ಎಂ.ದೊಡ್ಡಿ ಮಾರುತಿ
ಗುಂಡ್ಲುಪೇಟೆ ವೆಂಕಟೇಶ್ವರ
ಪಾಂಡವಪುರ ಲಕ್ಷ್ಮಿ
ಅರಸೀಕೆರೆ ಸಾಧನಾ
ಹುಣಸೂರು ಲೀಲಾ
ಪಿರಿಯಾಪಟ್ಟಣ ಶಾರದ
ಯಳಂದೂರು ಮಹದೇಶ್ವರ
ಬೆಳ್ಳೂರು ಕ್ರಾಸ್ ಮಾರುತಿ
ನಾಗಮಂಗಲ ವೆಂಕಟೇಶ್ವರ
ಶಿವಮೊಗ್ಗ ವೀರಭದ್ರೇಶ್ವರ, Bharath Cinemas
ಚಿಕ್ಕಮಗಳೂರು ಶ್ರೀಲೇಖ
ಸಾಗರ ಶ್ರೀ
ಶಿಕಾರಿಪುರ ಮಾಲತೇಶ್
ಚನ್ನಗಿರಿ ವೀರಭದ್ರೇಶ್ವರ
ಶಿರಾಳಕೊಪ್ಪ ಮಾರುತಿ
ಹೊನ್ನಾಳಿ ಶಾಂತ
ನ್ಯಾಮತಿ ಶ್ರೀಶೈಲ
ಸಂತೆಬೆನ್ನೂರು ವೆಂಕಟೇಶ್ವರ
ಅನವಟ್ಟಿ ರೇಣುಕಾ
ಅಜ್ಜಂಪುರ ವೆಂಕಟೇಶ್ವರ
ಚಿತ್ರದುರ್ಗ ಪ್ರಸನ್ನ
ದಾವಣಗೆರೆ ಗೀತಾಂಜಲಿ, MOVIE TIME
ಬಳ್ಳಾರಿ ನಟರಾಜ್ ಕಾಂಪ್ಲೆಕ್ಸ್
ಹೊಸಪೇಟೆ ಮೀರಾಲಂ
ಹಿರಿಯೂರು ನಂಜುಂಡೇಶ್ವರ
ಹಗರಿಬೊಮ್ಮನಹಳ್ಳಿ ವಿಷ್ಣು
ಹರಿಹರ ಜಯಶ್ರೀ
ಹೂವಿನಹಡಗಲಿ ಶಂಕರ್
ಸಂಡೂರು ವಾಸವಿ
ಹುಬ್ಬಳ್ಳಿ ಅಪ್ಸರಾ, PVR LAKSHMI PRIDE, Cinépolis
ಧಾರವಾಡ ಪದ್ಮ
ಬೆಳಗಾವಿ ಚಿತ್ರಾ, INOX KAPEEL
ಬಿಜಾಪುರ ಲಕ್ಷ್ಮಿ
ಗದಗ್ ಮಹಾಲಕ್ಷ್ಮಿ
ರಾಣೆಬೆನ್ನೂರು ಶಿವಶಕ್ತಿ
ಬಾಗಲಕೋಟೆ ವಾಸವಿ
ಇಳಕಲ್ ಶ್ರೀನಿವಾಸ
ಹಾವೇರಿ ಮಾಧವಿ
ಗೋಕಾಕ್ ಆನಂದ್
ರಬಕವಿ ಶ್ರೀನಿವಾಸ
ಜಮಖಂಡಿ ಸುವರ್ಣ
ಮುಧೋಳ ಶಿವಕಲ್ಯಾಣ
ಲಕ್ಷ್ಮೇಶ್ವರ ಕೃಷ್ಣ
ಸಿಂಧಗಿ ವಿನಾಯಕ
ಅಥಣಿ ದುರ್ಗಾಲಕ್ಷ್ಮಿ
ಬಾದಾಮಿ ಮಹಾಕೂಟೇಶ್ವರ
ಹೊನ್ನಾವರ ಪದ್ಮಾಂಜಲಿ
ಅಂಕೋಲಾ ಸಮರ್ಥ
ಗುಲ್ಬರ್ಗ SHETTY'S MULTIPLEX, MIRAJ
ಬೀದರ್ ಸಪ್ನ
ರಾಯಚೂರು MIRAJ
ಗಂಗಾವತಿ ಅಮರ್
ಕೊಪ್ಪಳ ಸ್ಟಾರ್
ಸಿಂಧನೂರು ಮಂಜುನಾಥ
ಮಾನ್ವಿ ಮಲ್ಲಿಕಾರ್ಜುನ
ದೇವದುರ್ಗ ಆನಂದ್
ಕುಷ್ಟಗಿ ಬಸವರಾಜ
ಮಸ್ಕಿ ಶರಣಬಸವೇಶ್ವರ
ಕರಟಗಿ ಲಕ್ಷ್ಮಿ
ಕನಕಗಿರಿ ರಾಧಿಕಾ
ಯಾದಗಿರಿ ಭಾಗ್ಯಲಕ್ಷ್ಮಿ
ಮಂಗಳೂರು SP CINEMAS, PVR, Cinépolis, Bharath Cinemas
ಉಡುಪಿ ಅಲಂಕಾರ್
ಮಣಿಪಾಲ INOX, Bharath Cinemas
ಕುಂದಾಪುರ Bharath Cinemas



## ಸುಭಾಷಿತ

ಯಾರಾದರೂ ಗಾಯವನ್ನು ಮಾಡಿದಾಗ, ಮಗುವಿನಂತೆ ಅದನ್ನು ತಕ್ಷಣವೇ ಮರೆತುಬಿಡಿ. ಎಂದಿಗೂ ಅದನ್ನು ಹೃದಯದಲ್ಲಿ ಇಟ್ಟುಕೊಳ್ಳಬೇಡಿ. ಅದು ದ್ವೇಷವನ್ನು ಹುಟ್ಟುಹಾಕುತ್ತದೆ. -ಶಿವಾನಂದ ಸರಸ್ವತಿ

# ದಾಖಲೆಯ ಎಸ್ಎಸ್ಎಲ್‌ಸಿ ಫಲಿತಾಂಶ ಸಂಕಷ್ಟದ ದಿನಗಳಲ್ಲಿ ಸಾಧನೆಯ ಹರ್ಷ

**ಕೊರೊನಾ** ಕಾರಣದಿಂದಾಗಿ ಹಳಿತಪ್ಪಿದ್ದ ಶೈಕ್ಷಣಿಕ ವ್ಯವಸ್ಥೆ ಮರಳಿ ಹಳಿ ಕಂಡುಕೊಳ್ಳುತ್ತಿರುವ ಸೂಚನೆಯನ್ನು 2021-22ರ ಎಸ್ಎಸ್ಎಲ್‌ಸಿ ಫಲಿತಾಂಶ ನೀಡುವಂತಿದೆ. ಕಳೆದ ಹತ್ತು ವರ್ಷಗಳಲ್ಲಿನ ಅತ್ಯುತ್ತಮ ಫಲಿತಾಂಶ ಇದಾಗಿದ್ದು, ಶೇಕಡ 85.63ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆ ಬರೆದಿದ್ದ 8.53 ಲಕ್ಷ ವಿದ್ಯಾರ್ಥಿಗಳಲ್ಲಿ, 7.30 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕೊರೊನಾ ನಿಯಂತ್ರಣಕ್ಕಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್‌ನಿಂದಾಗಿ ತರಗತಿಗಳು ಸಮರ್ಪಕವಾಗಿ ನಡೆಯದ ಕಾರಣದಿಂದ, 2020-21ರಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲರನ್ನೂ ಉತ್ತೀರ್ಣಗೊಳಿಸಲಾಗಿತ್ತು. ಕೊರೊನಾ ಆತಂಕದ ನಡುವೆಯೇ ನಡೆದ 2019-20ರ ಸಾಲಿನಲ್ಲಿ ಶೇ 72.42ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರು. ಕಳೆದ ಶೈಕ್ಷಣಿಕ ವರ್ಷ ಕೂಡ ಕೊರೊನಾ ದವಡೆಗೆ ಸಿಲುಕಿದ್ದರೂ, ಪರೀಕ್ಷೆಗಳು ನಡೆದು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿರುವುದು ಗಮನಾರ್ಹ ಸಂಗತಿ. ಎಸ್ಎಸ್ಎಲ್‌ಸಿ ಪರೀಕ್ಷೆ ಹಾಗೂ ಫಲಿತಾಂಶಕ್ಕೆ ವಿದ್ಯಾರ್ಥಿ ಜೀವನದಲ್ಲಿ ವಿಶೇಷ ಮಹತ್ವವಿದೆ. ಮುಂದಿನ ವಿದ್ಯಾರ್ಥಿ ಜೀವನಕ್ಕೆ ನಿರ್ದಿಷ್ಟ ದಿಕ್ಕು ತೋರಿಸುವ ಹಾಗೂ ಸ್ಪರ್ಧಾತ್ಮಕ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ದಿಸೆಯಲ್ಲಿ ಹತ್ತನೇ ತರಗತಿಯ ಪರೀಕ್ಷೆ-ಫಲಿತಾಂಶವನ್ನು ತೋರುಬೆರಳಿನ ರೂಪದಲ್ಲಿ ಪರಿಗಣಿಸಬಹುದು. ಇಂಥ ಅಮೂಲ್ಯ ಕಾಲಘಟ್ಟದ ರೂಪುರೇಷೆಯನ್ನೇ ಕೊರೊನಾ ಸೋಂಕಿನ ಆತಂಕ ಏರುಪೇರು ಮಾಡಿತ್ತು. ಆ ಕಹಿ ಅನುಭವಗಳನ್ನು ದಾಟಿ ಬಂದು, ದೃಢವಾಗಿ ಮುನ್ನಡೆಯುವ ಆತ್ಮವಿಶ್ವಾಸವನ್ನು ಪ್ರಸಕ್ತ ಫಲಿತಾಂಶ ನೀಡುವಂತಿದೆ. ಪ್ರಶ್ನೆಪತ್ರಿಕೆಗಳಲ್ಲಿ ಕಠಿಣ ಪ್ರಶ್ನೆಗಳ ಪ್ರಮಾಣವನ್ನು ಕಡಿಮೆ ಮಾಡಿರುವುದರ ಜೊತೆಗೆ, ತೇರ್ಗಡೆಗೆ ಕೆಲವೇ ಅಂಕಗಳ ಕೊರತೆಯಿದ್ದ ವಿದ್ಯಾರ್ಥಿಗಳಿಗೆ ಕೃಪಾಂಕಗಳನ್ನು ನೀಡಿರುವ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಧಾರ ಕೂಡ ಉತ್ತಮ ಫಲಿತಾಂಶದ ಹಿಂದಿದೆ. ಈ ಅಂಶವನ್ನೇ ಮುಂದು ಮಾಡಿಕೊಂಡು ವಿದ್ಯಾರ್ಥಿಗಳ ಸಾಧನೆಯನ್ನು ನಿರ್ಲಕ್ಷಿಸುವಂತಿಲ್ಲ. ಪ್ರತಿಕೂಲ ಪರಿಸ್ಥಿತಿಯಲ್ಲೂ ಉತ್ತಮ ಫಲಿತಾಂಶ ಪಡೆದುದರ ಹಿಂದೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ಅಪಾರ ಶ್ರಮವಿದೆ.

ಈ ಬಾರಿ ದಾಖಲೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅವರು ಕಾಲೇಜು ಪ್ರವೇಶ ಪಡೆಯುವಲ್ಲಿ ಅಡಚಣೆಗಳು ಉಂಟಾಗದಂತೆ ಸರ್ಕಾರ ಎಚ್ಚರ ವಹಿಸಬೇಕು

ಕಳೆದ ವರ್ಷಗಳಂತೆ ಈ ಬಾರಿಯ ಫಲಿತಾಂಶದಲ್ಲೂ ಕೆಲವು ಸಾಮ್ಯತೆಗಳಿವೆ ಬಾಲಕಿಯರ ಯಶಸ್ಸು ಹಾಗೂ ಗ್ರಾಮೀಣ ಪ್ರದೇಶಗಳ ಸಾಧನೆ ಗಮನಸೆಳೆಯುವಂತಿದೆ. ಶೇ 90.29ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದರೆ, ಬಾಲಕರ ಯಶಸ್ಸಿನ ಪ್ರಮಾಣ ಶೇ 81.30 ಮಾತ್ರ. ನಗರ ಪ್ರದೇಶಗಳ ಶೇ 86.64ರಷ್ಟು ಮಕ್ಕಳು ಯಶಸ್ಸು ಗಳಿಸಿದ್ದರೆ, ಗ್ರಾಮೀಣ ಪ್ರದೇಶಗಳ ಶೇ 91.32ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಸೌಲಭ್ಯಗಳ ಕೊರತೆಯ ನಡುವೆಯೂ ಗ್ರಾಮೀಣ ಪ್ರದೇಶಗಳ ಮಕ್ಕಳ ಸಾಧನೆ ಅಭಿನಂದನಾರ್ಹ. ಆದರೆ, ಸರ್ಕಾರಿ ಶಾಲೆಗಳು ಹಾಗೂ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಾಧನೆ ಕಳವಳ ಉಂಟುಮಾಡುವಂತಿದೆ. ಸರ್ಕಾರಿ ಶಾಲೆಗಳ ಸಾಧನೆ ಶೇ 88ರಷ್ಟಿದ್ದರೆ, ಅನುದಾನಿತ ಶಾಲೆಗಳ ಸಾಧನೆ ಶೇ 87.84 ಹಾಗೂ ಅನುದಾನರಹಿತ ಶಾಲೆಗಳಲ್ಲಿನ ಫಲಿತಾಂಶ ಪ್ರಮಾಣ ಶೇ 92.29ರಷ್ಟಿದೆ. ಕನ್ನಡ ಮಾಧ್ಯಮದ ಶೇ 87.65ರಷ್ಟು ಮಕ್ಕಳು ಯಶಸ್ಸು ಕಂಡಿದ್ದರೆ, ಇಂಗ್ಲಿಷ್ ಮಾಧ್ಯಮದ ಶೇ 92.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ನೂರಕ್ಕೆ ನೂರರಷ್ಟು ಅಂಕಗಳನ್ನು ಪಡೆದಿರುವ 145 ವಿದ್ಯಾರ್ಥಿಗಳಲ್ಲಿ ಸರ್ಕಾರಿ ಶಾಲೆಗಳ ಮಕ್ಕಳ ಸಂಖ್ಯೆ ಕೇವಲ 21. ಈ ವ್ಯತ್ಯಾಸವೇ ಸರ್ಕಾರಿ ಶಾಲೆಗಳ ಶಿಕ್ಷಣ ವ್ಯವಸ್ಥೆಯಲ್ಲಿ ಆಗಬೇಕಿರುವ ತ್ವರಿತ ಸುಧಾರಣೆಗಳ ಬಗ್ಗೆ ಗಮನಹರಿಸಲು ಸರ್ಕಾರವನ್ನು ಒತ್ತಾಯಿಸುವಂತಿದೆ. ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಲು ಎಸ್ಎಸ್ಎಲ್‌ಸಿ ಫಲಿತಾಂಶದ ಅಂಕಿ-ಅಂಶಗಳು ಪ್ರೇರಣೆಯಾಗಬೇಕು. ಫಲಿತಾಂಶಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳ ರ‍್ಯಾಂಕ್ ಪಟ್ಟಿಯನ್ನು ಪ್ರತಿವರ್ಷ ಬಿಡುಗಡೆ ಮಾಡಲಾಗುತ್ತಿತ್ತು. ಜಿಲ್ಲೆಗಳ ನಡುವೆ ಸ್ಪರ್ಧೆ ಬೇಡವೆನ್ನುವ ಕಾರಣಕ್ಕಾಗಿ, ಈ ಬಾರಿ 'ಗುಣಾತ್ಮಕ ಫಲಿತಾಂಶ ವಿಶ್ಲೇಷಣಾ ಆಧಾರಿತ ಜಿಲ್ಲಾ ಶ್ರೇಣಿ'ಯನ್ನು ಪ್ರಕಟಿಸಲಾಗಿದೆ. ಈ ಪಟ್ಟಿಯಲ್ಲಿ 'ಬಿ' ಶ್ರೇಣಿಯಲ್ಲಿರುವ ಬೆಂಗಳೂರು ದಕ್ಷಿಣ ಹಾಗೂ ಯಾದಗಿರಿ ಜಿಲ್ಲೆಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ಜಿಲ್ಲೆಗಳನ್ನು 'ಎ' ಶ್ರೇಣಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಯಾರನ್ನೂ ಹೆಚ್ಚು ಬೇಸರಗೊಳಿಸದ ಹೊಸ ವ್ಯವಸ್ಥೆಯಿಂದಾಗಿ ಜಿಲ್ಲೆಗಳ ನಡುವಿನ ಶೈಕ್ಷಣಿಕ ಸಾಧನೆಯ ವ್ಯತ್ಯಾಸ ಎದ್ದುಕಾಣಿಸುವುದಿಲ್ಲ. ಈ ವ್ಯತ್ಯಾಸ ಸ್ಪಷ್ಟವಾಗದೇ ಹೋದರೆ, ನಿರ್ದಿಷ್ಟ ಭಾಗದಲ್ಲಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇರಬಹುದಾದ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಿಕೊಳ್ಳುವ ಅವಕಾಶಗಳನ್ನು ದುರ್ಬಲಗೊಳಿಸಿದಂತಾಗುತ್ತದೆ ಎನ್ನುವುದನ್ನು ಸರ್ಕಾರ ಗಮನಿಸಬೇಕು. ದಾಖಲೆ ಸಂಖ್ಯೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಕಾಲೇಜು ಪ್ರವೇಶ ಪಡೆಯುವ ದಿಸೆಯಲ್ಲಿ ಅಡಚಣೆಗಳು ಉಂಟಾಗದಂತೆಯೂ ಸರ್ಕಾರ ಎಚ್ಚರ ವಹಿಸಬೇಕಾಗಿದೆ.

## ದಿನದ ಟ್ವೀಟ್

### ಏರಿಕೆ- ಇಳಿಕೆ

**ಈ ಕ್ಷಣದಲ್ಲಿ ದೇಶದಲ್ಲಿ ಎರಡು ಸಂಗತಿಗಳು ಮೇಲ್ಮುಖವಾಗಿವೆ: ಎಲ್‌ಪಿಜಿ ದರ ಮತ್ತು ಆರ್‌ಪಿಜಿ ಮಟ್ಟ (ಆರ್‌ಪಿಜಿ ಎಂದರೇನೆಂದು ತಿಳಿಯದವರಿಗಾಗಿ- ರಿಲಿಜಿಯಸ್ ಪೋಲರೈಸೇಷನ್ ಗ್ರಾಫ್- ಧಾರ್ಮಿಕ ಧ್ರುವೀಕರಣದ ಗ್ರಾಫ್). ಇಳಿಮುಖವಾಗುತ್ತಿರುವುದು ಏನು? ಸಿಎಸ್: ಕಾಮನ್ ಸೆನ್ಸ್.**

**ರಾಜ್‌ದೀಪ್ ಸರ್‌ದೇಸಾಯಿ,** ಪತ್ರಕರ್ತ

## ಕಿಡಿನುಡಿ

**ಕೆರೆ, ಗೋಮಾಳದ ಜಾಗದಲ್ಲಿ ಮನೆಯ ಮಾಡಿ ಮಳೆನೀರಿಗಂಜಿದೊಡೆಂತಯ್ಯ...
ಮೂರು ಹೊತ್ತೂ ವಾಟ್ಸ್ಆ್ಯಪ್ ಫಾರ್ವರ್ಡ್ ಮಾಡುವುದರಲ್ಲೇ ಮುಳುಗಿ ರಸ್ತೆಗುಂಡಿ, ಹೊಂಡ ಅಂತ ದೂರಿದೊಡೆಂತಯ್ಯ...
ಪಾಲಿಕೆ ಸದಸ್ಯರೇ ಇಲ್ಲದೆ ಎರಡು ವರ್ಷ ಆದರೂ ತಲೆಕೆಡಿಸಿಕೊಳ್ಳದೆ ಆಡಳಿತವಿಲ್ಲ ಎಂದು ದೂರಿದೊಡೆಂತಯ್ಯ...**

**ವಸಂತ ಶೆಟ್ಟಿ,** ಬರಹಗಾರ

## 25 ವರ್ಷಗಳ ಹಿಂದೆ

ಮಂಗಳವಾರ, 20-5-1997

**● ಒಂದು ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ**

**ಬೆಂಗಳೂರು, ಮೇ 19-** ರಾಜ್ಯ ಸರ್ಕಾರ ಈ ಸಾಲಿನಲ್ಲಿ ಒಟ್ಟಾರೆ 1,050 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1,00,000 ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಿದೆ.

ಸುಮಾರು 400 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಹದಿಮೂರು ನೀರಾವರಿ ಯೋಜನೆಗಳನ್ನು ಒಂದು ವರ್ಷದ ಒಳಗೆ ಪೂರ್ಣಗೊಳಿಸಿ 47,043 ಹೆಕ್ಟೇರ್ ಪ್ರದೇಶಕ್ಕೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ 650 ಕೋಟಿ ರೂಪಾಯಿಗಳನ್ನು ಒದಗಿಸಿ 50,000 ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವುದಾಗಿ ಭಾರಿ ನೀರಾವರಿ ಖಾತೆ ಸಚಿವ ಕೆ.ಎನ್. ನಾಗೇಗೌಡ ಅವರು ಇಂದು ಇಲ್ಲಿ ತಿಳಿಸಿದರು.

**● ಮಹಿಳಾ ಮಸೂದೆ ಜಾರಿಗೆ ಜನತಾದಳ ಬದ್ಧ: ಪಾಸ್ವಾನ್**

**ನವದೆಹಲಿ, ಮೇ 19 (ಪಿಟಿಐ)-** ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆಗೆ ಜನತಾದಳ ಬದ್ಧವಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಅವರು ಇಂದು ಇಲ್ಲಿ ಹೇಳಿದರು.

'ಸ್ವಾರ್ಥಕ್ಕಾಗಿ ಈ ಮಸೂದೆಯನ್ನು ವಿರೋಧಿಸುವವರು ಸಾಮಾಜಿಕ ನ್ಯಾಯದ ಬಣ್ಣ ಬಳಿಯುತ್ತಿದ್ದಾರೆ' ಎಂದ ಅವರು, ಪಕ್ಷ ಈಗಾಗಲೇ ಮಸೂದೆಯನ್ನು ಬೆಂಬಲಿಸುವ ನಿರ್ಣಯ ತೆಗೆದುಕೊಂಡಿದೆ. ಕೆಲ ಸದಸ್ಯರು ವೈಯಕ್ತಿಕವಾಗಿ ಇದನ್ನು ವಿರೋಧಿಸಿದ ಮಾತ್ರಕ್ಕೆ ಅದು ಪಕ್ಷದ ನಿರ್ಧಾರವಾಗಲಾರದು ಎಂದು ಹೇಳಿದರು.

## 50 ವರ್ಷಗಳ ಹಿಂದೆ

ಶನಿವಾರ, 20-5-1972

**● ಇಂದಿರಾ ಐರೋಪ್ಯ ಪ್ರವಾಸದ ನಂತರ ಭಾರತ- ಪಾಕ್ ಶೃಂಗಸಭೆ**

**ನವದೆಹಲಿ, ಮೇ 19-** ಮುಂದಿನ ತಿಂಗಳ ಅಂತ್ಯದಲ್ಲಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಕೆಲವು ಐರೋಪ್ಯ ದೇಶಗಳಿಗೆ ಭೇಟಿ ಕೊಟ್ಟು ಭಾರತಕ್ಕೆ ಹಿಂದಿರುಗಿದ ನಂತರ ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಮತ್ತು ಶ್ರೀಮತಿ ಗಾಂಧಿ ಅವರ ನಡುವಣ ಯೋಜಿತ ಶೃಂಗಸಭೆ ನಡೆಯಬಹುದೆಂದು ಸರ್ಕಾರ ಇಂದು ವಿರೋಧ ಪಕ್ಷಗಳ ನಾಯಕರಿಗೆ ತಿಳಿಸಿತು.

ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ವಿರೋಧ ಪಕ್ಷಗಳ ನಾಯಕರನ್ನು ಬರಮಾಡಿಕೊಂಡು ಮರ್ರಿ ಮತ್ತು ಇಸ್ಲಾಮಾಬಾದ್‌ನಲ್ಲಿ ನಡೆದ ಭಾರತ-ಪಾಕಿಸ್ತಾನ ಪ್ರತಿನಿಧಿಗಳ ಮಟ್ಟದ ಮಾತುಕತೆ ಬಗ್ಗೆ ವರದಿ ನೀಡಿದರು.

**● ಅತಿಕ್ರಮಿಸುವ ಪಾಕ್ ವಿಮಾನಕ್ಕೆ ಗುಂಡು: ಪಡೆಗಳಿಗೆ ಕಟ್ಟಾಜ್ಞೆ**

**ನವದೆಹಲಿ, ಮೇ 19-** ಭಾರತದ ವಾಯು ಸೀಮೋಲ್ಲಂಘನೆ ಮಾಡುವ ಪಾಕಿಸ್ತಾನದ ಯಾವುದೇ ವಿಮಾನವನ್ನು ಗುಂಡಿಕ್ಕಿ ಕೆಡವಲು ಗಡಿ ಭದ್ರತಾ ಪಡೆಗಳಿಗೆ ಆಜ್ಞೆ ಮಾಡಲಾಗಿದೆ ಎಂದು ರಕ್ಷಣಾ ಖಾತೆಯ ರಾಜ್ಯ ಸಚಿವ ವಿ.ಸಿ.ಶುಕ್ಲ ಅವರು ಇಂದು ಲೋಕಸಭೆಗೆ ತಿಳಿಸಿದರು.

ಭಾರತದ ವಾಯು ಪ್ರದೇಶದೊಳಕ್ಕೆ ನುಸುಳಿ ಬರುವ ವಿಮಾನಗಳ ಬಗ್ಗೆ ಯಾವ ರೀತಿ ವ್ಯವಹರಿಸಬೇಕೆಂಬುದು ಅಲ್ಲಿನ ಪಡೆಗಳಿಗೆ ಬಿಟ್ಟದ್ದು ಎಂದು ಅವರು ಹೇಳಿದರು.

ದೇಶವನ್ನು ಒಗ್ಗೂಡಿಸುವ ಮಹತ್ತರ ಕೆಲಸ ಕಾಂಗ್ರೆಸ್ ಪಕ್ಷವೊಂದರಿಂದಲೇ ಸಾಧ್ಯವಾಗಲಾರದು

# ಭಾರತವನ್ನು ಜೋಡಿಸಬಲ್ಲದೆ ಕಾಂಗ್ರೆಸ್?

ವಿಶ್ಲೇಷಣೆ

**ನಟರಾಜ್ ಹುಳಿಯಾರ್**

**ಕಾಂಗ್ರೆಸ್** ಪಕ್ಷದ ಉದಯಪುರ ಚಿಂತನ ಶಿಬಿರದಲ್ಲಿ ಪಕ್ಷದ ಮರುಹುಟ್ಟಿನ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಚುನಾವಣಾ ತಂತ್ರನಿಪುಣ ಪ್ರಶಾಂತ್ ಕಿಶೋರ್ 'ಇಂದಿರಾ ಗಾಂಧಿ ಪೂರ್ವದ ಕಾಂಗ್ರೆಸ್ ಮಾದರಿ' ಕುರಿತು ಮಾತಾಡಿರುವುದು ಕುತೂಹಲಕರ! ಕಾಂಗ್ರೆಸ್ ಪಕ್ಷದ ಪೂರ್ಣ ಚೇತರಿಕೆಗಾಗಿ ಕಿಶೋರ್ ತಯಾರಿಸಿದ್ದ 'ನಟರಾಜ ಮಾಡೆಲ್' ಹಳಬರ ಹಿಂಜರಿಕೆಯಿಂದಾಗಿ ನನೆಗುದಿಗೆ ಬಿದ್ದಿದೆ. ತಾವೇ ಹೊಸ ರಾಜಕೀಯ ಪಕ್ಷ ಕಟ್ಟಲು ಹೊರಟಿರುವ ಕಿಶೋರ್, 'ಇಂದಿರಾ ಗಾಂಧಿ ಬರುವುದಕ್ಕಿಂತ ಮೊದಲಿನ ಕಾಂಗ್ರೆಸ್ಸಿಗೆ ಸಮಾಜದ ಸಜ್ಜನರೆಲ್ಲ ಸಹಜವಾಗಿ ಸೇರುತ್ತಿದ್ದರು. ಅಂಥ ಮಾದರಿಯ ಪಕ್ಷವೊಂದನ್ನು ಈಗ ರೂಪಿಸಬೇಕಾಗಿದೆ' ಎಂದಿದ್ದಾರೆ.

ದೇಶದ ಒಳಿತನ್ನು ಬಯಸುವ ಜನ ಒಳ್ಳೆಯ ರಾಜಕೀಯ ಪಕ್ಷವೊಂದನ್ನು ಬೆಂಬಲಿಸುತ್ತಾರೆ ಎಂಬ ಈ ಚರ್ಚೆ ಒಳ್ಳೆಯತನಕ್ಕೂ ರಾಜಕಾರಣಕ್ಕೂ ಸಂಬಂಧವೇ ಇಲ್ಲದ ಧೂರ್ತ ರಾಜಕಾರಣದ ಕಾಲದಲ್ಲಿ ಮಹತ್ವದ್ದಾಗಿದೆ. ತಮ್ಮ ಪಕ್ಷದ ಅರವತ್ತು ವರ್ಷಗಳ ಹಿಂದಿನ ಮಾದರಿಯನ್ನು ಕಾಂಗ್ರೆಸ್ಸಿಗರೇ ಮರೆತಿರುವಾಗ, ಹೊಸ ರಾಜಕಾರಣ ಮಾಡಬಯಸುವ ಕಿಶೋರ್ ಆ ಮಾದರಿಯನ್ನು ಮತ್ತೆ ಹುಡುಕುತ್ತಿದ್ದಾರೆ. ಈ ಮಾದರಿಯ ಅನಿವಾರ್ಯ, ಅರ್ಥಪೂರ್ಣತೆಗಳನ್ನು ಕಾಂಗ್ರೆಸ್ ಮತ್ತೆ ಕಂಡುಕೊಂಡರೆ ಮಾತ್ರ ಅದು ಈ ವರ್ಷದ ಗಾಂಧಿ ಜಯಂತಿಯಂದು ಆರಂಭಿಸಲಿರುವ 'ಭಾರತ್ ಜೋಡೋ' ಯಾತ್ರೆ ಪ್ರಾಮಾಣಿಕವಾಗಿ ಇರಬಲ್ಲದು.

ರಾಜಕಾರಣದ 'ಬೇಸಿಕ್ಸ್'ಗೆ ಮರಳುವ ಬಗ್ಗೆ ಮಾತಾಡುವ ಕಾಂಗ್ರೆಸ್ಸಿಗರಿಗೆ ಈಗಲಾದರೂ ತಮ್ಮ ಪಕ್ಷದ ಮೂಲ ಉದ್ದೇಶಗಳತ್ತ ಹೊರಳಿ ನೋಡುವ ತಾಳ್ಮೆಯಿದೆಯೇ? ಸ್ವಾತಂತ್ರ್ಯಾನಂತರ, 'ಕಾಂಗ್ರೆಸ್ ಪಕ್ಷ ವಿಸರ್ಜನೆಗೊಂಡು ಭಾರತದ ಹಳ್ಳಿಗಳ ಅಸ್ಪೃಶ್ಯತೆ, ನಿರುದ್ಯೋಗ, ಜಾತೀಯತೆ, ಕೋಮು ಅಸಹನೆ, ಅನಾರೋಗ್ಯಗಳನ್ನು ಕೊನೆಗಾಣಿಸುವ ಲೋಕಸೇವಕ ಸಂಘವಾಗಬೇಕು; ಸಾಮಾಜಿಕ, ನೈತಿಕ, ಆರ್ಥಿಕ ಸ್ವಾತಂತ್ರ್ಯಗಳಿಗಾಗಿ ಹೋರಾಡುವ ಸಂಘವಾಗಿ ಅರಳಬೇಕು' ಎಂದು ಗಾಂಧೀಜಿ ಬಯಸಿದ್ದರು. ಆದರೆ ಅವತ್ತು ದೇಶವನ್ನು ಆಳಲು ಅಷ್ಟರಮಟ್ಟಿಗಾದರೂ ಸಿದ್ಧತೆಯಿದ್ದ ದೊಡ್ಡ ಪಕ್ಷಗಳಿರಲಿಲ್ಲ. ಗಾಂಧೀಜಿಯ ಅಂದಿನ ಕರೆ, ಗುರಿಗಳನ್ನು ವಿನೋಬಾ ಭಾವೆ, ಜೆ.ಪಿ., ಎಚ್.ಎಸ್. ದೊರೆಸ್ವಾಮಿ ಥರದ ಹಿರಿಯರು ಮುಂದಕ್ಕೆ ಒಯ್ದರು. ಆದರೆ ನೆಹರೂ ಥರದ ಕೆಲವರನ್ನು ಬಿಟ್ಟರೆ ಕಾಂಗ್ರೆಸ್ ಪಕ್ಷದ ಬಹುತೇಕರಿಗೆ ಇಂಥ ನಿಸ್ವಾರ್ಥ ನಾಯಕರ ಜೊತೆ ನಡೆಯುವ ಹೊಣೆಗಾರಿಕೆ, ಬದ್ಧತೆಗಳಿರಲಿಲ್ಲ; ಅಧಿಕಾರ ರಾಜಕಾರಣವೇ ಮುಖ್ಯವಾಗಿ, ಸಾರ್ವಜನಿಕ ಸೇವೆಯ ಬಗ್ಗೆ ಪಕ್ಷದಲ್ಲಿ ಅಸಡ್ಡೆ ಶುರುವಾಯಿತು. ಪಕ್ಷದ ಮೂಲ ಆದರ್ಶ, ತಾತ್ವಿಕತೆಗಳನ್ನು ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜದಲ್ಲಿ ಬೆಳೆಸಬಲ್ಲ ಸೇವಾ ಸಂಸ್ಥೆಗಳು ಕಾಂಗ್ರೆಸ್ಸಿನ ಅಂಗಸಂಸ್ಥೆಗಳಾಗಿ ದೊಡ್ಡ ಮಟ್ಟದಲ್ಲಿ ಬೆಳೆಯಲಿಲ್ಲ.

ಇಷ್ಟು ವರ್ಷಕಾಲ ಹಲ ಬಗೆಯ ಅಧಿಕಾರಗಳನ್ನು ಅನುಭವಿಸಿ, ಈಗಲೂ ಪಕ್ಷವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂದು ಗೊಣಗುತ್ತಿರುವ ಜಿ-23 ನಾಯಕರು ಕಾಂಗ್ರೆಸ್ ಪಕ್ಷದೊಳಗೇ ಇಂಥದೊಂದು ಸೇವಾ ಸಂಸ್ಥೆಯನ್ನು ಬಲಗೊಳಿಸಲು ತಮ್ಮ 'ಜನಪ್ರಿಯತೆ'ಯನ್ನು, ಗಳಿಸಿರುವ ಸಂಪತ್ತನ್ನು ಬಳಸಿದರೆ ಉಪಯುಕ್ತವಾಗಬಲ್ಲದು. ಪಕ್ಷ ಯಾವುದೇ ಹೊಸ ಪ್ರಯೋಗ ಮಾಡಲು ಬಿಡದೆ ಜಗ್ಗುತ್ತಿರುವ ಹಳೆ ತಲೆಗಳಿಂದ ಪಾರಾಗದಿದ್ದರೆ ಕಾಂಗ್ರೆಸ್ ನವಚೈತನ್ಯ ಪಡೆಯುವುದು ಕಷ್ಟ.

ಉದಯಪುರ ಚಿಂತನ ಶಿಬಿರದಲ್ಲಿ ರಾಹುಲ್ ಗಾಂಧಿ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿಸುವ ಚಿಂತನೆಗೆ ಕೊಂಚ ಒತ್ತು ಸಿಕ್ಕಂತಿದೆ. ಆದರೆ ರಾಹುಲ್ ಅವರಿಗೆ ನಿಜಕ್ಕೂ ಬೇಕಾಗಿರುವುದು ಹೊಸ ರೀತಿಯಲ್ಲಿ ಯೋಚಿಸಬಲ್ಲ ತಂಡ. ಕೆಲವು ವರ್ಷಗಳ ಕೆಳಗೆ ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಜ್ಯೋತಿರಾದಿತ್ಯ ಸಿಂಧ್ಯಾ, ಸಚಿನ್ ಪೈಲಟ್ ಥರದ ಯುವ ನಾಯಕರನ್ನು ಇಟ್ಟುಕೊಂಡು ರಾಹುಲ್ ಆರಂಭಿಸಿದ್ದ ಹೊಸ ತಲೆಮಾರಿನ ರಾಜಕೀಯಕ್ಕೆ ಕಾಂಗ್ರೆಸ್ಸಿನ ಹಿರಿತಲೆಗಳು ಅಡ್ಡಗಾಲು ಹಾಕಿದವು. ದೇಶದ ಮತದಾರರ ತಲೆಯಲ್ಲಿ ರಾಜಪ್ರಭುತ್ವ ಕಾಲದ ಗುಲಾಮಗಿರಿ ಮನೆ ಮಾಡಿರುವಂತೆ, ದೇಶದ ಎಲ್ಲ ರಾಜಕೀಯ ಪಕ್ಷಗಳಲ್ಲೂ 'ಮತ್ತೊಬ್ಬ ನಾಯಕನನ್ನು ಮುಗಿಸುವುದೇ ತಾನು ನಾಯಕನಾಗುವ ದಾರಿ' ಎಂಬ ರಾಜಾಳ್ವಿಕೆಯ ಕಾಲದ ಕ್ರೌರ್ಯ, ಕಾಯಿಲೆಗಳು ಮುಂದುವರಿದಿವೆ. ಹಿರಿಯ ಪಕ್ಷವಾದ ಕಾಂಗ್ರೆಸ್ಸಿನಲ್ಲಂತೂ ಆಳವಾಗಿ ಬೇರೂರಿರುವ ಈ ಕಾಯಿಲೆ ಪಕ್ಷವನ್ನು ಒಳಗೊಳಗೇ ಕೊರೆಯುತ್ತಿದೆ.

ಕಾಂಗ್ರೆಸ್ ಈ ಹಳೆಯ ಕಾಯಿಲೆಯನ್ನು ಗುಣಪಡಿಸಿಕೊಂಡು ದೇಶದ ಹಿತಕ್ಕಾಗಿ ರಾಜಕಾರಣ ಮಾಡಲು ಬಯಸಿದ್ದರೆ ಅದು ಹೊಸ ಪ್ರತಿಭೆಗಳನ್ನು ಬೆಳೆಸಬೇಕು. ಉದಯಪುರ ಚಿಂತನ ಶಿಬಿರದ ಅರ್ಧದಷ್ಟು ಪ್ರತಿನಿಧಿಗಳು ನಲವತ್ತು ವರ್ಷಕ್ಕಿಂತ ಕೆಳಗಿನವರಾಗಿದ್ದರು; ಟಿಕೆಟ್ ಹಂಚಿಕೆಯಲ್ಲಿ ಹಿರಿಯ-ಕಿರಿಯರ ನಡುವೆ ಸಮತೋಲನ ಕಾಯ್ದುಕೊಳ್ಳುವ ತೀರ್ಮಾನವಾಗಿದೆ. ಇವೆರಡೂ ಪಕ್ಷದ ಮುಂದಿನ ನಡಿಗೆಯ ದಿಕ್ಸೂಚಿಯಂತಿವೆ. 'ಭಾರತ್ ಜೋಡೋ' ಯಾತ್ರೆಯನ್ನು ಯುವ ನಾಯಕರು ಹೇಗೆ ಮುಂದೊಯ್ಯಬಲ್ಲರು ಎಂಬುದರ ಮೇಲೂ ಪಕ್ಷದ ದಿಕ್ಕು ದೆಸೆಗಳು ನಿರ್ಧಾರವಾಗಲಿವೆ.

ಕಾಂಗ್ರೆಸ್ಸಿನಲ್ಲಿ ಎಷ್ಟೋ ಕಾಲದಿಂದ ಯುವ ಪಡೆಯನ್ನು ಮುಂಚೂಣಿಗೆ ತರುವ ಕೆಲಸವೇ ನಿಂತುಹೋಗಿದೆ. ಕರ್ನಾಟಕದಲ್ಲೇ ನೋಡಿ: ಸ್ಪಷ್ಟ ಜಾತ್ಯತೀತ ಚಿಂತನೆಯುಳ್ಳ ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಯು.ಟಿ.ಖಾದರ್, ಕೃಷ್ಣ ಬೈರೇಗೌಡ, ಈಶ್ವರ ಖಂಡ್ರೆ ಥರದವರ ಶಕ್ತಿಯನ್ನು ಪಕ್ಷವು ಸದನದಲ್ಲೂ ಸದನದ ಹೊರಗೂ ಸರಿಯಾಗಿ ಬಳಸಿಕೊಂಡಿಲ್ಲ. ಇವರ ಜೊತೆಗೇ ರಿಜ್ವಾನ್, ಸೌಮ್ಯಾ ರೆಡ್ಡಿ, ಡಾ. ಅಂಜಲಿ ನಿಂಬಾಳ್ಕರ್, ಜಮೀರ್ ಅಹಮದ್ ಥರದ ಹೊಸ ತಲೆಮಾರಿನ ಶಾಸಕರು ಹೊಸ ತಲೆಮಾರಿನ ತರುಣ ತರುಣಿಯರ ಜೊತೆ ಹೊಸ ಭಾಷೆಯಲ್ಲಿ ಮಾತಾಡುವ ಅಗತ್ಯವಿದೆ. ಇವರಲ್ಲದೆ, ಇನ್ನೂ ಅಧಿಕಾರದ ಹತ್ತಿರವೂ ಸುಳಿಯದ ಪಕ್ಷದ ನೂರಾರು ತರುಣ ನಾಯಕ, ನಾಯಕಿಯರು ನಿತ್ಯದ ರಾಜಕಾರಣದ ವಿಭಜನೆಯ ಭಾಷೆಯನ್ನು ತಿರಸ್ಕರಿಸಿ, ಜನರನ್ನು ಒಗ್ಗೂಡಿಸುವ ಹೊಸ ಭಾಷೆಯನ್ನು ಬಳಸಬೇಕು; ಆಗ ಮಾತ್ರ ಭಾರತವನ್ನು ಜೋಡಿಸುವ ಕೆಲಸ ಸರಿಯಾಗಿ ಶುರುವಾಗಬಲ್ಲದು.

ಉದಯಪುರ ಶಿಬಿರದಲ್ಲಿ 'ಪ್ರಾದೇಶಿಕ ಪಕ್ಷಗಳಿಗೆ ಸಿದ್ಧಾಂತದ ಕೊರತೆಯಿದೆ' ಎಂಬ ರಾಹುಲ್ ಮಾತಿಗೆ ಎಚ್.ಡಿ.ಕುಮಾರಸ್ವಾಮಿ, ತೇಜಸ್ವಿ ಯಾದವ್ ಎತ್ತಿರುವ ಆಕ್ಷೇಪ ಸಕಾರಣವಾಗಿದೆ. 'ಕಾಂಗ್ರೆಸ್‌ಗೆ ಇರುವ ರಾಷ್ಟ್ರೀಯ ಉದ್ದೇಶ ಮತ್ತು ಪ್ರಾದೇಶಿಕ ಪಕ್ಷಗಳ ಪ್ರಾದೇಶಿಕ ಉದ್ದೇಶದ ವ್ಯತ್ಯಾಸ ಕುರಿತು ಮಾತ್ರ ರಾಹುಲ್ ಹೇಳಿದ್ದಾರೆ' ಎಂದು ಶಶಿ ತರೂರ್ ವಿವರಣೆ ಕೊಟ್ಟಿದ್ದರೂ, ಪ್ರಾದೇಶಿಕ ಪಕ್ಷಗಳ ಅನುಮಾನ ಮಾಯವಾಗಿಲ್ಲ. ಯಾಕೆಂದರೆ, ಆರೋಗ್ಯಕರ ಧೋರಣೆಯ ಪ್ರಾದೇಶಿಕ ಪಕ್ಷಗಳ ಜೊತೆಜೊತೆಗೇ ಕಾಂಗ್ರೆಸ್ಸಿನ 'ಭಾರತ್ ಜೋಡೋ' ನಡಿಗೆ ಮುನ್ನಡೆಯಬೇಕಾಗಿದೆ.

ಧಾರ್ಮಿಕ ಜಗಳಗಳಿಂದಾಗಿ ಕೂಡ ನೆರೆಯ ಶ್ರೀಲಂಕಾ ನೆಲ ಕಚ್ಚಿರುವ ಕಾಲದಲ್ಲಿ, 'ಭಾರತ್ ಜೋಡೋ' ಯಾತ್ರೆ ಅಧಿಕಾರ ರಾಜಕಾರಣದ ಏಕಮಾತ್ರ ಗುರಿ ಬಿಟ್ಟು, ದೇಶವನ್ನು ಒಗ್ಗೂಡಿಸುವ ನಿಜವಾದ ಉದ್ದೇಶದಿಂದ ನಡೆದರೆ ಮಾತ್ರ ಜನರಲ್ಲಿ ಹೊಸ ಭರವಸೆ ಮೂಡಬಲ್ಲದು. ಒಡಕಿನ ರಾಜಕಾರಣ ದೇಶವನ್ನು ಒಡೆಯುತ್ತಿರುವ ರೀತಿ ಕಂಡು ಜನ ಅಸಹ್ಯಗೊಂಡಿದ್ದಾರೆ. ಬಾಯಿ ಬಿಟ್ಟು ಮಾತಾಡದ ಜನ ನೆಮ್ಮದಿಯ ಬದುಕಿಗಾಗಿ ಕಾತರಿಸುತ್ತಿದ್ದಾರೆ. ಆದ್ದರಿಂದಲೇ 'ಭಾರತ್ ಜೋಡೋ'ದ ನಡಿಗೆ, ಭಾಷೆ, ನುಡಿಗಟ್ಟು, ಕಾಳಜಿ, ಗುರಿ ಎಲ್ಲವೂ ಪ್ರಾಮಾಣಿಕ ನಂಬಿಕೆಯಿಂದ ರೂಪುಗೊಳ್ಳಬೇಕಾಗಿದೆ. ಕಾಂಗ್ರೆಸ್ ಬಸವಳಿದಿದೆ; ಆದರೆ ಗಾಂಧಿ, ನೆಹರೂ, ಪಟೇಲರ ಜೊತೆಗೆ, ಒಂದು ಕಾಲಕ್ಕೆ ಜೆ.ಪಿ., ಸುಭಾಷ್‌ಚಂದ್ರ ಬೋಸ್, ಲೋಹಿಯಾ ಕೂಡ ಭಾಗವಾಗಿದ್ದ ಕಾಂಗ್ರೆಸ್ ಇವತ್ತಿಗೂ ಅಖಿಲ ಭಾರತ ಪಕ್ಷವಾಗಿಯೇ ಉಳಿದಿದೆ. ಅದು ತನ್ನ ದೊಡ್ಡ ನಾಯಕರ ಪರಂಪರೆಯನ್ನು ನೆನಪಿನಲ್ಲಿ ಇಟ್ಟುಕೊಂಡು, ಕೊನೆಯ ಪಕ್ಷ ನೆಹರೂ ಯುಗದ ವಿಶಾಲ ಚೌಕಟ್ಟನ್ನಾದರೂ ಪಡೆದರೆ ಮಾತ್ರ ದೇಶಕ್ಕೆ ಉಪಯುಕ್ತವಾಗಬಲ್ಲದು.

ರಾಜಕೀಯ ಪಕ್ಷಗಳು ಚುನಾವಣೆ ಗೆಲ್ಲುವುದು ಮುಖ್ಯ, ನಿಜ; ಆದರೆ ಅದರಾಚೆಗೆ ದೇಶದ ಮನಸ್ಸುಗಳನ್ನು ನಿಜಕ್ಕೂ ಜೋಡಿಸುವ ಕೆಲಸ ಮಾಡಿದಾಗ ಮಾತ್ರ ಹೊಸ ರಾಜಕಾರಣ ಸಾಧ್ಯ. ಕಾಂಗ್ರೆಸ್ ಸರ್ವ ಜಾತಿ, ಧರ್ಮ, ವರ್ಗಗಳನ್ನು ಒಳಗೊಳ್ಳುವ ವಿಶಾಲ ಸಿದ್ಧಾಂತವನ್ನು ಒಪ್ಪುವ ಪ್ರಾದೇಶಿಕ ಪಕ್ಷಗಳ ಜೊತೆಗೆ 'ಭಾರತ್ ಜೋಡೋ'ದ ಉದ್ದೇಶವನ್ನು ಬೆಸೆದು ಮುನ್ನಡೆದರೆ ಮಾತ್ರ ದೇಶದುದ್ದಕ್ಕೂ ಸದ್ಭಾವನೆಯನ್ನು ಹಬ್ಬಿಸುವ ತಂಡಗಳು ಸೃಷ್ಟಿಯಾಗಬಲ್ಲವು; ಆಗ ಮಾತ್ರವೇ ದೇಶದ ಸಜ್ಜನರು ಭಾರತವನ್ನು ಜೋಡಿಸುವ ಮಹತ್ಕಾರ್ಯದಲ್ಲಿ ನಾಮುಂದು ತಾಮುಂದು ಎಂದು ಭಾಗಿಯಾಗಬಲ್ಲರು.

## ಚುರುಮುರಿ



### ಫ್ಯಾಮಿಲಿ- ಟಿಕೆಟ್!

● ಬಿ.ಎನ್.ಮಲ್ಲೇಶ್

'ಏನ್ ಮಳಿನೋ ಮಾರಾಯ ಇದು? ಮಳಿಗಾಲ ಇನ್ನೂ ಶುರುನೇ ಆಗಿಲ್ಲ, ಆಗ್ಲೇ ಕೆತ್ತಿ ಬಡೀತಾ ಕುಂತೈತಿ... ಕೆರಿ ಕಟ್ಟಿ ಎಲ್ಲ ಈಗ್ಲೇ ಕೋಡಿ ಬಿದ್ದಾವಂತೆ' ದುಬ್ಬೀರ ತಲೆ ಕೊಡವಿದ.

'ಈ ರಾಜಕೀಯದೋರ ಚಾಳಿ ಅದ್ಕೂ ಬಡದಂಗೆ ಕಾಣುಸ್ತತಿ. ಚುನಾವಣಿ ಇನ್ನೂ ವರ್ಷ ಐತಿ, ಆಗ್ಲೇ ಇವರು ಮಿಶನ್ನು, ಟಾರ್ಗೆಟ್ಟು ಅಂತ ಶುರು ಹಚ್ಕಂಡಾರಲ್ಲ, ಹಂಗೆ' ಗುಡ್ಡೆ ನಕ್ಕ.

'ಹೌದೂ ಈ ಮಿಶನ್ ಅಂದ್ರೆ ಏನ್ಲೆ ಗುಡ್ಡೆ?' ಕೊಟ್ರೇಶಿ ಕೇಳಿದ.

'ಅದೂ ಒಂಥರ ಮಿಶನ್ ಗನ್ ಇದ್ದಂಗೆ... ಎದುರಾಳಿಗಳನ್ನ ಶೂಟ್ ಮಾಡೋ ತರ ಸೋಲ್ಸಿ ಎಲೆಕ್ಷನ್ ಗೆಲ್ಲೋದು'.

'ಲೇ... ಮಿಶನ್ ಅಂದ್ರ ವೋಟ್ ಹಾಕೋ ಮಿಶನ್ ಕಣ್ರಲೆ, ಮಿಶನ್‌ಗಳನ್ನ ಬುಕ್ ಮಾಡ್ಕಂಡು ಎಲೆಕ್ಷನ್ ಗೆಲ್ಲೋದು' ದುಬ್ಬೀರ ತಿದ್ದಿದ.

'ಅದಿರ್ಲಿ, ಒಂದ್ ಫ್ಯಾಮಿಲಿಗೆ ಒಂದೇ ಟಿಕೆಟಂತಲ್ಲೋ ತೆಪರಾ? ಮತ್ತೆ ಎರಡು ಬೇಕಂದ್ರೆ ಹೆಂಗೆ?' ಕೊಟ್ರೇಶಿ ಪ್ರಶ್ನೆ.

'ಹೆಂಗೆ ಅಂದ್ರೆ? ಅಪ್ಪ ಮಗ ಬ್ಯಾರೆ ಆಗಿದೀವಿ, ಆಸ್ತಿ ಪಾಲಾಗೇತಿ, ಎರಡು ಟಿಕೆಟ್ ಕೊಡಿ ಅಂದ್ರಾತು'.

'ಅಪ್ಪ ಒಬ್ರಿಗೇ ಎರಡು ಫ್ಯಾಮಿಲಿ ಇದ್ರೆ?' ಗುಡ್ಡೆ ಕೊಕ್ಕೆ.

'ಅದು ನಿನ್ ಪ್ರಾಬ್ಲಂ... ನನ್ನತ್ರ ಉತ್ತರ ಇಲ್ಲ' ತೆಪರೇಸಿ ನಕ್ಕ.

'ಈಗ ನಮ್ ದುಬ್ಬೀರಂಗೆ ಮದುವಿನೇ ಆಗಿಲ್ಲಪ, ಅವ್ನಿಗೆ ಹೆಂಗೆ?' ಕೊಟ್ರೇಶಿ ಕಿಸಕ್ಕಂದ.

'ಅವ್ನಿಗೂ ಟಿಕೆಟ್ ಸಿಗುತ್ತೆ, ಅದೂ ಫ್ಯಾಮಿಲೀನೆ'.

'ಫ್ಯಾಮಿಲೀನಾ? ಹೆಂಗೆ?'

'ಅವುಂದು ಒನ್ ಮ್ಯಾನ್ ಫ್ಯಾಮಿಲಿ. ಈಗ ಒನ್ ಮ್ಯಾನ್ ಆರ್ಮಿ ಅನ್ನಲ್ವಾ? ಆ ಥರ...'

ತೆಪರೇಸಿ ಮಾತಿಗೆ ಮೀಸೆ ತಿರುವಿದ ದುಬ್ಬೀರ, 'ಹೆಂಗಲೆ ಕೊಟ್ರ, ನಂದು ಒನ್ ಮ್ಯಾನ್ ಆರ್ಮಿ' ಎಂದ. ಕೊಟ್ರೇಶಿ ಪಿಟಿಕ್ಕನ್ನಲಿಲ್ಲ.

## ಸಂಗತ

# ಸಹಿಷ್ಣುತೆ: ಬಂದಿದೆ ಪರೀಕ್ಷಾ ಕಾಲ

ಮಾಡಬೇಕಾದ್ದು ಇತಿಹಾಸ ಬದಲಿಸುವುದಲ್ಲ... ಇತಿಹಾಸದಿಂದ ಪಾಠ ಕಲಿಯುವುದು

● ಡಾ. ಆರ್.ಲಕ್ಷ್ಮೀನಾರಾಯಣ

**ಭಾರತದ** ಮೇಲಿನ ಅಸಂಖ್ಯ ಮುಸ್ಲಿಂ ಆಕ್ರಮಣಗಳು ಮತ್ತು ಅದರ ಪರಿಣಾಮವಾಗಿ 700 ವರ್ಷಗಳ ಕಾಲ ಈ ದೇಶವನ್ನು ಅವರು ಆಳಿದ್ದು ಇತಿಹಾಸದ ಕಟು ಸತ್ಯ. ನಿರಂಕುಶ ಪ್ರಭುತ್ವವಾಗಿದ್ದರಿಂದ ಮತ್ತು ಆಗ ಆಳಿದವರ ನಿಘಂಟಿನಲ್ಲೇ ಅನ್ಯಮತ ಸಹಿಷ್ಣುತೆ ಎಂಬುದು ಇರಲಿಲ್ಲವಾದ್ದರಿಂದ ಹಾಗೂ ತಮ್ಮ ಆಳ್ವಿಕೆಗೆ ಒಳಪಟ್ಟವರ ದೇವಾಲಯಗಳನ್ನು ನಿರ್ನಾಮ ಮಾಡಿ ಅಲ್ಲೇ ಮಸೀದಿಗಳನ್ನು ಕಟ್ಟುವುದು ತಮ್ಮ ಆದ್ಯ ಕರ್ತವ್ಯವೆಂದು ಅವರು ಭಾವಿಸಿದ್ದರಿಂದ ಸಹಸ್ರಾರು ದೇವಾಲಯಗಳು ಹಾಗೆ ಮಸೀದಿಗಳಾದದ್ದು ಕೂಡ ಐತಿಹಾಸಿಕ ಸತ್ಯ.

ಅದೊಂದು ರಕ್ತರಂಜಿತ ಅಧ್ಯಾಯ. ಇದನ್ನು ಎಲ್ಲ ಇತಿಹಾಸಕಾರರೂ ಸಾರುತ್ತ ಬಂದಿದ್ದಾರೆ. ಆ ಹಳೆಯ ಇತಿಹಾಸವನ್ನು ನಾವ್ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಅದನ್ನು ಮರೆಯದೆ ಅಂಥ ಇತಿಹಾಸ ಪುನರಾವರ್ತಿತವಾಗದಂತೆ ನೋಡಿಕೊಳ್ಳುವುದಷ್ಟೇ ನಮ್ಮ ಹೊಣೆಗಾರಿಕೆ. ಆದರೆ ಅದಕ್ಕೆ ಈಗಿನ ಮುಸಲ್ಮಾನರಾರೂ ಹೊಣೆಗಾರರಲ್ಲವೇ ಅಲ್ಲ. ಆಗ ಆಳಿದವರ ಬಗ್ಗೆ ಇಡೀ ಮನುಕುಲಕ್ಕಿರುವುದು ತಿರಸ್ಕಾರ ಮಾತ್ರ ಎಂಬುದನ್ನು ಅರಿತು, ಹಿಂದಿನ ಇತಿಹಾಸದ ಆ ರಕ್ತರಂಜಿತ ಅಧ್ಯಾಯದಿಂದ ಈಗಿನ ಮುಸಲ್ಮಾನರು ಕಲಿಯಬೇಕಾದ ಪಾಠವೆಂದರೆ ಧರ್ಮ ಸಹಿಷ್ಣುತೆ.

ಹೊಸ ಸಂಗತಿಯೆಂದರೆ, ಸ್ವಾತಂತ್ರ್ಯಾ ನಂತರದ ಇಷ್ಟು ವರ್ಷಗಳ ಬಳಿಕ ಅದೂ ಅಯೋಧ್ಯಾ ವಿವಾದ ಮುಗಿದ ನಂತರದಲ್ಲಿ ಈಗ ಮತ್ತೆ ಮತ್ತೆ ಮಸೀದಿ-ಮಂದಿರದ ವಿವಾದವನ್ನು ಕೆದಕುತ್ತ ಹೋಗುತ್ತಿರುವುದು ಮತ್ತು ಅಲ್ಲೆಲ್ಲಾ ಮತ್ತೆ ದೇವಾಲಯಗಳನ್ನು ಸ್ಥಾಪಿಸುತ್ತೇವೆಂದು ಹೊರಡುತ್ತಿರುವುದು. ಇದು ಎಷ್ಟೂ ಸರಿಯಲ್ಲ. ಈ ದೇಶದಲ್ಲಿ ಕೋಮು ಸೌಹಾರ್ದ, ಸಾಮರಸ್ಯ ಉಳಿದು ಬರಬೇಕೆಂದು ಬಯಸುವ ಯಾವ ನಾಗರಿಕನೂ ಇದನ್ನು ಒಪ್ಪಲಾರ. ಬಾಬರಿ ಮಸೀದಿ ಪ್ರಕರಣದ ನಂತರ ಇಂಥವಕ್ಕೆಲ್ಲ ಅಂತ್ಯವಿರಾಮ ಹಾಕಬೇಕೆಂಬುದೇ ಸಮಚಿತ್ತದಿಂದ ಯೋಚಿಸುವ ಯಾವುದೇ ಭಾರತೀಯನ ಅಭಿಪ್ರಾಯ ಎಂದು ನನಗನಿಸುತ್ತದೆ. ಹಿಂದೂಗಳು ಯಾವತ್ತೂ ಪರಧರ್ಮ ಸಹಿಷ್ಣುಗಳೆಂಬುದನ್ನು ಅಭಿಮಾನದಿಂದ ಹೇಳುತ್ತಿರುತ್ತೇವೆ. ಈಗ ಅದರ ನಿಜವಾದ ಪರೀಕ್ಷಾ ಕಾಲ.

ಇನ್ನೊಬ್ಬರ ಪೂಜಾ ಸ್ಥಳಗಳನ್ನು ಧ್ವಂಸ ಮಾಡಿ ಮಸೀದಿ ಸ್ಥಾಪಿಸುವುದು ಹೇಯ ಕೃತ್ಯ ಎನ್ನುವ ನಾವು, ಈಗ ನೂರಾರು ವರ್ಷಗಳಿಂದ ತಮ್ಮ ಪ್ರಾರ್ಥನಾ ಸ್ಥಳವಾಗಿ ಮಾರ್ಪಡಿಸಿಕೊಂಡಿರುವ ಮಸೀದಿಯನ್ನು ಧ್ವಂಸಗೊಳಿಸಬೇಕು ಎಂದು ಹೇಳುವುದು ಹೇಗೆ ಹೇಯವಲ್ಲ ಎನ್ನುವುದೇ ಅರ್ಥವಾಗುವುದಿಲ್ಲ. ಒಂದು ಕಾಲದಲ್ಲಿ ಅದು ಹಿಂದೂಗಳ ಪೂಜಾಸ್ಥಳವಾಗಿತ್ತು ನಿಜ. ಆದರೆ ಈಗ ಅದು ಹೇಗೋ ಅವರದಾಗಿರುವಾಗ ಮತ್ತೆ ಅದರ ಮೇಲೆ ಹಕ್ಕು ಸ್ಥಾಪಿಸುವ ಅಗತ್ಯವಿದೆಯೇ? ಒಂದು ಲೆಕ್ಕದಲ್ಲಿ ಆ ಜಾಗ ಮತ್ತು ಅದರಲ್ಲಿನ ಮೂರ್ತಿಗಳು ಅಪವಿತ್ರಗೊಂಡು ಇಲ್ಲವೇ ವಿಕೃತಗೊಂಡು ಅದೆಷ್ಟೋ ವರ್ಷಗಳಾಗಿವೆ. ಮಸೀದಿಯೊಂದರ ಗೋಡೆಯಲ್ಲಿರುವ ಪೂಜಾ ಮೂರ್ತಿಗಳನ್ನು ಅಲ್ಲಿಯೇ ಹೋಗಿ ಪೂಜೆ ಮಾಡಬೇಕಾಗಿದೆಯೇ? ಬೇರೆಲ್ಲಿ ಬೇಕಾದರೂ ಮೂರ್ತಿಗಳನ್ನು ಸ್ಥಾಪಿಸಿ ಪೂಜಿಸಬಹುದಲ್ಲವೇ? ಆಕಾರವೇ ಇಲ್ಲದ ಕಲ್ಲಿಗೂ ದೈವತ್ವ ಆರೋಪಿಸುವ ಹಿಂದೂ ಮನಸ್ಸಿಗೆ ಇದು ಸಲೀಸು.

ಧರ್ಮಗಳು ಮನುಷ್ಯರನ್ನು ಕೂಡಿಸುತ್ತವೆಂದು, ಧರ್ಮ ಸಂಸ್ಥಾಪಕರೆಲ್ಲಾ ಉದಾತ್ತ ವ್ಯಕ್ತಿಗಳೆಂದು, ಎಲ್ಲ ಧರ್ಮಗಳೂ ಸಮಾನವೆಂದು ಅವರು ಹೇಳುತ್ತಾರೆಂಬ ಮಾತನ್ನು ನಾವು ನಂಬೋಣ. ಆದರೆ ಧರ್ಮಗಳ ಅನುಯಾಯಿಗಳಲ್ಲಿ ಒಂದಿಷ್ಟು ಜನರಿಗೆ ಒಮ್ಮೊಮ್ಮೆ ತಮ್ಮ ಧರ್ಮ ಮತ್ತು ತಾವು ಆರಾಧಿಸುವ ದೈವ ಪರಮ; ಉಳಿದವೆಲ್ಲ ಅವಕ್ಕಿಂತ ಕನಿಷ್ಠ ಎನಿಸಿಬಿಡುತ್ತದೆ. ಅದಕ್ಕೇ ಅವರು ಒಂದು ಧರ್ಮದ ಆರಾಧ್ಯ ದೈವದ ಜಾಗದಲ್ಲಿ ತಮ್ಮ ಆರಾಧ್ಯ ದೈವವನ್ನು ಸ್ಥಾಪಿಸುತ್ತ ಬಂದಿರುವುದಕ್ಕೆ ಜಗತ್ತಿನ ಸರಿಸುಮಾರು ಯಾವ ಧರ್ಮದ ಅನುಯಾಯಿಗಳೂ ಅಪವಾದವಲ್ಲ. ಹಿಂದೂ ಧರ್ಮವೂ ಅಲ್ಲ.

ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಂಡರೂ ಶರಣ ಆದಯ್ಯನು ಸೌರಾಷ್ಟ್ರದಲ್ಲಿ ಜಿನ ಬಿಂಬವನ್ನು ಒಡೆದು ಅಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದನ್ನು ಉಜ್ವಲವಾಗಿ ವರ್ಣಿಸುವುದನ್ನೇ ಉದ್ದೇಶವಾಗುಳ್ಳ ಕವಿ ರಾಘವಾಂಕನ ಸೋಮನಾಥ ಚಾರಿತ್ರ್ಯ ಮತ್ತು ಹರಿಹರನ ಆದಯ್ಯನ ರಗಳೆಗಳು ಶ್ರೇಷ್ಠ ಸಾಕ್ಷಿಗಳಾಗಿವೆ. ಏಕಾಂತರಾಮಯ್ಯನೂ ಅನೇಕ ಜಿನದೇವರುಗಳ ಜಾಗದಲ್ಲಿ ಲಿಂಗ ಸ್ಥಾಪಿಸಿದ್ದು ಕೂಡ ಇತಿಹಾಸ. ಕೊಪ್ಪಳದಲ್ಲಿ ಮತ್ತಿನ್ನಿತರ ಕಡೆ ಅನೇಕ ಜಿನಾಲಯಗಳನ್ನು ಶಿವಾಲಯಗಳನ್ನಾಗಿ ಪರಿವರ್ತಿಸಿದ್ದಕ್ಕೆ ಈಗಲೂ ಜ್ವಲಂತ ಸಾಕ್ಷ್ಯಗಳು ಲಭ್ಯ. ಹಾಗೆಯೇ ಜೈನ- ಶ್ರೀವೈಷ್ಣವರ ವ್ಯಾಜ್ಯಗಳು ಕರ್ನಾಟಕದ ಇತಿಹಾಸದಲ್ಲಿ ಸುಪ್ರಸಿದ್ಧ ಎಂಬುದಕ್ಕೆ ಬುಕ್ಕರಾಯ ಹಾಕಿಸಿಕೊಟ್ಟ ಶಾಸನವೇ ಇದೆ. ಅದೇ ರೀತಿ ಶೈವ- ವೈಷ್ಣವರ ವ್ಯಾಜ್ಯಗಳು ಇವೆ. ಬೌದ್ಧ ವಿಹಾರಗಳನ್ನೂ ದೇವಾಲಯಗಳನ್ನಾಗಿ ಪರಿವರ್ತಿಸಿದ್ದು ನಡೆದಿದೆ. ಹಾಗಾಗಿ ನಮ್ಮ ಬೆನ್ನನ್ನೂ ಒಮ್ಮೆ ನಾವೇ ನೋಡಿಕೊಂಡು ತಿಳಿಯಬೇಕಾದದ್ದು, ಮನುಷ್ಯರಿಗಾಗಿ ಧರ್ಮಗಳು ಇವೆಯೇ ವಿನಾ ಧರ್ಮಗಳಿಗಾಗಿ ಮನುಷ್ಯರಲ್ಲ.

ದೇಶದ ಸಕಲ ಜನರ ಸೌಹಾರ್ದ ಮತ್ತು ಸಾಮರಸ್ಯದ ದೃಷ್ಟಿಯಿಂದ, ದೇವಾಲಯ- ಮಸೀದಿ ವಿವಾದಗಳು ಅಂತಿಮಗೊಂಡಿವೆ ಎಂದು ಕೇಂದ್ರ ಸರ್ಕಾರ ಅಥವಾ ಸುಪ್ರೀಂ ಕೋರ್ಟ್ ಘೋಷಿಸಿಬಿಡಬೇಕು. ಇವಕ್ಕೆ ಎಲ್ಲಿಯಾದರೂ ಕೊನೆಯೊಂದು ಇಲ್ಲದಿದ್ದರೆ ಈ ವಿವಾದಗಳು ಸದಾ ಮುನ್ನೆಲೆಯಲ್ಲಿ ಇದ್ದುಬಿಡುವಂತಾಗಿ, ನೆಮ್ಮದಿ ಎಂಬುದು ಮೊಲದ ಕೋಡಾಗುವುದಷ್ಟೇ ಅಲ್ಲದೆ ಹಿಂದೂಗಳು ಶಾಂತಿಪ್ರಿಯರೆಂಬ ಖ್ಯಾತಿಗೂ ಭಂಗ ಬರುತ್ತದೆ.

## ವಾಚಕರ ವಾಣಿ

### ಪಾಕ್ ಪರ ಘೋಷಣೆ: ಶಿಕ್ಷೆಯಾಗಲಿ

ಈದ್ ಉಲ್ ಫಿತ್ರ್ ಹಬ್ಬದಂದು ನಂಜನಗೂಡು ತಾಲ್ಲೂಕಿನ ಕವಲಂದೆಯಲ್ಲಿ ಪ್ರಾರ್ಥನೆ ಸಲ್ಲಿಸಿ ನೂರಾರು ಸಂಖ್ಯೆಯಲ್ಲಿ ಮುಸ್ಲಿಮರು ಹೊರಟಿದ್ದ ದೃಶ್ಯಕ್ಕೆ ವ್ಯಕ್ತಿಯೊಬ್ಬ ಹಿನ್ನೆಲೆಯಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾನೆ ಎಂದು ಹೇಳಲಾಗಿರುವ 30 ಸೆಕೆಂಡ್‌ಗಳ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡಿದೆ. ಮೆರವಣಿಗೆಯಲ್ಲಿದ್ದ ಮುಸ್ಲಿಮರು ಈ ಘೋಷಣೆ ಕೂಗಿಲ್ಲ, ಬೇರೆ ವ್ಯಕ್ತಿಯೊಬ್ಬ ವಿಡಿಯೊಕ್ಕೆ ಧ್ವನಿ ನೀಡಿದ್ದಾನೆ ಎನ್ನಲಾಗಿದೆ.

ಇಂತಹ ಕೃತ್ಯಗಳ ಮೂಲಕ ಸಾಮಾಜಿಕ ಸಾಮರಸ್ಯಕ್ಕೆ ಕೊಳ್ಳಿ ಇಡಲು ಪ್ರಯತ್ನಿಸುವವರಿಗೆ ಶಿಕ್ಷೆ ಆಗದಿದ್ದರೆ ಇಂತಹವರು ಹುಟ್ಟಿಕೊಳ್ಳುತ್ತಲೇ ಇರುತ್ತಾರೆ. ಹುಬ್ಬಳ್ಳಿಯಲ್ಲಿ ಯುವಕನೊಬ್ಬ ವಿವಾದಾತ್ಮಕ ವಿಡಿಯೊವೊಂದನ್ನು ಸ್ಟೇಟಸ್‌ನಲ್ಲಿ ಹಾಕಿದ್ದಕ್ಕೆ ಅಲ್ಲಿ ಏನಾಯಿತು ಎಂಬುದನ್ನು ಇಡೀ ರಾಜ್ಯವೇ ನೋಡಿದೆ. ಶಾಂತಿ ಸಾಮರಸ್ಯಕ್ಕೆ ಹೆಸರಾದ ಕರ್ನಾಟಕದಲ್ಲಿ ಪದೇಪದೇ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕಾಗಿದೆ.

**ಡಾ. ಮಹೇಶ್ ಮೂರ್ತಿ,** ತುಮಕೂರು

### ಪಠ್ಯಪುಸ್ತಕ: ಪಿಡಿಎಫ್ ಪ್ರಕಟಿಸಿ

ರಾಜ್ಯದಲ್ಲಿ ಇದೇ 16ರಿಂದ ಶಾಲೆಗಳು ಆರಂಭವಾಗಿರುವುದು ಸ್ವಾಗತಾರ್ಹ. ಆದರೆ ಎಲ್ಲಾ ವಿಷಯಗಳ ಪಠ್ಯಪುಸ್ತಕಗಳು ಮಕ್ಕಳ ಕೈಸೇರಲು ಇನ್ನೂ ಮೂರು ತಿಂಗಳು ಬೇಕಾಗುವ ಸಾಧ್ಯತೆಯಿದೆ. ಪುನರ್‌ಪರಿಷ್ಕರಣೆ ಮತ್ತು ಪುಸ್ತಕ ಮುದ್ರಣಕ್ಕೆ ಇರುವ ಕಾಗದದ ಕೊರತೆಯೇ ಈ ವಿಳಂಬಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಈ ನಡುವೆ ಪಠ್ಯಪುಸ್ತಕಗಳಲ್ಲಿ ಕೆಲವು ಪಠ್ಯ, ಪಾಠಗಳನ್ನು ಕೈಬಿಟ್ಟಿರುವ ಬಗ್ಗೆ ತೀವ್ರ ಆಕ್ಷೇಪಗಳು ಕೇಳಿಬರುತ್ತಿವೆ. ಇದಕ್ಕೆ ಸಚಿವ ಬಿ.ಸಿ.ನಾಗೇಶ್ ಅವರು 'ಪಠ್ಯಪುಸ್ತಕ ಮುದ್ರಣ ಆಗಿ ಬಂದ ಮೇಲೆ ನೋಡಿ ಹೇಳಿ, ಆಗ ಇಲ್ಲದಿದ್ದಾಗ ಕೇಳಿ... ಶಿಕ್ಷಣದಲ್ಲಿ ರಾಜಕೀಯಕರಣ ಮಾಡುವುದಕ್ಕಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಪುಸ್ತಕದ್ದು ಎನ್ನಲಾದ ಪಿಡಿಎಫ್ ಅಧಿಕೃತವಲ್ಲ. ಮುದ್ರಿತ ಪಠ್ಯಪುಸ್ತಕ ಮಾತ್ರ ಅಧಿಕೃತ' ಎಂದು ಹೇಳಿಕೆ ನೀಡಿದ್ದಾರೆ (ಪ್ರ.ವಾ., ಮೇ 19). ಪಠ್ಯಪುಸ್ತಕಗಳ ಪಿಡಿಎಫ್‌ಗಳು ಸಿದ್ಧವಾಗದೆ ಮುದ್ರಣಕ್ಕೆ ಹೇಗೆ ಹೋಗಲು ಸಾಧ್ಯ? ಅಲ್ಲದೆ, ಪಠ್ಯಪುಸ್ತಕಗಳು ಮುದ್ರಣಗೊಂಡು ಬಂದ ಮೇಲೆ ಪ್ರಮುಖ ಪಾಠ, ಪಠ್ಯಗಳು ಇಲ್ಲದಿದ್ದರೆ ಹೇಗೆ ಸೇರಿಸಲು ಸಾಧ್ಯ? ಒಟ್ಟಾರೆ, ಸಚಿವರ ಹೇಳಿಕೆಯು ಅಚ್ಚರಿ ಮೂಡಿಸಿದೆ.

ಆದ್ದರಿಂದ ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯಲು ಮತ್ತು ಈಗಾಗಲೇ ಶಾಲೆಗಳು ಪ್ರಾರಂಭವಾಗಿರುವುದರಿಂದ ತಾತ್ಕಾಲಿಕವಾಗಿ ಪಾಠಪ್ರವಚನಗಳಿಗೆ ತೊಂದರೆಯಾಗದಿರಲು ಎಲ್ಲಾ ತರಗತಿಗಳ ಪಠ್ಯಪುಸ್ತಕಗಳ ಪಿಡಿಎಫ್‌ಗಳನ್ನು ಸರ್ಕಾರ 'ಕರ್ನಾಟಕ ಪಠ್ಯಪುಸ್ತಕ ಸಂಘ'ದ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು ಒಳ್ಳೆಯದು.

**ಡಾ. ಶಿವಕುಮಾರಿ ಎಂ.ಎಸ್.,** ಬೆಂಗಳೂರು

### ಒತ್ತಡರಹಿತ ಮೌಲ್ಯಮಾಪನಕ್ಕೆ ಅವಕಾಶವಿರಲಿ

ದ್ವಿತೀಯ ಪಿಯು ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನ ಮೇ 24ರಿಂದ ನಡೆಯಲಿದ್ದು, ಮೌಲ್ಯಮಾಪಕರು ದಿನಕ್ಕೆ 24 ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಸೂಚಿಸಿದೆ (ಪ್ರ.ವಾ., ಮೇ 19). ಮೌಲ್ಯಮಾಪನ ಕಾರ್ಯ ದೋಷಮುಕ್ತವಲ್ಲ ಎಂಬುದನ್ನು ಹಿಂದಿನ ಅನುಭವಗಳು ಸಾರಿ ಹೇಳುತ್ತವೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಅಂಕಗಳು ಬಾರದಿರುವಂತೆಯೇ, ಸಾಧಾರಣ ಮಟ್ಟದ ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಗೆ ಮೀರಿ ಅಂಕಗಳು ಬಂದಿರುವ ಬಹಳಷ್ಟು ಉದಾಹರಣೆಗಳಿವೆ. ಹಾಗೆಯೇ ಅಂಕಗಳ ಎಣಿಕೆಯಲ್ಲಿ (ಟೋಟಲ್) ತಪ್ಪುಗಳಾಗಿರುವುದು ವಿದ್ಯಾರ್ಥಿಗಳು ಮರುಎಣಿಕೆಗೆ (ರೀಟೋಟಲ್) ಅರ್ಜಿ ಹಾಕಿದಾಗ ಬಯಲಾಗುತ್ತದೆ.

ಈ ತಪ್ಪುಗಳಿಗೆ ಮೂಲ ಕಾರಣ ಮೌಲ್ಯಮಾಪಕರ ಮೇಲೆ ಅನಗತ್ಯವಾಗಿ ಹೇರುವ ಒತ್ತಡ. ಮೌಲ್ಯಮಾಪಕರು ಒತ್ತಡರಹಿತರಾಗಿದ್ದಲ್ಲಿ ಉತ್ತರಪತ್ರಿಕೆಯ ಮೌಲ್ಯ ನಿರ್ಧಾರ ಸಮರ್ಪಕವಾಗಿರುತ್ತದೆ ಮತ್ತು ಅಂಕಗಳ ಎಣಿಕೆಯಲ್ಲೂ ತಪ್ಪುಗಳನ್ನು ನಿವಾರಿಸಬಹುದು. ಮೌಲ್ಯಮಾಪಕರು ತಾವು ಎತ್ತಿಕೊಂಡ ಪ್ರತಿಯೊಂದು ಉತ್ತರಪತ್ರಿಕೆಯನ್ನೂ ಸಾಕ್ಷಾತ್ ವಿದ್ಯಾರ್ಥಿಗಳೇ ತಮ್ಮ ಮುಂದಿದ್ದಾರೆ ಎಂದು ಪರಿಭಾವಿಸಿ ಮೌಲ್ಯಮಾಪನ ಮಾಡಬೇಕಾಗುತ್ತದೆ. ಆದ್ದರಿಂದ ಮೌಲ್ಯಮಾಪಕರಿಗೆ ಯಾವುದೇ ಒತ್ತಡ ಇಲ್ಲದ ವಾತಾವರಣವನ್ನು ಇಲಾಖೆ ಕಲ್ಪಿಸಬೇಕಿದೆ.

**ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ,** ಬೆಂಗಳೂರು

### ಜನಸಾಮಾನ್ಯರಿಗೆ ಅಭದ್ರತೆಯ ಸಂದೇಶ

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಅಪರಾಧಿಯನ್ನು ಬಿಡುಗಡೆ ಮಾಡಿರುವ ಸುದ್ದಿ (ಪ್ರ.ವಾ., ಮೇ 19) ಓದಿ ಏಕೋ ಕಸಿವಿಸಿಯಾಯಿತು. ರಾಜೀವ್ ಗಾಂಧಿ ಅವರು ಹತ್ಯೆಯಾಗಿ ಸುಮಾರು 30ಕ್ಕೂ ಹೆಚ್ಚು ವರ್ಷಗಳು ಗತಿಸಿಹೋದರೂ ಆ ಪ್ರಕರಣಕ್ಕೆ ಒಂದು ತಾರ್ಕಿಕ ಅಂತ್ಯ ಹಾಡಲು ಇನ್ನೂ ಸಾಧ್ಯವಾಗದೇ ಇರುವುದು ನಾಚಿಕೆಗೇಡಿನ ಸಂಗತಿ. ಅಷ್ಟಾದರೂ ಕೊನೆಗೆ ಅಪರಾಧಿಯನ್ನು ಬಿಡುಗಡೆ ಮಾಡುವಂತೆ ಆದಾಗ, 'ಒಬ್ಬ ಮಾಜಿ ಪ್ರಧಾನಿಯ ಕಥೆಯೇ ಹೀಗಾದರೆ ಇನ್ನು ನಮ್ಮ ಪಾಡೇನು?' ಎಂಬ ಪ್ರಶ್ನೆ ಜನಸಾಮಾನ್ಯರಲ್ಲಿ ಮೂಡಿದರೆ ಅಚ್ಚರಿ ಏನಿಲ್ಲ. ಇದರಿಂದ ಜನಸಾಮಾನ್ಯರಿಗೆ ಅಭದ್ರತೆಯ ಸಂದೇಶ ರವಾನೆಯಾದರೆ ಅದಕ್ಕೆ ಹೊಣೆ ಯಾರು?!

**ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮತ್ತೂರ್, ಕೊಪ್ಪ

### ಅನುದಾನಿತ ಶಾಲಾ ಮಕ್ಕಳನ್ನೂ ಒಳಪಡಿಸಿ

ರಾಜ್ಯದಲ್ಲಿ ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಹಿನ್ನಡೆಯನ್ನು ಸರಿದೂಗಿಸಲು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹ.

ಇದು, ಮಕ್ಕಳ ಶೈಕ್ಷಣಿಕ ಬೆಳವಣಿಗೆ ದೃಷ್ಟಿಯಿಂದ ಪರಿಣಾಮಕಾರಿಯಾದುದು. ಆದರೆ ಇಂತಹ ಮಹತ್ವದ ಕಾರ್ಯಕ್ರಮದ ತರಬೇತಿಯನ್ನು ಸರ್ಕಾರಿ ಶಾಲಾ ಶಿಕ್ಷಕರಿಗೆ ಮಾತ್ರ ಕೊಟ್ಟು, ಅನುದಾನಿತ ಶಾಲಾ ಶಿಕ್ಷಕರಿಗೆ ಕೊಡದೇ ಇರುವುದು ತರವಲ್ಲ. ಇದರಿಂದ, ಅನುದಾನಿತ ಶಾಲಾ ಮಕ್ಕಳಿಗೆ ಇದರ ಉಪಯೋಗ ಸಿಗದಂತೆ ಆಗಿದೆ. ಹಾಗಾಗಿ ಶಿಕ್ಷಣ ಇಲಾಖೆಯು ಅನುದಾನಿತ ಶಾಲಾ ಶಿಕ್ಷಕರಿಗೂ ಈ ತರಬೇತಿ ನೀಡಬೇಕು.

**ಸನಾವುಲ್ಲಾ ನವಿಲೇಹಾಳ್,** ದಾವಣಗೆರೆ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಶ್ರೇಷ್ಠ ಭಾರತೀಯ ಚಿಂತನೆಗಳು ಪಾಠಕ್ಕೂ ವಿರೋಧ

**ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಮರುಪರಿಷ್ಕರಣೆ ಸಮಿತಿಯು ಸಿದ್ಧಪಡಿಸಿದ 10ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿ ಡಾ. ಆರ್. ಗಣೇಶ್ ಅವರು ಬರೆದಿರುವ 'ಶ್ರೇಷ್ಠ ಭಾರತೀಯ ಚಿಂತನೆಗಳು' ಎಂಬ ಲೇಖನವನ್ನು ಸೇರಿಸಲಾಗಿದೆ. ಧರ್ಮ,ಯಜ್ಞ, ದಾನ, ತಪಸ್ಸು ಮುಂತಾದ ಹಿಂದೂ ಧರ್ಮ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಈ ಪಾಠದಲ್ಲಿ ವಿವರಿಸಲಾಗಿದೆ. ಜಾತ್ಯತೀತ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ಪಾಠವನ್ನು ಬೋಧಿಸುವುದು ಎಷ್ಟು ಸರಿ ಎಂಬ ಪ್ರಶ್ನೆ ಕೇಳಿ ಬಂದಿದೆ. ಜತೆಗೆ, ಹತ್ತನೇ ತರಗತಿಯ ವಿದ್ಯಾರ್ಥಿಗಳು ಅರಗಿಸಿಕೊಳ್ಳಲು ಸಾಧ್ಯವಿಲ್ಲದಷ್ಟು ಸಂಕೀರ್ಣವಾದ ಭಾಷೆಯನ್ನು ಬಳಸಲಾಗಿದೆ ಎಂಬ ಆರೋಪವೂ ಕೇಳಿ ಬಂದಿದೆ. ಪಾಠದ ಆಯ್ದ ಭಾಗ ಮತ್ತು ಅದಕ್ಕೆ ಕೆಲವು ಪ್ರತಿಕ್ರಿಯೆಗಳು ಇಲ್ಲಿವೆ**

### ಋತ, ಸತ್ಯ, ಋಣ, ಧರ್ಮ

**ಜಗತ್ತಿನ** ಅಸ್ತಿತ್ವ ಎಲ್ಲರಿಗೂ ತೋರುತ್ತದೆ. ಈ ಅಸ್ತಿತ್ವದ ಹಿಂದಿನ ವ್ಯವಸ್ಥೆ ಕೆಲವರಿಗೆ ಮಾತ್ರ ಕಾಣುತ್ತದೆ. ಭೌತಜಗತ್ತಿನ ಅಸ್ತಿತ್ವದ ಹಿಂದಿರುವ ಭೌತವ್ಯವಸ್ಥೆ ವಿಜ್ಞಾನಿಗಳಿಗೆ ಅರಿವಾದರೆ ಭಾವಜಗತ್ತಿನ ಅಸ್ತಿತ್ವದ ಹಿಂದಿರುವ ಭಾವವ್ಯವಸ್ಥೆ ಕಲಾವಿದರಿಗೆ ಅರಿವಾಗುತ್ತದೆ. ಇವೆರಡೂ ಜಗತ್ತುಗಳ ಹಿಂದಿರುವ ತತ್ತ್ವ ಜ್ಞಾನಿಗಳಿಗೆ ತಿಳಿಯುತ್ತದೆ. ಹೀಗೆ 'ಸತ್ಯ' ಎನಿಸಿದ ಅಸ್ತಿತ್ವದ ಹಿಂದಿರುವ 'ಋತ' ಎಂಬ ವ್ಯವಸ್ಥೆ ಪ್ರಯತ್ನದಿಂದ ಮಾತ್ರ ವೇದ್ಯ. ಋತದ ಅರಿವಾದ ಕೂಡಲೆ ನಾವು ಸತ್ಯಕ್ಕೆಷ್ಟು ಋಣಿಗಳಾಗಿದ್ದೇವೆಂಬ ಪ್ರಜ್ಞೆ ಮೂಡುತ್ತದೆ. ನಲ್ಲಿ ತಿರುಗಿಸಿದೊಡನೆ ನೀರು ಬರುವುದು ಅಸ್ತಿತ್ವವಾದರೆ ಹೀಗೆ ನೀರು ಬರಲು ವಿಜ್ಞಾನ-ತಂತ್ರಜ್ಞಾನಗಳ ಮಾನವವ್ಯವಸ್ಥೆಯಷ್ಟೇ ಅಲ್ಲದೆ ಇದಕ್ಕೂ ಮೂಲವೆನಿಸಿದ ಪ್ರಕೃತಿಯ ಭಾಗವಾದ ಕಡಲುಗಳು, ಮುಗಿಲುಗಳು, ಮಳೆ-ಗಾಳಿಗಳು, ರವಿಕಿರಣಗಳು, ಗಿಡ-ಮರಗಳೇ ಮೊದಲಾದ ಅದೆಷ್ಟು ದೊಡ್ಡ ವ್ಯವಸ್ಥೆ ದುಡಿಯುತ್ತದೆ; ಹೀಗಾಗಿ ಇಂಥ ಜೀವಪೋಷಕ ದ್ರವ್ಯವನ್ನು ಯಾರೊಬ್ಬರೂ ಪೋಲು ಮಾಡಬಾರದು ಎಂಬ ಅರಿವೇ ಋತ. ಈ ಅರಿವು ಯಾರನ್ನೇ ಆದರೂ ಇಡಿಯ ವ್ಯವಸ್ಥೆಗೆ ಕೃತಜ್ಞರಾಗಿರುವಂತೆ ಮಾಡದೆ ಇರದು. ಇಲ್ಲವಾದಲ್ಲಿ ಆ ಅರಿವೇ ಹುಸಿಯೆನ್ನಬೇಕು. ಕೃತಜ್ಞತೆಯ ಈ ಭಾವವೇ 'ಋಣ'ಪ್ರಜ್ಞೆ. ಒಮ್ಮೆ ನಾವು ನಮ್ಮ ಸುತ್ತಲಿನ ಜಗದ್ವ್ಯವಸ್ಥೆಗೆ ಋಣಿಗಳೆಂದು ತಿಳಿದ ಬಳಿಕ ಸುಮ್ಮನಿರಲಾಗುವುದಿಲ್ಲ. ಸಾಲದ ಹೊರೆ ಹೊತ್ತ ಪ್ರಾಮಾಣಿಕ ವ್ಯಕ್ತಿ ಅದನ್ನು ತೀರಿಸುವ ಪ್ರಯತ್ನ ಮಾಡದಿರಲು ಸಾಧ್ಯವೇ! ಇಂಥ ಪ್ರಯತ್ನವನ್ನೇ 'ಧರ್ಮ' ಎಂದು ನಮ್ಮ ಪರಂಪರೆ ಒಕ್ಕಣಿಸಿದೆ.

### ಯಜ್ಞ, ದಾನ, ತಪಸ್ಸು

ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗವೇ 'ಯಜ್ಞ'. ಯಜ್ಞ ಎಂದರೆ ಬೆಂಕಿಯಲ್ಲಿ ತುಪ್ಪ ಸುರಿಯುವ, ಆಹಾರವನ್ನು ಪೋಲು ಮಾಡುವ ಕಂದಾಚಾರ ಎಂದು ಹಲವರ ಆಕ್ಷೇಪ. ಅಗ್ನಿಮುಖದಲ್ಲಿ ಆಹುತಿ ನೀಡುವುದು ಒಂದು ಸಂಕೇತ ಮಾತ್ರ. ಇದು ಬಟ್ಟೆಯಿಂದಾದ ಬಾವುಟಕ್ಕೆ ರಾಷ್ಟ್ರಧ್ವಜವೆಂದು ಎಲ್ಲರೂ ಗೌರವ ಸಲ್ಲಿಸುವಂತೆಯೇ ಸರಿ. Struggle for existence ಎಂದು ಚಾರ್ಲ್ಸ್ ಡಾರ್ವಿನ್ ಹೇಳಿರುವಂತೆ ಹೊತ್ತುಹೊತ್ತಿನ ತುತ್ತಿಗಾಗಿ, ಅನ್ನ-ಚಿನ್ನಗಳಿಗಾಗಿ, ಹೆಣ್ಣು-ಹೆಸರುಗಳಿಗಾಗಿ ಸೆಣಸಿ ಹೆಣಗುತ್ತಿರುವ ಮಾನವ ಸಹಜವಾಗಿ ಲೋಭಿ. ಪ್ರಕೃತಿ ಅವನಿಗೆ ಹೇಳಿಕೊಟ್ಟಿದ್ದೇ ಇಂಥ ಜಿಪುಣತನವನ್ನು. ಇದನ್ನು ಕೆಲಮಟ್ಟಿಗಾದರೂ ಮೀರದೆ ಇದ್ದಲ್ಲಿ ಬಾಳು ಹಸನಾಗದು, ಅರ್ಥಪೂರ್ಣವಂತೂ ಆಗಲೇ ಆರದು. ನಿಸರ್ಗಲೋಭಿಯಾದ ಅವನಿಗೆ ಔದಾರ್ಯದ ಹಾದಿಯನ್ನು ಅರುಹಿ ಕೊಡುವ ನಮ್ಮಯನ್ನು ತಿಳಿಸಿಕೊಡುವ ತಾಯಿ ಸಂಸ್ಕೃತಿ. 'ಯಜ್ಞ' ಸಂಸ್ಕೃತಿಯ ಒಂದು ಆಸುವಾನ. ಅಗ್ನಿಯಲ್ಲಿ ಯಾವುದಾದರೊಂದು ಆಹಾರ ಪದಾರ್ಥವನ್ನು ಹಾಕಿದರೆ ಅದನ್ನು ಮತ್ತೆ ಪಡೆದುಕೊಳ್ಳಲು ಸಾಧ್ಯವಿಲ್ಲದಂತಹ ಬದುಕು ಎಲ್ಲರಿಗೂ ತಿಳಿದ ತತ್ತ್ವ. ವಸ್ತುಸ್ಥಿತಿ ಹೀಗಿದ್ದರೂ ಆಹಾರವನ್ನು ಮಾಡಬೇಕು ಎಂದು - ತನಗೆ ಮರಳಿ ಬರುವುದೆಂಬ ಯಾವುದೇ ನಿಶ್ಚಯ ಇಲ್ಲದಿದ್ದರೂ ಕೊಡಬೇಕೆಂಬ ಜೀವನಪಾಠದ ಕಲಿಕೆ ತಾನೆ!

"ಮನುಷ್ಯಾ ಅನ್ನಗತಪ್ರಾಣಾಃ" ಎಂದು ವೇದ ಹೇಳಿದೆ. ಚಿನ್ನವಿಲ್ಲದೆ ಬದುಕಬಹುದು; ಆದರೆ ಅನ್ನವಿಲ್ಲದೆ ಬದುಕಲಾದೀತೇ! ಹೀಗೆ ನಮಗೆ ಅವಶ್ಯವಾಗಿ ಬೇಕಾದ ಆಹಾರವನ್ನು ನಾವು ಸಾಂಕೇತಿಕವಾಗಿಯಾದರೂ ಅಗ್ನಿಗೆ ಅರ್ಪಿಸುವುದೆಂದರೆ ಅದು ಪ್ರತಿಫಲದ ಅಪೇಕ್ಷೆಯಿಲ್ಲದ ತ್ಯಾಗ ಮಾಡುವುದರ ಲಕ್ಷಣ. ಹೀಗೆ ತ್ಯಾಗವನ್ನೊಂದು ಹಿರಿಯ ಮೌಲ್ಯವಾಗಿ ಸಾಕ್ಷಾತ್ಕರಿಸಿಕೊಂಡ ಬಳಿಕ ಜಗತ್ತಿನ ಸಹಮಾನವರೊಡನೆ ಬಾಳುವುದು ಸುಖವಾಗುತ್ತದೆ. ಈ ಕಾರಣದಿಂದಲೇ ಯಜ್ಞಕ್ಕೆ 'ದೇವತಾರಾಧನೆ' ಎಂಬ ಅರ್ಥವಷ್ಟೇ ಅಲ್ಲದೆ 'ಒಟ್ಟು ಸೇರುವಿಕೆ', 'ಹಂಚಿಕೊಂಡು ಬಾಳುವಿಕೆ', 'ತ್ಯಾಗ ಮಾಡುವಿಕೆ' ಎಂಬೆಲ್ಲ ಅರ್ಥಸ್ವಾರಸ್ಯಗಳಿವೆ. ಮನಃಪೂರ್ವಕವಾಗಿ ಒಮ್ಮೆ ಕೊಟ್ಟ ಬಳಿಕ ಕಳವಳಿಸಬಾರದು. 'ಕೊಟ್ಟು ಕೆಟ್ಟೆ' ಎನ್ನುವುದು ಸರಿಯಲ್ಲವೆಂದೇ ಅಚ್ಚಗನ್ನಡದ ಗಾದೆಮಾತು. ತ್ಯಾಗವನ್ನು ಮಾಡಿಯೂ ಪಶ್ಚಾತ್ತಾಪ ಪಡದಿರುವುದು ನಿಜಕ್ಕೂ ಮನಸ್ಸಿನ ಒಂದು ಉನ್ನತಿ.

ಪ್ರತಿಫಲದ ಅಪೇಕ್ಷೆಯಿಲ್ಲದೆ ಮಾಡಿದ ತ್ಯಾಗವು 'ದಾನ'ವಾದರೆ ಹಾಗೆ ಮಾಡಲು ಬೇಕಾದ ಮನಸ್ಸಿನ ಪರಿಪಾಕ 'ತಪಸ್ಸು'. ಹೀಗೆ ಯಜ್ಞ ಎಂಬ ನಾಣ್ಯಕ್ಕೆ ದಾನ ಮತ್ತು ತಪಸ್ಸುಗಳೆಂಬ ಎರಡು ಮುಖಗಳಿವೆ. ಜೀವನದಲ್ಲಿ ಎಲ್ಲಕಾಲಕ್ಕೂ ಸಲ್ಲುವ ನಾಣ್ಯ ಯಜ್ಞವೇ ಹೊರತು ಬೇರೆ ಬೇರೆ ದೇಶ-ಕಾಲಗಳಲ್ಲಿ, ಬೇರೆ ಬೇರೆ ಪ್ರಭುತ್ವಗಳಲ್ಲಿ ಚಲಾವಣೆಗೆ ಬರುವ ಹಣವಲ್ಲ. ಹೀಗೆ ಧರ್ಮಾಚರಣೆಗೆ ಯಜ್ಞ ಒಂದು ಪ್ರಮುಖ ಸಾಧನ.

### ಪುರುಷಾರ್ಥಗಳು

ನಮ್ಮೊಳಗಿನ ಆತ್ಮತತ್ತ್ವದ ಪ್ರಾಪ್ತಿಯ ಪರಿಯೇ 'ಪುರುಷಾರ್ಥ'. ಅಂದರೆ ತನ್ನನ್ನು ತಾನು ಅರಿಯುವ ಬಗೆಯೇ ಪುರುಷಾರ್ಥ ಎಂದಾಯಿತು. ಪರಮಾರ್ಥದಲ್ಲಿ ಇರವಿಗೂ ಅರಿವಿಗೂ ವ್ಯತ್ಯಾಸವಿಲ್ಲ. ಇವೆರಡೂ ತಮ್ಮ ಸಾರ್ಥಕ್ಯವನ್ನು ನಲವಿನಲ್ಲಿ ಕಾಣುತ್ತವೆ. ಹೀಗೆ ಸತ್ + ಚಿತ್ + ಆನಂದ ಎಂಬ ಇರವು, ಅರಿವು, ನಲವುಗಳ ಅಭಿಜ್ಞಾನವೇ ಪುರುಷಾರ್ಥದ ಅಂತರಂಗ. ಹೀಗಾಗಿಯೇ ಇಲ್ಲಿ ಕಾಣುವ 'ಪುರುಷ' ಎಂಬ ಪದಕ್ಕೆ ಗಂಡು ಎಂಬ ಸಂಕುಚಿತವಾದ ಅರ್ಥ ಸಲ್ಲುವುದಿಲ್ಲ. ಇದೇನಿದ್ದರೂ ಲಿಂಗಾತೀತವಾದ ಆತ್ಮವನ್ನು ಕುರಿತದ್ದು. ಇಂಥ ಆತ್ಮವೇ ಪರಬ್ರಹ್ಮವಸ್ತು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಪೈಕಿ ಬಯಕೆಯೇ ಮೂಲವಾದ ಕಾಮವು ಜೀವಕೇಂದ್ರಿತವಾಗಿದ್ದರೆ ಇಂಥ ಬಯಕೆಯನ್ನು ಆಯಾ ಹೊತ್ತಿಗೆ ಈಡೇರಿಸಬಲ್ಲ ಸಾಧನಗಳನ್ನು ಪ್ರತಿನಿಧಿಸುವ ಅರ್ಥವು ಜಗತ್ಕೇಂದ್ರಿತವಾಗಿದೆ. ಬಯಕೆ-ಈಡೇರಿಕೆಗಳ ಮೊತ್ತವೆನಿಸಿದ ಜೀವ-ಜಗತ್ತುಗಳ ನಡುವೆ ಸಾಮರಸ್ಯವನ್ನು ಕಲ್ಪಿಸುವ, ವ್ಯವಸ್ಥೆಯನ್ನು ರೂಪಿಸುವ ಮೌಲ್ಯವೇ ಧರ್ಮ. ಧರ್ಮದ ಕೇಂದ್ರ ಈಶ್ವರನಲ್ಲಿದೆ. ಜನಸಾಮಾನ್ಯರು 'ದೇವರು' ಎಂದು ನಂಬುವ ಪರತತ್ತ್ವವನ್ನೇ ಶಾಸ್ತ್ರಗಳು 'ಈಶ್ವರ' ಎಂದು ಹೆಸರಿಸಿವೆ. ದಿಟವೇ, ಈಶ್ವರನಲ್ಲಿ ವಿಶ್ವಾಸವಿರಿಸದ ಜನರೂ ಈ ಜಗತ್ತಿನಲ್ಲಿ ಇದ್ದಾರೆ. ಅಂಥವರ ಪಾಲಿಗೆ ಧರ್ಮ ಎನ್ನುವುದು ಕೇವಲ ಜಗತ್ತು-ಜೀವಗಳ ನಡುವೆ ಇರಬೇಕಾದ ಪ್ರಾಮಾಣಿಕ ವ್ಯವಹಾರವಾಗುತ್ತದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಅರ್ಥ-ಕಾಮಗಳನ್ನು ಈಡೇರಿಸಿಕೊಳ್ಳುವಾಗ ಮತ್ತೊಬ್ಬರ ಇಂಥದ್ದೇ ಪ್ರಯತ್ನಗಳಿಗೆ ಅಡ್ಡಿಯಾಗುವಂತಿಲ್ಲ. ಈ ಬಗೆಯ ಶಿಸ್ತೇ ಅವರ ಮಟ್ಟಿಗೆ ಧರ್ಮ. ಈಶ್ವರನಲ್ಲಿ ವಿಶ್ವಾಸವನ್ನು ಇರಿಸಿದವರಿಗೆ ಧರ್ಮವು ಬರಿಯ ವ್ಯವಹಾರವಷ್ಟೇ ಅಲ್ಲದೆ ಆಚಾರವೂ ಆಗುತ್ತದೆ. 'ವ್ಯವಹಾರ'ವು ಮಾನವರ ನಡುವಣ ಶಿಸ್ತಿಗೆ ಸಂಬಂಧಿಸಿದರೆ 'ಆಚಾರ'ವು ಮಾನವರ ಒಳಗಿನ ಶಿಸ್ತಿಗೆ ಸಂಬಂಧಿಸಿದೆ.

ಸ್ವಧರ್ಮ ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯಾವಶ್ಯಕ. ಯಾವುದೇ ವ್ಯಕ್ತಿಯು ತನ್ನ ತನ್ನ ಸ್ವಭಾವಕ್ಕೆ ಅನುಸಾರವಾಗಿ ತನ್ನದಾದ ಬದುಕನ್ನು ರೂಪಿಸಿಕೊಳ್ಳುವ ಮೂಲಕ ತಾನೂ ತನ್ನ ಸುತ್ತಮುತ್ತಲ ಜಗತ್ತೂ ಹೆಚ್ಚಿನ ನೆಮ್ಮದಿಯನ್ನು ಗಳಿಸುವ ಪರಿಯೇ ಸ್ವಧರ್ಮ. ಹಿಂದೆ ಸಮಾಜ ತುಂಬ ಸರಳವಾಗಿದ್ದಾಗ, ವಿಜ್ಞಾನತಂತ್ರಜ್ಞಾನಗಳ ಮೂಲಕ ದೇಶ-ಕಾಲಗಳ ಮಾರ್ಪಾಡು ಹೆಚ್ಚಿಲ್ಲದಿದ್ದಾಗ, ಸಂಪ್ರದಾಯಗಳ ಸಮೃದ್ಧಿ ವೈವಿಧ್ಯಗಳು ಕಡಿಮೆಯಿದ್ದಾಗ ಹುಟ್ಟು ಮತ್ತು ಪರಿಸರದಿಂದಲೇ ಮಾನವರ ಸ್ವಧರ್ಮಗಳು ಬಲುಮಟ್ಟಿಗೆ ರೂಪಿತವಾಗುತ್ತಿದ್ದುವು. ಇಂಥ ವ್ಯವಸ್ಥೆ ಪರಿಪೂರ್ಣವೇನೂ ಅಲ್ಲ; ಅದು ಆ ಕಾಲಕ್ಕೆ ಸಾಕಷ್ಟು ಹೊಂದಿಕೊಂಡಿರುತ್ತಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. ಇಂದು ಹುಟ್ಟು ಮತ್ತು ಪರಿಸರಗಳ ಮೂಲಕವೇ ಸ್ವಧರ್ಮವನ್ನು ವ್ಯಕ್ತಿಯೊಬ್ಬ ಗುರುತಿಸಿಕೊಳ್ಳುವುದು ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಆದುದರಿಂದ ತನ್ನೊಳಗಿನ ಒಲವು-ನಿಲವುಗಳಿಂದಲೇ ಸ್ವಧರ್ಮವನ್ನು ಗುರುತಿಸಿಕೊಳ್ಳುವ ಅನಿವಾರ್ಯತೆ ಉಂಟು. ದಿಟವೇ, ಇಲ್ಲಿ ಕೂಡ ಹುಟ್ಟು ಮತ್ತು ಪರಿಸರಗಳು ತಮ್ಮ ಪ್ರಭಾವವನ್ನು ಕೆಲಮಟ್ಟಿಗೆ ಬೀರುತ್ತವೆ. ಆದರೆ ಎಂದೂ ಎಲ್ಲಿಯೂ ಇವುಗಳಿಗಿಂತ ಮುಖ್ಯವಾದುದು, ನಾವೆಲ್ಲ ನೆಚ್ಚಬಹುದಾದುದು ಪ್ರತಿಯೊಬ್ಬ ವ್ಯಕ್ತಿಯ ಒಳಗಿನ ನಿಶ್ಚಯವೇ.

• **10ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಇರುವ ಪಾಠ**

## ಭಾರತೀಯತೆಯ ಫಲಾನುಭವಿಗಳು ಯಾರು?

**ಆರ್. ಗಣೇಶ್** ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ಪಠ್ಯ ಭಾರತೀಯ ಎನ್ನಬಹುದಾದ ಕೆಲವು ಚಿಂತನೆಗಳ ಇವೆ ಮತ್ತು ಅವುಗಳನ್ನು ತಪ್ಪಾಗಿ ಗ್ರಹಿಸಿರುವುದರಿಂದ ಆ ಚಿಂತನೆಗಳಿಗೆ ಇರುವ ನಿಜವಾದ ಅರ್ಥ ಮರೆಮಾಚಲ್ಪಟ್ಟಿದೆ ಎಂದು ವಾದಿಸುತ್ತದೆ. ಮೊದಲಿಗೆ ಈ ಚಿಂತನೆ, ಚಿಂತನಾಕ್ರಮ ಎನ್ನುವ ಪರಿಕಲ್ಪನೆಗಳು ಪಾಶ್ಚಾತ್ಯರಿಂದ ಬಂದಿರುವಂತಹವು ಎನ್ನುವುದನ್ನು ಗಮನಿಸಬೇಕು. 'ಭಾರತೀಯ ಚಿಂತನೆಗಳು' ಎಂಬುದರ ಬಗ್ಗೆ ಮಾತನಾಡುವಾಗ ಈ 'ಭಾರತೀಯ' ಎನ್ನುವ ಚಿಂತನೆಗಳಲ್ಲಿ ಯಾವ ಯಾವ ಚಿಂತನೆಗಳು ಇವೆ? ಆ ಚಿಂತನೆಗಳು ಭಾರತದ ಎಲ್ಲ ಜನರನ್ನೂ ಒಳಗೊಂಡಿವೆಯೇ ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳಬೇಕಿದೆ. ಗಣೇಶ್ ಅವರು ಭಾರತೀಯ ಚಿಂತನೆಗಳು ಎಂದು ವಾದಿಸುವ ಪರಿಕಲ್ಪನೆಗಳು ಆಶಯದ ರೂಪದಲ್ಲಿ ಮೇಲ್ನೋಟಕ್ಕೆ ಎಲ್ಲರನ್ನೂ ಒಳಗೊಳ್ಳುವ ಹಾಗೆ ಕಂಡರೂ ವಾಸ್ತವದಲ್ಲಿ ಯಾವತ್ತೂ ಹಾಗಿರಲಿಲ್ಲ. ಈ 'ಭಾರತೀಯತೆ'ಯ ಫಲಾನುಭವಿಗಳು ಕೇವಲ ಕೆಲವು ಶೋಷಕ ಸಮುದಾಯಗಳು ಮಾತ್ರ. ಆದರೆ ನಮ್ಮ ಸಂಸ್ಕೃತಿಯಲ್ಲಿ ಎಲ್ಲವೂ ಇವೆ. ಇಲ್ಲಿ ಎಲ್ಲರೂ ಎಲ್ಲ ಕಾಲದಲ್ಲಿಯೂ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಮಾನರಾಗಿದ್ದರು ಎನ್ನುವುದನ್ನು ಸಂಸ್ಕೃತಿ, ಚಿಂತನೆಗಳ ಹೆಸರಿನಲ್ಲಿ ನಂಬಿಸಿ ಬಹುಸಂಖ್ಯಾತರನ್ನು ಯಾಮಾರಿಸಿಕೊಂಡೇ ಬರಲಾಗಿದೆ. ಇದು 'ವಸುದೈವ ಕುಟುಂಬಕಮ್', 'ಸರ್ವೇಜನಃ ಸುಖಿನೋ ಭವಂತು' ಎಂದು ಹೇಳುತ್ತಾ ಇಲ್ಲಿರುವ ಎಲ್ಲವೂ ಶ್ರೇಷ್ಠ ಎನ್ನುವ ಭ್ರಮೆಯನ್ನು ಬಿತ್ತಿ ಅಸಮಾನತೆ, ಶೋಷಣೆಗಳನ್ನು ಪ್ರಶ್ನೆ ಮಾಡದೆ ಒಪ್ಪಿಕೊಳ್ಳುವಂತೆ ಮಾಡಿರುವ ತಂತ್ರದ ಮುಂದುವರಿಕೆಯಾಗಿದೆ. ಗಣೇಶ್ ಅವರು ಹೇಳುವ ಯಜ್ಞದ ಪರಿಕಲ್ಪನೆ ಅರ್ಥ ಮತ್ತು ಆಶಯದ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಒಳಿತಾಗಲಿ ಎಂದು ಬಯಸಿದರೂ ವಾಸ್ತವದಲ್ಲಿ ಹಾಗೇ ಯಾವತ್ತೂ ನಡೆದಿಲ್ಲ. ಇತಿಹಾಸವನ್ನು ಗಮನಿಸಿದರೆ ಯಜ್ಞಯಾಗಾದಿಗಳ ಫಲಾನುಭವಿಗಳು ಯಾರು, ಯಜ್ಞ ಯಾಗಾದಿಗಳ ನೆಪದಲ್ಲಿ ಯಾರು ಸಂಪತ್ತನ್ನು ಪಡೆಯುತ್ತಿದ್ದರು ಎನ್ನುವುದು ತಿಳಿಯುತ್ತದೆ. ಇಲ್ಲಿ ತಮ್ಮನ್ನು ಶೋಷಿಸುವವರಿಗೆ ತಾವೇ ಎಲ್ಲವನ್ನೂ ಕೊಟ್ಟು ಶೋಷಣೆಗೆ ಒಳಗಾಗಿರುವ ದೀರ್ಘ ಚರಿತ್ರೆ ಇದೆ. ಇದನ್ನು ಧರ್ಮ, ಸಂಸ್ಕೃತಿ, ಆಚರಣೆಗಳ ಹೆಸರಿನಲ್ಲಿ ಸಮಾಜದ ಒಂದು ವರ್ಗ ಅನುಭವಿಸಿಕೊಂಡು ಬಂದಿದೆ. ಈ ರೀತಿಯ ಸಂಸ್ಕೃತಿಯಲ್ಲಿ ಬಹುಸಂಖ್ಯಾತರು ಶೋಷಣೆಗೆ ಒಳಗಾಗುತ್ತಿದ್ದುದನ್ನು ವಿರೋಧಿಸುವ ಬುದ್ಧ ಧರ್ಮ ಸ್ಥಾಪನೆಯಾಗಿತ್ತು. ಭಾರತೀಯ ಸಂಸ್ಕೃತಿ ಹೆಸರಿನಲ್ಲಿ ಗಣೇಶ್ ಎತ್ತಿ ಹಿಡಿಯುವ ಮೌಲ್ಯಗಳು ಬರಿ ಬಾಯಿ ಮಾತಿನಲ್ಲಿ ಮಾತ್ರ ಆದರ್ಶಗಳಾಗಿವೆಯೇ ಹೊರತು ಆಚರಣೆಯಲ್ಲಿ ಅಲ್ಲ.

**ವಿ.ಎಲ್. ನರಸಿಂಹಮೂರ್ತಿ,** ಅಧ್ಯಾಪಕ, ಇಂಗ್ಲಿಷ್ ವಿಭಾಗ, ನ್ಯಾಷನಲ್ ಕಾಲೇಜು, ಬಸವನಗುಡಿ

## ಬಹುತ್ವ ಮರೆಮಾಚುವ ಪ್ರಯತ್ನ

'ಶ್ರೇಷ್ಠ ಭಾರತೀಯ ಚಿಂತನೆಗಳು' ಪಾಠವು ಭಾರತೀಯತೆ ಎಂದರೆ ಇದೇ ಎಂಬ ಏಕತ್ವವನ್ನು ಮಕ್ಕಳ ಮುಂದೆ ಇರಿಸುತ್ತದೆ. ಭಾರತೀಯತೆ ಎಂದರೆ ಏನು ಎಂಬುದನ್ನು ನಾವು ವೈವಿಧ್ಯಮಯ ನೆಲೆಗಳಿಂದ ನೋಡಬೇಕಾಗುತ್ತದೆ. ಬಹು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಅಭ್ಯಸಿಸಬೇಕಾದ ಈ ಹೊತ್ತಲ್ಲಿ ಇಂತಹ ಪಠ್ಯ ಮತ್ತು ಬಹುತ್ವವನ್ನು ಮರೆಮಾಚಿ ಏಕರೂಪದ ಚಿಂತನೆಯನ್ನು ಮುನ್ನೆಲೆಗೆ ತರುವ ಯತ್ನ ಮಾಡುತ್ತದೆ. ಇಲ್ಲಿ ಭಾರತೀಯ ಚಿಂತನೆ ಹೆಸರಿನಲ್ಲಿ ಕಾಣುತ್ತಿರುವುದು ವೈದಿಕ ಚಿಂತನೆಗಳು. ನಮ್ಮಲ್ಲಿ ಬೌದ್ಧ, ಜೈನ ಮುಂತಾದ ಶ್ರಮಣ ಧಾರೆಗಳಿವೆ, ನೆಲಮೂಲದ ಚಿಂತನೆಗಳೂ ಜನರ ಬದುಕುಗಳನ್ನು ಕಟ್ಟಿವೆ. ಇವೆಲ್ಲ ದಯೆ, ಕಾರುಣ್ಯವನ್ನು ದೊಡ್ಡ ಮೌಲ್ಯವಾಗಿ ಸಾರಿವೆ. ಯಜ್ಞ-ಯಾಗಾದಿಗಳ ಮೂಲಕ ಅಗ್ನಿಯನ್ನಷ್ಟೇ ಅಲ್ಲ ನೀರನ್ನೂ ಪೂಜಿಸುವ ಬಹಳ ದೊಡ್ಡ ಪರಂಪರೆ ಇದೆ. ಪ್ರೌಢಶಾಲಾ ಹಂತದಲ್ಲಿ ಒಂದು ಪಠ್ಯ ಭಾಷಾ ಬೋಧನೆಯ ಜೊತೆಗೆ ಒಳಗೊಳ್ಳುವ ಸಂವೇದನೆಯನ್ನು ರೂಪಿಸುವ ಕೆಲಸ ಮಾಡಬೇಕು. ಆದರೆ ಇಂತಹ ಪಠ್ಯಗಳು ನಿರ್ದಿಷ್ಟ ಚಿಂತನಾ ಧಾರೆಯೇ ಭಾರತೀಯ ಚಿಂತನಾ ಕ್ರಮ ಎನ್ನುವ ಮೂಲಕ ವಾಸ್ತವವನ್ನು ಮರೆಸುತ್ತದೆ.

**ಡಾ. ಪಿ.ಭಾರತೀದೇವಿ,** ಲೇಖಕಿ

## ಪುರೋಹಿತಶಾಹಿ ನೆಲೆಗಳ ಗಟ್ಟಿಗೊಳಿಸುವ ಕೆಲಸ

**ಆರ್. ಗಣೇಶ್** ಅವರು ಪ್ರತಿಪಾದಿಸುತ್ತಿರುವ 'ಶ್ರೇಷ್ಠ ಭಾರತೀಯ ಚಿಂತನೆಗಳು' ಪುರೋಹಿತಶಾಹಿಯ ತಾರತಮ್ಯದ ನೆಲೆಗಳನ್ನು ಮತ್ತಷ್ಟು ಗಟ್ಟಿಗೊಳಿಸುವುದೇ ಆಗಿದೆ. ಅವರು ಹೇಳುತ್ತಿರುವ ಭಾರತೀಯ ಸಂಸ್ಕೃತಿ, ಸನಾತನ ಸಂಸ್ಕೃತಿಗಳು ಅದೇ ಅಸಮಾನತೆಯನ್ನು ಪುನರುತ್ಪಾದಿಸುವ ಸಾಧನಗಳಾಗಿವೆ. ಹಾಗೆ ನೋಡಿದರೆ ಭಾರತೀಯ ಸಂಸ್ಕೃತಿ ಎಂಬುದೊಂದು ಈ ದೇಶದಲ್ಲಿ ಇಲ್ಲ. ಇಲ್ಲಿರುವುದು ಬಹುಸಂಸ್ಕೃತಿಗಳೇ ಹೊರತು ಎಲ್ಲರನ್ನೂ ಏಕತ್ವದಲ್ಲಿ ಪ್ರತಿನಿಧಿಸುವ ಯಾವುದೇ ಒಂದು ಸಂಸ್ಕೃತಿ ಎಂಬುದಿಲ್ಲ. ಇದು ಭಾರತೀಯ ಮಟ್ಟದಲ್ಲಿ ನಡೆಯುತ್ತಿರುವ ಏಕ ದೇಶ, ಏಕ ಭಾಷೆ, ಏಕ ಸಂಸ್ಕೃತಿ ಎಂಬ ಆಶಯಕ್ಕೆ ಕಾರ್ಯಸೂಚಿಯನ್ನು ಹೊಂದಿರುವುದು. ಅದ್ದರಿಂದಲೇ ಬಹುತ್ವವನ್ನು ಬದಿಗಿಟ್ಟು ಏಕತ್ವದಲ್ಲಿ ಕಟ್ಟುವ ದಮನಕಾರಿ ಅಂಶಗಳನ್ನು ಶಿಕ್ಷಣದ ಮೂಲಕ ಎಳೆಯ ಮನಸ್ಸುಗಳಿಗೆ ತುಂಬುವ ಕೆಲಸವನ್ನು ಸರ್ಕಾರ ವ್ಯವಸ್ಥಿತವಾಗಿ ಮಾಡುತ್ತಿದೆ.

ಗಣೇಶ್ ಅವರು ತಮ್ಮ ಈ ಪಠ್ಯದ ಮೂಲಕ ಮಕ್ಕಳ ಸಹಜ ಮನಸ್ಥಿತಿಯನ್ನು ನಾಶಮಾಡಿ, ಅರ್ಥವಿಲ್ಲದ ಸನಾತನ ಮೌಲ್ಯಗಳನ್ನು, ಸಂಪ್ರದಾಯ, ಆಚರಣೆಗಳ ಹೆಸರಿನಲ್ಲಿ ಬಿತ್ತಿ ಅವರನ್ನು ಶತಮಾನಗಳಷ್ಟು ಕಾಲ ಹಿಂದಕ್ಕೆ ಒಯ್ಯಲೊಯ್ಯುವುದಾಗಿದೆ. ಇಡೀ ಜಗತ್ತು ಮಕ್ಕಳನ್ನು ವಿಜ್ಞಾನ, ತಂತ್ರಜ್ಞಾನ, ವೈಚಾರಿಕತೆ ಜೊತೆಗೆ ಓದುವಂತೆ ಸಜ್ಜುಗೊಳಿಸುತ್ತಿದ್ದರೆ ನಾವು ಮಾತ್ರ ಹುಸಿ ಧಾರ್ಮಿಕತೆ ಮತ್ತು ಹುಸಿ ದೇಶಭಕ್ತಿಯ ಹೆಸರಲ್ಲಿ ಕೆಲಸಕ್ಕೆ ಬಾರದ ಹಳಸಲು ಜಾತಿ ಶ್ರೇಣೀಕರಣವನ್ನು ಕಲಿಸುತ್ತಾ ಮಕ್ಕಳನ್ನು ಶತಮಾನಗಳಷ್ಟು ಕಾಲ ಹಿಂದಕ್ಕೆ ತಳ್ಳುತ್ತಿದ್ದೇವೆ. ಮಕ್ಕಳನ್ನು ರೂಪಿಸಬೇಕಾದುದು ತಾರತಮ್ಯದ ನೆಲೆಗಳಲ್ಲ, ಧಿಕ್ಕರಿಸಿ ಎಲ್ಲರೂ ಒಳಗೊಳ್ಳುವ ಸಮತೆಯ ತತ್ವದ ಆಧಾರದಲ್ಲಿ. ನಮ್ಮ ಸಂವಿಧಾನದ ಮೂಲ ಆಶಯವೂ ಇದೇ ಆಗಿದೆ. ಅದನ್ನು ಬಿಟ್ಟು ಮುಗ್ಧ ಮಕ್ಕಳ ಮನಸ್ಸಿನಲ್ಲಿ ದ್ವೇಷವನ್ನು ತುಂಬಿ ಸಹಬಾಳ್ವೆಯ ಬದುಕನ್ನು ನಾಶ ಮಾಡುವುದು, ಸರ್ಕಾರಕ್ಕೆ ನಿಜಕ್ಕೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಇದ್ದರೆ, ಅವರ ಬದುಕಿಗೆ ದಿಕ್ಕಾಗುವಂಥ ಮಹೋನ್ನತ ಪಠ್ಯಗಳನ್ನು ರೂಪಿಸಲಿ. ಈಗ ನಡೆಯುತ್ತಿರುವ ಪಠ್ಯ ಪರಿಷ್ಕರಣೆ ಎಂಬ ವಿಷಸ್ವರೂಪಿ ಬೆಳವಣಿಗೆಗಳನ್ನು ನೋಡಿದರೆ ದೇಶದ ಭವಿಷ್ಯದ ಕುಡಿಗಳೆನಿಸಿಕೊಂಡ ಮಕ್ಕಳನ್ನು ಈ ವಿಷ ವರ್ತುಲದಿಂದ ರಕ್ಷಿಸುವುದು ಹೇಗೆ ಎಂಬ ಪ್ರಶ್ನೆ ಧುತ್ತನೇ ಎದುರು ನಿಲ್ಲುತ್ತದೆ.

**ರವಿಕುಮಾರ್ ಬಾಗಿ,** ಕನ್ನಡ ಪ್ರಾಧ್ಯಾಪಕ, ನ್ಯಾಷನಲ್ ಕಾಲೇಜು, ಬಸವನಗುಡಿ

## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 125

### ಸಂಧ್ಯೆ ಮೋಹಕ್ಕೆ ಬಿದ್ದ ಬ್ರಹ್ಮ

**ಸ**ತಿಖಂಡದ ಮೂರನೇ ಅಧ್ಯಾಯದಲ್ಲಿ ಮನ್ಮಥಲೀಲೆಯ ವಿವರವಿದೆ. ಬ್ರಹ್ಮ ತನ್ನ ಮಾನಸಪುತ್ರಿ ಸಂಧ್ಯೆ ಮೇಲೆ ಮೋಹಿತನಾದಾಗ ಅವನ ಮನದಲ್ಲಿ ಸುಂದರಪುರುಷ ಜನಿಸುತ್ತಾನೆ. ಆ ಪುರುಷ ತನ್ನ ಕರ್ತವ್ಯ ಮತ್ತು ಹೆಸರು ಏನೆಂದು ಸೃಷ್ಟಿಕರ್ತ ಬ್ರಹ್ಮನನ್ನು ಕೇಳುತ್ತಾನೆ. ಇದಕ್ಕೆ ಬ್ರಹ್ಮ ಜಗತ್ತಿನ ಜೀವರಾಶಿಗಳಿಗೆಲ್ಲಾ ನಿತ್ಯ ಕಾಮಸುಖ ನೀಡುವ ಕೆಲಸ ನಿನ್ನದೆಂದು ಹೇಳುತ್ತಾನೆ. ನಂತರ ಆ ಪುರುಷನಿಗೆ ಸೂಕ್ತವಾದ ಹೆಸರನ್ನು ಇಡುವಂತೆ ತನ್ನ ಮಾನಸಪುತ್ರರಾದ ಮರೀಚಿ ಮೊದಲಾದವರಿಗೆ ಸೂಚಿಸುತ್ತಾನೆ. ತಂದೆ ಬ್ರಹ್ಮನ ಆದೇಶದಂತೆ ಮಾನಸಪುತ್ರರು ಆ ಪುರುಷನಿಗೆ ಯೋಗ್ಯವಾದ ಹೆಸರನ್ನು ಕೊಟ್ಟರಲ್ಲದೆ, ಅವನಿಗೆ ಪತ್ನಿ ಮತ್ತು ಸ್ಥಾನಗಳನ್ನು ಸಹ ಕಲ್ಪಿಸುತ್ತಾರೆ.

'ಎಲೈ ಪುರುಷನೇ, ನೀನು ಜನಿಸುವಾಗಲೇ ನಮ್ಮೆಲ್ಲರ ಮತ್ತು ಬ್ರಹ್ಮನ ಮನಸ್ಸನ್ನು ವಿಕಾರಗೊಳಿಸಿರುವೆ. ಆದುದರಿಂದ ಇನ್ನು ಮುಂದೆ ನೀನು ಮನ್ಮಥನೆಂದು ಲೋಕದಲ್ಲಿ ಪ್ರಸಿದ್ಧನಾಗು. ಜಗತ್ತಿನಲ್ಲಿ ನಿನ್ನಂತಹ ಸುಂದರಪುರುಷ ಮತ್ತೊಬ್ಬನಿಲ್ಲ. ಆದುದರಿಂದ ನೀನು ಕಾಮನೆಂದೂ ಪ್ರಸಿದ್ಧಿಯನ್ನು ಹೊಂದು. ನೀನು ದೇವ-ಜೀವರಿಗೆಲ್ಲ ಕಾಮಮದವೇರುವಂತೆ ಮಾಡುವುದರಿಂದ ಹಾಗೂ ದರ್ಪಯುಕ್ತನಾಗಿ ಜನಿಸಿದುದರಿಂದ ಮದನ ಮತ್ತು ಕಂದರ್ಪ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗು. ಯಾವ ದೇವತೆಗಳೂ ನಿನ್ನ ವೀರ್ಯ ಸಾಮರ್ಥ್ಯವನ್ನು ಸರಿಗಟ್ಟಲಾರರು. ಜಗತ್ತಿನ ಸ್ಥಾನಗಳೆಲ್ಲವೂ ನಿನ್ನ ವಶವಾಗಿ, ಇಡೀ ಜಗತ್ತನ್ನು ವ್ಯಾಪಿಸುವೆ. ಪುರುಷಶ್ರೇಷ್ಠನಾದ ಮತ್ತು ಪ್ರಜಾಪತಿಗಳಲ್ಲಿ ಮೊದಲನೆಯವನೂ ಆದಂತಹ ದಕ್ಷಪ್ರಜಾಪತಿಯು ನಿನಗೆ ಯೋಗ್ಯಳಾದ ಪತ್ನಿಯನ್ನು ಧಾರೆ ಎರೆದು ಕೊಡುತ್ತಾನೆ' ಎಂದು ಮರೀಚಿ ಮತ್ತಿತರ ಋಷಿಗಳು ಹೇಳುತ್ತಾರೆ.

ಬ್ರಹ್ಮನ ಮನಸ್ಸಿನಿಂದ ಈಗಷ್ಟೇ ಜನಿಸಿದ ಸುಂದರ ಯುವತಿಯು ಸಂಧ್ಯಾ ಎಂಬ ಹೆಸರಿನಿಂದ ಸರ್ವಲೋಕಗಳಲ್ಲೂ ಪ್ರಸಿದ್ಧಳಾಗುವಳು. ಈ ಕನ್ಯೆಯು ಬ್ರಹ್ಮ ದೃಢವಾಗಿ ಧ್ಯಾನಿಸುತ್ತಿರುವಾಗ ಜನಿಸಿದುದರಿಂದ ಸಂಧ್ಯೆ ಎಂಬ ಹೆಸರಿನಿಂದ ಪ್ರಖ್ಯಾತಳಾಗುತ್ತಾಳೆ ಎಂದೂ ತಿಳಿಸುತ್ತಾರೆ.

ದಕ್ಷಪ್ರಜಾಪತಿಯ ಮಾತಿನಿಂದ ತೃಪ್ತನಾದ ಮನ್ಮಥ ತನ್ನ ಐದು ಪುಷ್ಪಬಾಣಗಳೊಂದಿಗೆ ಅಂತರ್ಧಾನನಾದ. ಬಳಿಕ ಮನ್ಮಥನ ಮನದಲ್ಲಿ ಆಲೋಚನೆಗಳ ಸುರುಳಿ ಬಿಚ್ಚಿಕೊಂಡಿತು. 'ಹರ್ಷಣ, ರೋಚನ, ಮೋಹನ, ಶೋಷಣ ಮತ್ತು ಮಾರಣ' ಎಂಬ ಹೆಸರುಳ್ಳ ಈ ಐದು ಕುಸುಮಬಾಣಗಳು ಮುನಿಗಳಿಗೂ ಮೋಹವನ್ನುಂಟುಮಾಡುವಂಥವು ಅಂತ ಬ್ರಹ್ಮ ಹೇಳಿದ್ದಾನೆ. ಇದನ್ನು ಖಚಿತಪಡಿಸಿಕೊಳ್ಳಲು ಬ್ರಹ್ಮನ ಸಮ್ಮುಖದಲ್ಲೆ ಈ ಮುನಿಗಳ ಮೇಲೆ ಪ್ರಯೋಗ ಮಾಡಿ ನೋಡಲು ಮನ್ಮಥ ನಿರ್ಧರಿಸಿದ.

ಮರೀಚಿ ಮೊದಲಾದ ಮುನಿಗಳು ಮತ್ತು ದಕ್ಷ ಮೊದಲಾದ ಪ್ರಜಾಪತಿಗಳೂ ಸೇರಿರುವ ಈ ಸ್ಥಳದಲ್ಲಿ ಪರಮಸುಂದರಿಯಾದ ಸಂಧ್ಯೆಯೂ ಇಲ್ಲಿದ್ದಾಳೆ. ನನ್ನ ಕಾಮಬಾಣಕ್ಕೆ ತ್ರಿಮೂರ್ತಿಗಳೂ ಅಧೀನರಾಗುವರೆಂದು ಈಗ ತಾನೆ ಬ್ರಹ್ಮ ಹೇಳಿದ್ದಾನೆ. ನನ್ನ ಪರೀಕ್ಷಾರ್ಥ ಕಾರ್ಯವನ್ನು ಮೊದಲಿಗೆ ಬ್ರಹ್ಮ ಮತ್ತವನ ಮಕ್ಕಳ ಮೂಲಕವೇ ಮಾಡಿ ನೋಡುತ್ತೇನೆ ಎಂದು ತನ್ನ ಪುಷ್ಪಧನುಸ್ಸನ್ನು ಹಿಡಿದೆಳೆದ.

ಮನ್ಮಥನ ಬಾಣಗಳು ಬ್ರಹ್ಮ ಮತ್ತವನ ಮಕ್ಕಳಾದ ಮರೀಚಿ ಮೊದಲಾದ ಮುನಿಗಳು ಹಾಗೂ ದಕ್ಷ ಮೊದಲಾದ ಪ್ರಜಾಪತಿಗಳಿಗೆ ನಾಟಿದವು. ತಕ್ಷಣವೇ ಅವರೆಲ್ಲಾ ಮದನವಿಕಾರವನ್ನು ಹೊಂದಿದ ಇಂದ್ರಿಯಗಳುಳ್ಳವರಾದರು. ದಕ್ಷ ಮತ್ತು ಮರೀಚಿಯವರೊಂದಿಗೆ ಬ್ರಹ್ಮ ಮತ್ತು ಸಂಧ್ಯೆ ಸಹ ಮದನವಿಕಾರವುಳ್ಳವರಾದರು. ಇದನ್ನು ನೋಡಿದ ಮನ್ಮಥನಿಗೆ ತನ್ನ ಸಾಮರ್ಥ್ಯದ ಬಗ್ಗೆ ನಂಬಿಕೆ ಬಂತು. ಬ್ರಹ್ಮ ತನಗೆ ಯಾವ ಕೆಲಸವನ್ನು ಮಾಡಬೇಕೆಂದು ನಿಯಮಿಸಿರುವನೋ, ಆ ಕೆಲಸವನ್ನು ನಿರ್ವಹಿಸಲು ತನಗೆ ಶಕ್ತಿ ಇದೆ ಎಂಬುದನ್ನು ದೃಢಪಡಿಸಿಕೊಂಡ.

ಈ ರೀತಿ ಮನ್ಮಥನ ಕಾಮಬಾಣಕ್ಕೆ ಸಮ್ಮೋಹಿತರಾದ ಬ್ರಹ್ಮ ಮತ್ತವನ ಮಕ್ಕಳು ಕಾಮವಿಕಾರಹೊಂದಿದರು. ಇದರಿಂದ ಸಹೋದರರು ಸಹೋದರಿಯರಲ್ಲಿ, ತಂದೆಯು (ಬ್ರಹ್ಮ) ಮಗಳ (ಸಂಧ್ಯೆ)ಲ್ಲಿ ಪಾಪದೃಷ್ಟಿಯುಳ್ಳವರಾದರು. ಇದನ್ನು ನೋಡಿದ ಧರ್ಮ ಪುರುಷ ಅಸಮಾಧಾನಿತನಾಗಿ, ಧರ್ಮರಕ್ಷಕ ಮತ್ತು ಜಗತ್ಪ್ರಭುವಾದ ಶಿವನ ಮೊರೆ ಹೋದ. ಧರ್ಮರಕ್ಷಕನಾದ ಶಂಕರನನ್ನು ಸ್ಮರಿಸುತ್ತಾ, ಧರ್ಮಪುರುಷ ಪರಮಾತ್ಮನನ್ನು ಸ್ತುತಿಸಿದ. •

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ರಾಜಸ್ಥಾನದ** ಭೀಲವಾಡದಲ್ಲಿ ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಲಾಗಿದೆ. ಸುಭಾಷ್ ನಗರ ಪೊಲೀಸ್ ಠಾಣೆಯಲ್ಲಿ ಈ ಘಟನೆಗೆ ಸಂಬಂಧಿಸಿ ಮೊಕದ್ದಮೆ ದಾಖಲಿಸಲಾಗಿದೆ ಎಂಬ ವರದಿಯನ್ನು ಪ್ರಮುಖ ಪತ್ರಿಕೆಯೊಂದು ತನ್ನ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಿದೆ. 40 ಸೆಕೆಂಡುಗಳ ವಿಡಿಯೊವನ್ನೂ ವರದಿ ಜೊತೆ ಪೋಸ್ಟ್ ಮಾಡಿದೆ. ಬಿಜೆಪಿಯ ಹಲವು ಮುಖಂಡರು ಈ ವರದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಸಂಗನೆರ್ ಪ್ರದೇಶದಲ್ಲಿ ಈದ್ ಆಚರಣೆಯಂದು ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಲಾಗಿದೆ ಎಂಬ ವಿವರಣೆ ವಿಡಿಯೊ ಜೊತೆ ಇದೆ.

✅ **ಈ ವಿಡಿಯೊದಲ್ಲಿ** ಕೇಳುವುದು ಪಾಕಿಸ್ತಾನ ಪರ ಘೋಷಣೆಯಲ್ಲ ಬದಲಾಗಿ 'ಎಸ್‌ಡಿಪಿಐ ಜಿಂದಾಬಾದ್' ಎಂಬ ಘೋಷಣೆ ಎಂದು ಆಲ್ಟ್‌ನ್ಯೂಸ್ ವೇದಿಕೆ ವರದಿ ಮಾಡಿದೆ. ಈ ವಿಡಿಯೊ ಸೆರೆ ಆಗಿರುವುದು 2021ರ ಫೆಬ್ರುವರಿ 17ರಂದು. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಸ್‌ಡಿಪಿಐ ಅಭ್ಯರ್ಥಿ ನಾಥುಲಾಲ್ ರಾವ್ ಎಂಬುವವರು ಗೆದ್ದಿದ್ದರು. ಆ ವೇಳೆ ಎಸ್‌ಡಿಪಿಐ ಬೆಂಬಲಿಗರು ಸಂಭ್ರಮಾಚರಣೆ ನಡೆಸಿದ್ದರು. ವೈರಲ್ ಆಗಿರುವ ವಿಡಿಯೊದಲ್ಲಿ ಪೊಲೀಸರು ಇರುವುದೂ ಕಾಣುತ್ತದೆ. 'ನಾನು ಸ್ಥಳದಲ್ಲೇ ಇದ್ದೆ. ಸಂಭ್ರಮಾಚರಣೆ ವೇಳೆ ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಲಾಗಿಲ್ಲ' ಎಂದು ಸ್ವತಃ ನಾಥುಲಾಲ್ ಅವರೇ ಆಲ್ಟ್‌ನ್ಯೂಸ್‌ಗೆ ಹೇಳಿದ್ದಾರೆ ಎಂದು ಆಲ್ಟ್‌ನ್ಯೂಸ್ ವರದಿಯಲ್ಲಿ ವಿವರಿಸಲಾಗಿದೆ.

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 20, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ:** ವೈಶಾಖ ಕೃಷ್ಣ ಪಂಚಮಿ ಗಂ. 17-30 ನಕ್ಷತ್ರ: ಉತ್ತರಾಷಾಢಾ ಗಂ. 25-18 ಯೋಗ: ಶುಭ ಗಂ. 11-25, ಕರಣ: ಕೌಲವ ಗಂ. 06-54, ವೃಷಭ ಮಾಸದ 05 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 18 ಶವ್ವಾಲ್
ಅದೃಷ್ಟ ಸಂಖ್ಯೆ : 5, 7

**ಮೇಷ:** ಅನಾವಶ್ಯಕ ಚಿಂತೆ, ದೂರ ಪ್ರವಾಸದಿಂದ ಅನಾವಶ್ಯಕ ಖರ್ಚು ಹಾಗೂ ಹಾಳು ವ್ಯಸನಗಳು ಇಂದು ಕಡಿಮೆಯಾಗಲಿದೆ. ನಿಮ್ಮ ಸ್ಥಾನದ ಜವಾಬ್ದಾರಿಯ ಅರಿವು ನಿಮಗಾಗುವುದು. ಆಫೀಸಿನ ಕೆಲಸಗಳನ್ನು ಕೇಳಿ ತಿಳಿದುಕೊಳ್ಳಿ.

**ವೃಷಭ:** ಹಲವು ಕಾಲದಿಂದ ನೆನೆಗುದಿಗೆ ಬಿದ್ದಿದ್ದ ಕೆಲಸಗಳು ದೈವಾನುಗ್ರಹದಿಂದ ಆರಂಭವಾಯಿತೆಂದು ಸಂತೋಷ ಪಡುವಿರಿ. ಸಿನಿಮಾ ನಟ ನಟಿಯರಿಗೆ ಉತ್ತಮ ಅವಕಾಶದ ಶುಭ ಸುದ್ದಿ. ವಿಶೇಷ ಉಡುಗೊರೆ ದೊರಕಬಹುದು.

**ಮಿಥುನ:** ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಹಿಡಿತ ಸಾಧಿಸುವಿರಿ. ನಂಬಿಕಸ್ಥರಿಂದ ಮೋಸ ನಡೆಯುವ ಸಂದರ್ಭಗಳು ಕಾಣುವುದು. ಆದ್ದರಿಂದ ನಿಮ್ಮ ವ್ಯವಹಾರಗಳ ಬಗ್ಗೆ ನೀವೇ ಹೆಚ್ಚಿನ ಗಮನ ಹರಿಸುವುದು ಸರಿ ಎನಿಸಲಿದೆ.

**ಕರ್ಕಾಟಕ:** ಸಂಸಾರದ ಜವಾಬ್ದಾರಿ ಹೆಚ್ಚಲಿದೆ. ಗೃಹ ಸಾಮಗ್ರಿಗಳ ಖರೀದಿಯಿಂದ ಅಧಿಕ ಖರ್ಚು. ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಮನೆಯಲ್ಲಿ ಹೆಚ್ಚಿನ ಸಂಭ್ರಮದ ವಾತಾವರಣ ಇರುವುದು.

**ಸಿಂಹ:** ನಿಮ್ಮ ಮಾನಸಿಕ ಸ್ಥೈರ್ಯ ದೃಢವಾಗಿರಲಿ. ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರ ಅಪೇಕ್ಷಿಸುವಂತಾಗುವುದು. ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ.

**ಕನ್ಯಾ:** ನೀವು ಇತರರಿಗಿಂತ ಭಿನ್ನ ಹಾಗೂ ಧನಾತ್ಮಕ ನಿರ್ಧಾರ ತೆಗೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಇದು ಸಾಧನೆಗೆ ಪೂರಕವಾದ ದಿನ. ನಿಮ್ಮ ಧೈರ್ಯ ಸಾಮರ್ಥ್ಯದಿಂದ ನಿಮ್ಮ ಸಹೋದ್ಯೋಗಿಗಳ ಉತ್ತೇಜನ ಪಡೆಯುವಿರಿ.

**ತುಲಾ:** ಯಾವುದೇ ತೀರ್ಪುಗಳನ್ನು ನೀಡುವಂತಹ ಕೆಲಸ ಅಥವಾ ಇನ್ನೊಬ್ಬರನ್ನು ಪರೀಕ್ಷಿಸುವ ಕೆಲಸ ಇಂದು ಸರಿಯಲ್ಲ. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು. ಹಾಲು ಅಥವಾ ಹಾಲಿನ ಪದಾರ್ಥ ಮಾರಾಟಗಾರರಿಗೆ ಲಾಭ.

**ವೃಶ್ಚಿಕ:** ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ವೃದ್ಧಿ. ಮನೆಯ ಪರಿಸ್ಥಿತಿ ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕರಾಗಿರಿ.

**ಧನು:** ಕೌಟುಂಬಿಕ ವಿಷಯಗಳಲ್ಲಿ ಬಹಳ ಖುಷಿ. ನಿಮ್ಮ ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆ ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು.

**ಮಕರ:** ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಇಂದು ಬರಲಿದೆ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು ಸಂತಸ ನೀಡುವ ವಿಚಾರ.

**ಕುಂಭ:** ಕೆಲಸ ಬದಲಿಸುವ ಯೋಚನೆ ಮಾಡುವವರಿಗೆ ಇಂದು ಸಕಾಲ. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸುವಿರಿ. ಗುತ್ತಿಗೆ ಕೆಲಸದ ಬಾಕಿ ಹಣವು ಇಂದು ಸಂದಾಯವಾಗುವುದು. ಹೊಸದಾಗಿ ಹಣ ಹೂಡಿಕೆ ಮಾಡಬಹುದು.

**ಮೀನ:** ನೆರೆಯವರ ಸಹಾಯದಿಂದ ಮಗಳ ಮದುವೆ ನಿಶ್ಚಯವಾಗಲಿದೆ. ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದವಾಗುತ್ತದೆ. ಹೊಸ ಒಪ್ಪಂದಗಳಿಂದ ಲಾಭ. ಕಚೇರಿ ಕೆಲಸ ಕಾರ್ಯಗಳು ಒತ್ತಡ ತರುವುದು.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಬಡತನ-ಸಿರಿತನ

**ಕಿವುಡುತನ ತಪ್ಪೀತೆ ರನ್ನ ಕುಂಡಲದಿಂದ ? |**
**ತೊವಲು ಜಬ್ಬಲು ಬಿಳದೆ ಮೃಷ್ಟಾನ್ನದಿಂದ ? ||**
**ಭುವಿಯ ಪರಿಣಾಮದಲಿ ಸಿರಿಬಡತನಗಳೊಂದೆ |**
**ಜವರಾಯ ಸಮವರ್ತಿ – ಮಂಕುತಿಮ್ಮ || 632 ||**

**ಪದ-ಅರ್ಥ:** ರನ್ನ = ಚಿನ್ನದ, ಕುಂಡಲ = ಕಿವಿಯ ಓಲೆ, ತೊವಲು = ತೊಗಲು, ಜಬ್ಬಲು = ಜೋತು, ಬಿಳದೆ = ಬೀಳದೆ, ಭುವಿಯ = ಭೂಮಿಯ, ಜಗತ್ತಿನ, ಜವರಾಯ = ಯಮರಾಯ, ಸಮವರ್ತಿ = ಎಲ್ಲರನ್ನೂ ಸಮನಾಗಿ ನೋಡುವವನು.

**ವಾಚ್ಯಾರ್ಥ:** ಚಿನ್ನದ ಓಲೆಯನ್ನು ಹಾಕಿಕೊಂಡರೆ ಕಿವುಡುತನ ಹೋದೀತೇ? ದಿನವೂ ಮೃಷ್ಟಾನ್ನವನ್ನು ತಿನ್ನುತ್ತಿದ್ದರೆ ಚರ್ಮ ಜೋತು ಬೀಳದೆ? ಲೋಕದಲ್ಲಿ ಸಿರಿತನ, ಬಡತನಗಳು ಕೊನೆಯ ಪರಿಣಾಮದಲ್ಲಿ ಒಂದೇ ಆಗಿವೆ, ಯಾಕೆಂದರೆ ಯಮ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುತ್ತಾನೆ.

**ವಿವರಣೆ:** ಬದುಕಿನಲ್ಲಿ ಸಿರಿತನ, ಬಡತನಗಳನ್ನು, ನಾವು ಯಾವ ರೀತಿಯಲ್ಲಿ ನೋಡುತ್ತೇವೆ ಎನ್ನುವುದರ ಮೇಲಿದೆ. ತೀರ ಬಡತನವಿದ್ದೂ ಸಂತೋಷವಾಗಿರುವವರನ್ನೂ ಕಂಡಿದ್ದೇವೆ, ತುಂಬ ಶ್ರೀಮಂತಿಕೆ ಇದ್ದು ಸದಾ ಕೊರಗುವವರನ್ನು ನೋಡಿದ್ದೇವೆ. ಹಾಗಾದರೆ ಬಡತನ, ಸಿರಿತನಗಳ ವ್ಯತ್ಯಾಸವೇನು? ಅದು ನೋಡುವ ದೃಷ್ಟಿ. ಒಮ್ಮೆ ಒಂದು ಕೋಳಿ ಆಹಾರ ಹುಡುಕುತ್ತ ಒಬ್ಬ ಅತ್ಯಂತ ಶ್ರೀಮಂತರ ಮನೆಯ ಹಿಂಭಾಗಕ್ಕೆ ಹೋಯಿತು. ಅಲ್ಲೊಂದು ತಿಪ್ಪೆ. ಅದು ಶ್ರೀಮಂತರ ತಿಪ್ಪೆ. ಕೋಳಿಗೆ ಕೆದರಿ, ಕೆದರಿ ಸಾಕಾಯಿತು. ತಿನ್ನಲು ಏನೂ ಸಿಕ್ಕಲಿಲ್ಲ. ಮತ್ತೆ ಕೆದರಿದಾಗ ಅದಕೊಂದು ವಜ್ರದ ಹರಳು ಸಿಕ್ಕಿತು. ಕೋಟಿ ಬೆಲೆಬಾಳುವ ಹರಳು ಅದು. ಕೋಳಿ ಕಚ್ಚಿ, ಕಚ್ಚಿ ನೋಡಿತು. ದರಿದ್ರ ವಸ್ತು, ರುಚಿಯಿಲ್ಲ, ರಸವಿಲ್ಲ. ಇದು ನಿರುಪಯುಕ್ತ ವಸ್ತುವೆಂದು ಉಗುಳಿ ಹೊರಟು ಹೋಯಿತು. ಯಾವುದು ಶ್ರೀಮಂತನಿಗೆ ಬೆಲೆಬಾಳುವ ವಸ್ತುವಾಗಿತ್ತೋ, ಕೋಳಿಗೆ ಅದು ನಿಷ್ಪ್ರಯೋಜಕ. ಮುಂದೆ ಕೋಳಿಗೊಂದು ಅರ್ಧ ಕೊಳೆತ ಕಾಳು ಸಿಕ್ಕಿತು. ಅದಕ್ಕೆ ಸಂಭ್ರಮವೇ ಸಂಭ್ರಮ. ಅದು ಬೆಲೆಬಾಳುವ ವಸ್ತು ಕೋಳಿಗೆ.

ಸಪ್ತಸಾಗರಗಳಿವೆ, ತುಂಬಿ ಹರಿಯುವ ನದಿಗಳಿವೆ. ಮಳೆ ಎಲ್ಲೆಡೆಗೂ ಸುರಿಯುತ್ತದೆ. ಅಂದು ಕಾಳು ಬಿತ್ತಿದರೆ ಸಾವಿರ ಕಾಳು ಮರಳಿ ಕೊಡುವ ಫಲವತ್ತಾದ ನೆಲವಿದೆ. ಎಲ್ಲರನ್ನೂ ತಲುಪುವ ಸೂರ್ಯನಿದ್ದಾನೆ. ಆಗಸವನ್ನು ಅಲಂಕರಿಸಿದ ಚಂದ್ರ-ತಾರೆಗಳಿವೆ. ಇವು ಎಲ್ಲರಿಗೂ ಇವೆ. ಇವು ಯಾರೊಬ್ಬರ ಸೊತ್ತೂ ಅಲ್ಲ. ಹಾಗಾದರೆ ಬಡವರಾರು, ಶ್ರೀಮಂತರಾರು? ಪುಕ್ಕಟೆಯಾಗಿ ದೊರೆಯುವ ಈ ಎಲ್ಲವುಗಳನ್ನು ಸರಿಯಾಗಿ ಬಳಸಿಕೊಂಡವ ಶ್ರೀಮಂತ, ಕಣ್ಣು ಮುಚ್ಚಿಕೊಂಡು ಇವುಗಳಿಗೆಲ್ಲ ಬೆನ್ನು ಮಾಡಿದವ ಬಡವ.

**ತತ್ವತ:** ಎಲ್ಲವೂ ಸಂಪತ್ತೇ, ಆದ್ದರಿಂದ ಎಲ್ಲರೂ ಸಿರಿವಂತರೇ. ಭಗವಂತ ಎಲ್ಲರಿಗೂ, ಎಲ್ಲವನ್ನೂ ಸಮನಾಗಿಯೇ ಕೊಟ್ಟಿದ್ದಾನೆ. ಆದರೆ ಮನುಷ್ಯ ತನ್ನ ಸ್ವಾರ್ಥದಿಂದ, ಕೆಲವು ವಸ್ತುಗಳನ್ನು ಶ್ರೀಮಂತಿಕೆಯ ಸಂಕೇತಗಳೆಂದು ಆರಿಸಿಕೊಂಡು, ಶ್ರೇಷ್ಠ, ಕನಿಷ್ಠ ಎಂದು ಮಾಡಿಕೊಂಡಿದ್ದಾನೆ. ಕಗ್ಗ ಆ ಮಾತನ್ನು ತಿಳಿಯುವಂತೆ ಹೇಳುತ್ತದೆ. ಬಂಗಾರದ ಓಲೆಗಳನ್ನು ಹಾಕಿಕೊಂಡರೆ ಕಿವುಡುತನ ಹೋದೀತೇ? ಬಂಗಾರದ ಓಲೆ ದೇಹದ ಹೊರಗಿನದು, ಅದು ದೇಹಶಕ್ತಿಯನ್ನು ಬದಲಿಸಲಾಗದು. ಅಂತೆಯೇ ಶ್ರೀಮಂತಿಕೆ ಇದೆಯೆಂದು ನಿತ್ಯ ಮೃಷ್ಟಾನ್ನ ತಿಂದರೆ, ಬೊಜ್ಜು ಬೆಳೆದು ಚರ್ಮ ಜೋತುಬಿದ್ದು ಅಸಹ್ಯವಾಗುತ್ತದೆ. ಮರದ ಹಡಗೊಂದು, ಚಿನ್ನದ ಹಡಗೊಂದು ಸಮುದ್ರದಲ್ಲಿ ಸಾಗಿದವು. ಬಿರುಗಾಳಿ ಎದ್ದಿತು. ಎರಡೂ ಒಡೆದು ಚಿಂದಿಯಾದವು. ಸಮುದ್ರಕ್ಕೆ ಬಂಗಾರದ, ಮರದ ವ್ಯತ್ಯಾಸವಿಲ್ಲ. ನಮ್ಮ ಬದುಕಿನ ಸಮುದ್ರದಲ್ಲೂ ಸಾಗುವ ನಮಗೆ ಕೊನೆಗೆ ದೊರಕುವ ಸಂತೋಷ ಮಾತ್ರ ನಮ್ಮದು, ಕೂಡಿ ಹಾಕಿದ ವಸ್ತುಗಳಲ್ಲ. ಯಮರಾಜ ಯಾವುದನ್ನು ವ್ಯತ್ಯಾಸ ಮಾಡದೆ ನೋಡುವ ಸಮವರ್ತಿ. ❖

## ಪದಬಂಧ 4963

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3.ವರ್ಗ ಮಾಡಿದ್ದಕ್ಕೇ ಈ ಸೊಕ್ಕು! (2)
4.ಅದೇ ತಾನೆ ಲಗ್ನವಾದ ಗಂಡ (5)
6.ನಡುಗುತ್ತಲೇ ತೋರಿದ ಮಂದಹಾಸ (2)
8.ರತಿಪತಿಯಿಂದ ಮೂಡಿದ ಆಸೆ (3)
10.ಚಿಕ್ಕ ಕೂಸನ್ನು ಹೀಗೆ ಕರೆಯಿರಿ (2)
12.ಸಾಯುವ ಸಮಯವಿದು (5)
14.ಹೊರಗೆ ಆವರಿಸಿದ ಧೂಮ (2)
15.ಕತ್ತು ಕೊನೆಗಿರಿಸಿ ಮಾಡಿದ ಜೋಡಣೆ! (4)

**ಮೇಲಿಂದ ಕೆಳಕ್ಕೆ**
1.ಮನದಲ್ಲಿಯೇ ಓಟವನ್ನು ನೀಡುವಿಕೆ (4)
2.ರಸ ಒಸರುವ ನಾಲಿಗೆ (3)
3.ಗರ ಬಡಿದಂತಿರುವ ಪತಿವ್ರತೆ (3)
5.ದಂಡ ನೀಡಿ ಶಿಕ್ಷಿಸುವುದು (3)
7.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
8.ಕಾಣದಂತೆ ಇರುವ ಉದ್ದೇಶ! (3)
9.ಉಲ್ಟಾಪಲ್ಟಾ ಆಗಿರುವ ಕಾಲು (2)
11. ಬಿಡುವು ಹೀಗೆ ಬಂದಿದೆ (4)
12.ಗಲ್ಲಿಯಲ್ಲಿ ಮಾರುತ್ತಿರುವ ಸುವಾಸಿತ ಹೂಂ (3)
13.ಜನಪದರ ಮಾತಲ್ಲಿನ ಸಿರಿದೇವತೆ (3)



### 4962ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ವರಮಾನ 3.ವನ್ಯಮೃಗ
5.ದುರಾಸೆ 6.ರವಾನೆ
8.ತವರ 10.ಮಂಕರಿ
11.ಸರಕು 13.ಕಳಸ
15.ಸಹೋದರಿ 16.ಪರದಾಟ.

**ಮೇಲಿಂದ ಕೆಳಕ್ಕೆ:**
1.ವನಚರ 2.ನಗದು
3.ವರಸೆ 4.ಗಡಿಯಾರ
7.ವಾದಕ 9.ವಕ್ತಾರ
10.ಮಂದಹಾಸ 12.ಕುಡಿನೋಟ
13.ಕಮರಿ 14.ಸಲ್ಲಾಪ

## ಸುಡೊಕು 5349

| | | | | | | | | |
|---|---|---|---|---|---|---|---|---|
| | | | | 7 | | | 6 | |
| | 5 | | 4 | | 2 | | | 1 |
| | 3 | 1 | | 5 | | 2 | | |
| 6 | | 4 | | 3 | | | 5 | |
| 5 | | 2 | 6 | | 9 | | | 8 |
| | | | | 2 | | | 4 | |
| 3 | | | | 1 | | | 9 | |
| | | 5 | 8 | | 3 | 6 | | 7 |
| 1 | | | | 6 | | | | 3 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5348 ಸುಡೊಕು

| | | | | | | | | |
|---|---|---|---|---|---|---|---|---|
| 9 | 5 | 3 | 8 | 6 | 4 | 7 | 1 | 2 |
| 7 | 4 | 6 | 1 | 3 | 2 | 9 | 5 | 8 |
| 8 | 1 | 2 | 7 | 5 | 9 | 6 | 3 | 4 |
| 2 | 8 | 7 | 6 | 1 | 5 | 4 | 9 | 3 |
| 3 | 6 | 4 | 2 | 9 | 7 | 1 | 8 | 5 |
| 5 | 9 | 1 | 4 | 8 | 3 | 2 | 7 | 6 |
| 6 | 7 | 5 | 3 | 4 | 1 | 8 | 2 | 9 |
| 4 | 2 | 9 | 5 | 7 | 8 | 3 | 6 | 1 |
| 1 | 3 | 8 | 9 | 2 | 6 | 5 | 4 | 7 |

### ಷೇರುಪೇಟೆ ವಹಿವಾಟು 1416




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 16,240 |
| ಇಂದಿನ ಅಂತ್ಯ | 15,809 |
| ▼ | 431 |
| ದಿನದ ಕನಿಷ್ಠ | 15,775 |

### ವಿನಿಮಯ ದರ

| | |
|---|---|
| $ ಡಾಲರ್ | 77.65 |
| £ ಪೌಂಡ್ | 95.94 |
| € ಯುರೊ | 81.40 |
| ¥ ಯೆನ್ (100ಕ್ಕೆ) | 61 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹485 |
| 12 ಮೊಟ್ಟೆಗೆ | ₹65 |
| ಮೈಸೂರು | |
| 100 ಮೊಟ್ಟೆಗೆ | ₹490 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1615 (1620) |
| ಸೋಯಾ (ರಿಫೈನ್ಡ್) | ₹1560 (1578) |
| ಸೂರ್ಯಕಾಂತಿ (ರಿಫೈನ್ಡ್) | ₹1890 (1890) |
| ಪಾಮೋಲಿನ್ | ₹1550 (1565) |

### ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹288-489 |
| ದ್ವಿತಳಿ (ಬಿ.ವಿ) | ₹230-788 |

### ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹169.50 |
| ಆರ್‌ಎಸ್‌ಎಸ್-5 | ₹164 |
| ಗುಡ್ ಲಾಟ್ | ₹158.50 |

### ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹800-1100 |
| ಮಧ್ಯಮ | ₹600-800 |
| ಸಣ್ಣ | ₹200-600 |

# ಮಿಸ್ತ್ರಿ ಪದಚ್ಯುತಿ ನಿರ್ಧಾರ ಮರುಪರಿಶೀಲನೆಗೆ ನಕಾರ

ನವದೆಹಲಿ (ಪಿಟಿಐ): ಟಾಟಾ ಸನ್ಸ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನದಿಂದ ಸೈರಸ್ ಮಿಸ್ತ್ರಿ ಅವರನ್ನು ಪದಚ್ಯುತಗೊಳಿಸುವ ಟಾಟಾ ಸಮೂಹದ ನಿರ್ಧಾರವನ್ನು ಎತ್ತಿಹಿಡಿದ 2021ರ ತೀರ್ಪನ್ನು ಮರುಪರಿಶೀಲಿಸಲು ಕೋರಿ ಸಲ್ಲಿಸಲಾಗಿದ್ದ ಶಾಪೂರ್ಜಿ ಪಲ್ಲೋಂಜಿ (ಎಸ್‌ಪಿ) ಸಮೂಹದ ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ಸಿಜೆಐ ಎನ್.ವಿ. ರಮಣ ನೇತೃತ್ವದ ಪೀಠವು ಮಾರ್ಚ್ 2021ರ ತೀರ್ಪಿನಲ್ಲಿ ಸೈರಸ್ ಮಿಸ್ತ್ರಿ ಬಗ್ಗೆ ಹೇಳಿದ್ದ ಕೆಲವು ಮಾತುಗಳನ್ನು ಅಳಿಸಲು ಆದೇಶಿಸಿತು.

ಟಾಟಾ ಸಮೂಹದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು, ನ್ಯಾಯಾಲಯವು ಒಂದು ಅಥವಾ ಕೆಲವು ವಾಕ್ಯಗಳನ್ನು ಅಳಿಸಲು ಅನುಮತಿ ನೀಡಬಹುದು ಎಂದು ಹೇಳಿದರು. ಮಿಸ್ತ್ರಿ ಅವರು 2012ರಲ್ಲಿ ಟಾಟಾ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. 4 ವರ್ಷಗಳ ಬಳಿಕ ಆ ಸ್ಥಾನದಿಂದ ಅವರನ್ನು ಪದಚ್ಯುತಗೊಳಿಸಲಾಯಿತು.

## ವಿದೇಶಿ ಬಂಡವಾಳ ಹೊರಹರಿವು, ರೂಪಾಯಿ ಮೌಲ್ಯ ಇಳಿಕೆ

# ಸೆನ್ಸೆಕ್ಸ್ 1,416 ಅಂಶ ಕುಸಿತ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದಿಂದ ದೇಶಿ ಷೇರುಪೇಟೆಗಳಲ್ಲಿ ಗುರುವಾರ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಗಮನ ನೀಡಿರುವುದು ಮತ್ತು ರೂಪಾಯಿ ಮೌಲ್ಯವು ದಾಖಲೆ ಮಟ್ಟಕ್ಕೆ ಇಳಿಕೆ ಆಗಿರುವುದು ಸಹ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,416 ಅಂಶ ಇಳಿಕೆ ಕಂಡು 52,792 ಅಂಶಗಳಿಗೆ ತಲುಪಿತು. ಎರಡು ತಿಂಗಳಿನಲ್ಲಿ ದಿನದ ವಹಿವಾಟಿನಲ್ಲಿ ಆಗಿರುವ ಸೂಚ್ಯಂಕದ

ಅತಿ ದೊಡ್ಡ ಕುಸಿತ ಇದು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 431 ಅಂಶ ಇಳಿಕೆ ಕಂಡು 15,809 ಅಂಶಗಳಿಗೆ ತಲುಪಿತು. ಸೆನ್ಸೆಕ್ಸ್‌ನಲ್ಲಿ ವಿಪ್ರೊ ಕಂಪನಿ ಷೇರು ಶೇ 6.21ರಷ್ಟು ಗರಿಷ್ಠ ನಷ್ಟ ಕಂಡಿತು.

### ಕರಗಿತು ₹ 6.71 ಲಕ್ಷ ಕೋಟಿ

ನಕಾರಾತ್ಮಕ ವಹಿವಾಟಿನಿಂದ ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 6.71 ಲಕ್ಷ ಕೋಟಿಯಷ್ಟು ಕರಗಿತು. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 249.06 ಲಕ್ಷ ಕೋಟಿಗೆ ಇಳಿಕೆ ಕಂಡಿತು.

**ರೂಪಾಯಿ ಮೌಲ್ಯ ಇಳಿಕೆ:** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 3 ಪೈಸೆ ಇಳಿಕೆ ಆಗಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟವಾದ ಒಂದು ಡಾಲರ್‌ಗೆ ₹ 77.65 ರಂತೆ ವಿನಿಮಯಗೊಂಡಿತು.

ಮಾರುಕಟ್ಟೆಯು ಹೆಚ್ಚು ಚಂಚಲವಾಗಿದ್ದು, ಹೂಡಿಕೆದಾರರು ಎಫ್‌ಎಂಸಿಜಿ, ಔಷಧ, ಬಂಡವಾಳ ಸರಕುಗಳು ಮತ್ತು ತಯಾರಿಕಾ ವಲಯಗಳ ಬಗ್ಗೆ ಗಮನ ಹರಿಸುವುದು ಒಳಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.29ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 107.7 ಡಾಲರ್‌ಗಳಿಗೆ ತಲುಪಿದೆ.

# ಸುದ್ದಿ 2 ನಿಮಿಷ

## ಗೋಧಿ ಉತ್ಪಾದನೆ ಶೇ 3ರಷ್ಟು ಇಳಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ಗೋಧಿ ಉತ್ಪಾದನೆಯು 2020–21ನೇ ಬೆಳೆ ವರ್ಷಕ್ಕೆ ಹೋಲಿಸಿದರೆ 2021–22ನೇ ಬೆಳೆ ವರ್ಷದಲ್ಲಿ ಶೇಕಡ 3ರಷ್ಟು ಇಳಿಕೆಯಾಗುವ ಅಂದಾಜು ಮಾಡಲಾಗಿದೆ.

2020–21ನೇ ಬೆಳೆ ವರ್ಷದಲ್ಲಿ 10.95 ಕೋಟಿ ಟನ್ ಗೋಧಿ ಉತ್ಪಾದನೆ ಆಗಿತ್ತು. 2021–22ನೇ ಬೆಳೆ ವರ್ಷದಲ್ಲಿ 10.54 ಕೋಟಿ ಟನ್‌ಗೆ ಇಳಿಕೆ ಆಗಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಗುರುವಾರ ಹೇಳಿದೆ.

ಪಂಜಾಬ್ ಮತ್ತು ಹರಿಯಾಣದಲ್ಲಿ ಬಿಸಿ ಗಾಳಿಯಿಂದಾಗಿ ಇಳುವರಿ ಕಡಿಮೆ ಆಗಿದೆ. ಹೀಗಾಗಿ ಒಟ್ಟಾರೆ ಉತ್ಪಾದನೆ ಕಡಿಮೆ ಆಗಲಿದೆ ಎಂದು ಕೃಷಿ ಕಾರ್ಯದರ್ಶಿ ಮನೋಜ್ ಅಹುಜಾ ಕಳೆದ ವಾರ ಹೇಳಿದ್ದರು. ಉತ್ಪಾದನೆಯು 10.5 ಕೋಟಿ ಟನ್‌ನಿಂದ 10.60 ಕೋಟಿ ಟನ್ ಆಗಬಹುದು ಎಂದೂ ಹೇಳಿದ್ದರು.

ಅಕ್ಕಿ ಉತ್ಪಾದನೆಯು 12.4 ಕೋಟಿ ಟನ್‌ನಿಂದ 12.96 ಕೋಟಿ ಟನ್‌ಗೆ ಏರಿಕೆ ಆಗುವ ಅಂದಾಜು ಮಾಡಲಾಗಿದೆ. ಬೇಳೆಕಾಳು ಉತ್ಪಾದನೆ 2.54 ಕೋಟಿ ಟನ್‌ನಿಂದ 2.77 ಕೋಟಿ ಟನ್‌ಗೆ ಏರಿಕೆ ಆಗಲಿದೆ. ಏಕದಳ ಧಾನ್ಯ ಉತ್ಪಾದನೆ 5.13 ಕೋಟಿ ಟನ್‌ನಿಂದ 5.07 ಟನ್‌ಗೆ ಇಳಿಕೆ ಆಗಲಿದೆ ಎಂದು ಸಚಿವಾಲಯವು ಪರಿಷ್ಕೃತ ಅಂದಾಜಿನಲ್ಲಿ ಹೇಳಿದೆ.

ಎಣ್ಣೆಕಾಳು ಉತ್ಪಾದನೆ 3.59 ಕೋಟಿ ಟನ್‌ನಿಂದ 3.84 ಕೋಟಿ ಟನ್‌ಗೆ ಏರಿಕೆ ಆಗಲಿದೆ. ಆಹಾರ ಧಾನ್ಯಗಳ ಉತ್ಪಾದನೆಯು 31.07 ಕೋಟಿ ಟನ್‌ನಿಂದ 31.45 ಕೋಟಿ ಟನ್‌ಗೆ ತಲುಪುವ ಅಂದಾಜು ಮಾಡಲಾಗಿದೆ.

## ಆರೋಗ್ಯ ಸೇವಾ ವಲಯಕ್ಕೆ ಅದಾನಿ

ನವದೆಹಲಿ (ಪಿಟಿಐ): ಅದಾನಿ ಸಮೂಹವು ದೊಡ್ಡ ಆಸ್ಪತ್ರೆಗಳು, ಡಯಾಗ್ನಾಸ್ಟಿಕ್ ಕೇಂದ್ರಗಳು ಮತ್ತು ಡಿಜಿಟಲ್ ಫಾರ್ಮಸಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಆರೋಗ್ಯ ಸೇವಾ ವಲಯವನ್ನು ಪ್ರವೇಶಿಸಲು ಮುಂದಾಗಿದೆ.

ಈ ಸಂಬಂಧ ಅದಾನಿ ಹೆಲ್ತ್ ವೆಂಚರ್ಸ್ ಲಿಮಿಟೆಡ್ (ಎಎಚ್‌ವಿಎಲ್) ಕಂಪನಿಯನ್ನು ಮೇ 17ರಂದು ಸ್ಥಾಪಿಸಿರುವುದಾಗಿ ಷೇರುಪೇಟೆಗೆ ಮಾಹಿತಿ ನೀಡಿದೆ. ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ಎಲ್ಲ ವಹಿವಾಟುಗಳನ್ನು ಎಎಚ್‌ವಿಎಲ್ ನಡೆಸಲಿದೆ ಎಂದು ಸಮೂಹ ತಿಳಿಸಿದೆ. ₹ 30,800 ಕೋಟಿವರೆಗೆ ಹೂಡಿಕೆ ಮಾಡುವ ಯೋಜನೆಯನ್ನೂ ಸಮೂಹವು ಹೊಂದಿದೆ.

ಹೋಲ್ಸಿಮ್ ಇಂಡಿಯಾದ ವಹಿವಾಟನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಸಮೂಹವು ಈಚೆಗಷ್ಟೇ ಭಾರತದ ಸಿಮೆಂಟ್ ವಲಯವನ್ನು ಪ್ರವೇಶಿಸಿದೆ.

ಸರ್ಕಾರಿ ಸ್ವಾಮ್ಯದ ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ (ಎಚ್‌ಎಲ್‌ಎಲ್) ಖರೀದಿಸುವ ಸಂಬಂಧ ಅದಾನಿ ಮತ್ತು ಪಿರಾಮಲ್ ಹೆಲ್ತ್‌ಕೇರ್ ಪೈಪೋಟಿಯಲ್ಲಿವೆ ಎಂದು ವರದಿಯಾಗಿದೆ. ಸರ್ಕಾರವು ಎಚ್‌ಎಲ್‌ಎಲ್ ಕಂಪನಿಯಲ್ಲಿ ಹೊಂದಿರುವ ಶೇಕಡ 100ರಷ್ಟು ಷೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು 2021ರ ಡಿಸೆಂಬರ್‌ನಲ್ಲಿ ನಿರ್ಧರಿಸಿದೆ.

# ಸದರ್ನ್ ಟ್ರಾವೆಲ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದರ್ನ್ ಟ್ರಾವೆಲ್ಸ್ ಪ್ರೈ. ಲಿ. ಕಂಪನಿಯು 2022ನೇ ಸಾಲಿನ ಟ್ರಾವೆಲ್ ವಿಟಾ ಪ್ರಶಸ್ತಿಗೆ ಪಾತ್ರವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

1970ರಲ್ಲಿ ಸ್ಥಾಪನೆಯಾದ ಈ ಕಂಪನಿಯ ದೇಶದಾದ್ಯಂತ ಶಾಖೆಗಳನ್ನು ಹೊಂದಿದೆ. ಕಂಪನಿಯು ಸತತ ಎಂಟು ಬಾರಿ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಗೆ ಆಯ್ಕೆಯಾಗಿದೆ. ಇದಲ್ಲದೆ ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಿಂದಲೂ ಪ್ರಶಸ್ತಿಗಳನ್ನು ಪಡೆದಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

## ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿಕೆ

# ತಿರಸ್ಕರಿಸುವ ಅಧಿಕಾರವನ್ನು ಯಾವ ರಾಜ್ಯವೂ ಬಳಸಿಲ್ಲ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯ ತೀರ್ಮಾನಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು 'ಒಂದು ದೇಶ ಒಂದು ತೆರಿಗೆ' ವ್ಯವಸ್ಥೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಲಿಕ್ಕಿಲ್ಲ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿದ್ದಾರೆ.

ಈಗಿರುವ ಕಾನೂನನ್ನೇ ಕೋರ್ಟ್ ಪುನರುಚ್ಚರಿಸಿದೆ. ಈ ಕಾನೂನು ತೆರಿಗೆ ವಿಚಾರವಾಗಿ ಮಂಡಳಿಯ ಶಿಫಾರಸನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡುತ್ತದೆ. ಆದರೆ, ಈ ಅಧಿಕಾರವನ್ನು ಯಾವ ರಾಜ್ಯವೂ ಕಳೆದ ಐದು ವರ್ಷಗಳಲ್ಲಿ ಚಲಾಯಿಸಿಲ್ಲ ಎಂದು ಬಜಾಜ್ ಅವರು ಹೇಳಿದ್ದಾರೆ.

ಜಿಎಸ್‌ಟಿ ಮಂಡಳಿಯ ಶಿಫಾರಸುಗಳು ಸಂವಿಧಾನ ತಿದ್ದುಪಡಿಯ ಪ್ರಕಾರ ಮಾರ್ಗದರ್ಶನದ ಸ್ವರೂಪವನ್ನು ಹೊಂದಿವೆಯೇ ವಿನಾ ಕಡ್ಡಾಯವಾಗಿ ಪಾಲಿಸಬೇಕಾದವು ಅಲ್ಲ ಎಂದೂ ಬಜಾಜ್ ಸ್ಪಷ್ಟಪಡಿಸಿದ್ದಾರೆ.

ತರುಣ್ ಬಜಾಜ್

ನಿರ್ದಿಷ್ಟ ಉತ್ಪನ್ನ ಅಥವಾ ಸೇವೆಗೆ ವಿಧಿಸುವ ತೆರಿಗೆ ಪ್ರಮಾಣದ ವಿಚಾರವಾಗಿ ಮಂಡಳಿಯಲ್ಲಿ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದರೂ, ಯಾವ ರಾಜ್ಯವೂ ಮಂಡಳಿಯ ಶಿಫಾರಸುಗಳಿಗೆ ಅನುಗುಣವಾಗಿ ಇಲ್ಲದ ರೀತಿಯಲ್ಲಿ ಕಾನೂನು ರೂಪಿಸಿಲ್ಲ.

ಇದು ಮುಂದೆಯೂ ಹೀಗೆಯೇ ಇರುವ ಸಾಧ್ಯತೆ ಇದೆ ಎಂದು ಬಜಾಜ್ ಅವರು ಸುಪ್ರೀಂ ಕೋರ್ಟ್ ತೀರ್ಪಿನ ನಂತರದಲ್ಲಿ ಹೇಳಿದ್ದಾರೆ. 'ತಾನು ಶಿಫಾರಸು ಮಾಡುತ್ತೇನೆ ಎಂದು ಜಿಎಸ್‌ಟಿ ಕಾನೂನು ಹೇಳುತ್ತದೆ. ತಾನು ಕಡ್ಡಾಯಗೊಳಿಸುತ್ತಿದ್ದೇನೆ ಎಂದು ಅದು ಎಲ್ಲಿಯೂ ಹೇಳುವುದಿಲ್ಲ.

### ಮುಖ್ಯಾಂಶಗಳು

- ಭಿನ್ನಾಭಿಪ್ರಾಯ ಹೊಂದಿದ ರಾಜ್ಯವೂ ಮಂಡಳಿ ಶಿಫಾರಸು ಮೀರಿಲ್ಲ
- 'ಸುಪ್ರೀಂ ಕೋರ್ಟ್ ತೀರ್ಪಿನಿಂದ ವ್ಯವಸ್ಥೆಯಲ್ಲಿ ಬದಲಾವಣೆ ಆಗದು'

ಜಿಎಸ್‌ಟಿ ಮಂಡಳಿ ಸಾಂವಿಧಾನಿಕ ಸಂಸ್ಥೆ. ಅದರ ಶಿಫಾರಸುಗಳನ್ನು ಆಧರಿಸಿ ನಾವು ಜಿಎಸ್‌ಟಿ ಕುರಿತ ಕಾನೂನು ರೂಪಿಸಿದ್ದೇವೆ. ವ್ಯವಸ್ಥೆ ಈ ರೀತಿಯಲ್ಲಿದೆ' ಎಂದು ಬಜಾಜ್ ವಿವರಿಸಿದ್ದಾರೆ.

'ರಾಜ್ಯಗಳು ಒಪ್ಪಿಕೊಳ್ಳದೆ ಇದ್ದ ಸಂದರ್ಭದಲ್ಲಿ, ತಮ್ಮ ಒಪ್ಪಿಗೆ ಇಲ್ಲ ಎಂಬುದನ್ನು ಲಿಖಿತವಾಗಿ ಸಲ್ಲಿಸಿದರೂ ಅವು ಶಿಫಾರಸುಗಳನ್ನು ಮಂಡಳಿ ಹೇಳಿದ ರೀತಿಯಲ್ಲಿಯೇ ಅನುಷ್ಠಾನಕ್ಕೆ ತಂದಿವೆ. ತಾವು ಬಯಸಿದ ರೀತಿಯಲ್ಲಿ ಅನುಷ್ಠಾನಗೊಳಿಸಿಲ್ಲ' ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಬ್ರಾಹ್ಮಣ ಪುರುಷ ಅಡುಗೆ ಭಟ್ಟರು ಬೆಂಗಳೂರು ಮನೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿ ಮತ್ತು 24000 ಸಂಬಳ ಸಂಪರ್ಕಿಸಿ: 8431867722

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ Ot. 17,800-68,000/- 8884666594/ 8884666597

Marketing & Sales

"MSWIPE TECHNOLOGIES ಕ್ರೆಡಿಟ್/ ಡೆಬಿಟ್ ಕಾರ್ಡ್ ಯಂತ್ರಗಳು, ವ್ಯಾಪಾರಸಾಲಗಳು ಮತ್ತು ಸೌಂಡ್ಸ್ ಬಾಕ್ಸಗಳ ಮಾರಾಟಕ್ಕಾಗಿ ಸೇಲ್ಸ್ ಎಸ್‌ಎಕ್ಸ್ಯುಟಿವ್ ನೇಮಿಸಿಕೊಳ್ಳುತ್ತಿದೆ. 25K ವರೆಗೆ ಸಂಬಳ + ಇನ್ಸೆಂಟಿವ್ + ಆನ್ ರೋಲ್ ಜಾಬ್. 9986067471."

Multiple Vacancy

ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೆಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು. ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Part-Time Jobs

ಕನ್ನಡ /ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು, ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

ಶಿಕ್ಷಣ

Correspondence Courses

ನೇರ ಪರೀಕ್ಷೆಗಳು DIRECT EXAMS ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC, SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಮಾನಸ ಎಜುಕೇಷನ್ ಟ್ರಸ್ಟ್(ರಿ) ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276

ಭವಿಷ್ಯ

Astrology

ಕಾಳಿದುರ್ಗಾ ಜ್ಯೋತಿಷ್ಯರು: (ವಶೀಕರಣ ಸ್ಪೆಷಲಿಸ್ಟ್) ನಿಮ್ಮ ಸಮಸ್ಯೆಯೇನೇಯಿರಲಿ ಒಂದೇ ಕರೆಯಲ್ಲಿ 20 ನಿಮಿಷಗಳಲ್ಲಿ ಫೋನಿನ ಮುಖಾಂತರ ಪರಿಹಾರ. (ದಯಾಗುರೂಜಿ). 9110859633

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 09.06.2022 ಅಹೋಬಲ ನವನರಸಿಂಹ ಶ್ರೀಶೈಲಾ, ಮಹಾನಂದಿ ಮಂತ್ರಾಲಯಾ ಇತ್ಯಾದಿ 7200. 16.06.2022 ರಾಮೇಶ್ವರ ಕನ್ಯಾಕುಮಾರಿ, ಮದುರೈ ಇತ್ಯಾದಿ 7200/. 30.06.2022 ಶಿರಡಿ ಶನಿಸಿಂಗನಾಪುರ, ನಾಸಿಕ್ ಪಂಡರಾಪುರ, ತುಲಜಾಪುರ 6800 07.07.2022 ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು 6200/-. 12.07.2022 ಕಾಶಿ, ಅಯೋಧ್ಯ, ಗಯಾ ಪುರಿಜಗನ್ನಾಥ್ ಇತ್ಯಾದಿ 16000/-. 9448390735 9731159966

10/07/2022 13/17 ದಿನಗಳು ರೈಲು/ವಿಮಾನದಲ್ಲಿ, ದೆಹಲಿ ಮಥುರ ಆಗ್ರ, ಅಮೃತಸರ, ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಕುರುಕ್ಷೇತ್ರ 21,000/- (ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'- 9739847429/ 9845560219.

ಶ್ರೀರಾಜರಾಜೇಶ್ವರಿ ಟೂರ್ಸ್. 9739618243, 9743895346, 31.05.2022, 5 ದಿನಗಳ ತಮಿಳುನಾಡು ಪ್ರವಾಸ 3.7.2022, 8 ದಿನಗಳ ಶಿರಡಿ, ನಾಸಿಕ್, ಎಲ್ಲೋರ, ಪಂಚಜ್ಯೋತಿರ್ಲಿಂಗ, 21.9.2022, 14ದಿನಗಳ ಚಾರಧಾಮ್

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

## ಎಲ್‌ಪಿಜಿ ಸಿಲಿಂಡರ್ ಬೆಲೆ ಇನ್ನು ₹ 1,006



ನವದೆಹಲಿ (ಪಿಟಿಐ): ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಗುರುವಾರ ₹ 3.50ರಷ್ಟು ಹೆಚ್ಚಿಸಲಾಗಿದೆ. ಇದರಿಂದ ಬೆಂಗಳೂರಿನಲ್ಲಿ 14.2 ಕೆ.ಜಿ ತೂಕದ ಸಿಲಿಂಡರ್ ದರ ₹ 1,006ಕ್ಕೆ ಏರಿಕೆ ಆಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ದರ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ಸಬ್ಸಿಡಿಯೇತರ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 1003ಕ್ಕೆ ತಲುಪಿದೆ.

ಈ ತಿಂಗಳಿನಲ್ಲಿ ಎರಡನೇ ಬಾರಿ ದರ ಹೆಚ್ಚಳ ಮಾಡಲಾಗಿದೆ. ಮೇ 7ರಂದು ₹ 50ರಷ್ಟು ಹೆಚ್ಚಿಸಲಾಗಿತ್ತು. 2021ರ ಏಪ್ರಿಲ್‌ನಿಂದ ಈವರೆಗೆ ಪ್ರತಿ ಸಿಲಿಂಡರ್ ದರ ₹ 193.5ರಷ್ಟು ಹೆಚ್ಚಾಗಿದೆ.

ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ₹ 8ರಷ್ಟು ಹೆಚ್ಚಿಸಲಾಗಿದೆ. ಇದರಿಂದ ಬೆಂಗಳೂರಿನಲ್ಲಿ 19 ಕೆ.ಜಿ. ತೂಕದ ಸಿಲಿಂಡರ್ ದರ ₹ 2,435ಕ್ಕೆ ಏರಿಕೆ ಆಗಿದೆ. ಪೆಟ್ರೋಲ್, ಡೀಸೆಲ್ ದರದಲ್ಲಿ ಬದಲಾವಣೆ ಮಾಡಿಲ್ಲ.

## ಐಟಿಸಿ ಲಾಭ ಶೇ 11.60 ಏರಿಕೆ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್‌ನ ಮಾರ್ಚ್ ತ್ರೈಮಾಸಿಕದ ಒಟ್ಟು ನಿವ್ವಳ ಲಾಭದಲ್ಲಿ ಶೇಕಡ 11.60ರಷ್ಟು ಏರಿಕೆ ಆಗಿದ್ದು, ₹ 4,259 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 3,816 ಕೋಟಿ ಲಾಭ ಗಳಿಸಿತ್ತು. 2021–22ರ ಮಾರ್ಚ್ ತ್ರೈಮಾಸಿಕದಲ್ಲಿ ನಿವ್ವಳ ಕಾರ್ಯಾಚರಣೆ ವರಮಾನವು ₹ 17,754 ಕೋಟಿಗೆ ಏರಿಕೆಯಾಗಿದೆ. ಹಿಂದಿನ ಸಾಲಿನಲ್ಲಿ ಇದು ₹ 15,404 ಕೋಟಿ ಆಗಿತ್ತು. ಕಂಪನಿಯು ಈ ವಿವರವನ್ನು ಷೇರುಪೇಟೆಗೆ ಬುಧವಾರ ತಿಳಿಸಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ನಿವ್ವಳ ಲಾಭವು ₹ 15,485 ಕೋಟಿ ಆಗಿದೆ. ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹ 6.25ರಂತೆ ಅಂತಿಮ ಲಾಭಾಂಶ ನೀಡಲು ಶಿಫಾರಸು ಮಾಡಿದೆ.

# ಮಲಬಾರ್ ಗೋಲ್ಡ್‌ನಿಂದ 'ನೃತ್ಯಾಂಜಲಿ' ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ನೃತ್ಯ ಪ್ರಕಾರಗಳಿಗೆ ಗೌರವ ಸಮರ್ಪಿಸುವ 'ನೃತ್ಯಾಂಜಲಿ' ಹೆಸರಿನ ಆಭರಣಗಳ ಸಂಗ್ರಹವನ್ನು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಬಿಡುಗಡೆ ಮಾಡಿದೆ.

'ನೃತ್ಯಾಂಜಲಿ'ಯು ಸೊಗಸಾದ ಆಭರಣಗಳ ಸಂಗ್ರಹವಾಗಿದ್ದು, ಸಾಂಪ್ರದಾಯಿಕ ಭಾರತೀಯ ನೃತ್ಯ ಪ್ರಕಾರಗಳ ಅಂದವನ್ನು ಶುದ್ಧ ಚಿನ್ನದಲ್ಲಿ ಹಿಡಿದಿರಿಸಿದೆ ಎಂದು ಕಂಪನಿ ಹೇಳಿದೆ. ಪ್ರತಿ ಆಭರಣವನ್ನೂ ಶುದ್ಧ ಚಿನ್ನದಿಂದ ತಯಾರಿಸಲಾಗಿದೆ. ಅಮೂಲ್ಯವಾದ ರತ್ನದ ಹರಳುಗಳಿಂದ ಅವುಗಳ ಸೊಗಸನ್ನು ಇನ್ನಷ್ಟು ಹೆಚ್ಚಿಸಲಾಗಿದೆ. ಶಾಸ್ತ್ರೀಯ ನೃತ್ಯ ಪ್ರಕಾರಗಳ ವಿವಿಧ ಭಂಗಿಗಳು, ಮುದ್ರೆಗಳನ್ನು ಇವು ಬಿಂಬಿಸುತ್ತವೆ. ಈ ಸಂಗ್ರಹದಲ್ಲಿ ನೆಕ್ಲೇಸ್‌ಗಳು, ಕಿವಿಯೋಲೆಗಳು, ಉಂಗುರಗಳು ಮತ್ತು ಬಳೆಗಳು, ಸಿಗ್ನೇಚರ್ ಮೋಟಿಫ್‌ಗಳು ಇವೆ.

'ನೃತ್ಯಾಂಜಲಿ ಸಂಗ್ರಹದ ಮೂಲಕ ನಾವು ದೇಶದ ಸಾಂಪ್ರದಾಯಿಕ ನೃತ್ಯ ಪ್ರಕಾರಗಳಿಗೆ ಗೌರವ ಸಲ್ಲಿಸಲು ಬಯಸುತ್ತೇವೆ' ಎಂದು ಮಲಬಾರ್ ಗ್ರೂಪ್‌ನ ಅಧ್ಯಕ್ಷರಾದ ಎಂ.ಪಿ. ಅಹಮ್ಮದ್ ಹೇಳಿದ್ದಾರೆ. ಈ ಸಂಗ್ರಹವು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ರಾಜ್ಯದ ಎಲ್ಲ ಮಳಿಗೆಗಳಲ್ಲಿ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

# ತಾಳೆ ಎಣ್ಣೆ: ಸೋಮವಾರದಿಂದ ರಫ್ತು ನಿಷೇಧ ಇಲ್ಲ

ಜಕಾರ್ತ (ಎಎಫ್‌ಪಿ): ತಾಳೆ ಎಣ್ಣೆ ರಫ್ತು ನಿಷೇಧವನ್ನು ಇಂಡೊನೇಷ್ಯಾ ಸರ್ಕಾರವು ಸೋಮವಾರದಿಂದ (ಮೇ 23) ತೆರವುಗೊಳಿಸಲಿದೆ ಎಂದು ಅಧ್ಯಕ್ಷ ಜೊಕೊ ವಿಡೊಡೊ ಗುರುವಾರ ಹೇಳಿದ್ದಾರೆ. ಇದರಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ತುಸು ತಗ್ಗುವ ನಿರೀಕ್ಷೆ ಇದೆ.

ಆಂತರಿಕ ಮಾರುಕಟ್ಟೆಯಲ್ಲಿ ಎದುರಾದ ಕೊರತೆಯನ್ನು ಸರಿದೂಗಿಸುವ ಸಲುವಾಗಿ ಇಂಡೊನೇಷ್ಯಾ ಹಿಂದಿನ ತಿಂಗಳು ತಾಳೆ ಎಣ್ಣೆ ರಫ್ತು ನಿಷೇಧಿಸಿತ್ತು. ಈ ಮೂಲಕ ತಾಳೆ ಎಣ್ಣೆ ಬೆಲೆ ಮತ್ತಷ್ಟು ಏರಲು ಇಂಡೊನೇಷ್ಯಾ ಸರ್ಕಾರ ಕಾರಣವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು.

**ಬೆಂಗಳೂರು ವರದಿ:** ಸಗಟು ಮಾರುಕಟ್ಟೆಯಲ್ಲಿ ತಾಳೆ ಎಣ್ಣೆ ಬೆಲೆ ಈಗ ತುಸು ಕಡಿಮೆ ಆಗುತ್ತಿದೆ ಎಂದು ಉದ್ಯಮದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ನಿಷೇಧ ತೆರವಾದ ಬಳಿಕ ರಾಜ್ಯದ ಚಿಲ್ಲರೆ ಮಾರುಕಟ್ಟೆಯಲ್ಲಿ ಲೀಟರ್‌ಗೆ ₹ 162–165ರ ಆಸುಪಾಸಿಗೆ ಬರಬಹುದು ಎಂದು ತಿಳಿಸಿವೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹೆರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 490 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-54500 |
| **ಚಿತ್ರದುರ್ಗ** | |
| ಆಪಿ | 49419-49829 |
| ಬೆಟ್ಟೆ | 39110-39559 |
| ಕೆಂಪುಗೋಟು | 32100-32500 |
| ರಾಶಿ | 48939-49369 |
| **ಕಾರ್ಕಳ** | |
| ಹಳೆಚಾಲಿ | 46000-54500 |
| ಹೊಸಚಾಲಿ | 40000-45000 |
| **ಪುತ್ತೂರು** | |
| ಹೊಸತು | 27500-45000 |
| **ಸಾಗರ** | |
| ಬಿಳಿಗೋಟು | 20199-34653 |
| ಚಾಲಿ | 33099-38899 |
| ಕೋಕ | 16009-36259 |
| ಕೆಂಪುಗೋಟು | 20319-39499 |
| ರಾಶಿ | 33989-49949 |
| ಸಿಪ್ಪೆಗೋಟು | 11169-21799 |
| **ಶಿವಮೊಗ್ಗ** | |
| ಬೆಟ್ಟೆ | 49400-52589 |
| ಗೊರಬಲು | 30109-37899 |
| ರಾಶಿ | 42009-49882 |
| ಸರಕು | 56299-78800 |
| **ಸಿದ್ದಾಪುರ** | |
| ಬಿಳಿಗೋಟು | 24900-31809 |
| ಚಾಲಿ | 36189-39009 |
| ಕೋಕ | 27599-33069 |
| ಕೆಂಪುಗೋಟು | 28089-31099 |
| ರಾಶಿ | 45079-49699 |
| ತಟ್ಟಿಬೆಟ್ಟೆ | 41099-41099 |
| **ಶಿರಸಿ** | |
| ಬೆಟ್ಟೆ | 48000-54169 |
| ಬಿಳಿಗೋಟು | 14791-32499 |
| ಚಾಲಿ | 30599-39861 |
| ರಾಶಿ | 42869-50088 |
| **ಯಲ್ಲಾಪುರ** | |
| ಆಪಿ | 55129-55129 |
| ಬಿಳಿಗೋಟು | 28012-33999 |
| ಚಾಲಿ | 35699-39629 |
| ಕೋಕ | 19122-29122 |
| ಕೆಂಪುಗೋಟು | 29042-35799 |
| ರಾಶಿ | 48560-54599 |
| ತಟ್ಟಿಬೆಟ್ಟೆ | 39699-46910 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)



| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 16000 | 15900 | 16050 | 217.60 ಸೆಂಟ್ಸ್ |
| ಎಸಿ | 8900 | 8500 | 8700 | |
| ಆರ್‌ಪಿ | 9500 | 9900 | 9950 | ಲಂಡನ್ |
| ಆರ್‌ಸಿ | 4500 | 4350 | 4475 | 2063ಡಾಲರ್ಸ್ |

## ಸ್ವದೇಶಿ ಸಾಧನ ಬಳಸಿ 5ಜಿ ಕರೆ ಮಾಡಿದ ಸಚಿವ

ನವದೆಹಲಿ (ಪಿಟಿಐ): ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು ಸ್ವದೇಶಿ ಸಾಧನ ಬಳಸಿ ಐಐಟಿ ಮದ್ರಾಸ್‌ನಲ್ಲಿ ಅಳವಡಿಸಲಾಗಿರುವ 5ಜಿ ನೆಟ್‌ವರ್ಕ್‌ನಲ್ಲಿ ಮೊದಲ ಕರೆಯನ್ನು ಗುರುವಾರ ಮಾಡಿದರು.

'ಆತ್ಮನಿರ್ಭರ 5ಜಿ. ಐಐಟಿ ಮದ್ರಾಸ್‌ನಲ್ಲಿ 5ಜಿ ಕರೆಯ ಪರೀಕ್ಷೆಯನ್ನು ಯಶಸ್ವಿಯಾಗಿ ಮಾಡಿದ್ದೇನೆ. ಇಡೀ ನೆಟ್‌ವರ್ಕ್‌ಅನ್ನು ಭಾರತದಲ್ಲಿಯೇ ರೂಪಿಸಲಾಗಿದೆ, ಅಭಿವೃದ್ಧಿಪಡಿಸಲಾಗಿದೆ' ಎಂದು ವೈಷ್ಣವ್ ಅವರು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

ಈ ಕರೆಯನ್ನು ಮಾಡಿದ ನಂತರದಲ್ಲಿ ಸಚಿವರು, ಇದು ಪ್ರಧಾನಿಯವರ ಕನಸಿನ ಸಾಕಾರ ರೂಪ ಎಂದರು. ದೇಶದಲ್ಲಿ 5ಜಿ ಸೇವೆಗಳು ವಾಣಿಜ್ಯಿಕವಾಗಿ ಆಗಸ್ಟ್, ಸೆಪ್ಟೆಂಬರ್ ವೇಳೆಗೆ ಶುರುವಾಗುವ ನಿರೀಕ್ಷೆ ಇದೆ.

ಐಐಟಿ ಮದ್ರಾಸ್ ನೇತೃತ್ವದಲ್ಲಿ 5ಜಿ ಪರೀಕ್ಷಾ ಸಾಧನವನ್ನು ಎಂಟು ಸಂಸ್ಥೆಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ.

## ಅಜಂ ಖಾನ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ವಂಚನೆ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಸಮಾಜವಾದಿ ಪಕ್ಷದ ನಾಯಕ ಅಜಂ ಖಾನ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಗುರುವಾರ ಈ ಪ್ರಕರಣದ ವಿಚಾರಣೆ ನಡೆಸಿದ ಪೀಠವು, 2 ವಾರಗಳಲ್ಲಿ ಸಾಮಾನ್ಯ ಜಾಮೀನಿಗಾಗಿ ಅರ್ಜಿ ಸಲ್ಲಿಸುವಂತೆ ಅಜಂ ಖಾನ್ ಅವರಿಗೆ ಸೂಚಿಸಿದೆ.

### ಮುಂಬೈ ಧಾರಣೆ

**ಶೇಂಗಾ**

19-5-2022

| | |
|---|---|
| ಜಾವಾ 70/80(ಹೊಸ) | 10150-10200 |
| ಜಾವಾ 80/90(ಹೊಸ) | 9500-9550 |
| ದಪ್ಪ ಮಧ್ಯಪ್ರದೇಶ(ಹೊಸ) | 10850-10900 |
| ದಪ್ಪ ಗುಜರಾತ್(ಹೊಸ) | 9950-10000 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1625 (1630) |
| ಒಂದು ವಾರದ ಡೆಲಿವರಿ | 1620 (1625) |
| ಸೋಯಾ ಕಚ್ಚಾ | 1525 (1555) |
| ಪಾಮ್ ವಾರದ ಡೆಲಿವರಿ | 1548 (1563) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1820 (1820) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
50,450 (50,150)
ಬೆಳ್ಳಿ ಕೆ.ಜಿ 61,050 (61,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ಮಹಿಳಾ ಬಾಕ್ಸಿಂಗ್: ಚಿನ್ನದ ಪದಕ ಗೆದ್ದ ಭಾರತದ ಐದನೇ ಬಾಕ್ಸರ್

# ನಿಖತ್ ಜರೀನ್‌ಗೆ ವಿಶ್ವ ಕಿರೀಟ

**ನವದೆಹಲಿ (ಪಿಟಿಐ):** ಭಾರತದ ನಿಖತ್ ಜರೀನ್ ಗುರುವಾರ ಚಿನ್ನದ ಸಾಧನೆ ಮಾಡಿದರು.

ಇಸ್ತಾಂಬುಲ್‌ನಲ್ಲಿ ನಡೆದ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫ್ಲೈವೇಟ್ (52ಕೆಜಿ) ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಈ ಸಾಧನೆ ಮಾಡಿದ ಭಾರತದ ಐದನೇ ಮಹಿಳಾ ಬಾಕ್ಸರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಫೈನಲ್‌ನಲ್ಲಿ ಅವರು 5–0 ಯಿಂದ ಥಾಯ್ಲೆಂಡ್‌ನ ಜಿಟ್‌ಪಾಂಗ್ ಜೂಟಾಮಸ್ ವಿರುದ್ಧ ಗೆದ್ದು ಪದಕಕ್ಕೆ ಕೊರಳೊಡ್ಡಿದರು. ಈ ಟೂರ್ನಿಯುದ್ದಕ್ಕೂ ಅವರು ತಮ್ಮ ಎಲ್ಲ ಎದುರಾಳಿಗಳನ್ನು ಹಿಮ್ಮೆಟ್ಟಿಸಿ ಫೈನಲ್ ತಲುಪಿದ್ದರು.

ಪ್ರಶಸ್ತಿ ಸುತ್ತಿನಲ್ಲಿ ಅವರು 30-27, 29-28, 29-28, 30-27, 29-28 ರಿಂದ ಥಾಯ್ಲೆಂಡ್ ಬಾಕ್ಸರ್ ಎದುರು ಮೇಲುಗೈ ಸಾಧಿಸಿದರು.

ಮೇರಿ ಕೋಮ್ ಆರು ಸಲ (2002, 2005, 2006, 2008, 2010 ಮತ್ತು 2018) ಚಿನ್ನದ ಜಯಿಸಿದ್ದರು. ಸರಿತಾ ದೇವಿ (2006), ಆರ್.ಎಲ್. ಜೆನಿ (2006) ಮತ್ತು ಕೆ.ಸಿ. ಲೇಖಾ (2006) ತಲಾ ಒಂದು ಬಾರಿ ಈ ಟೂರ್ನಿಯಲ್ಲಿ ಚಿನ್ನದ ಸಾಧನೆ ಮಾಡಿದ್ದರು. ಇದೀಗ ನಿಖತ್ ಅವರ ಸಾಲಿಗೆ ಸೇರಿದ್ದಾರೆ.

ಚಾಂಪಿಯನ್ ಆದ ನಂತರ ನೆರವು ಸಿಬ್ಬಂದಿ ಜೊತೆ ನಿಖತ್ ಜರೀನ್ –ಪಿಟಿಐ ಚಿತ್ರ

ಭಾರತಕ್ಕೆ ಈ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ವರ್ಷಗಳ ನಂತರ ಒಲಿದ ಚಿನ್ನ ಇದಾಗಿದೆ. 2018ರಲ್ಲಿ ಮೇರಿ ಕೋಮ್ (48ಕೆಜಿ) ಚಿನ್ನ ಗೆದ್ದ ನಂತರ ಯಾರೂ ಜಯಿಸಿರಲಿಲ್ಲ. ತೆಲಂಗಾಣದ ನಿಜಾಮಾಬಾದ್‌ನ ನಿಖತ್ ಫೈನಲ್ ಬೌಟ್‌ನಲ್ಲಿ ಎದುರಾಳಿಗೆ ಬಲಶಾಲಿ ಪಂಚ್‌ಗಳನ್ನು ಕೊಟ್ಟರು. ಇದರಿಂದ ಒತ್ತಡಕ್ಕೊಳಗಾದ ಥಾಯ್ಲೆಂಡ್ ಬಾಕ್ಸಿಂಗ್‌ಪಟು ಸೋಲಿನತ್ತ ಸಾಗಿದರು. ರೆಫರಿಯು ಜಯಶಾಲಿಯೆಂದು ಘೋಷಿಸಿದ ನಂತರ ನಿಖತ್ ಸಂಭ್ರಮದ ಕಟ್ಟೆಯೊಡೆಯಿತು. ಮೇಲಕ್ಕೆ ಜಿಗಿದು ಸಂಭ್ರಮಿಸಿದರು. ಭಾವುಕರಾದ ಅವರ ಕಂಗಳಲ್ಲಿ ಆನಂದಭಾಷ್ಪ ತುಳುಕಿತು. ನೆರವು ಸಿಬ್ಬಂದಿ ಬಂದು ಆಲಂಗಿಸಿ ಅಭಿನಂದಿಸಿದರು.

2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು, ಹೋದ ಫೆಬ್ರುವರಿಯಲ್ಲಿ ಸ್ಟ್ರಾಂಡ್ಜಾ ಸ್ಮಾರಕ ಟೂರ್ನಿಯಲ್ಲಿ ಎರಡು ಚಿನ್ನದ ಪದಕಗಳನ್ನು ಜಯಿಸಿದ ದಾಖಲೆ ಮಾಡಿದ್ದರು.

**ಮನೀಷಾಗೆ ಕಂಚು:** ಈ ಚಾಂಪಿಯನ್‌ಷಿಪ್‌ನಲ್ಲಿ ಮನೀಷಾ ಮೌನ್ (57ಕೆಜಿ) ಮತ್ತು ಪರ್ವೀನ್ ಹೂಡಾ (63ಕೆಜಿ) ಕಂಚಿನ ಪದಕ ಗಳಿಸಿದರು.

## ಆರ್ಚರಿ: ಭಾರತ ತಂಡಕ್ಕೆ ಕಂಚಿನ ಪದಕ

**ಗ್ವಾಂಗ್ಜು, ದಕ್ಷಿಣ ಕೊರಿಯಾ (ಪಿಟಿಐ):** ಭಾರತ ಮಹಿಳಾ ಆರ್ಚರಿ ತಂಡವು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಸ್ಟೇಜ್ ಟು ಆರ್ಚರಿಯಲ್ಲಿ ಕಂಚಿನ ಪದಕ ಗಳಿಸಿತು.

ರಿಧಿ ಫೋರ್, ಕೊಮಲಿಕಾ ಬಾರಿ ಮತ್ತು ಅಂಕಿತಾ ಭಕತ್ ಅವರಿದ್ದ ತಂಡವು ಪ್ಲೇ ಆಫ್‌ನಲ್ಲಿ 6–2 (56-52, 54-51, 54-55, 55-54) ರಿಂದ ಚೈನಿಸ್ ತೈಪೆ ವಿರುದ್ಧ ಗೆದ್ದಿತು.

ಸೆಮಿಫೈನಲ್‌ನಲ್ಲಿ ಭಾರತ ತಂಡವು 2–6ರಿಂದ ದಕ್ಷಿಣ ಕೊರಿಯಾ ವಿರುದ್ಧ ಸೋತಿತ್ತು. ಪುರುಷರ ವಿಭಾಗದಲ್ಲಿ ಎಂಟರ ಘಟ್ಟದಲ್ಲಿ ಭಾರತವು 2–6 (54-57, 55-52, 53-55, 47-53) ರಿಂದ ಫ್ರಾನ್ಸ್ ವಿರುದ್ಧ ಪರಾಭವಗೊಂಡಿತು.

ರಿಧಿ ಫೋರ್, ಕೋಮಲಿಕಾ ಬಾರಿ, ಅಂಕಿತಾ ಭಕತ್ –ಟ್ವಿಟರ್ ಚಿತ್ರ

## ಶ್ರೀಕಾಂತ್ ವಾಕ್ ಓವರ್; ಸಿಂಧು ಜಯಭೇರಿ

**ಬ್ಯಾಂಕಾಕ್ (ಪಿಟಿಐ):** ಥಾಮಸ್ ಕಪ್ ಟೂರ್ನಿಯಲ್ಲಿ ಭಾರತಕ್ಕೆ ಐತಿಹಾಸಿಕ ಚಿನ್ನ ಗೆದ್ದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಿದಂಬಿ ಶ್ರೀಕಾಂತ್ ಅವರು ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎದುರಾಳಿಗೆ ವಾಕ್ ಓವರ್ ಕೊಟ್ಟಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಪಿ.ವಿ. ಸಿಂಧು ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ವಿಶ್ವ ಕ್ರಮಾಂಕದಲ್ಲಿ 7ನೇ ಸ್ಥಾನದಲ್ಲಿರುವ ಸಿಂಧು ಎರಡನೇ ಗುರುವಾರ ಸುತ್ತಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಸಿಮ್ ಯೂ ಜಿನ್ ವಿರುದ್ಧ 21-16, 21-13 ರಲ್ಲಿ ಜಯ ಗಳಿಸಿದರು.

ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್, ಐರ್ಲೆಂಡ್‌ನ ನಟ್ ಗುಯೆನ್ ವಿರುದ್ಧ ಆಡಬೇಕಾಗಿತ್ತು. ಆದರೆ ಎಂಟನೇ ಶ್ರೇಯಾಂಕದ ಶ್ರೀಕಾಂತ್ ಅಡದೇ ಇರಲು ನಿರ್ಧರಿಸಿದರು. ಇದಕ್ಕೆ ಕಾರಣ ತಿಳಿದು ಬಂದಿಲ್ಲ. ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿರುವ ಶ್ರೀಕಾಂತ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಫ್ರಾನ್ಸ್‌ನ ಬ್ರೈಸ್ ಲೆವೆರ್ಡೆಜ್ ಅವರನ್ನು 18-21, 21-10, 21-16ರಲ್ಲಿ ಮಣಿಸಿದ್ದರು.

ಮಹಿಳೆಯರ ವಿಭಾಗದಲ್ಲಿ ಭಾರತದ ಮಾಳವಿಕ ಬಾನ್ಸೊಡ್ ಡೆನ್ಮಾರ್ಕ್‌ನ ಲಿನಿ ಕ್ರಿಸ್ಟೋಫರ್ಸನ್ ವಿರುದ್ಧ 21-16, 14-21, 14-21ರಲ್ಲಿ ಸೋತರು. ಮಿಶ್ರ ಡಬಲ್ಸ್ ಜೋಡಿ ಇಶಾನ್ ಮತ್ತು ತನಿಶಾ ಕ್ರಾಸ್ಟೊ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು.

### ಮಿನಿ ಒಲಿಂಪಿಕ್ಸ್: ಫುಟ್‌ಬಾಲ್–ಉತ್ತರ ಕನ್ನಡ ಪಾರಮ್ಯ

# ಟ್ರ್ಯಾಕ್‌ನಲ್ಲಿ ಮಿಂಚಿದ ಮೋನಿಷ್, ಸ್ವರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಗಾವಿ ಜಿಲ್ಲೆಯ ಸ್ವರ ಸಂತೋಷ್ ಶಿಂಧೆ ಮತ್ತು ಬೆಂಗಳೂರಿನ ಮೋನಿಷ್ ಚಂದ್ರಶೇಖರ್ ಅವರು ಇಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್‌ನ ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದರು.

ಗುರುವಾರ ಆರಂಭಗೊಂಡ ಅಥ್ಲೆಟಿಕ್ಸ್ ಸ್ಪರ್ಧೆಯ 100 ಮೀಟರ್ಸ್ ಓಟದ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಕ್ರಮವಾಗಿ ಮೋನಿಷ್ ಮತ್ತು ಸ್ವರ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಮೋನಿಷ್ 11.4 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ ಸ್ವರ 12.9 ಸೆಕೆಂಡುಗಳಲ್ಲಿ ಗುರಿ ಸೇರಿದರು.

**ಫಲಿತಾಂಶಗಳು:** ಬಾಲಕರ 100 ಮೀ ಓಟ: ಮೋನಿಷ್ ಚಂದ್ರಶೇಖರ್ (ಬೆಂಗಳೂರು)–1. ಕಾಲ: 11.4 ಸೆ, ಸಾಯಿನಾಥ್ ವಿದೂತಿ (ಉತ್ತರ ಕನ್ನಡ)–2, ಹಿಮೇಶ್ ನಾಗರಾಜ್–3; ಹೈಜಂಪ್: ಅಂಶುಲ್ ಸಾಯ್ (ಬೆಂಗಳೂರು)–1. ಎತ್ತರ: 1.20 ಮೀ, ಜುಕೇಶ್ (ಬೆಂಗಳೂರು)–2; ಶಾಟ್‌ಪಟ್: ಅನುರಾಗ್ (ಉಡುಪಿ)–1. ಅಂತರ: 17.26 ಮೀ, ರುದ್ರಗೌಡ್ (ಬೆಳಗಾವಿ)–2, ದೀಕ್ಷಿತ್ (ದಕ್ಷಿಣ ಕನ್ನಡ)–3,

ಬಾಲಕಿಯರ 100 ಮೀ: ಸ್ವರ ಸಂತೋಷ್ ಶಿಂಧೆ (ಬೆಳಗಾವಿ)–1. ಕಾಲ: 12.9ಸೆ, ಅಪೇಕ್ಷ (ಮೈಸೂರು)–2, ಗಗನ (ಕೊಡಗು)–3; ಹೈಜಂಪ್: ಹರ್ಷಿತಾ (ಬೆಂಗಳೂರು)–1. ಎತ್ತರ: 1.45 ಮೀ, ಶ್ರಾವಣಿ ಪಾಟೀಲ್ (ಬೆಳಗಾವಿ)–2, ತೇಜಸ್ವಿನಿ ರಾವ್ (ವಿಜಯನಗರ)–3; ಶಾಟ್‌ಪಟ್: ಅದ್ವಿಕಾ ಆದಿತ್ಯ (ದಕ್ಷಿಣ ಕನ್ನಡ)–1. ಅಂತರ: 10.22 ಮೀ, ಭೂಮಿಕಾ (ಚಾಮರಾಜನಗರ)–2, ಶ್ರೀನಿಧಿ (ದಕ್ಷಿಣ ಕನ್ನಡ)–3.

ಬಾಲಕಿಯರ 100 ಮೀ ಓಟದಲ್ಲಿ ಸ್ವರ (ಬಲ ತುದಿ) ಗುರಿಯತ್ತ ಮುನ್ನುಗ್ಗಿದರು

**ಬೆಂಗಳೂರು, ಎಂಸಿಎಚ್‌ಎಸ್ ಜಯಭೇರಿ:** ಎಂಸಿಎಚ್‌ಎಸ್ ಮತ್ತು ಬೆಂಗಳೂರು ಸ್ಪೋರ್ಟಿಂಗ್ ತಂಡಗಳು ಮಿನಿ ಒಲಿಂಪಿಕ್ಸ್‌ನ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಗಳ ಎರಡನೇ ಸುತ್ತಿನ ಪಂದ್ಯಗಳಲ್ಲಿ ಕ್ರಮವಾಗಿ ಬಾಲಕರ ಮತ್ತು ಬಲಕಿಯರ ವಿಭಾಗದಲ್ಲಿ ಭರ್ಜರಿ ಜಯ ಗಳಿಸಿದವು.

ಬಾಲಕರ ವಿಭಾಗದಲ್ಲಿ ಬೆಂಗಳೂರು ಸ್ಪೋರ್ಟಿಂಗ್ 72-52ರಲ್ಲಿ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಜಯ ಗಳಿಸಿತು. ಸಾಯಿ ಸಂತೋಷ್ ಮತ್ತು ಅಂಶ್ ಕ್ರಮವಾಗಿ ಗಳಿಸಿದ 16 ಮತ್ತು 11 ಪಾಯಿಂಟ್‌ಗಳು ಸ್ಪೋರ್ಟಿಂಗ್ ತಂಡದ ಕೈ ಹಿಡಿದವು. ಬೀಗಲ್ಸ್ ಪರವಾಗಿ ವೈಭವ್ 21 ಪಾಯಿಂಟ್‌ಗಳೊಂದಿಗೆ ಮಿಂಚಿದರು.

ಬಾಲಕಿಯರ ವಿಭಾಗದಲ್ಲಿ ಸಿಎಚ್‌ಎಸ್ ತಂಡ ಬೀಗಲ್ಸ್ ವಿರುದ್ಧ 50-25ರಲ್ಲಿ ಜಯ ಗಳಿಸಿತು. ಸಿಎಚ್‌ಎಸ್‌ಗಾಗಿ ಅದಿತಿ 23 ಪಾಯಿಂಟ್ ಕಲೆ ಹಾಕಿದರೆ ಅಹಾನ 8 ಪಾಯಿಂಟ್ ಗಳಿಸಿದರು. ಬೀಗಲ್ಸ್ ತಂಡಕ್ಕಾಗಿ ಮೇಧಾ 18 ಪಾಯಿಂಟ್ ತಂದುಕೊಟ್ಟರು.

**ಫುಟ್‌ಬಾಲ್: ಉತ್ತರ ಕನ್ನಡ ಬಾಲಕಿಯರಿಗೆ ಭರ್ಜರಿ ಜಯ:** ಉತ್ತರ ಕನ್ನಡ ಜಿಲ್ಲಾ ಬಾಲಕಿಯರ ತಂಡ ಫುಟ್‌ಬಾಲ್ ಸ್ಪರ್ಧೆಯಲ್ಲಿ ಭರ್ಜರಿ ಜಯ ಸಾಧಿಸಿತು. ಡಬಲ್ ಹ್ಯಾಟ್ರಿಕ್ ಗಳಿಸಿದ ಅಮೂಲ್ಯ ಮತ್ತು ಹ್ಯಾಟ್ರಿಕ್ ಸಾಧಿಸಿದ ವಿದ್ಯಾ ಮಾರುತಿ ಅವರ ಅಮೋಘ ಆಟದಿಂದಾಗಿ ತಂಡ ಕಲಬುರ್ಗಿ ಜಿಲ್ಲಾ ತಂಡವನ್ನು 10–0ಯಿಂದ ಮಣಿಸಿತು.

# ಪ್ರಕ್ರಿಯೆ ಸ್ಥಗಿತಕ್ಕೆ 'ಸುಪ್ರೀಂ' ಸೂಚನೆ

### ಜ್ಞಾನವಾಪಿ ಮಸೀದಿ ಪ್ರಕರಣ: ವಾರಾಣಸಿ ನ್ಯಾಯಾಲಯಕ್ಕೆ ನಿರ್ದೇಶನ

**ನವದೆಹಲಿ (ಪಿಟಿಐ):** ಜ್ಞಾನವಾಪಿ ಮಸೀದಿ ಮೊಕದ್ದಮೆಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆಯನ್ನು ಶುಕ್ರವಾರದವರೆಗೆ ನಡೆಸಬೇಡಿ ಎಂದು ಸುಪ್ರೀಂ ಕೋರ್ಟ್ ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ಸೂಚನೆ ನೀಡಿದೆ. ಜತೆಗೆ ಮಸೀದಿಯಲ್ಲಿ ವಿಡಿಯೊ ಸಮೀಕ್ಷೆ ನಡೆಸುವುದರ ವಿರುದ್ಧ ಸಲ್ಲಿಸಲಾಗಿರುವ ಅರ್ಜಿಯನ್ನು ಶುಕ್ರವಾರ ಮಧ್ಯಾಹ್ನ 3ಕ್ಕೆ ವಿಚಾರಣೆಗೆ ಎತ್ತಿಕೊಳ್ಳಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಮತ್ತು ಪಿ.ಎಸ್.ನರಸಿಂಹ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆಯನ್ನು ಗುರುವಾರ ಆರಂಭಿಸಿತು. ಆದರೆ, ಪ್ರತಿವಾದಿಗಳಾದ ಹಿಂದೂ ಮಹಿಳೆಯರ ಪರ ವಕೀಲ ಹರಿಶಂಕರ್ ಜೈನ್ ಅವರು ಅನಾರೋಗ್ಯದ ಕಾರಣ ಗುರುವಾರವೂ ವಿಚಾರಣೆಗೆ ಹಾಜರಾಗಲಿಲ್ಲ. ಹರಿಶಂಕರ್ ಜೈನ್ ಪರವಾಗಿ ಮಾತನಾಡಿದ ವಕೀಲ ವಿಷ್ಣು ಶಂಕರ್ ಜೈನ್ ಅವರು, 'ಹರಿಶಂಕರ್ ಅವರು ಬುಧವಾರವಷ್ಟೇ ಆಸ್ಪತ್ರೆಯಿಂದ ಮನೆಗೆ ಹೋಗಿದ್ದಾರೆ. ಗುರುವಾರ ವಿಚಾರಣೆಗೆ ಬರಲು ಸಾಧ್ಯವಾಗಿಲ್ಲ. ಅವರು ಶುಕ್ರವಾರ ಬರಲಿದ್ದಾರೆ. ಹೀಗಾಗಿ ವಿಚಾರಣೆಯನ್ನು ಮುಂದೂಡಿ' ಎಂದು ಕೋರಿದರು. ಇದನ್ನು ಪೀಠ ಮಾನ್ಯ ಮಾಡಿತು.

ಆಗ ಜ್ಞಾನವಾಪಿ ಮಸೀದಿ ನಿರ್ವಹಣಾ ಸಮಿತಿ ಪರ ವಕೀಲ ಹುಜೇಫಾ ಅಹ್ಮದಿ ಅವರು, 'ವಿಚಾರಣೆ ಮುಂದೂಡಲು ನಮ್ಮಿಂದ ಯಾವುದೇ ಆಕ್ಷೇಪವಿಲ್ಲ. ಆದರೆ, ಇದೇ ಮೊಕದ್ದಮೆಗೆ ಸಂಬಂಧಿಸಿದಂತೆ ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಜತೆಗೆ ಮಸೀದಿಯ ಗೋಡೆಯನ್ನು ಕೆಡವಲು ಅನುಮತಿ ಕೋರಿ ಹೊಸ ಅರ್ಜಿ ಸಲ್ಲಿಸಲಾಗಿದೆ. ಗೋಡೆ ಕೆಡವಿದರೆ, ಇಡೀ ಮಸೀದಿ ನೆಲಸಮವಾಗುತ್ತದೆ. ಈ ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾಗುವವರೆಗೂ, ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ಪ್ರಕ್ರಿಯೆ ನಡೆಸದಂತೆ ನಿರ್ದೇಶನ ನೀಡಿ' ಎಂದು ಕೋರಿದರು.

ಅಹ್ಮದಿ ಅವರ ಮನವಿಯನ್ನೂ ಮಾನ್ಯ ಮಾಡಿದ ಪೀಠವು, 'ಈ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಡೆಸುತ್ತೇವೆ. ಅಲ್ಲಿಯವರೆಗೂ ಯಾವುದೇ ಪ್ರಕ್ರಿಯೆ ನಡೆಸಬೇಡಿ ಮತ್ತು ಆದೇಶ ನೀಡಬೇಡಿ' ಎಂದು ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯಕ್ಕೆ ಸೂಚನೆ ನೀಡಿತು.

### 23ರಂದು ವಿಚಾರಣೆ

**ವಾರಾಣಸಿ:** ಇಲ್ಲಿನ ಜ್ಞಾನವಾಪಿ ಮಸೀದಿ ಮೊಕದ್ದಮೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳ ವಿಚಾರಣೆಯನ್ನು ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯವು ಇದೇ 23ರವರೆಗೆ ಮುಂದೂಡಿದೆ.

'ಜ್ಞಾನವಾಪಿ ಮಸೀದಿಯಲ್ಲಿ ವಿಡಿಯೊ ಸಮೀಕ್ಷೆ ನಡೆಸುವುದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳುವವರೆಗೆ ಯಾವುದೇ ಪ್ರಕ್ರಿಯೆಯನ್ನು ನಡೆಸಬೇಡಿ ಎಂದು ಸುಪ್ರೀಂ ಕೋರ್ಟ್ ಪೀಠವು ನೀಡಿದ ಆದೇಶದ ಅನ್ವಯ, ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಮುಂದೂಡಲಾಗಿದೆ' ಎಂದು ಹಿಂದೂ ಮಹಿಳಾ ಅರ್ಜಿದಾರರ ಪರ ವಕೀಲ ಮದನ ಮೋಹನ್ ಯಾದವ್ ಅವರು ಹೇಳಿದ್ದಾರೆ

### ವರದಿ ಸಲ್ಲಿಕೆ, ಸೋರಿಕೆ

ಪ್ರಜಾವಾಣಿ ವಾರ್ತೆ

**ವಾರಾಣಸಿ:** ಜ್ಞಾನವಾಪಿ ಮಸೀದಿಯ ವಿಡಿಯೊ ಸಮೀಕ್ಷೆಗೆ ಸಂಬಂಧಿಸಿದ ವರದಿಯನ್ನು ನ್ಯಾಯಾಲಯ ನೇಮಿಸಿದ್ದ ಆಯೋಗವು ಗುರುವಾರ ವಾರಾಣಸಿ ಜಿಲ್ಲಾ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿದೆ. ಸಮೀಕ್ಷೆಗೆ ಸಂಬಂಧಿಸಿದ ಚಿತ್ರ, ವಿಡಿಯೊಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ವರದಿಯ ವಿವರಗಳನ್ನು ಬಹಿರಂಗಪಡಿಸಲು ಆಯೋಗವು ನಿರಾಕರಿಸಿದೆ. ಆದರೆ ವರದಿಯ ವಿವರಗಳು ಸೋರಿಕೆಯಾಗಿವೆ.

'ಸನಾತನ ಧರ್ಮದ ಸೂಚಕಗಳಾದ ಢಮರು, ಕಮಲ, ತ್ರಿಶೂಲ ಮತ್ತು ಆದಿಶೇಷನ ಕೆತ್ತನೆಗಳು ಮಸೀದಿಯ ಗೋಡೆಗಳ ಮೇಲೆ ಪತ್ತೆಯಾಗಿವೆ' ಎಂಬ ಮಾಹಿತಿ ವರದಿಯಲ್ಲಿ ಇದೆ ಎನ್ನಲಾಗಿದೆ.

### ಮಥುರಾ: ಅರ್ಜಿ ಸ್ವೀಕೃತ

**ಮಥುರಾ (ಉತ್ತರ ಪ್ರದೇಶ) (ಪಿಟಿಐ):** ಮಥುರಾದ ಕತ್ರಾ ಕೇಶವ ದೇವ ದೇವಸ್ಥಾನದ ಆವರಣಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ನಡೆಸಲಾಗುವುದು ಎಂದು ಮಥುರಾ ಜಿಲ್ಲಾ ನ್ಯಾಯಾಲಯವು ಸಿವಿಲ್ ನ್ಯಾಯಾಲಯಕ್ಕೆ ಗುರುವಾರ ಹೇಳಿದೆ.

ಮಸೀದಿಯನ್ನು ತೆರವುಗೊಳಿಸಬೇಕು ಎಂದು ಕೋರಿ ಲಖನೌ ನಿವಾಸಿ ರಂಜನಾ ಅಗ್ನಿಹೋತ್ರಿ ಮತ್ತು ಇತರ ಆರು ಮಂದಿ 2020ರ ಸೆಪ್ಟೆಂಬರ್ 25ರಂದು ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಶ್ರೀ ಕೃಷ್ಣ ಜನ್ಮಭೂಮಿ ಟ್ರಸ್ಟ್‌ಗೆ ಸೇರಿದ 13.37 ಎಕರೆ ಪ್ರದೇಶದಲ್ಲಿ ಈ ಮಸೀದಿಯನ್ನು ನಿರ್ಮಿಸಲಾಗಿದೆ. ಮಸೀದಿಯನ್ನು ತೆರವುಗೊಳಿಸಿ ಆ ಜಾಗವನ್ನು ಟ್ರಸ್ಟ್‌ಗೆ ಹಿಂದಿರುಗಿಸಬೇಕು ಎಂದು ಅವರು ಅರ್ಜಿಯಲ್ಲಿ ಕೋರಿದ್ದರು. ಈ ಅರ್ಜಿ ಸ್ವೀಕೃತವಲ್ಲ ಎಂದು ಹೇಳಿದ್ದ ಸಿವಿಲ್ ನ್ಯಾಯಾಲಯವು, 2020ರ ಸೆಪ್ಟೆಂಬರ್ 30ರಂದು ಅರ್ಜಿಯನ್ನು ತಿರಸ್ಕರಿಸಿತ್ತು.

ಈ ಆದೇಶವನ್ನು ಪರಿಷ್ಕರಿಸುವಂತೆ ಕೋರಿ ಅರ್ಜಿದಾರರು ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಮೇ 5ರಂದು ನಡೆದ ವಿಚಾರಣೆಯಲ್ಲಿ ಅರ್ಜಿದಾರರು ಮತ್ತು ಪ್ರತಿವಾದಿಗಳಾದ ಸುನ್ನಿ ವಕ್ಫ್ ಮಂಡಳಿ, ಶಾಹಿ ಈದ್ಗಾ ಮಸೀದಿಯ ಕಾರ್ಯದರ್ಶಿ ಹಾಗೂ ಇತರ ಇಬ್ಬರ ವಾದಗಳನ್ನು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಾಜೀವ್ ಭಾರತಿ ಆಲಿಸಿದ್ದರು. ಸಿವಿಲ್ ನ್ಯಾಯಾಲಯ ನೀಡಿರುವ ಆದೇಶವನ್ನು ಪರಿಷ್ಕರಿಸಬೇಕು ಮತ್ತು ಮೂಲ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಸಿವಿಲ್ ನ್ಯಾಯಾಲಯಕ್ಕೆ ಅವರು ಹೇಳಿದ್ದಾರೆ.

### ಶ್ರೀಲಂಕಾಗೆ ವಿಶ್ವಬ್ಯಾಂಕ್, ಅನಿವಾಸಿಗರಿಂದ ₹1 ಲಕ್ಷ ಕೋಟಿ ನೆರವು

# ಇಂಧನ, ಅಡುಗೆ ಅನಿಲ ಖರೀದಿ ಸರಾಗ

**ಕೊಲಂಬೊ (ರಾಯಿಟರ್ಸ್):** ಇಂಧನ ಮತ್ತು ಅಡುಗೆ ಅನಿಲಕ್ಕೆ ಪಾವತಿಸುವಷ್ಟು ವಿದೇಶಿ ವಿನಿಮಯ ಲಭಿಸಿದೆ ಎಂದು ಶ್ರೀಲಂಕಾ ಕೇಂದ್ರೀಯ ಬ್ಯಾಂಕ್ ಗವರ್ನರ್ ಪಿ.ನಂದಲಾಲ್ ವೀರಸಿಂಗ್ ಗುರುವಾರ ತಿಳಿಸಿದರು.

ಕನಿಷ್ಠ ಒಂದು ತಿಂಗಳು ಇಂಧನ, ಅಡುಗೆ ಅನಿಲ ಸರಬರಾಜು ಸ್ಥಗಿತವಾಗಲಿದೆ ಎಂದು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಹೇಳಿದ ಬೆನ್ನಲ್ಲೇ ಗವರ್ನರ್ ಸುದ್ದಿಗೋಷ್ಠಿ ನಡೆಸಿದರು.

ಸುಮಾರು ₹1 ಲಕ್ಷ ಕೋಟಿ ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು ವಿಶ್ವಬ್ಯಾಂಕ್ ಮತ್ತು ಶ್ರೀಲಂಕಾದ ಅನಿವಾಸಿ ಪ್ರಜೆಗಳು ನೀಡಿದ್ದಾರೆ. ಇದು ದೇಶದಲ್ಲಿನ ವಿದೇಶಿ ವಿನಿಮಯದ ಕೊರತೆ ನಿವಾರಿಸಲಿದೆ ಎಂದು ತಿಳಿಸಿದರು.

ಮುಂದಿನ ಎರಡು ತಿಂಗಳಲ್ಲಿ ಹಣದುಬ್ಬರ ಶೇ 40ಕ್ಕೆ ಏರಬಹುದು. ಇದು ಹೆಚ್ಚಾಗಿ ಪೂರೈಕೆ ಬದಿಯ ಒತ್ತಡಗಳನ್ನು ಅವಲಂಬಿಸಿದೆ. ಬ್ಯಾಂಕ್ ಮತ್ತು ಸರ್ಕಾರದ ಕ್ರಮಗಳು ಈಗಾಗಲೇ ಬೇಡಿಕೆ ಬದಿಯ ಹಣದುಬ್ಬರ ನಿಯಂತ್ರಿಸುತ್ತಿವೆ ಎಂದು ಹೇಳಿದರು.

**ಆದೇಶಿಸಿಲ್ಲ:** ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ಮೇಲೆ ಹಲ್ಲೆ ನಡೆಸಲಾಗಿದೆ ಎಂಬ ಆರೋಪದಲ್ಲಿ ಬಂಧಿತರಾಗಿರುವ ಆಡಳಿ ತಾರೂಢ ಸಂಸದರ ವಿಚಾರಣೆಯನ್ನು ಪೊಲೀಸರು ಮುಂದುವರಿಸಿದ್ದಾರೆ. ಹಿಂಸಾಚಾರದ ವೇಳೆ ಕಂಡಲ್ಲಿ ಗುಂಡಿಕ್ಕಲು ಆದೇಶಿಸಿಲ್ಲ ಎಂದು ಪ್ರಧಾನಿ ಸಂಸತ್ತಿನಲ್ಲಿ ತಿಳಿಸಿದ್ದಾರೆ.

**ಎಲ್‌ಟಿಟಿಇ ಸಂಘರ್ಷ ಅಂತ್ಯ:** ಎಲ್‌ಟಿಟಿಇ ಜೊತೆಗೆ ಮೂರು ದಶಕಗಳವರೆಗೆ ನಡೆದ ಅಂತರ್‌ಯುದ್ಧವನ್ನು ಮಾನವೀಯ ಕಾರ್ಯಾಚರಣೆ ಮೂಲಕ ಸೇನೆಯು 2009ರಲ್ಲಿ ಅಂತ್ಯಗೊಳಿಸಿ, ಶಾಂತಿ ಸ್ಥಾಪಿಸಿತು ಎಂದು ಶ್ರೀಲಂಕಾ ಅಧ್ಯಕ್ಷ ಗೊಟಬಯ ಶ್ಲಾಘಿಸಿದರು.

ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಷ ಅವರ ರಾಜೀನಾಮೆಗೆ ಒತ್ತಾಯಿಸಿ ಕೊಲಂಬೊದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು – ಎಎಫ್‌ಪಿ ಚಿತ್ರ

### '6 ತಿಂಗಳ ಬಳಿಕ ಸಾಲ ಮರುಪಾವತಿ'

'ಶ್ರೀಲಂಕಾದಲ್ಲಿ ಇಂಧನ ಕೊರತೆಯಿಂದಾಗಿ ಸರ್ಕಾರ ಶಾಲೆಗಳನ್ನು ಮುಚ್ಚಿದ್ದು, ಸಾಲ ಮರುಪಾವತಿಗೆ ಕನಿಷ್ಠ ಆರು ತಿಂಗಳು ಬೇಕಾಗಲಿದೆ ಎಂದು' ಕೇಂದ್ರ ಬ್ಯಾಂಕ್ ಗವರ್ನರ್ ಗುರುವಾರ ತಿಳಿಸಿದ್ದಾರೆ. 'ಸಾಲದಾತರೊಂದಿಗೆ ಮರುಹೊಂದಾಣಿಕೆಯ ಒಪ್ಪಂದವಾಗದೇ ನಮಗೆ ದೇಶದ ₹3.97 ಲಕ್ಷ ಕೋಟಿ ಬಾಹ್ಯ ಸಾಲ ತೀರಿಸಲು ಸಾಧ್ಯವಿಲ್ಲ. ಆರು ತಿಂಗಳಲ್ಲಿ ನಾವು ಸಾಲದಾತರೊಂದಿಗೆ ಈ ಒಪ್ಪಂದಕ್ಕೆ ಬರಲಿದ್ದೇವೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಎವರೆಸ್ಟ್‌ನಲ್ಲಿ ಅತಿ ದೊಡ್ಡ ಹವಾಮಾನ ಕೇಂದ್ರ ಸ್ಥಾಪನೆ

**ಕಠ್ಮಂಡು (ಪಿಟಿಐ):** ನ್ಯಾಷನಲ್ ಜಿಯಾಗ್ರಫಿಕ್ ಸೊಸೈಟಿಯ ತಜ್ಞರ ತಂಡವು ವಿವಿಧ ಹವಾಮಾನದ ವಿದ್ಯಮಾನಗಳನ್ನು ಸ್ವಯಂಚಾಲಿತವಾಗಿ ಅಳೆಯುವ ವಿಶ್ವದ ಅತಿ ಎತ್ತರದ ಹವಾಮಾನ ಕೇಂದ್ರವನ್ನು ಮೌಂಟ್ ಎವರೆಸ್ಟ್‌ನಲ್ಲಿ ಸ್ಥಾಪಿಸಿದೆ ಎಂದು ನೇಪಾಳದ ಮಾಧ್ಯಮಗಳು ಗುರುವಾರ ವರದಿ ಮಾಡಿವೆ. ಹವಾಮಾನ ನಿಗಾ ವ್ಯವಸ್ಥೆಯು ಸೌರಶಕ್ತಿಯಿಂದ ಕಾರ್ಯ ನಿರ್ವಹಿಸಲಿದೆ. ಇದು ಗಾಳಿಯ ಉಷ್ಣತೆ, ವೇಗ ಮತ್ತು ದಿಕ್ಕು, ಒತ್ತಡ ಮತ್ತು ಹಿಮದ ಮೇಲ್ಮೈ ಎತ್ತರದಲ್ಲಿನ ಬದಲಾವಣೆ ಬಗ್ಗೆ ಮಾಹಿತಿ ನೀಡಲಿದೆ.

# ಅಮೆರಿಕ ಸೇರಿದಂತೆ ಹಲವೆಡೆ ಮಂಕಿಪಾಕ್ಸ್

**ನ್ಯೂಯಾರ್ಕ್/ ಮಿಲಾನ್ (ಎಪಿ):** ಅಮೆರಿಕದ ಮೆಸಾಚುಸೆಟ್ಸ್ ಮತ್ತು ಇಟಲಿಯ ರೋಮ್‌ನಲ್ಲಿ ತಲಾ ಒಂದೊಂದು ಮಂಕಿ ಪಾಕ್ಸ್ ವೈರಸ್ ಪ್ರಕರಣಗಳು ದೃಢಪಟ್ಟಿವೆ. ಅಲ್ಲದೆ ಇಟಲಿಯಲ್ಲಿ ಇನ್ನೂ ಎರಡು ಶಂಕಿತ ಪ್ರಕರಣಗಳು ಪತ್ತೆಯಾಗಿವೆ.

ಕೆನಡಾದಿಂದ ಹಿಂದಿರುಗಿದ್ದ ಅಮೆರಿಕದ ವ್ಯಕ್ತಿಯೊಬ್ಬರಲ್ಲಿ ಈ ಸೋಂಕು ದೃಢಪಟ್ಟಿದ್ದು, ಇದು ಅಮೆರಿಕದಲ್ಲಿ ಈ ವರ್ಷ ಪತ್ತೆಯಾದ ಮೊದಲ ಮಂಕಿಪಾಕ್ಸ್ ಪ್ರಕರಣವಾಗಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ ಮತ್ತು ಕೆನಡಾ ಅಧಿಕಾರಿಗಳನ್ನು ಸಂಪರ್ಕಿಸಲಾಗಿದೆ. ಸೋಂಕಿತ ವ್ಯಕ್ತಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿದೆ. ಹೀಗಾಗಿ ಇದರಿಂದ ಹೆಚ್ಚಿನ ಅಪಾಯ ಇಲ್ಲ ಎಂಬುದಾಗಿ ಭಾವಿಸಲಾಗಿದೆ' ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷದ ಅಮೆರಿಕದ ಟೆಕ್ಸಾಸ್ ಮತ್ತು ಮೇರಿಲ್ಯಾಂಡ್‌ನಲ್ಲಿ ನೈಜೀರಿಯಾದಿಂದ ಪ್ರಯಾಣಿಸಿದ್ದ ಇಬ್ಬರಲ್ಲಿ ಮಂಕಿ ಪಾಕ್ಸ್ ಕಾಣಿಸಿಕೊಂಡಿತ್ತು.

**ಆಫ್ರಿಕಾದಲ್ಲಿ ಸೋಂಕು ಸ್ಫೋಟ:** ಕೋವಿಡ್ ಸೋಂಕಿನ ನಡುವೆಯೇ ಆಫ್ರಿಕಾದಲ್ಲಿ ಮಂಕಿ ಪಾಕ್ಸ್ ಸೋಂಕಿನ ಹಲವು ಪ್ರಕರಣಗಳು ಪತ್ತೆ ಯಾಗಿವೆ. ಬ್ರಿಟನ್, ಪೋರ್ಚುಗಲ್, ಸ್ಪೇನ್‌ನಲ್ಲೂ ಸೋಂಕಿನ ಪ್ರಕರಣಗಳು ದೃಢಪಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ.

**ಏನಿದು ಮಂಕಿ ಪಾಕ್ಸ್?:** ಮಂಕಿ ಪಾಕ್ಸ್ ಆಫ್ರಿಕಾದ ದಟ್ಟಕಾಡು ಗಳಲ್ಲಿ ಹೆಚ್ಚಾಗಿ ಕಂಡುಬರುವ ಸಿಡುಬು ವರ್ಗಕ್ಕೆ ಸೇರಿದ ಕಾಯಿಲೆ. ಇಲಿ, ಮೊಲ, ಮಂಗಗಳಂತಹ ಪ್ರಾಣಿಗಳಲ್ಲಿ ಈ ವೈರಾಣು ಹೆಚ್ಚಾಗಿ ಪತ್ತೆಯಾಗುತ್ತದೆ. ಈ ಪ್ರಾಣಿಗಳು ಕಚ್ಚುವುದರಿಂದ ಮನುಷ್ಯರಲ್ಲಿ ಸೋಂಕು ಹರಡುತ್ತದೆ. ಆದರೆ, ಅಷ್ಟು ಸುಲಭವಾಗಿ ಮನುಷ್ಯರ ನಡುವೆ ಸೋಂಕು ಪಸರಿಸುವುದಿಲ್ಲ.

**ಸೋಂಕಿನ ಲಕ್ಷಣಗಳು:** ಮೈಮೇಲೆ ಕೆಂಪು ದದ್ದುಗಳು, ಜ್ವರ, ನೆಗಡಿ, ತಲೆನೋವು, ಮೈಕೈ ನೋವು ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಒಂದು ವಾರದ ಒಳಗಾಗಿ ಸೋಂಕಿತರು ಗುಣಮುಖರಾಗುತ್ತಾರೆ.

### 34 ವರ್ಷ ಹಳೆಯ ಹಲ್ಲೆ ಪ್ರಕರಣ

# ಸಿಧುಗೆ ಒಂದು ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪಂಜಾಬ್ ಕಾಂಗ್ರೆಸ್‌ನ ಮಾಜಿ ಮುಖ್ಯಸ್ಥ ಮತ್ತು ಮಾಜಿ ಕ್ರಿಕೆಟಿಗ ನವಜೋತ್ ಸಿಂಗ್ ಸಿಧು ಅವರಿಗೆ ಸುಪ್ರೀಂ ಕೋರ್ಟ್ ಒಂದು ವರ್ಷ ಕಠಿಣ ಸಜೆಯನ್ನು ಗುರುವಾರ ವಿಧಿಸಿದೆ. 34 ವರ್ಷಗಳ ಹಿಂದೆ 65 ವರ್ಷ ವಯಸ್ಸಿನ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ಈ ಶಿಕ್ಷೆ ವಿಧಿಸಲಾಗಿದೆ. 'ಕಾನೂನಿಗೆ ಶರಣಾಗುತ್ತೇನೆ' ಎಂದು ಸಿಧು ಹೇಳಿದ್ದಾರೆ.

ಈ ಹಿಂದೆ, ಅವರಿಗೆ ₹1,000 ದಂಡವನ್ನು ಮಾತ್ರ ವಿಧಿಸಲಾಗಿತ್ತು.

2018ರ ತೀರ್ಪಿನಲ್ಲಿ ಲೋಪವಾಗಿದೆ ಎಂಬುದು ದಾಖಲೆಗಳನ್ನು ನೋಡಿದರೇ ತಿಳಿಯುತ್ತದೆ ಮತ್ತು ಈ ಲೋಪವನ್ನು ಸರಿಪಡಿಸುವ ಅಗತ್ಯ ಇದೆ ಎಂದು ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಂಜಯ್ ಕಿಶನ್ ಕೌಲ್ ಅವರ ಪೀಠವು ಹೇಳಿದೆ.

ಸಿಧು ಅವರು ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಆಟಗಾರ. ಎತ್ತರದ ದಷ್ಟಪುಷ್ಟ ವ್ಯಕ್ತಿ. ತಮಗಿಂತ ದುಪ್ಪಟ್ಟು ವಯಸ್ಸಿನ ವ್ಯಕ್ತಿಗೆ ತಮ್ಮ ಕೈಯಿಂದ ಹೊಡೆದರೆ ಎಷ್ಟು ಜೋರಾಗಿ ಏಟು ಬೀಳಬಹುದು ಎಂಬುದೆಲ್ಲ ಸಿಧು ಅವರಿಗೆ ತಿಳಿದಿತ್ತು ಎಂಬ ಮಹತ್ವದ ವಿಚಾರವನ್ನು ಕೋರ್ಟ್ ಆಗ ನಿರ್ಲಕ್ಷಿಸಿತ್ತು ಎಂದು ಪೀಠವು ವಿವರಿಸಿದೆ.



'ಕುಸ್ತಿಪಟು ಅಥವಾ ಕ್ರಿಕೆಟಿಗ ಅಥವಾ ಅತ್ಯಂತ ದಷ್ಟಪುಷ್ಟವಾದ ವ್ಯಕ್ತಿಯು ತಮ್ಮ ಕೈಯನ್ನು ಹೊಡೆಯುವುದಕ್ಕೆ ಬಳಸಿದರೆ, ಆ ಕೈಯನ್ನು ಒಂದು ಆಯುಧ ಎಂದೇ ಪರಿಗಣಿಸಬಹುದು' ಎಂದು ಕೋರ್ಟ್ ತಿಳಿಸಿದೆ.

'ಅಂದಿನ ಸನ್ನಿವೇಶದಲ್ಲಿ ಸಂಯಮ ಕಳೆದುಹೋಗಿರಬಹುದು. ಆದರೆ, ಸಂಯಮ ಕಳೆದು ಹೋದುದರ ಪರಿಣಾಮವನ್ನು ಅನುಭವಿಸಲೇಬೇಕಾಗುತ್ತದೆ' ಎಂದೂ ಪೀಠವು ಹೇಳಿದೆ.

ಅಪರಾಧದ ತೀವ್ರತೆಗೆ ಅನುಗುಣವಾಗಿಯೇ ಶಿಕ್ಷೆ ವಿಧಿಸಬೇಕಾಗುತ್ತದೆ. ಅತ್ಯಂತ ಕಡಿಮೆ ಪ್ರಮಾಣದ ಶಿಕ್ಷೆಯು ಅಪರಾಧದ ಸಂತ್ರಸ್ತರನ್ನು ಅವಮಾನಿಸುತ್ತದೆ ಮತ್ತು ಹತಾಶಗೊಳಿಸುತ್ತದೆ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಸಿಧು ಮತ್ತು ಅವರ ಗೆಳೆಯ ರೂಪಿಂದರ್ ಸಿಂಗ್ ಸಂಧು ಅವರು ಪಟಿಯಾಲಾದಲ್ಲಿ 1988ರ ಡಿಸೆಂಬರ್ 27ರಂದು ರಸ್ತೆ ಮಧ್ಯದಲ್ಲಿ ನಿಲ್ಲಿಸಲಾಗಿದ್ದ ಜಿಪ್ಸಿಯಲ್ಲಿ ಕುಳಿತಿದ್ದರು. ಆ ಸಂದರ್ಭದಲ್ಲಿ ಗುರ್ನಾಮ್ ಸಿಂಗ್ ಮತ್ತು ಇತರ ಇಬ್ಬರು ಕಾರಿನಲ್ಲಿ ಅಲ್ಲಿಗೆ ಬಂದರು. ರಸ್ತೆ ಮಧ್ಯದಿಂದ ಜಿಪ್ಸಿ ತೆಗೆಯುವಂತೆ ಸಿಧು ಮತ್ತು ಸಂಧು ಅವರನ್ನು ಗುರ್ನಾಮ್ ಕೋರಿದ್ದರು. ಇದರಿಂದ ವಾಗ್ವಾದ ನಡೆದು, ಸಿಧು ಅವರು ಗುರ್ನಾಮ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ಗುರ್ನಾಮ್ ಸಿಂಗ್ ಅವರು ಆಸ್ಪತ್ರೆಯಲ್ಲಿ ನಂತರ ಮೃತಪಟ್ಟರು. ಪಟಿಯಾಲದ ಸೆಷನ್ಸ್ ನ್ಯಾಯಾಲಯವು ಸಿಧು ಅವರನ್ನು 1999ರಲ್ಲಿ ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಪಂಜಾಬ್–ಹರಿಯಾಣ ಹೈಕೋರ್ಟ್, ಸಿಧು ಅವರಿಗೆ 2006ರಲ್ಲಿ ಮೂರು ವರ್ಷ ಶಿಕ್ಷೆ ವಿಧಿಸಿತ್ತು.

ಸಿಧು ಅವರು ಸುಪ್ರೀಂ ಕೋರ್ಟ್‌ಗೆ 2018ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಪ್ರಕರಣವು 30 ವರ್ಷ ಹಳೆಯದು ಮತ್ತು ಸಿಧು ಅವರು ಆಯುಧವನ್ನೇನೂ ಬಳಸಿಲ್ಲ ಎಂದು ಅಭಿಪ್ರಾಯಪಟ್ಟ ಕೋರ್ಟ್, ಶಿಕ್ಷೆಯನ್ನು ರದ್ದು ಮಾಡಿತು. ₹1,000 ದಂಡವನ್ನು ಮಾತ್ರ ವಿಧಿಸಿತು. ಈ ಆದೇಶವನ್ನು ಮರುಪರಿಶೀಲಿಸಬೇಕು ಮತ್ತು ಸಿಧು ಅವರ ವಿರುದ್ಧ ಹೆಚ್ಚು ಗುರುತರವಾದ ಆರೋಪಗಳನ್ನು ಹೊರಿಸಬೇಕು ಎಂದು ಗುರ್ನಾಮ್ ಅವರ ಕುಟುಂಬವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಸಿಧು ವಿರೋಧಿಸಿದ್ದರು. ಈಗ ಅದೇ ಅರ್ಜಿಯ ಆಧಾರದಲ್ಲಿ ಸಿಧು ಅವರಿಗೆ ಶಿಕ್ಷೆಯಾಗಿದೆ.

## 24ರಂದು ಕ್ವಾಡ್ ಶೃಂಗ: ಮೋದಿ- ಬೈಡನ್ ಚರ್ಚೆ

**ವಾಷಿಂಗ್ಟನ್(ಪಿಟಿಐ):** ಇದೇ ತಿಂಗಳ 24ರಂದು ಟೋಕಿಯೊದಲ್ಲಿ ನಡೆಯುವ ಕ್ವಾಡ್ ಶೃಂಗಸಭೆಯಲ್ಲಿ ಭಾಗವಹಿಸಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಜಪಾನ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಬೈಡನ್ ಅವರು, ಪ್ರಧಾನಿ ನರೇಂದ್ರ ಮೋದಿ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ತಿಳಿಸಿದ್ದಾರೆ.

ಈ ಸಂಬಂಧ ಗುರುವಾರ ಮಾತನಾಡಿದ ಅವರು, 'ಈ ಶೃಂಗಸಭೆಯಲ್ಲಿ ಕ್ವಾಡ್ ಸದಸ್ಯ ದೇಶಗಳು(ಅಮೆರಿಕ, ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್) ಇಂಡೊ-ಪೆಸಿಫಿಕ್ ಅನ್ನು ಮುಕ್ತವಾಗಿಡುವ ನಿಟ್ಟಿನಲ್ಲಿ ಒಟ್ಟಿಗೆ ಕಾರ್ಯ ನಿರ್ವಹಿಸಲಿವೆ' ಎಂದು ಹೇಳಿದ್ದಾರೆ.

**ಸಂಕ್ಷಿಪ್ತ ಸುದ್ದಿ**

### ಬಿಜೆಪಿ–ಎಎಪಿ ಸೇರ್ಪಡೆ ನಿರ್ಧಾರ ಇಲ್ಲ: ಹಾರ್ದಿಕ್

**ಅಹಮದಾಬಾದ್ (ಪಿಟಿಐ):** 'ಕಾಂಗ್ರೆಸ್ ಪಕ್ಷದಲ್ಲಿದ್ದು ಬದುಕಿನ ಮೂರು ವರ್ಷಗಳು ವ್ಯರ್ಥವಾದುವು. ಬಿಜೆಪಿ, ಎಎಪಿ ಅಥವಾ ಯಾವುದೇ ರಾಜಕೀಯ ಪಕ್ಷಕ್ಕೆ ಸೇರುವ ಕುರಿತು ಇದುವರೆಗೆ ನಿರ್ಧರಿಸಿಲ್ಲ' ಎಂದು ಕಾಂಗ್ರೆಸ್ ತೊರೆದಿರುವ ಪಾಟೀದಾರ್ ಮೀಸಲಾತಿ ಪರ ಹೋರಾಟಗಾರ ಹಾರ್ದಿಕ್ ಪಟೇಲ್ ಗುರುವಾರ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಯೋಧ್ಯೆ ಪ್ರಕರಣದಲ್ಲಿ ಬಿಜೆಪಿಯ ಪ್ರಯತ್ನವನ್ನು ಹಾಗೂ 370ನೇ ಕಲಂ ರದ್ದು ಮಾಡಿರುವುದನ್ನು ಪ್ರಶಂಸಿಸಿದರು. ಕಾಂಗ್ರೆಸ್‌ನ 'ಮನ್ನೋಟ' ಇಲ್ಲದ ನಾಯಕರು ಗುಜರಾತ್‌ನ ಜನರ ವಿರುದ್ಧ ಪಕ್ಷಪಾತ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದರು.

### ಯಾಸಿನ್ ಮಲಿಕ್ ದೋಷಿ

**ನವದೆಹಲಿ (ಪಿಟಿಐ):** ಕಾಶ್ಮೀರ ಕಣಿವೆಯಲ್ಲಿ ಅಸ್ಥಿರತೆ ಸೃಷ್ಟಿಸಲು ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದಿ ಚಟುವಟಿಕೆಗಳಿಗೆ ನೆರವು ನೀಡಿದ ಆರೋಪದ ಪ್ರಕರಣಗಳಲ್ಲಿ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್ ಅಪರಾಧಿ ಎಂದು ದೆಹಲಿ ವಿಶೇಷ ನ್ಯಾಯಾಲಯ ಗುರುವಾರ ತೀರ್ಪು ನೀಡಿದೆ.

ಮೇ 25ರಂದು ಯಾಸಿನ್ ಮಲಿಕ್‌ಗೆ ಶಿಕ್ಷೆ ಪ್ರಕಟಿಸುವುದಾಗಿ ನ್ಯಾಯಾಲಯ ತಿಳಿಸಿದೆ. ವಿಶೇಷ ನ್ಯಾಯಾಧೀಶ ಪ್ರವೀಣ್ ಸಿಂಗ್ ಅವರು, ಮಲಿಕ್‌ಗೆ ವಿಧಿಸಬಹುದಾದ ದಂಡದ ಮೊತ್ತ ನಿರ್ಧರಿಸಲು ಆತನ ಹಣಕಾಸು ಪರಿಸ್ಥಿತಿ ನಿರ್ಧರಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ನಿರ್ದೇಶನ ನೀಡಿದರು.

### ನೀಟ್–ಪಿಜಿ ಇಡಬ್ಲ್ಯುಎಸ್ : 'ಸುಪ್ರಿಂ' ವಿಚಾರಣೆ

**ನವದೆಹಲಿ (ಪಿಟಿಐ):** ಆರ್ಥಿಕವಾಗಿ ಹಿಂದುಳಿದ ವರ್ಗ(ಇಡಬ್ಲ್ಯುಎಸ್)ದ ನೀಟ್-ಪಿಜಿ ಪ್ರವೇಶಕ್ಕೆ 8 ಲಕ್ಷ ವಾರ್ಷಿದ ಆದಾಯದ ಮಾನದಂಡಗಳನ್ನು ಪ್ರಶ್ನಿಸಿದ ಅರ್ಜಿಗಳ ವಿಚಾರಣೆಯನ್ನು ಜುಲೈ ತಿಂಗಳಲ್ಲಿ ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಈ ಬಗ್ಗೆ ಗುರುವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಮತ್ತು ಪಿ.ಎಸ್.ನರಸಿಂಹ ಅವರಿದ್ದ ಪೀಠವು, ಈ ವಿಚಾರವನ್ನು ಮೂವರು ನ್ಯಾಯಮೂರ್ತಿಗಳ ಪೀಠ ವಿಚಾರಣೆ ನಡೆಸಬೇಕಿದೆ. ಹೀಗಾಗಿ ಬೇಸಿಗೆ ರಜಾ ಅವಧಿಯಲ್ಲಿ ಈ ಅರ್ಜಿ ವಿಚಾರಣೆ ಅಸಾಧ್ಯ. ಬೇಸಿಗೆ ರಜೆ ಮುಗಿದ ಬಳಿಕ ಈ ಅರ್ಜಿಗಳ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ಹೇಳಿದೆ.

### ಸುನಿಲ್ ಜಾಖಡ್ ಬಿಜೆಪಿ ಸೇರ್ಪಡೆ

**ನವದೆಹಲಿ (ಪಿಟಿಐ):** ಪಂಜಾಬ್ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಸುನಿಲ್ ಜಾಖಡ್ ಅವರು ಗುರುವಾರ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ.

ಪಂಜಾಬ್‌ನ ಪ್ರಮುಖ ಹಿಂದೂ ನಾಯಕರಾದ ಸುನಿಲ್ ಅವರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಪಕ್ಷಕ್ಕೆ ಬರಮಾಡಿಕೊಂಡರು. ಸುನಿಲ್ ಅವರು ಕಳೆದ ವಾರ ಕಾಂಗ್ರೆಸ್ ತೊರೆದಿದ್ದರು.

# ಸೇನೆ ಹಿಂಪಡೆಯದೆ ಕದನ ವಿರಾಮವಿಲ್ಲ: ಉಕ್ರೇನ್ ಎಚ್ಚರಿಕೆ

**ಕೀವ್ (ಎಪಿ/ಎಎಫ್‌ಪಿ):** 'ಎಲ್ಲ ಪಡೆಗಳನ್ನು ಹಿಂಪಡೆಯುವವರೆಗೂ ಕದನ ವಿರಾಮ ಒಪ್ಪುವುದಿಲ್ಲ' ಎಂದು ಉಕ್ರೇನ್, ರಷ್ಯಾಕ್ಕೆ ಖಡಕ್ಕಾಗಿ ಹೇಳಿದೆ.

'ನಮ್ಮ ಮುಂದೆ ಕದನ ವಿರಾಮದ ಪ್ರಸ್ತಾಪ ಇಡಬೇಡಿ. ರಷ್ಯಾ ಸಂಪೂರ್ಣ ಸೇನೆ ಹಿಂತೆಗೆದುಕೊಳ್ಳದೆ ಕದನ ವಿರಾಮ ಅಸಾಧ್ಯ' ಎಂದು ರಷ್ಯಾ ಜತೆಗೆ ಹಲವು ಸುತ್ತಿನ ಶಾಂತಿ ಮಾತುಕತೆಗಳಲ್ಲಿ ಭಾಗಿಯಾಗಿದ್ದ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರ ಸಲಹೆಗಾರಿಖಾಯಿಲೊ ಪೊಡೊಲ್ಯಾಕ್ ಗುರುವಾರ ಟ್ವೀಟ್ ಮಾಡಿದ್ದಾರೆ.

ಪೂರ್ವ ಉಕ್ರೇನ್‌ಗೆ ಸಂಬಂಧಿಸಿ 2015ರಲ್ಲಿ ಬೆಲರೂಸ್‌ನ ರಾಜಧಾನಿ ಮಿನ್ಸ್ಕ್‌ನಲ್ಲಿ ಫ್ರಾನ್ಸ್ ಮತ್ತು ಜರ್ಮನಿಯ ಮಧ್ಯಸ್ಥಿಕೆಯಲ್ಲಿ ನಡೆದ ಶಾಂತಿ ಒಪ್ಪಂದ ಉಲ್ಲೇಖಿಸಿ ಅವರು, 'ಉಕ್ರೇನ್ ಹೊಸ 'ಮಿನ್ಸ್ಕ್' ಒಪ್ಪಂದ ಮತ್ತು ಕೆಲವೇ ವರ್ಷಗಳಲ್ಲಿ ಹೊಸ ಯುದ್ಧ ನಡೆಸುವುದರಲ್ಲಿ ಆಸಕ್ತಿ ಹೊಂದಿಲ್ಲ' ಎಂದು ಹೇಳಿದ್ದಾರೆ. 'ಆಕ್ರಮಿತ ಪ್ರದೇಶಗಳನ್ನು ಸಂಪೂರ್ಣ ಸ್ವತಂತ್ರಗೊಳಿಸಲು ರಷ್ಯಾ ಸಿದ್ಧವಾಗುವವರೆಗೆ, ಶಸ್ತ್ರಾಸ್ತ್ರಗಳು, ನಿರ್ಬಂಧಗಳು ಹಾಗೂ ಹಣಕಾಸು ನೆರವು ನಮ್ಮ ಒಟ್ಟು ತೀರ್ಮಾನ' ಎಂದು ಅವರು ಹೇಳಿದ್ದಾರೆ.

**ಶರಣಾದ ಸೈನಿಕರ ಸಂಖ್ಯೆ 1,730ಕ್ಕೆ ಏರಿಕೆ:** ಮರಿಯುಪೋಲ್‌ನಲ್ಲಿ ಪ್ರತಿರೋಧ ತೋರುತ್ತಿದ್ದ ಉಕ್ರೇನಿನ 771 ಸೈನಿಕರು ಕಳೆದ 24 ತಾಸುಗಳಲ್ಲಿ ಶರಣಾಗಿದ್ದು, ಭದ್ರಕೋಟೆ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರ ತೊರೆದ ಉಕ್ರೇನ್ ಸೈನಿಕರ ಸಂಖ್ಯೆ 1,730ಕ್ಕೆ ಏರಿದೆ.

'ಅಜೋವ್ ರಾಷ್ಟ್ರೀಯತಾವಾದಿ ಬೆಟಾಲಿಯನ್‌ನ 771 ಉಗ್ರರು ಶರಣಾಗಿದ್ದಾರೆ. 80 ಮಂದಿ ಗಾಯಾಳು ಸೇರಿ 1,730 ಉಗ್ರರು ಸೋಮವಾರದಿಂದ ಈವರೆಗೆ ಶರಣಾಗಿದ್ದಾರೆ' ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕೊವ್ ಗುರುವಾರ ತಿಳಿಸಿದರು.

**ಕ್ಷಮೆಯಾಚಿಸಿದ ರಷ್ಯಾ ಸೈನಿಕ:** ಈಶಾನ್ಯ ಸುಮಿಯ ಹಳ್ಳಿಯಲ್ಲಿ ಕಳೆದ ಫೆ.28ರಂದು ಉಕ್ರೇನ್ ನಾಗರಿಕನ ತಲೆಗೆ ಗುಂಡು ಹಾರಿಸಿ ಹತ್ಯೆಗೈದ ರಷ್ಯಾದ ಯುದ್ಧ ಕೈದಿ ಸೈನಿಕ ವಾಡಿಮ್ ಶಿಶಿಮರಿನ್ (21) ಕ್ಷಮೆ ಕೇಳಿದ್ದಾರೆ.

## ಸಕ್ರಿಯ ಕೋವಿಡ್ ಪ್ರಕರಣ ಇಳಿಕೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಗುರುವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ತಾಸುಗಳ ಅವಧಿಯಲ್ಲಿ 2,364 ಹೊಸ ಕೊರೊನಾ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಒಬ್ಬರು ಸೇರಿದಂತೆ 10 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ.



ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 4,31,29,563ಕ್ಕೆ ಏರಿಕೆಯಾಗಿದೆ. ಒಟ್ಟು ಮೃತಪಟ್ಟವರ ಸಂಖ್ಯೆ 5,24,303ಕ್ಕೆ ತಲುಪಿದೆ. ಹೊಸ ಸೋಂಕಿತರೂ ಸೇರಿ ಸಕ್ರಿಯ ಸೋಂಕಿನ ಪ್ರಮಾಣ 15,419ಕ್ಕೆ ಇಳಿಕೆಯಾಗಿದೆ.

## ಶಂಕಿತ ಪ್ರಕರಣಗಳ ಸಂಖ್ಯೆ ಏರಿಕೆ

**ಸೋಲ್(ಎಪಿ):** ಉತ್ತರ ಕೊರಿಯಾದಲ್ಲಿ ಗುರುವಾರ ಹೊಸದಾಗಿ 2,62,270 ಮಂದಿಯಲ್ಲಿ ಕೋವಿಡ್‌ನ ಶಂಕಿತ ಲಕ್ಷಣಗಳು ಕಂಡು ಬಂದಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 20 ಲಕ್ಷಕ್ಕೆ ತಲುಪಿದೆ.

ಕಳೆದ 24 ಗಂಟೆಗಳಲ್ಲಿ ಒಬ್ಬರು ಸಾವಿಗೀಡಾಗಿದ್ದು, ಮೃತರ ಒಟ್ಟು ಸಂಖ್ಯೆ 63ಕ್ಕೆ ಏರಿಕೆಯಾಗಿದೆ.

ದೇಶದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಆಡಳಿತಕ್ಕೆ ಧಕ್ಕೆ ಆಗಬಾರದು ಎಂದು ಪ್ರಕರಣಗಳ ಸಂಖ್ಯೆ ಕಡಿಮೆ ಇರುವುದಾಗಿ ಬಿಂಬಿಸಲಾಗುತ್ತಿದೆ. ಸೋಂಕು ಪತ್ತೆ ಪರೀಕ್ಷೆಗೆ ಸಂಪನ್ಮೂಲದ ಕೊರತೆ ಇರುವುದು ಸಹ ಇದಕ್ಕೆ ಕಾರಣ. ಪ್ರಕರಣಗಳ ಸಂಖ್ಯೆ , ಹಾಗೂ ಸಾವಿನ ಸಂಖ್ಯೆಯ ವಾಸ್ತವಾಂಶವನ್ನು ಮುಚ್ಚಿಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಕಳೆದ ಏಪ್ರಿಲ್‌ನಿಂದ 19.8 ಲಕ್ಷ ಮಂದಿ ಜ್ವರದ ಲಕ್ಷಣ ದೊಂದಿಗೆ ಅನಾರೋಗ್ಯದಿಂದ ಬಳಲುತ್ತಿದ್ದಾರೆ. 7,40,160 ಮಂದಿಯನ್ನು ಚಿಕಿತ್ಸೆಗಾಗಿ ಪ್ರತ್ಯೇಕವಾಗಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ವರದಿ ಮಾಡಿದೆ.

**ಶಾಂಘೈನಲ್ಲಿ ಕೋವಿಡ್ ನಿಯಮ ಸಡಿಲಿಕೆ:** (ಬೀಜಿಂಗ್ ವರದಿ) ಆರು ತಿಂಗಳಿಂದ ಲಾಕ್‌ಡೌನ್‌ನಲ್ಲಿರುವ ಚೀನಾದ ವಾಣಿಜ್ಯ ರಾಜಧಾನಿ ಶಾಂಘೈನಲ್ಲಿ ಕೋವಿಡ್‌ನ ಹೊಸ ಪ್ರಕರಣಗಳು ಇಳಿಕೆ ಯಾಗುತ್ತಿರುವ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಕೋವಿಡ್ ನಿಯಮಗಳನ್ನು ಸಡಿಲಗೊಳಿಸುತ್ತಿದ್ದು, 20 ಸುರಂಗ ಮಾರ್ಗಗಳನ್ನು ತೆರೆಯಲಾಗುತ್ತದೆ.

273 ಮಾರ್ಗಗಳಲ್ಲಿ ಬಸ್ ಸಂಚಾರ ಪುನರಾರಂಭವಾಗುತ್ತಿದೆ.

ಲಯಕ್ಕೆ ಮರಳಿದ ವಿರಾಟ್ ಕೊಹ್ಲಿ; ಶನಿವಾರ ಡೆಲ್ಲಿ ಸೋತರೆ ಫಫ್ ಡುಪ್ಲೆಸಿ ಬಳಗಕ್ಕೆ ಅವಕಾಶ

# ಆರ್‌ಸಿಬಿ ಪ್ಲೇ ಆಫ್ ಕನಸು ಜೀವಂತ

**ಮುಂಬೈ:** ಸರಿಯಾದ ಸಮಯಕ್ಕೇ ಲಯಕ್ಕೆ ಮರಳಿದ ವಿರಾಟ್ ಕೊಹ್ಲಿಯ ಚೆಂದದ ಬ್ಯಾಟಿಂಗ್‌ನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುರುವಾರ ಐಪಿಎಲ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಜಯಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ 8 ವಿಕೆಟ್‌ಗಳಿಂದ ಗೆದ್ದ ಬೆಂಗಳೂರು ತಂಡದ ಪ್ಲೇ ಆಫ್ ಕನಸು ಜೀವಂತವಾಗುಳಿಯಿತು. 16 ಅಂಕ ಗಳಿಸಿರುವ ಆರ್‌ಸಿಬಿ ನಾಲ್ಕನೇ ಸ್ಥಾನಕ್ಕೇರಿದೆ. ಆದರೆ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಜಯಿಸಿದರೆ ಆರ್‌ಸಿಬಿಯ ಅವಕಾಶ ಕೈತಪ್ಪಲಿದೆ. ಏಕೆಂದರೆ ಬೆಂಗಳೂರು ತಂಡಕ್ಕೆ ನೆಗೆಟಿವ್ ನೆಟ್ ರನ್ ರೇಟ್ ಇರುವುದು ಕಾರಣ.

ಈ ಪಂದ್ಯದಲ್ಲಿ ಟಾಸ್ ಗೆದ್ದ ಗುಜರಾತ್ ಟೈಟನ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹಾರ್ದಿಕ್ ಪಾಂಡ್ಯ (ಔಟಾಗದೆ 62, 47ಎ) ಅರ್ಧಶತಕದ ಬಲದಿಂದ ಗುಜರಾತ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 168 ರನ್ ಗಳಿಸಿತು. ಅದಕ್ಕುತ್ತರವಾಗಿ ವಿರಾಟ್ (73; 54ಎಸೆತ, 4X8, 6X2) ಅರ್ಧಶತಕದ ಬಲದಿಂದ ಬೆಂಗಳೂರು ತಂಡವು 18.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 170 ರನ್ ಗಳಿಸಿತು.

ಫಫ್ ಡುಪ್ಲೆಸಿ (44 ರನ್) ಮತ್ತು ವಿರಾಟ್ ಮೊದಲ ವಿಕೆಟ್ ಜೊತೆಯಾಟದಲ್ಲಿ 115 ರನ್ ಗಳಿಸಿ ಅಮೋಘ ಆರಂಭ ನೀಡಿದರು. ಈ ಬುನಾದಿಯ ಮೇಲೆ ಗ್ಲೆನ್ ಮ್ಯಾಕ್ಸ್‌ವೆಲ್ (ಔಟಾಗದೆ 40; 18ಎ) ಗೆಲುವಿನ ಮಹಲು ಕಟ್ಟಿದರು. ಹಾರ್ದಿಕ್ ಹಾಕಿದ ನಾಲ್ಕನೇ ಓವರ್‌ನಲ್ಲಿ ಲಭಿಸಿದ ಜೀವದಾನವನ್ನು ವಿರಾಟ್ ಸಮರ್ಥವಾಗಿ ಬಳಸಿಕೊಂಡರು. ಈ ಟೂರ್ನಿಯ ಲೀಗ್ ಹಂತದಲ್ಲಿ ಮೂರು ಬಾರಿ ಗೋಲ್ಡನ್ ಡಕ್ ಆಗಿರುವ ವಿರಾಟ್ ನಿರಾಶೆಯನ್ನೇ ಹೆಚ್ಚು ಅನುಭವಿಸಿದ್ದರು. ಕಳೆದ 14 ಪಂದ್ಯಗಳಲ್ಲಿ ಇದು ಅವರಿಗೆ ಎರಡನೇ ಅರ್ಧಶತಕ. ಜೊತೆಗೆ ಪಂದ್ಯಶ್ರೇಷ್ಠ ಗೌರವ ಕೂಡ ಗಳಿಸಿದರು.

**ಬೌಲರ್‌ಗಳ ಮಿಂಚು:** ಟೂರ್ನಿಯ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿರುವ ಟೈಟನ್ಸ್ ತಂಡವು ಈಗಾಗಲೇ ಪ್ಲೇ ಆಫ್ ಪ್ರವೇಶಿಸಿದೆ. ಆದರೆ, ಈ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದ್ದ ಆರ್‌ಸಿಬಿಯ ಬೌಲರ್‌ಗಳೂ ಉತ್ತಮ ಸಾಮರ್ಥ್ಯ ತೋರಿದರು. ಜೋಶ್ ಹ್ಯಾಜಲ್‌ವುಡ್ ಮತ್ತು ಹಸರಂಗ ಅವರು ಆರಂಭದಲ್ಲಿಯೇ ಕೊಟ್ಟ ಪೆಟ್ಟಿನಿಂದಾಗಿ ಗುಜರಾತ್ ತಂಡವು 62 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಗೂಡಿದ ಪಾಂಡ್ಯ ಮತ್ತು ಡೇವಿಡ್ ಮಿಲ್ಲರ್ (34; 25ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಗಳಿಸಿದರು. ತಂಡವು ಹೋರಾಟದ ಮೊತ್ತ ಗಳಿಸಿತು.

ವಿರಾಟ್ ಕೊಹ್ಲಿ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಫಫ್ ಡು ಪ್ಲೆಸಿ –ಪಿಟಿಐ ಚಿತ್ರ

### ಆರೆಂಜ್ ಕ್ಯಾಪ್
(ಹೆಚ್ಚು ರನ್‌ಗಳಿಸಿದವರು)

| ಆಟಗಾರ | ತಂಡ | ರನ್ |
|---|---|---|
| ಜೋಸ್ ಬಟ್ಲರ್ | ರಾಜಸ್ಥಾನ | 627 |
| ರಾಹುಲ್ | ಲಖನೌ | 537 |
| ಕ್ವಿಂಟನ್ ಡಿಕಾಕ್ | ಲಖನೌ | 502 |

### ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್‌ಗಳಿಸಿದವರು)

| ಆಟಗಾರ | ತಂಡ | ವಿಕೆಟ್ |
|---|---|---|
| ಹಸರಂಗ | ಬೆಂಗಳೂರು | 24 |
| ಯಜುವೇಂದ್ರ | ರಾಜಸ್ಥಾನ | 24 |
| ಕಗಿಸೊ | ಪಂಜಾಬ್ | 22 |

### ಪಾಯಿಂಟ್ ಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಟೈ | ಅಂಕ | ರನ್‌ರೇಟ್ |
|---|---|---|---|---|---|---|---|
| ಗುಜರಾತ್ | 14 | 10 | 4 | 0 | 0 | 20 | 0.361 |
| ಲಖನೌ | 14 | 9 | 5 | 0 | 0 | 18 | 0.251 |
| ರಾಜಸ್ಥಾನ | 13 | 8 | 5 | 0 | 0 | 16 | 0.304 |
| ಬೆಂಗಳೂರು | 14 | 8 | 6 | 0 | 0 | 16 | -0.253 |
| ಡೆಲ್ಲಿ | 13 | 7 | 6 | 0 | 0 | 14 | 0.255 |
| ಕೋಲ್ಕತ್ತ | 14 | 6 | 8 | 0 | 0 | 12 | 0.146 |
| ಪಂಜಾಬ್ | 13 | 6 | 7 | 0 | 0 | 12 | -0.043 |
| ಹೈದರಾಬಾದ್ | 13 | 6 | 7 | 0 | 0 | 12 | -0.230 |
| ಚೆನ್ನೈ | 13 | 4 | 9 | 0 | 0 | 8 | -0.206 |
| ಮುಂಬೈ | 13 | 3 | 10 | 0 | 0 | 6 | -0.577 |

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

### ಸ್ಕೋರ್ ಕಾರ್ಡ್

**ಗುಜರಾತ್ ಟೈಟನ್ಸ್ 5ಕ್ಕೆ168 (20 ಓವರ್)**

ಸಹಾ ರನ್‌ಔಟ್/ಡುಪ್ಲೆಸಿ 31 (22ಎ,4X4, 6X1), ಗಿಲ್ ಸಿ ಮ್ಯಾಕ್ಸ್‌ವೆಲ್ ಬಿ ಹ್ಯಾಜಲ್‌ವುಡ್ 1 (4ಎ), ವೇಡ್ ಎಲ್‌ಬಿಡಬ್ಲ್ಯು ಬಿ ಮ್ಯಾಕ್ಸ್‌ವೆಲ್ 16 (13ಎ, 4X2, 6X1), ಪಾಂಡ್ಯ ಔಟಾಗದೆ 62 (47ಎ, 4X4, 6X3), ಮಿಲ್ಲರ್ ಸಿ ಮತ್ತು ಬಿ ಹಸರಂಗಾ 34 (25ಎ, 6X3), ತೆವಾಟಿಯಾ ಸಿ ದಿನೇಶ್ ಬಿ ಹ್ಯಾಜಲ್‌ವುಡ್ 2 (3ಎ), ರಶೀದ್ ಔಟಾಗದೆ 19 (6ಎ, 4X1, 6X2)

**ಇತರೆ** (ಲೆಗ್‌ಬೈ 1, ವೈಡ್ 2) 3

**ವಿಕೆಟ್ ಪತನ:** 1–21 (ಶುಭಮನ್ ಗಿಲ್; 2.3), 2–38 (ಮ್ಯಾಥ್ಯೂ ವೇಡ್; 5.2), 3–62 (ವೃದ್ಧಿಮಾನ್ ಸಹಾ; 8.3), 4–123 (ಡೇವಿಡ್ ಮಿಲ್ಲರ್;16.2), 5–132 (ರಾಹುಲ್ ತೆವಾಟಿಯಾ; 17.3)

**ಬೌಲಿಂಗ್:** ಸಿದ್ಧಾರ್ಥ್ ಕೌಲ್ 4–0–43–0, ಶಾಬಾಜ್ ಅಹಮದ್ 2–0–15–0, ಜೋಶ್ ಹ್ಯಾಜಲ್‌ವುಡ್ 4–0–39–2, ಗ್ಲೆನ್ ಮ್ಯಾಕ್ಸ್‌ವೆಲ್ 4–1–28–1, ಮಹಿಪಾಲ್ ಲೊಮ್ರೊರ್ 1–0–11–0, ವಣಿಂದು ಹಸರಂಗಾ 4–0–25–1, ಹರ್ಷಲ್ ಪಟೇಲ್ 1–0–6–0

**ರಾಯಲ್ ಚಾಲೆಂಜರ್ಸ್ ಬೆಂಗಳೂರು 2ಕ್ಕೆ 170 (18.4 ಓವರ್)**

ವಿರಾಟ್ ಸ್ಟಂಪ್ಡ್ ವೇಡ್ ಬಿ ರಶೀದ್ 73 (54 ಎ, 4x8, 6x2), ಡುಪ್ಲೆಸಿ ಸಿ ಹಾರ್ದಿಕ್ ಬಿ ರಶೀದ್ 44 (38 ಎ, 4x5), ಮ್ಯಾಕ್ಸ್‌ವೆಲ್ ಔಟಾಗದೆ 40 (18 ಎ, 4x5, 6x2), ದಿನೇಶ್ ಔಟಾಗದೆ 2 (2 ಎ)

**ಇತರೆ** (ಬೈ 4, ವೈಡ್ 7) 11

**ವಿಕೆಟ್ ಪತನ:** 1-115 (ಫಫ್ ಡು ಪ್ಲೆಸಿ, 14.3), 2-146 (ವಿರಾಟ್ ಕೊಹ್ಲಿ, 16.4)

**ಬೌಲಿಂಗ್:** ಮೊಹಮ್ಮದ್ ಶಮಿ 2–0–23–0, ಹಾರ್ದಿಕ್ ಪಾಂಡ್ಯ 3–0–35–0, ರಶೀದ್ ಖಾನ್ 4–0–32–2, ಯಶ್ ದಯಾಳ್ 4–0–35–0, ರವಿ ಶ್ರೀನಿವಾಸನ್ ಸಾಯಿ ಕಿಶೋರ್ 4–0–20–0, ಲಾಕಿ ಫರ್ಗ್ಯುಸನ್ 1.4–0–21–0

**ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಎಂಟು ವಿಕೆಟ್‌ಗಳ ಜಯ**

ಜೊಫ್ರಾ ಆರ್ಚರ್

## ಜೋಫ್ರಾಗೆ ಗಾಯ

**ಲಂಡನ್ (ಪಿಟಿಐ):** ಇಂಗ್ಲೆಂಡ್ ತಂಡದ ವೇಗದ ಬೌಲರ್ ಜೋಫ್ರಾ ಆರ್ಚರ್ ಅವರು ಬೆನ್ನು ಭಾಗದ ಮೂಳೆ ಮುರಿತದಿಂದಾಗಿ ಬೇಸಿಗೆ ಋತುವಿನ ಯಾವುದೇ ಸರಣಿಯಲ್ಲಿಯೂ ಆಡುವುದಿಲ್ಲ.

ಜುಲೈನಲ್ಲಿ ಇಲ್ಲಿ ನಡೆಯಲಿರುವ ಭಾರತದ ಎದುರಿನ ಟೆಸ್ಟ್ ಪಂದ್ಯದಲ್ಲಿಯೂ ಅವರು ಆಡುವುದಿಲ್ಲ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ.

## ದಾಖಲೆಗಾಗಿ ರನ್ ಗಳಿಕೆ

**ಬೆಂಗಳೂರು:** ಕ್ರೀಡಾ ಉಡುಪುಗಳ ಸಂಸ್ಥೆಯಾದ ಪೂಮಾ ಸಹಯೋಗದಲ್ಲಿ ನಗರದ ಜಯಮಹಲ್ ಅರಮನೆ ಆವರಣದಲ್ಲಿ ಗುರುವಾರ ವಿಂಗ್ಸ್ ಇವೆಂಟ್ಸ್ ಆಯೋಜಿಸಿದ್ದ 'ಟ್ವೆಲ್ತ್ ಮ್ಯಾನ್ ಟೇಕ್ ಓವರ್' ಕಾರ್ಯಕ್ರಮದಲ್ಲಿ ಗಿನಿಸ್ ದಾಖಲೆಗಾಗಿ ಆರ್‌ಸಿಬಿ ಅಭಿಮಾನಿಗಳು ರನ್ ಗಳಿಸಿದರು.

ಕ್ರಿಕೆಟ್ ಪಿಚ್ ಮಾದರಿಯ ಟ್ರ್ಯಾಕ್‌ನಲ್ಲಿ ಆರ್‌ಸಿಬಿಯ 187 ಅಭಿಮಾನಿಗಳು 823 ರನ್ ಕಲೆ ಹಾಕುವ ಸವಾಲು ಪೂರ್ಣಗೊಳಿಸಿದರು.

ಸ್ಪ್ರಿಂಟರ್ ದ್ಯುತಿ ಚಾಂದ್, ಹಾಕಿ ಆಟಗಾರ ರೂಪಿಂದರ್ ಪಾಲ್ ಸಿಂಗ್, ಪೂಮಾದ ವ್ಯವಸ್ಥಾಪಕ ನಿರ್ದೇಶಕ ಅಭಿಷೇಕ್ ಗಂಗೂಲಿ ಮುಂತಾದವರು ಇದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸ್ಪ್ರಿಂಟರ್ ದ್ಯುತಿ ಚಾಂದ್

ಟೆನಿಸ್: ಬಾಲಗಣೇಶ್, ದಿಗಂತ್ ಪ್ರಶಸ್ತಿ ಸುತ್ತಿಗೆ ಪ್ರವೇಶ

## ಅರ್ಚಿಶಾ–ನಭಾ ಫೈನಲ್ ಮುಖಾಮುಖಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಬಲ ಎದುರಾಳಿಗಳನ್ನು ಮಣಿಸಿ ಗಮನ ಸೆಳೆದಿರುವ ಅರ್ಚಿಶಾ ಘೋಷ್ ಮತ್ತು ನಭಾ ನಿಶಾನ್ 14 ವರ್ಷದೊಳಗಿನವರ ಎಐಟಿಎ ಟೆನಿಸ್ ಟೂರ್ನಿಯ ಪ್ರಶಸ್ತಿಗಾಗಿ ಸೆಣಸುವರು.

ಎಸ್‌ಎಟಿ ಸ್ಪೋರ್ಟ್ಸ್ ಅಕಾಡೆಮಿ ಅಂಗಣದಲ್ಲಿ ನಡೆಯುತ್ತಿರುವ ಎಐಟಿಎ ಸಿಎಸ್–7 ಟೂರ್ನಿಯ ಸೆಮಿಫೈನಲ್‌ನಲ್ಲಿ ಅರ್ಚಿಶಾ ಅಗ್ರ ಶ್ರೇಯಾಂಕದ ದಿಶಾ ಕುಮಾರ್ ವಿರುದ್ಧ 6-3, 7-6 (2)ರಲ್ಲಿ ಗೆದ್ದರು. ನಭಾ ನಾಲ್ಕನೇ ಶ್ರೇಯಾಂಕದ ತನು ವಿಶ್ವಾಸ್ ವಿರುದ್ಧ 6-2, 6-2ರಲ್ಲಿ ಗೆಲುವು ದಾಖಲಿಸಿದರು.

ಬಾಲಕರ ವಿಭಾಗದಲ್ಲಿ ಅನುರಾಗ್ ಶೌರ್ಯ ಅಜೇಯ ಓಟಕ್ಕೆ ಎಂಟನೇ ಶ್ರೇಯಾಂಕಿತ ಬಾಲಗಣೇಶ್ ಪಟೇಲ್ ತಡೆಯೊಡ್ಡಿದರು. ಗುರುವಾರ ನಡೆದ ಪಂದ್ಯದಲ್ಲಿ ಬಾಲಗಣೇಶ್ 6–3, 1–6, 12–10ರಲ್ಲಿ ಜಯ ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ದಿಗಂತ್ 7-5, 6-3ರಲ್ಲಿ ಶ್ರೇಯಾಂತ್ ವಿರುದ್ಧ ಗೆದ್ದರು.

ಬುಧವಾರ ನಡೆದ ಬಾಲಕಿಯರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಭಾ ನಿಶಾನ್, ಐಲಿನ್ ಮಿರಿಯಮ್ ಕಾರ್ನೆಲೊ ಅವರನ್ನು ಸೋಲಿಸಿದ್ದರು. ದಿಶಾ ಕುಮಾರ್, ಪಾವನಿ ಬಿಷ್ತ್ ಎದುರು ಗೆದ್ದಿದ್ದರು. ಅರ್ಚಿಶಾ ಘೋಷ್, ಹೇಮಜಾ ರೆಡ್ಡಿ ಎದುರು ಜಯ ಸಾಧಿಸಿದ್ದರು.

ಬಾಲಕರ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅನುರಾಗ್, ಆಯಾನ್ ತಾರೀನ್ ಎದುರು; ಬಾಲಗಣೇಶ್ ಪಟೇಲ್, ವಿಜಯ್ ಸುಮುಖ್ ರಘು ಎದುರು; ಶ್ರೇಯಾಂತ್, ಅಹಿಲ್ ಆಯಾಜ್ ವಿರುದ್ಧ; ದಿಗಂತ್, ವಿಷ್ಣು ಮೋಹನ್ ವಿರುದ್ಧ ಜಯ ಸಾಧಿಸಿದರು.

ನಭಾ ನಿಶಾನ್

## ಪಣಂಬೂರಿನಲ್ಲಿ ಸರ್ಫಿಂಗ್

**ಮಂಗಳೂರು:** ಇಲ್ಲಿನ ಪಣಂಬೂರು ಬೀಚ್‌ನಲ್ಲಿ ಇದೇ 27ರಿಂದ 29ರವರೆಗೆ ಇಂಡಿಯನ್ ಓಪನ್ ಸರ್ಫಿಂಗ್ ಮೂರನೇ ಆವೃತ್ತಿಯ ಸರ್ಫಿಂಗ್ ನಡೆಯಲಿದೆ. ದೇಶದ ವಿವಿಧ ಭಾಗಗಳಿಂದ ಅಗ್ರಶ್ರೇಯಾಂಕದ ಸರ್ಫರ್‌ಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾ ಹಾಗೂ ಸ್ಥಳೀಯ 'ಮಂತ್ರ ಸರ್ಫಿಂಗ್ ಕ್ಲಬ್' ಸಂಯೋಜನೆಯಲ್ಲಿ ಈ ಸ್ಪರ್ಧೆ ನಡೆಯಲಿದೆ.

'ಜಿಲ್ಲೆಯ ಕರಾವಳಿಯಲ್ಲಿ ಬಹಳ ದಿನಗಳ ನಂತರ ಸ್ಪರ್ಧೆ ನಡೆಯುತ್ತಿದೆ. ಕೋವಿಡ್ ನಂತರ ನಡೆಯುತ್ತಿರುವ ಸರ್ಫಿಂಗ್ ಸ್ಪರ್ಧೆಗೆ ಕಾತರ ಹೆಚ್ಚಾಗಿದೆ. ತಮಿಳುನಾಡು, ಕೇರಳ, ಗೋವಾ, ಮಹಾರಾಷ್ಟ್ರದಿಂದ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ಸ್ಪರ್ಧೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ' ಎಂದು ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾ ಉಪಾಧ್ಯಕ್ಷ ಹಾಗೂ ಮಂತ್ರ ಸರ್ಫಿಂಗ್ ಕ್ಲಬ್‌ನ ಸದಸ್ಯ ರಾಮ್ ಮೋಹನ್ ಪರಾಂಜಪೆ ತಿಳಿಸಿದರು.